# ಲೇಖಕರ ನುಡಿ

ನೇಪಾಳ ಭಾರತದ ನೆರೆರಾಷ್ಟ್ರ. ಹಿಮಾಲಯ ಪರ್ವತ ಶ್ರೇಣಿಯ ದಕ್ಷಿಣ ತಪ್ಪಲು ಪ್ರದೇಶದಲ್ಲಿದೆ. ಹಿಮಾಚ್ಛಾದಿತವಾದ ದಟ್ಟ ಅರಣ್ಯ ಪ್ರದೇಶವಾದ ಈ ನಾಡಿನ ಪೂರ್ವ ದಕ್ಷಿಣ ಪಶ್ಚಿಮಗಳಲ್ಲಿ ಭಾರತ ಹಾಗೂ ಉತ್ತರದಲ್ಲಿ ಚೀನಾ ಇವೆ. ಇಲ್ಲಿಯ ಕ್ಷೇತ್ರಫಲ ಪೂರ್ವದಿಂದ ಪಶ್ಚಿಮದವರೆಗೆ 400 ಕಿ.ಮೀ. ಹಾಗೂ ಉತ್ತರದಿಂದ ದಕ್ಷಿಣದವರೆಗೆ ಸುಮಾರು 250 ಕಿ.ಮೀ. ವಿಸ್ತೃತವಾಗಿದೆ. ಪ್ರಕೃತಿಯ ತೊಟ್ಟಿಲು ಎಂಬಂತಿರುವ ಈ ದೇಶವು ಸಸ್ಯಸಂಪತ್ತು ಹಾಗೂ ಜಲಸಂಪತ್ತುಗಳನ್ನು ತುಂಬಿಕೊಂಡಿರುವ ಕಣಜವೇ ಸರಿ!

ಈ ಭೂಭಾಗಕ್ಕೆ ಮಾನವನ ಆಗಮನ ಸುಮಾರು 9000 ವರ್ಷಗಳಷ್ಟು ಹಿಂದಿನದ್ದಾಗಿದೆ ಎಂಬುದು ಶಿಲಾಯುಧ ಕಾಲೀನ ಶಾಸನಗಳಿಂದ ತಿಳಿದುಬರುತ್ತದೆ. ಪ್ರಾಚೀನ ಇತಿಹಾಸ ಹೇಳುವಂತೆ, ಇಂದಿನ ಮಧ್ಯಭಾರತದ ಮೇಲಿನ ಭೂಭಾಗವನ್ನು ಆರ್ಯಾವರ್ತವೆಂದು ಅಥವಾ ಭರತಖಂಡವೆಂದು ಕರೆಯುತ್ತಿದ್ದರು. ನೇಪಾಳ, ಆಫ್ಘಾನಿಸ್ಥಾನ ಹಾಗೂ ಸುತ್ತಮುತ್ತಲಿನ ದ್ವೀಪಗಳನ್ನೊಳಗೊಂಡು ಅಖಂಡ ಭರತಖಂಡದ ಭೂಪಟವಾಗಿತ್ತು. ತತ್ಕಾಲೀನ ಜನರ ಭಾಷೆಯಲ್ಲಿ ಇಲ್ಲಿನ ಜನರ ಗುಂಪು ಅಥವಾ ಸಮುದಾಯಗಳನ್ನು ಜನಪದಗಳೆಂದು ಕರೆಯುತ್ತಿದ್ದರು. ಈ ಜನಪದಗಳ ಮುಖಂಡರನ್ನು ರಾಜರೆಂದೇ ಸಂಬೋಧಿಸುತ್ತಿದ್ದರು. ವಿದೇಹ ರಾಜನ ಮಿಥಿಲೆ ಅಥವಾ ಜನಕಪುರ ನೇಪಾಳದಲ್ಲಿದೆ. ಸೀತಾಮಾತೆಯ ತವರೂರಿದು. ಇಂತು ಈಗಲೂ ನೇಪಾಳ ಹಾಗೂ ಭಾರತಕ್ಕೆ ಭೌಗೋಳಿಕ, ಸಾಂಸ್ಕೃತಿಕ, ಸಭ್ಯತೆ, ನಂಬಿಕೆ, ಆಚಾರ–ವಿಚಾರಗಳಲ್ಲಿ ಸಾಮ್ಯತೆ ಇದೆ. ಇತ್ತೀಚಿನ ವರ್ಷಗಳವರೆಗೆ ಇಲ್ಲಿಯ ರಾಷ್ಟ್ರೀಯ ಧರ್ಮ ಹಿಂದೂ ಧರ್ಮವೇ ಆಗಿತ್ತು. ಬುದ್ಧನ ಜನ್ಮಸ್ಥಳ ಲುಂಬಿನಿಯ ವಿಚಾರವಿರಲಿ, ಧರ್ಮದ ವಿಚಾರವಿರಲಿ, ಇಲ್ಲಿ ಯಾವುದೇ ಮತಬೇಧವಿಲ್ಲ. ಇಲ್ಲಿ ಸಭ್ಯತೆ, ಆಯುರ್ವೇದ, ಯೋಗ, ಜ್ಯೋತಿಷ್ಯ – ಈ ನಾಲ್ಕು ಸಂಗತಿಗಳು ಸಮಾನವಾಗಿ ಮಾನ್ಯತೆ ಪಡೆಯುತ್ತವೆ.

ಐತಿಹಾಸಿಕ, ಪೌರಾಣಿಕ ನಂಬಿಕೆಯ 'ಪಶುಪತಿನಾಥ' ದೇವಾಲಯವೇ ಶಿವೋಪಾಸನೆಯ ಪ್ರತೀಕವಾಗಿದೆ. ಪ್ರಾಚೀನ ಕಾಲದ ಶಾಸನಗಳಲ್ಲೇ ಉಲ್ಲೇಖವಿರುವ ವೀರಶೈವ(ಜಂಗಮ)ರ ಮಠಗಳು ಇಲ್ಲಿವೆ. ಈ ಮಠಗಳು ಧಾರ್ಮಿಕ ಆಚರಣೆಗಳು, ಸಂಪ್ರದಾಯಗಳನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿವೆ.

ಸುಮಾರು 2500 ವರ್ಷಗಳ ಪೂರ್ವದಲ್ಲಿ ಇಲ್ಲಿ ಬರ್ಮೀಯರು, ಟಿಬೆಟಿಯನ್ನರು ಇಲ್ಲಿಗೆ ಬಂದಿದ್ದರೆಂಬುದು ಇತಿಹಾಸ. ಆದಾಗ್ಯೂ ನೇಪಾಳೀಯರು ತಮ್ಮತನವನ್ನು ಉಳಿಸಿಕೊಂಡಿದ್ದರು. ಮುಂದೆ 1816ರಲ್ಲಿ ಬ್ರಿಟಿಷರೊಂದಿಗಿನ ಯುದ್ಧದಲ್ಲಿ ಸಂಧಿ ಏರ್ಪಟ್ಟು, ಭೌಗೋಳಿಕವಾಗಿ ಅಂದಿನ ನೇಪಾಳದಲ್ಲಿದ್ದ ಉತ್ತರಾಖಂಡ, ಹಿಮಾಚಲ ಪ್ರದೇಶ, ಸಿಕ್ಕಿಂ, ಪಶ್ಚಿಮ ಬಂಗಾಳದ ಕೆಲಭಾಗಗಳು ಭಾರತದ ಭೂಪಟದಲ್ಲಿ ಸೇರಿಹೋದವು.

ಬ್ರಿಟಿಷರ ಆಳ್ವಿಕೆಯ ಕಾಲವದು. ಹೀಗೆ ರಾಜಕೀಯವಾಗಿ ಬೇರ್ಪಟ್ಟರೂ ಎರಡೂ ರಾಷ್ಟ್ರಗಳ ಸ್ನೇಹ–ಸಂಬಂಧ ಕಡಿದಿರಲಿಲ್ಲ. ಈ ಸಂಬಂಧಗಳ ಕೊಂಡಿಯನ್ನು ಬೆಸೆಯಲು ವೀರಶೈವ ಪಂಥೀಯ ಜಂಗಮರ ಪಾತ್ರ ಮಹತ್ವಪೂರ್ಣವಾದುದು. ಇಂತಹ ಒಂದು ಜಂಗಮ ಪರಿವಾರ ಶತಮಾನಗಳ ಹಿಂದೆ ಅಲ್ಲಿ ಹೋಗಿ ನೆಲೆಸಿದವರು, ಅಲ್ಲಿಯವರೇ ಆಗಿ ತಮ್ಮ ಮೂಲ ಸಂಪ್ರದಾಯವನ್ನೂ ಬಿಡದೇ ಪರಂಪರಾಗತವಾದ ಹಿಂದೂ ವಿಚಾರಧಾರೆಯಂತೆ ಇಂದಿಗೂ ಅವರು 'ವಿಕ್ರಮ ಸಂವತ್ಸರ'ದ ಕಾಲಗಣನೆಯನ್ನೇ ತಮ್ಮ ಆಗು–ಹೋಗುಗಳಲ್ಲಿ ಅನುಸರಿಸಿಕೊಂಡು, ಪಾಲಿಸಿಕೊಂಡು ಬಂದಿದ್ದಾರೆ.

ಇಂತಹ ಜಂಗಮ ಪರಂಪರೆಯ ನಿಷ್ಠ ಅನುಯಾಯಿ 'ಭರತ್ ಜಂಗಮ್'ರವರ ಪರಿಚಯ ನನಗೆ ಆಗಿದ್ದು ಸುಯೋಗವೆಂದೇ ಹೇಳಬೇಕು. 'ಸ್ತ್ರೀ ಜಾಗೃತಿ' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿರುವ ಮಹಿಳಾ ಪತ್ರಕರ್ತೆ ಶ್ರೀಮತಿ ಶೋಭಾರವರು ಸಮಾಜಸೇವೆಗಾಗಿಯೇ ತಮ್ಮ ಬದುಕನ್ನು ಸಮರ್ಪಿಸಿಕೊಂಡವರು..., ಇವರು ನನಗೆ ಆತ್ಮೀಯರು. ಅವರ ಪತ್ರಿಕೆಯಲ್ಲಿ ನನ್ನ ಬರಹಗಳು ಆಗೊಮ್ಮೆ, ಈಗೊಮ್ಮೆ ಪ್ರಕಟಗೊಳ್ಳುತ್ತಿದ್ದವು. 'ಕೈಕೇಯಿ... ಚೇತನಾ ಶಿಖಾ' ಎಂಬ ಹಿಂದಿಯಲ್ಲಿದ್ದ ಪೌರಾಣಿಕ ಉಪನ್ಯಾಸವನ್ನು ಕನ್ನಡಕ್ಕೆ ಅನುವಾದಿಸಿ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಿತ್ತರಗೊಳ್ಳುತ್ತಿರುವಾಗಲೇ... ಒಂದು ದಿನ ಶೋಭಾ ನನ್ನ ಬಳಿ ಹೇಳಿದರು– "ವಿಜಯಕ್ಕ, ನೇಪಾಳದ 'ಭರತ್ ಜಂಗಮ್' ಎಂಬುವವರ ಕೃತಿಯೊಂದನ್ನು ಕನ್ನಡಕ್ಕೆ ಅನುವಾದಿಸಿ ಕೊಡಬಹುದೆ?" Anticurruptology ಎಂಬ ಗ್ರಂಥವನ್ನು ಕನ್ನಡದಲ್ಲಿ ಪ್ರಕಟಿಸಬೇಕೆಂಬ ಅವನ ಅಭಿಲಾಷೆಯನ್ನು ನಿರಾಕರಿಸಲಾಗದೆ "ಪ್ರಯತ್ನಿಸುವೆ" ಎಂದಷ್ಟೆ ಹೇಳಿದೆ. ಭರತ್ ಜಂಗಮರು ನನ್ನನ್ನು ಫೋನ್ ಮೂಲಕ ಸಂಪರ್ಕಿಸಿದರು. ನಾವು ಪರಸ್ಪರ ಇಂಗ್ಲಿಷ್‌ನಲ್ಲಿ ಸಂಭಾಷಿಸಲು ತೊಡಗಿದೆವು. "ಬಹನ್ ಜೀ..." ಎಂಬ ಅವರ ಆತ್ಮೀಯ ಕರೆ ನನ್ನನ್ನು ಮುಗ್ಧಗೊಳಿಸಿತು.

ಮಾತುಕತೆಯಾದಂತೆ... ಅವರು ತಮ್ಮ ಪುಸ್ತಕವನ್ನು (ಇಂಗ್ಲಿಷ್‌ನಲ್ಲಿದ್ದದ್ದು) ಹಾಗೂ ಅದರ ಜೊತೆಗೆ ಅಪ್ರಕಟಿತ ಹಿಂದಿಯಲ್ಲಿದ್ದ ಬರಹದ ಕಡತವನ್ನು ಕಳಿಸಿದರು. ನಾನು ಕನ್ನಡ, ಇಂಗ್ಲಿಷ್, ಹಿಂದಿ ಮೂರೂ ಶಬ್ದಕೋಶಗಳನ್ನಿಟ್ಟುಕೊಂಡು ಬರವಣಿಗೆ ಆರಂಭಿಸಿದೆ. ಬರವಣಿಗೆ ಸಾಗಿದಂತೆ ಭರತ್ ಜಂಗಮರೊಂದಿಗಿನ ಸಂಪರ್ಕದ ಸ್ನೇಹ ಒಂದು ರೀತಿಯ ಬಾಂಧವ್ಯದಲ್ಲಿ ಪರಿವರ್ತಿತವಾಯಿತು.

ನನ್ನ ಅನುವಾದಿತ ಕೃತಿ 'ಭ್ರಷ್ಟವಿರೋಧಿ ಸಿದ್ಧಾಂತ' ಪ್ರಕಟಿತ ರೂಪದಲ್ಲಿ ರೂಪುಗೊಂಡಿತು. 15 ಜುಲೈ 2022 ರಲ್ಲಿ ಕೃತಿ ಬಿಡುಗಡೆಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಭರತ್ ಜಂಗಮರು ಕುಟುಂಬಸಮೇತರಾಗಿ ಬಂದಿದ್ದರು. ಪರಸ್ಪರ ಭೇಟಿಯಾಯಿತು. ನನ್ನನ್ನು ಅವರು ಅಕ್ಕನೆಂದು ಮಾನ್ಯ ಮಾಡಿದರೆ, ನಾನೂ ಅವರನ್ನು ಸಹೋದರನಾಗಿ ಸ್ವೀಕರಿಸಿದೆ. ಅವರದು ಮುಗ್ಧ ಸರಳ ಸ್ವಭಾವ. ಸುಸಂಸ್ಕೃತ ಸಜ್ಜನಿಕೆಯ ವ್ಯವಹಾರ. ಆತ್ಮೀಯತೆಯನ್ನು, ಬಂಧುತ್ವವನ್ನು ಗೌರವಿಸುವವರು. ಮೇಧಾವಿ ಚಿಂತಕರು, ಶಿಕ್ಷಣತಜ್ಞರು, ಇತಿಹಾಸಕಾರರು, ಸಮಾಜ ಸುಧಾರಕರು ಆದ ಇವರದು ಮೇರು ವ್ಯಕ್ತಿತ್ವ.

ಸದರಿ ಕಾರ್ಯಕ್ರಮದಲ್ಲಿ ಅನೇಕ ಗಣ್ಯರ ಉಪಸ್ಥಿತಿಯಲ್ಲಿ 'ಭ್ರಷ್ಟರಿಗೆ ಸಿಂಹಸ್ವಪ್ನ'ರೆಂದೇ ಖ್ಯಾತರಾಗಿದ್ದ ಮಾಜಿ ಲೋಕಾಯುಕ್ತರಾಗಿದ್ದ ಸಂತೋಷ್ ಹೆಗ್ಡೆಯವರು ಪುಸ್ತಕವನ್ನು ಲೋಕಾರ್ಪಣೆ ಮಾಡಿದರು. ಮುನ್ನುಡಿ ಬರೆದವರು ಸಿ. ಸೋಮಶೇಖರ್ ಭಾ.ಆ.ಸೇ. ರವರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಇವರು ಭರತ್ ಜಂಗಮ್‌ರಿಗೆ ಆತ್ಮೀಯರು. ಮಾತ್ರವಲ್ಲ, ಭರತ್ ಜಂಗಮ್‌ರಿಗೆ ಇಲ್ಲಿಯ ಪ್ರಾಜ್ಞರಾದ, ಸಾಹಿತಿ, ಚಿಂತಕರೂ ಆಗಿದ್ದ ಚಿದಾನಂದ ಮೂರ್ತಿಯವರು ಅತ್ಯಂತ ಆತ್ಮೀಯರಾಗಿದ್ದರು. ಅಲ್ಲದೆ ಗೊರೂರು ಚೆನ್ನಬಸಪ್ಪನವರು ಹೀಗೆ ಅನೇಕ ಆತ್ಮೀಯರು–ಸ್ನೇಹಿತರನ್ನು ಹೊಂದಿದ್ದಾರೆ. ಅಲ್ಲದೆ ಕಾಶಿಮಠ, ಶ್ರೀಶೈಲಮಠ ಹಾಗೂ ಅನೇಕ ಮಠಮಾನ್ಯಗಳ ಸ್ನೇಹಸಂಪರ್ಕವನ್ನು ಹೊಂದಿದ್ದಾರೆ ಭರತ್ ಜಂಗಮರು. ಹೀಗೆ ಭಾರತದೊಂದಿಗೆ ಇವರದ್ದು ಅವಿನಾಭಾವ ಸಂಬಂಧ. ಇದು ಒಂದು ರೀತಿಯ ಭಾವೈಕ್ಯದ ಪ್ರತೀಕವೂ ಆಗಿದೆ.

ಇಂತಹ ಮೇರು ವ್ಯಕ್ತಿತ್ವದ ಪರಿಚಯ ವೃತ್ತಾಂತವನ್ನು ಬರೆಯುವುದೆಂದರೆ ಗಗನಕುಸುಮವನ್ನು ತರಲು ಹೊರಟಂತೆ ಎನಿಸುತ್ತದೆ... ಕಾರಣ, ನೇಪಾಳದ ರಾಷ್ಟ್ರವ್ಯವಸ್ಥೆಯಲ್ಲಿನ ಯಾವುದೇ ಕ್ಷೇತ್ರಗಳತ್ತ ಕಣ್ಣು ಹಾಯಿಸಿದರೂ ಅಲ್ಲಿ ಭರತ್ ಜಂಗಮ್‌ರ ಸಹಭಾಗಿತ್ವ ಹಾಗೂ ಛಾಪನ್ನು ಧಾರಾಳವಾಗಿ ಕಾಣಬಹುದು. ಅವರ ಕಾರ್ಯ, ಕಾರ್ಯಯೋಜನೆಗಳು, ಸಂಘಟನಾತ್ಮಕ ಕಾರ್ಯಗಳು, ವ್ಯವಸ್ಥೆಯಲ್ಲಿ ಕೊರತೆ ಕಂಡಲ್ಲಿ ಧ್ವನಿ ಎತ್ತುವ, ಹೋರಾಟಗಳ ಮೂಲಕ ಮಾನವ ಕಲ್ಯಾಣ–ರಾಷ್ಟ್ರಹಿತಕ್ಕಾಗಿ ಇವರು ಸಂಪೂರ್ಣ ತತ್ಪರರು. ಧಾರ್ಮಿಕ, ಸಾಂಸ್ಕೃತಿಕ, ರಾಜನೈತಿಕ, ಸಾಮಾಜಿಕ ಕ್ಷೇತ್ರ ಯಾವುದೇ ಇರಲಿ, ಇವರು ತಮ್ಮ ಗಮನ ಹರಿಸದೇ ಇರಲಾರರು. ಇಂತಹ ಒಬ್ಬ ವ್ಯಕ್ತಿಯ, ಶಕ್ತಿಯ, ವಿರಾಡ್ರೂಪದ ಚಿತ್ರಣವನ್ನು ನಮ್ಮ ಕನ್ನಡ ನಾಡಿನ ಬಾಂಧವರಿಗೂ ಪರಿಚಯಿಸುವ ಅವಕಾಶವೊಂದು ನನಗೆ ಲಭ್ಯವಾಗಿದ್ದು ಸಂತಸದ ವಿಚಾರವೇ ಸರಿ. ಈ ಕುರಿತು ಅವರನ್ನು (ಅನುಮತಿ) ಕೇಳಿಕೊಂಡಾಗ ಅತೀವ ಸಂತಸಪಟ್ಟು, "ಅಕ್ಕ ತಮ್ಮನ ಕುರಿತು ಬರೆಯುವುದೆಂದರೆ ಇದಕ್ಕಿಂತ ವಿಶೇಷವಾದುದು ಏನಿದೆ?" ಎಂದು ಸಂಭ್ರಮದಿಂದ ಹೇಳಿ ಒಪ್ಪಿಗೆ ನೀಡಿದರು.

ಅವರ ಅಭಿನಂದನಾ ಗ್ರಂಥದಿಂದ... ಇನ್ನು ಅವರ ಕೆಲವು ಸಂದರ್ಶನಗಳಲ್ಲಿನ ವಿವರಗಳನ್ನು ಸಂಗ್ರಹಿಸಿ, ನನ್ನ ಅಲ್ಪಮತಿಗೆ ತಿಳಿದಿದ್ದನ್ನು ಓದುಗರ ಮುಂದಿಡಲು ಪ್ರಯತ್ನಿಸಿದ್ದೇನೆ.

ಭರತ್ ಜಂಗಮ್‌ರಂತೆ ನನ್ನಲ್ಲೂ ಒಂದು ಕಿಡಿಯಷ್ಟು ಸತ್ಯಶೋಧನೆ, ಸಾಮಾಜಿಕ ಅಸಮಾನತೆ ವಿರುದ್ಧ ದನಿ ಎತ್ತುವ, ಹೋರಾಡುವ ಪ್ರವೃತ್ತಿ ಇದ್ದು, ಬರವಣಿಗೆಯ ಮೂಲಕವೂ ವಿಚಾರಗಳನ್ನು ಜನಮಾನಸಕ್ಕೆ ತಲುಪಿಸುವ ಸಣ್ಣ ಪ್ರಯತ್ನ ಮಾಡುತ್ತಿದ್ದೇನೆ. ಬಹುಶಃ ಈ ಕಾರಣದಿಂದಾಗಿಯೇ ಇವರು (ಭರತ್ ಜಂಗಮರು) ಇನ್ನಷ್ಟು ಹತ್ತಿರವಾದರೆಂದರೆ ತಪ್ಪಾಗಲಾರದು. ಆದ್ದರಿಂದಲೇ 'ವ್ಯಕ್ತಿಯಲ್ಲ ಶಕ್ತಿ' ಎಂಬ ಹೆಸರಿನಲ್ಲಿ ಬರೆದ ಈ ಕೃತಿಯನ್ನು ನಿಮ್ಮೆದುರು ಇಡುತ್ತಿದ್ದೇನೆ. ಇದನ್ನು ಓದುವ ನಮ್ಮ ಯುವಜನಾಂಗ, ಜಾಗೃತ ಪ್ರಜೆಗಳಲ್ಲಿ ಪ್ರೇರಣೆ, ಸ್ಫೂರ್ತಿ ಪಡೆಯುವಂತಾದರೆ ಆ ವ್ಯಕ್ತಿಯ ಉದ್ದೇಶ, ಆಕಾಂಕ್ಷೆ ಹಾಗೂ ನನ್ನ ಕಿರುಪ್ರಯತ್ನ ಸಾರ್ಥಕ್ಯವನ್ನು ಪಡೆಯಬಹುದು.

ಓದುಗ ಜನಮಾನಸಕ್ಕೆ ನಮನಗಳೊಂದಿಗೆ ಈ ಬರಹವನ್ನು ನಿಮ್ಮ ಮುಂದಿಡುತ್ತಿದ್ದೇನೆ.

**– ವಿಜಯಾ ವಿಷ್ಣುಭಟ್**

# ಡಾ. ಭರತ್ ಜಂಗಮ್ – ವ್ಯಕ್ತಿಯಲ್ಲ, ಶಕ್ತಿ!!

ಲೇಖಕರು

**ವಿಜಯಾ ವಿಷ್ಣುಭಟ್**

# ಪರಿವಿಡಿ

1. ಜಂಗಮರ ಪೂರ್ವ ಇತಿಹಾಸ
2. ಕೌಟುಂಬಿಕ ವಿಷಯಗಳು
3. ವಿದ್ಯಾಭ್ಯಾಸ, ಸಮಾಜದ ಪ್ರಭಾವ
4. ಪತ್ರಿಕೋದ್ಯಮದಲ್ಲಿ
5. ಸಾಹಿತ್ಯ ಕೃಷಿ
6. ಆಡಳಿತ ನೈಪುಣ್ಯತೆ
7. ಸಾಮಾಜಿಕ ಏಕೀಕರಣ
8. ದೇವಾಲಯಗಳ ಜೀರ್ಣೋದ್ಧಾರ
9. ಭ್ರಷ್ಟಾಚಾರ ವಿರೋಧಿ ಚಳವಳಿ
10. ನ್ಯಾಯ ಮತ್ತು ಕಾನೂನು
11. ಸಂವಿಧಾನ
12. ರಾಜಕೀಯ
13. ಆರ್ಥಿಕತೆ ಮತ್ತು ಬ್ಯಾಂಕುಗಳು
14. ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ

## ಜಂಗಮರ ಪೂರ್ವ ಇತಿಹಾಸ

'ಜಂಗಮ' ಎಂಬ ಉಪನಾಮವನ್ನಿಟ್ಟುಕೊಂಡಿರುವ ಜನರ ಸಂಖ್ಯೆ ಸೀಮಿತವೆಂದು ತೋರುತ್ತದೆ. ಈ ಉಪನಾಮವನ್ನು ಹೊಂದಿರುವ ವ್ಯಕ್ತಿಗಳೇ ನಿಜಕ್ಕೂ ಕಡಿಮೆಯೋ, ಅಥವಾ ಇತರೆ ಉಪನಾಮಗಳ ಜನರಿಗೆ ಹೋಲಿಸಿದರೆ ಕಡಿಮೆ ಎಂಬಂತೆ ಕಂಡುಬರುತ್ತಾರೋ? ಎಂದು ಪರಿಶೀಲಿಸಿದರೆ, ವಾಸ್ತವವಾಗಿ, ಜಂಗಮ ಸಮುದಾಯಕ್ಕೆ ಸೇರಿದ ಕೆಲವೇ ಕುಟುಂಬಗಳಿವೆ. ತಮ್ಮ ಕಡಿಮೆ ಜನಸಂಖ್ಯೆಯ ಕಾರಣಕ್ಕಾಗಿಯೇ, ಕೆಲವು ಜಂಗಮ ಸಮುದಾಯಗಳು ತಮ್ಮ ಉಪನಾಮಗಳನ್ನು ಶರ್ಮ, ಶರ್ಮನ್, ರಾವಲ್, ಲಾವ್, ಮತ್ತಿತರೆ ಉಪನಾಮಗಳಂತೆ ಬಳಸುತ್ತಿವೆ ಎಂದು ಕಂಡುಬರುತ್ತದೆ.

'ಜಂಗಮ' ಎಂಬ ಉಪನಾಮವು ಬಳಕೆಗೆ ಬಂದ ರೀತಿಯನ್ನು ನೋಡುವುದಾದರೆ ಹಿಂದೂಧರ್ಮದ ಪ್ರಾಚೀನತೆಯನ್ನು ಗಮನಿಸಬೇಕಾಗುತ್ತದೆ. ಅದು ಪ್ರಧಾನವಾಗಿ ಶೈವ ಪಂಥದ ನೇತೃತ್ವದಲ್ಲಿದ್ದುದು ಕಂಡುಬರುತ್ತದೆ. ಶೈವರಲ್ಲಿ, ವೀರಶೈವರೆಂಬ ಭಕ್ತವರ್ಗ ಕೂಡಾ ಇದೆ. ಈ ವೀರಶೈವರಲ್ಲಿ, ಬ್ರಾಹ್ಮಣರ ಜಾತಿಯವರನ್ನು ಜಂಗಮರೆಂದು ಕರೆಯುತ್ತಾರೆ. ಸರಳವಾಗಿ ಹೇಳುವುದಾದಲ್ಲಿ, ವೀರಶೈವ ಸಂಪ್ರದಾಯದಲ್ಲಿ ಜಂಗಮರನ್ನು 'ಸಂಚಾರಿ ತಪಸ್ವಿ'ಗಳೆಂದು ಪರಿಗಣಿಸಲಾಗುತ್ತದೆ. ಸಂಕ್ಷಿಪ್ತ ಅರ್ಥದಲ್ಲಿ, ಜಂಗಮರೆಂದರೆ ಶೈವ ಬ್ರಾಹ್ಮಣರು. ಜಂಗಮರು ವೀರಶೈವ ಲಿಂಗಾಯತ ಪರಂಪರೆಯನ್ನು ಅನುಸರಿಸುತ್ತಾರೆ.

ಹಿಂದೆ ನೇಪಾಳದಲ್ಲಿ ಲಿಚ್ಛವಿ ಅವಧಿಯಲ್ಲಿ, ದಕ್ಷಿಣ ಭಾರತದ ಕರ್ನಾಟ ವಂಶದ ನಾನ್ಯದೇವ ಎಂಬ ರಾಜನು ಸಿಮ್ರಾಂವ್‌ಘರ್ (ಮಿಥಿಲಾ ಪ್ರದೇಶ) ಪ್ರದೇಶಕ್ಕೆ ಬಂದನು ಮತ್ತು ರಾಜ್ಯದ ಆಳ್ವಿಕೆಯಲ್ಲಿ ರಾಜಬೋಧಕ/ಸಲಹೆಗಾರನಾಗಿ ಕಾರ್ಯನಿರ್ವಹಿಸಿದನು ಎಂಬುದಕ್ಕೆ ದಾಖಲೆಯಿದೆ. ಅದರಂತೆಯೇ, ಅದೇ ಶತಮಾನದಲ್ಲಿ, ರಾಜ ಹರಿಸಿಂಹದೇವ ಮಲ್ಲನು ಭಕ್ತಾಪುರಕ್ಕೆ ಬಂದಾಗ, ಕರ್ನಾಟ ವಂಶದ ಅಲೆಮಾರಿ ತಪಸ್ವಿಗಳು ಅವನಿಗೆ ರಾಜಬೋಧಕ/ಸಲಹೆಗಾರರಾಗಿ ಆಡಳಿತದಲ್ಲಿ ಸಹಕರಿಸಿದರು ಎಂದೂ ಹೇಳಲಾಗಿದೆ. ಲಭ್ಯವಿರುವ ದಾಖಲೆಗಳ ಪ್ರಕಾರ, ಹರಿಸಿಂಹದೇವ ಮಲ್ಲನ ತಮ್ಮನಾದ ರುದ್ರದೇವ ಮಲ್ಲ ಮತ್ತು ಅವನ ಸಹಚರರು ಭಕ್ತಾಪುರದಲ್ಲಿ ಶಾಶ್ವತವಾಗಿ ವಾಸಿಸಿದ್ದರು. ಈ ಅಂಶವನ್ನು ಭಕ್ತಾಪುರದ ಜಂಗಮ ಮಠದ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಭಕ್ತಾಪುರವನ್ನು ಹೊರತುಪಡಿಸಿ, ಜಂಗಮರನ್ನು ಬೇರೆ ಸ್ಥಳಗಳಲ್ಲಿ ಗುರುತಿಸಲು ಹೊರಟರೆ ಈ ಮುಂದಿನಂತೆ ಗುರುತಿಸಲು ಐತಿಹ್ಯಗಳು ದೊರೆಯುತ್ತವೆ. ಜಂಗಮರ ನಾಯಕತ್ವದಿಂದಾಗಿ, ಭಕ್ತಾಪುರದ ಸಮಕಾಲೀನ ಸ್ಥಳಗಳಲ್ಲಿ ಶಿವನ ದೇವಾಲಯಗಳು ಪ್ರತಿಷ್ಠಾಪಿತವಾದವು. ಇವುಗಳಲ್ಲಿ ಜಂಗಮ ವಾಸ್ತವ್ಯದ ಭಕ್ತಾಪುರ ಜಿಲ್ಲೆಯ ಬಾಲೇಶ್ವರ, ಇಂದ್ರೇಶ್ವರ (ಪನೌತಿ), ಗೌಖುರೇಶ್ವರ (ಧೂಲಿಖೇಲ್), ಧನೇಶ್ವರ (ಬನೆಪ), ಅನಂತೇಶ್ವರ (ಗುಂಡು) ಹಾಗೂ ಕವ್ರೆಪಾಲಂಚೋಕ್ ಜಿಲ್ಲೆಯ ಡೋಲೇಶ್ವರ (ಸಿಪಾಡೋಲ್) ದೇವಸ್ಥಾನಗಳೂ ಸೇರಿವೆ.

ಜಂಗಮರು ಶೈವ ಪರಂಪರೆಯ ದೃಢವಾದ ಅನುಯಾಯಿಗಳು, ಮತ್ತು ಇದರಿಂದಾಗಿ, ಅವರು ಕೆಲವು ಕಟ್ಟುನಿಟ್ಟಾದ ಕ್ರಮಗಳನ್ನು ಅನುಸರಿಸುತ್ತಾರೆ. ಅವರು ಜನಿವಾರ(ಯಜ್ಞೋಪವೀತ)ವನ್ನು ಧರಿಸುತ್ತಾರೆ ಮತ್ತು ಶಿವಲಿಂಗದ ಆಕೃತಿಯನ್ನು ತಮ್ಮೊಂದಿಗೆ ಕೊಂಡೊಯ್ಯುತ್ತಾರೆ. ಅವರ ಪೂಜೆ ಮತ್ತು ಧ್ಯಾನಗಳು ಪ್ರಧಾನವಾಗಿ ಶಿವನ ಕುರಿತಾಗಿಯೇ ಇರುತ್ತವೆ ಹಾಗೂ ಈ ಅಭ್ಯಾಸಗಳು ಅವರ ದಿನಚರಿಯ ಭಾಗವಾಗಿರುತ್ತವೆ. ಜಂಗಮರು ತಮ್ಮ ಅತ್ಯುನ್ನತ ನಡವಳಿಕೆಗಳಿಗೆ ಹೆಸರಾಗಿದ್ದಾರೆ, ಆಗಾಗ ಬ್ರಾಹ್ಮಣರ ಅಭ್ಯಾಸಗಳನ್ನೂ ಅನುಸರಿಸುತ್ತಾರೆ.

ಜಂಗಮರಿಂದ ವಿಶೇಷವಾಗಿ ಆಚರಿಸಲ್ಪಡುವ ಎಲ್ಲಾ ಆಚರಣೆಗಳನ್ನೂ ಭರತ್ ಜಂಗಮ್ ಅವರು ಅಭ್ಯಾಸ ಮಾಡಿದ್ದಾರೆ. ಸಾಂಪ್ರದಾಯಿಕ ಆಚರಣೆಗಳನ್ನು ಅನುಸರಿಸುವುದೆಂದರೆ ಒಂದು ಪರಂಪರೆಯ ಜೀವಂತಿಕೆಯನ್ನು ರಕ್ಷಿಸಿದಂತೆ ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದಾರೆ ಹಾಗೂ ಅವರ ಕೈಲಾದ ಮಟ್ಟಿಗೆ ಸಾಂಪ್ರದಾಯಿಕ ಗ್ರಂಥಗಳಲ್ಲಿ ಹೇಳಲಾಗಿರುವುದನ್ನು ಅನುಸರಿಸಲು ಶ್ರಮಿಸಿದ್ದಾರೆ.

-----

## ಕೌಟುಂಬಿಕ ವಿಷಯಗಳು

ಭರತ್ ಜಂಗಮ್ ಅವರು ವಿಕ್ರಮ ಸಂವತ್ಸರದ ದಿನದರ್ಶಿಕೆಯ ಪ್ರಕಾರ, 2004ನೇ ಮಾರ್ಗಶಿರ ದಶಮಿಯಂದು (1947ನೇ ನವೆಂಬರ್ 25 ರಂದು) ನೇಪಾಳದ ಭಕ್ತಾಪುರ ಜಿಲ್ಲೆಯ ತೌಮಾಧಿ ಗ್ರಾಮದಲ್ಲಿ ಜನಿಸಿದರು. ಅವರ ತಂದೆ, ಗೋವಿಂದ ಹರಿ ಜಂಗಮ ಮತ್ತು ತಾಯಿಯವರಿಗೆ ಒಟ್ಟು ನಾಲ್ಕು ಜನಗಂಡು ಮಕ್ಕಳು ಕ್ರಮವಾಗಿ ರಾಮ್, ಭರತ್, ದೀಪಕ್ ಮತ್ತು ಪುಷ್ಕರ್ ಹಾಗೂ ಆರುಜನ ಹೆಣ್ಣುಮಕ್ಕಳು ಕ್ರಮವಾಗಿ ಸಾವಿತ್ರಿ, ಗಾಯತ್ರಿ, ದುರ್ಗಾ, ಸಾನಿಮೈಯಾ, ಶಾಂತಾ ಮತ್ತು ಸವಿತಾ.

ಭರತ್ ಜಂಗಮರ ಮದುವೆಯು 2032ನೇ ಆಷಾಢದಲ್ಲಿ (ಅಂದಾಜು 1975ನೇ ಇಸವಿಯ ಜೂನ್ ಅಥವಾ ಜುಲೈ ಇರಬಹುದು) ಕಠ್ಮಂಡುವಿನ ದೆಹಲಿ ಬಜಾರ್‌ನ ನಿವಾಸಿಯಾಗಿದ್ದ ಯಜ್ಞಬಹಾದ್ದೂರ್ ಕೇಶಿಯವರ ಹಿರಿಯ ಮಗಳು ಇಂದಿರಾ ಜೊತೆ ನೆರವೇರಿತು. ಅವರ ಅತ್ತೆಯವರ ಹೆಸರು ಅಂಬಿಕಾ ಕೇಶಿ. ಅವರಿಗೆ ನಾಲ್ಕು ಗಂಡು ಮಕ್ಕಳಿದ್ದಾರೆ; ಕ್ರಮವಾಗಿ ಭರತ್, ಗೋಪಾಲ್, ರಾಜೇಂದ್ರ ಮತ್ತು ಪ್ರದೀಪ್; ಅವರಿಗೆ ಮತ್ತೆ ಮೂರುಜನ ಹೆಣ್ಣುಮಕ್ಕಳೂ ಇದ್ದಾರೆ; ಕ್ರಮವಾಗಿ ಶಾಂತಿ, ಮಣಿ ಮತ್ತು ವರ್ಷಾ.

ಭರತ್ ಜಂಗಮ್ ಅವರ ಕುಟುಂಬದಲ್ಲಿ ಈಗ ಅವರು, ಅವರ ಶ್ರೀಮತಿ, ಮಗಳು ರಕ್ಷಾ ಮತ್ತು ಮಗ ಅನೂಪ್ ಅವರುಗಳಿದ್ದಾರೆ. ರಕ್ಷಾಳಿಗೆ ವೈಕುಂಠ ವಿಕ್ರಮ ತಪ ಅವರೊಂದಿಗೆ ಮದುವೆಯಾಗಿದೆ. ಸದ್ಯ ಅವರು ಯುಎಸ್‌ಎನ ಟೆಕ್ಸಾಸ್‌ನಲ್ಲಿದ್ದಾರೆ. ಅವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ, ದೇವೇನ್ ವಿಕ್ರಮತಪ ಮತ್ತು ಡೇವಿಸ್ ವಿಕ್ರಮತಪ. ಅನೂಪ್ ಕೂಡಾ ನಿಶಾ ಕೆ.ಸಿ. ಯೊಂದಿಗೆ ವಿವಾಹವಾಗಿದ್ದಾರೆ. ಅವರಿಗೂ ಕೂಡಾ ಇಬ್ಬರು ಗಂಡು ಮಕ್ಕಳಿದ್ದಾರೆ, ಆರವ್ ಜಂಗಮ ಮತ್ತು ನಿಭೇನ್ ಜಂಗಮ.

ಭರತ್ ಜಂಗಮ್ ಅವರ ಕುಟುಂಬಸ್ಥರು ಎರಡೂ ಕಡೆಯೂ ಮೊದಲೇ ಮನೆ ಇದ್ದವರು. 2014(1957) ರಿಂದಲೂ ಬಾಣೇಶ್ವರದಲ್ಲಿ ಒಂದು ಮನೆಯಲ್ಲಿ ವಾಸಿಸುತ್ತಿದ್ದಾರೆ.

-----

## ವಿದ್ಯಾಭ್ಯಾಸ, ಸಮಾಜದ ಪ್ರಭಾವ

ಭರತ್ ಜಂಗಮರ ಔಪಚಾರಿಕ ಶಿಕ್ಷಣವು 2008 (1951) ರಲ್ಲಿ ಶ್ರೀ ಪಂಚಮಿಯಂದು ಪಂಡಿತ್ ಯದುನಾಥ ಶರ್ಮ ಆಚಾರ್ಯರ ನೇತೃತ್ವದಲ್ಲಿ ಆರಂಭವಾಯಿತು. ಅವರ ಪ್ರಾಥಮಿಕ ವಿದ್ಯಾಭ್ಯಾಸವನ್ನು ಭಕ್ತಾಪುರದ ಶ್ರೀಪದ್ಮ ಪ್ರೌಢಶಾಲೆಯಲ್ಲಿ ಪಡೆದರು. ಅವರ ಕುಟುಂಬದಲ್ಲಿದ್ದ ಶೈಕ್ಷಣಿಕ ವಾತಾವರಣವು ಅವರ ಬೆಳವಣಿಗೆಯ ಮೇಲೆ ಬಹಳ ಸಕಾರಾತ್ಮಕ ಪ್ರಭಾವ ಬೀರಿತು. ಆ ಸಮಯದಲ್ಲಿ ನೇಪಾಳದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯಾಗುತ್ತಿದ್ದ ಕಾಲವಾದ್ದರಿಂದ, ಭರತ್‌ರ ತಂದೆಯೂ ಕೂಡಾ ಆಗಿನ ಬಹಳಷ್ಟು ಜನರಂತೆ ಶೈಕ್ಷಣಿಕ ಪ್ರಗತಿಯ ಕಡೆಗೆ ತೊಡಗಿದ್ದರು. ಉಚ್ಚ ಶಿಕ್ಷಣವನ್ನು ಪಡೆದಿದ್ದ ಪಂಡಿತ್ ಯದುನಾಥ ಶರ್ಮ ಆಚಾರ್ಯರಂತಹ ದಕ್ಷ ಶಿಕ್ಷಕರು ಮತ್ತು ಇಂದ್ರಪ್ರಸಾದ್ ಶರ್ಮರಂತಹ ದಕ್ಷ ಮುಖ್ಯೋಪಾಧ್ಯಾಯರು ಭರತ್ ಮತ್ತು ಸಹೋದರರಿಗೆ ಮನೆಯಲ್ಲಿ ಬೆಳಗ್ಗೆ ಮತ್ತು ಸಂಜೆ ಪಾಠ ಮಾಡುತ್ತಿದ್ದರು. ಮನೆಯಲ್ಲಿನ ಉತ್ತಮ ಶೈಕ್ಷಣಿಕ ವಾತಾವರಣವು ಅವರ ಮೇಲೆ ಅತ್ಯಂತ ಒಳ್ಳೆಯ ಧನಾತ್ಮಕ ಪ್ರಭಾವವನ್ನು ಬೀರಿತು. ಅವರು ತಮ್ಮ ಪ್ರೌಢಹಂತದ ಪರೀಕ್ಷೆಯನ್ನು 2021(1964)ರಲ್ಲಿ ಉತ್ತೀರ್ಣರಾದರು. ಅವರಿಗೆ ಥಬಾಹಿಲ್‌ನಲ್ಲಿರುವ ಪಶುಪತಿ ಪ್ರೌಢಶಾಲೆ ಮತ್ತು ರಾಣಿಪೊಖಾರಿಯಲ್ಲಿನ ಅಧಿಕೃತ ದರ್ಬಾರ್ ಪ್ರೌಢಶಾಲೆಯಲ್ಲಿ ಅಧ್ಯಯನಕ್ಕೆ ಅವಕಾಶ ದೊರೆಯಿತು. ನಂತರ ತ್ರಿಭುವನ್ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ನ್ಯಾಷನಲ್ ಕಾಲೇಜ್‌ನಲ್ಲಿ ಅವರು ಪದವಿಪೂರ್ವ ಶಿಕ್ಷಣವನ್ನು ಪೂರ್ಣಗೊಳಿಸಿದರು.

ಇವರು ತಮ್ಮ ಪದವಿ ಶಿಕ್ಷಣವನ್ನು ಪೂರೈಸುವವರೆಗೆ ತಮ್ಮ ಸುತ್ತಲಿನ ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ವಾತಾವರಣದಿಂದ ಅತ್ಯಂತ ಪ್ರಭಾವವಿತರಾಗಿದ್ದರು. ನೇಪಾಳಿ ಸಮಾಜದಲ್ಲಿನ ಭ್ರಷ್ಟಾಚಾರ, ವಂಶಪಾರಂಪರ್ಯ ಆಡಳಿತ ಮತ್ತು ಸ್ವಾರ್ಥ ನಡೆವಳಿಕೆಗಳನ್ನು ಕಂಡು, ಅವರೊಳಗೆ ಉಂಟಾಗಿದ್ದ ಒಂದು ಭಯವು ಅವರನ್ನು ಸದಾ ಜಾಗೃತವಾಗಿಟ್ಟಿತ್ತು ಹಾಗೂ ಸಮಾಜದಲ್ಲಿ ಇಂತಹ ಅನೈತಿಕ ನಡೆವಳಿಕೆಗಳ ವಿರುದ್ಧ ಹೋರಾಡುವ ಒಂದು ಪ್ರಜ್ಞೆಯನ್ನು ಅವರು ಬೆಳೆಸಿಕೊಂಡರು. ಈ ಸಮಾಜದಲ್ಲಿನ ಅನಾಚಾರಗಳ ವಿರುದ್ಧ ಸದಾ ಹೋರಾಡುವ ಸ್ವಭಾವದ, ಹೊಸ ದೃಷ್ಟಿಕೋನದ ತತ್ವಜ್ಞಾನಿ ಭರತ್ ಜಂಗಮ್‌ರಂತಹ ವ್ಯಕ್ತಿತ್ವವು ಅವರೊಳಗೆ ಸದಾ ತುಡಿಯುತ್ತಿದ್ದುದರಿಂದಾಗಿ ಈ ಆಂತರಿಕ ಜಾಗೃತಿಯು ಮತ್ತಷ್ಟು ಹೊರಬಂತು. ಈ ಜಾಗೃತಿಯು ಅವರೊಳಗೆ ಒಂದು ಜ್ಞಾನಪ್ರಜ್ಞೆಯನ್ನೂ ಉಂಟು ಮಾಡಿತು. ಅವರ ಗುರಿಯು ನಿರ್ದಿಷ್ಟವಾಗಿ ಸ್ಥಿರಗೊಂಡ ನಿಗದಿತ ಸಮಯವನ್ನು ತಿಳಿಸುವುದು ನಿಜವಾಗಿಯೂ ಕಷ್ಟಕರ. ಆದಾಗ್ಯೂ, ಸ್ವಾಭಾವಿಕವಾಗಿ ವಿಕಾಸವಾಗುತ್ತಾ ಮತ್ತು ಅಭಿವೃದ್ಧಿಯಾಗುತ್ತಾ, ಅರ್ಧ ಶತಮಾನ ಕಳೆದ ಮೇಲೆ, ಒಬ್ಬರು ಅಭಿವೃದ್ಧಿಯ ಒಂದು ಹಂತವನ್ನು ತಲುಪಿದ ನಂತರವಷ್ಟೇ, ನಿಜವಾಗಲೂ ಅವರ ಪೂರ್ಣ ಉದ್ದೇಶವನ್ನು ಸಾಧಿಸಿದ್ದಾರೆ ಎಂದು ಹೇಳಬಹುದು.

-----

## ಪತ್ರಿಕೋದ್ಯಮದಲ್ಲಿ

ಭರತ್ ಜಂಗಮರ ಮನಸ್ಸಿನಲ್ಲಿದ್ದ ಬಂಡಾಯ ಚಿಂತನೆಗಳು ಅವರನ್ನು ಬರಹದ ಮಾಧ್ಯಮದ ಮೂಲಕ ದೇಶವಿರೋಧಿ ಚಟುವಟಿಕೆಗಳ ವಿರುದ್ಧ ಹೋರಾಡಲು ಹಾಗೂ ಸಾಮಾನ್ಯ ಜನರಿಗೆ ಭಯವನ್ನುಂಟುಮಾಡುವಂತಹ ವಿದ್ರೋಹಿಗಳ ವಿರುದ್ಧ ಸೆಟೆದು ನಿಲ್ಲಲು ಪ್ರೇರೇಪಿಸಿದವು. ಹೀಗಾಗಿ, ಅವರು ತಮ್ಮ ಮನೋಭಾವಕ್ಕನುಗುಣವಾಗಿ ಪತ್ರಿಕೋದ್ಯಮ ಕ್ಷೇತ್ರವನ್ನು ಪ್ರವೇಶಿಸಲು ಇವುಗಳೇ ಮುಖ್ಯಕಾರಣವೆನ್ನಬಹುದು.

ಅವರ ಪತ್ರಿಕೋದ್ಯಮ ಆರಂಭದ ಸಮಯದಲ್ಲಿ, 'ಡೈಲೀ ಘೂರ್ಖಪತ್ರ' ಎಂಬ ದಿನಪತ್ರಿಕೆ ಹಾಗೂ 'ಜಾಗೃತಿ', 'ಮಾತೃಭೂಮಿ', 'ಚರ್ಚಾ' ಮತ್ತು 'ಸಮೀಕ್ಷಾ' ಎಂಬ ವಾರಪತ್ರಿಕೆಗಳು ಚಾಲ್ತಿಯಲ್ಲಿದ್ದವು. ಅವರು ಈ ಪ್ರಕಾಶನಗಳಿಗೆ 2027–28(1970–71)ರಿಂದ ಬರೆಯಲು ಪ್ರಾರಂಭಿಸಿದರು. ಮತ್ತು ಅವರು ಕಳೆದ ನಾಲ್ಕು ದಶಕಗಳಿಗಿಂತಲೂ ಹಿಂದಿನಿಂದಲೂ ಬರೆಯುತ್ತಿದ್ದಾರೆ. ಕಠ್ಮಂಡುವಿನಿಂದ ಪ್ರಕಾಶನವಾಗುವ ಎಲ್ಲಾ ದಿನಪತ್ರಿಕೆಗಳೊಂದಿಗೂ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಭರತ್ ಜಂಗಮರ ಸಂಬಂಧವಿದೆ. ಪತ್ರಿಕೋದ್ಯಮದಲ್ಲಿನ ಅವರ ಕಳೆದ ನಾಲ್ಕು ದಶಕಗಳ ಅನುಭವದಿಂದಾಗಿ, 2029(1972)ರಲ್ಲಿ, ಗುಥಿ ಸಂಸ್ಥಾನದ ಅಂದಿನ ಉಪಾಧ್ಯಕ್ಷರಾಗಿದ್ದ ಶ್ರೀ ಜುನಾನಾಥ ಪಂಡಿತ್ ಬಡಾಗುರೂಜಿಯವರಿಂದ 'ಧರ್ಮಸಂಸ್ಥಾನ' ಪತ್ರಿಕೆಯ ಸಂಪಾದಕನಾಗಿ ನೇಮಕವಾದರು. ಮುಂದೆ 'ನೇಪಾಳಿ ಆವಾಜ್ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್' ಸಂಸ್ಥೆಯು 2047(1990)ರಲ್ಲಿ ನೋಂದಾಯಿತವಾದಾಗ, ಆ ಸಂಸ್ಥೆಯ ಅಡಿಯಲ್ಲಿ 'ನೇಪಾಳಿ ಆವಾಜ್ ಸಾಪ್ತಾಹಿಕ' ಪತ್ರಿಕೆಯು ಕಾರ್ಯಾರಂಭ ಮಾಡಿತು. ಈ ಪ್ರಕಾಶನಕ್ಕೆ ಹೆಚ್ಚು ಹೆಚ್ಚು ಪಾಲುದಾರರು ಅಗತ್ಯವೆನಿಸಿದಾಗ, ಭರತ್ ಜಂಗಮ್ ಅವರೂ ಕೂಡಾ ಒಬ್ಬ ಪಾಲುದಾರರಾದರು.

### ಪರಿಶೀಲಿಸಿದ್ದು

ಭರತ್ ಜಂಗಮರನ್ನು 'ನೇಪಾಳಿ ಆವಾಜ್ ಸಾಪ್ತಾಹಿಕ'ಕ್ಕೆ ಅತ್ಯಂತ ಹತ್ತಿರ ತಂದ ಘಟನೆ ಹೀಗಿದೆ. ಆರ್ಥಿಕವಾಗಿ, 'ನೇಪಾಳಿ ಆವಾಜ್' ಪತ್ರಿಕೆಯನ್ನು ಸಾಪ್ತಾಹಿಕವಾಗಿ ಪ್ರಕಟಿಸುವುದನ್ನು ತಡೆಹಿಡಿಯಲಾಯಿತು, ಆದರೆ ಅದನ್ನು ಭ್ರಷ್ಟಾಚಾರ ವಿರೋಧಿ ಚಟುವಟಿಕೆಗಳ ವಿಶೇಷ ಸಂಚಿಕೆಯಾಗಿ ಪ್ರಕಟಿಸುವುದನ್ನು ಮುಂದುವರಿಸಲಾಯಿತು. ಆ ಸಮಯದಲ್ಲಿ, ಈ ಪತ್ರಿಕೆಯನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು. ಆ ಸಮಯದಲ್ಲಿ ಭರತ್ ಜಂಗಮ್ ಅವರೇ ಅದರ ಸಂಪಾದಕರಾಗಿದ್ದರು. ಯಾವ ರೀತಿ ಇತರೆ ಯಾವುದೇ ಕೈಗಾರಿಕೆ ಅಥವಾ ಉದ್ಯಮ ಕ್ಷೇತ್ರಗಳಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆಯೋ, ಅದೇ ರೀತಿಯಲ್ಲಿ ಪ್ರಕಾಶನ ಕ್ಷೇತ್ರದಲ್ಲೂ ಬಹಳಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ವೃತ್ತಿಪರ ಪತ್ರಿಕೋದ್ಯಮ ಕ್ಷೇತ್ರದಲ್ಲಿರುವವರು ಬೇರೆಯವರಿಗಿಂತ ಅತ್ಯಂತ ವೇಗವಾಗಿ ಸಮಸ್ಯೆಗಳನ್ನು ತಲುಪುವಂತಹ/ಜನರಿಗೆ ತಲುಪಿಸುವಂತಹ ಪ್ರಕರಣಗಳನ್ನು ಎದುರಿಸಬೇಕಾಗುತ್ತದೆ. ಭರತ್ ಜಂಗಮರೂ ಕೂಡಾ ಅಂತಹ ಅನೇಕ ಸಮಸ್ಯೆಗಳನ್ನು ಎದುರಿಸಿದ್ದಾರೆ.

ಪತ್ರಿಕೆಗಳಲ್ಲಿ ಪ್ರಕಟಿತವಾಗುವ ಅಭಿಪ್ರಾಯಗಳು ಅವರ ವೈಯಕ್ತಿಕ ಅಭಿಪ್ರಾಯಗಳನ್ನು ಪ್ರತಿನಿಧಿಸುವುದರಿಂದಾಗಿ, ಅವು ಪರೋಕ್ಷವಾಗಿ ಅವರ ಗುರಿ ಮತ್ತು ಸಾಧನೆಗಳನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ, ಅವು ಅವರ ನಿಗದಿತ ಗುರಿಸಾಧನೆಗೆ ನಿರ್ದಿಷ್ಟವಾಗಿ ಸಂಬಂಧಿಸಿವೆ ಎಂದು ಹೇಳುವುದೇ ಸರಿಯಾಗುತ್ತದೆ. ಆರಂಭದಲ್ಲಿ, ಯಾರಾದರೊಬ್ಬರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ನಿರ್ದಿಷ್ಟವಾದ ಗುರಿಯೊಂದನ್ನು ಸಾಧಿಸಬೇಕೆಂದರೆ ಆ ಕ್ಷೇತ್ರಕ್ಕೆ ಸಂಪೂರ್ಣ ಸಮರ್ಪಿತರಾಗಿ ದುಡಿಯಬೇಕಿತ್ತು. ಕೇವಲ ಪತ್ರಿಕೋದ್ಯಮ ಒಂದರಿಂದಲೇ ಜೀವನವನ್ನು ಕಟ್ಟುವಷ್ಟು ದುಡಿಮೆಯನ್ನು ಮಾಡುವುದಕ್ಕೆ ಅಂದು ಸಾಧ್ಯವಿರಲಿಲ್ಲ. ಆದರೆ ಈಗ, ಪತ್ರಿಕೋದ್ಯಮವು ಉದ್ಯಮವಾಗಿ ಬದಲಾಗಿರುವ ಪ್ರಸ್ತುತ ಕಾಲಘಟ್ಟದಲ್ಲಿ, ಪತ್ರಿಕೋದ್ಯಮವು ಸಾಗುತ್ತಿರುವ ವೇಗದಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ. ಅನೇಕ ಪ್ರತಿಭಾನ್ವಿತ, ಮಹತ್ವಾಕಾಂಕ್ಷಿ ಯುವಜನತೆಯನ್ನು ತನ್ನೆಡೆಗೆ ಸೆಳೆಯುತ್ತಿರುವ ಪತ್ರಿಕೋದ್ಯಮ ಕ್ಷೇತ್ರದ ಇಂದಿನ ದಿನಮಾನವನ್ನು ಸ್ವರ್ಣಯುಗವೆಂದು ಪರಿಗಣಿಸಲಾಗಿದೆ.

ಪ್ರಸ್ತುತ ನೇಪಾಳದ ಪತ್ರಿಕೋದ್ಯಮ ವೃತ್ತಿಯಲ್ಲಿ ತೊಡಗಿರುವ ವ್ಯಕ್ತಿಗಳು, ಇತರೆ ಸಾಮಾನ್ಯ ವ್ಯಕ್ತಿಗಳಿಗಿಂತಲೂ ತಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂದು ಭಾವಿಸುತ್ತಾರೆ. ತಮ್ಮ ಸುತ್ತಲಿನ ಸಮಾಜದಲ್ಲಿ ಉಂಟಾಗುವ ಏರಿಳಿತಗಳು ಮತ್ತು ಸವಾಲುಗಳನ್ನು ನಿರ್ವಹಿಸುವ ಹಾಗೂ ರಾಷ್ಟ್ರ ಮತ್ತು ಪ್ರಜೆಗಳ ಉಪಯೋಗಕ್ಕೋಸ್ಕರ ಸರ್ಕಾರದ ನಿರ್ಮಾಣಗಳನ್ನು ರಕ್ಷಿಸುವ ಹೊಣೆಗಾರಿಕೆಯೂ ತಮ್ಮದೇ ಎಂದು ಅವರು ಭಾವಿಸುತ್ತಾರೆ. ಒಬ್ಬ ನೈಜ ಪತ್ರಕರ್ತನು ಯಾವುದೇ ಒಂದು ದೇಶ ಮತ್ತು

ಸಮಾಜದ ಅಭಿವೃದ್ಧಿಗೆ ಅಡಿಗಲ್ಲನ್ನು ನಿರ್ಮಿಸುತ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ, ಅವರು ರಾಜಕಾರಣಿಗಳಿಗೆ ಮಾರ್ಗದರ್ಶಿಗಳಾಗಿ ಕೆಲಸ ಮಾಡುತ್ತಾರೆ. ಪತ್ರಕರ್ತರಿಗೆ ಕಾನೂನಿನ ಮೂಲಕ ಯಾವುದೇ ನಿರ್ದಿಷ್ಟ ಅಧಿಕಾರಗಳನ್ನು ಒದಗಿಸದೇ ಇದ್ದಾಗ್ಯೂ, ಅವರು ಸಮಾಜಕ್ಕೆ ನಿರ್ದಿಷ್ಟ ಮಾಹಿತಿಯನ್ನು ತಲುಪಿಸಬೇಕೆನ್ನುವ ಜವಾಬ್ದಾರಿಯನ್ನು ಅವರ ಅಂತರ್ಯದಲ್ಲಿ ಹೊಂದಿರುತ್ತಾರೆ. ಒಬ್ಬ ನೈಜ ಅರ್ಹತೆಯುಳ್ಳ ಪತ್ರಕರ್ತನು ಎಂದಿಗೂ ತನ್ನ ಲೇಖನಿಯನ್ನು ದುರುಪಯೋಗಪಡಿಸಿಕೊಳ್ಳಲಾರ ಮತ್ತು ತನ್ನ ಆಲೋಚನೆಗಳನ್ನು ಸದಾ ಮುಕ್ತವಾಗಿ ವ್ಯಕ್ತಪಡಿಸುತ್ತಾನೆ. ಸಮಾಜಕ್ಕೆ ತಮ್ಮ ಪ್ರಯೋಜನವನ್ನು ಪ್ರಕಟಿಸಲು ಅವರು ಅಸೀಮ ಧನಾತ್ಮಕತೆಯ ಭಾವದಿಂದ ಸತ್ಯದ ಮಾರ್ಗವನ್ನು ಮಾತ್ರ ಅನುಸರಿಸಬೇಕಾಗುತ್ತದೆ.

ಪ್ರಸ್ತುತ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ನೇಪಾಳ ದೇಶವನ್ನು ಹಳದಿ ಪತ್ರಿಕೋದ್ಯಮ ಆವರಿಸಿರುವಂತೆ ತೋರುತ್ತಿದೆ. ಆದರೂ, ಈ ಹಳದಿ ಪತ್ರಿಕೋದ್ಯಮದ ಪ್ರಭಾವವು ಕ್ಷಣಿಕವಾದುದು. ಆದ್ದರಿಂದ, ಪತ್ರಿಕೋದ್ಯಮದ ನಿರಂತರ ಉಳಿವಿಗಾಗಿ, ಸಮಾಜದ ಪ್ರಜೆಗಳಿಗೆ, ದೇಶಕ್ಕೆ, ಸರ್ಕಾರದ ರಚನಾತ್ಮಕ ಶಾಸನಗಳ ಅಭಿವೃದ್ಧಿಪಡಿಸುವಿಕೆಗೆ ನಿಷ್ಠುರವಾಗಿ ಆದ್ಯತೆ ನೀಡಬೇಕಾದದ್ದು ಅನಿವಾರ್ಯವಾಗಿದೆ ಎಂದು ಭರತ್ ಜಂಗಮರು ಅಭಿಪ್ರಾಯಪಡುತ್ತಾರೆ.

-----

## ಸಾಹಿತ್ಯ ಕೃಷಿ

ಭರತ್ ಜಂಗಮರ ಮೊದಲ ಸಾಹಿತ್ಯ ಸೃಜನೆಯು ಕಾವ್ಯದಿಂದಲೇ ಆರಂಭವಾಯಿತು. 2018(1961)ರಲ್ಲಿ ಕೈಬರಹದ ಪತ್ರಿಕೆಯಾಗಿದ್ದ 'ಬಾಲವಿಕಾಸ ಪುಸ್ತಕಾಲಯ' (ಮಕ್ಕಳ ಕಲ್ಯಾಣ ಗ್ರಂಥಾಲಯ) ದಲ್ಲಿ ಅದು ಪ್ರಕಟವಾಗಿತ್ತು. 'ಬಾಲವಿಕಾಸ ಪುಸ್ತಕಾಲಯ'ವು 2015(1958)ರಲ್ಲಿ ಲೋಕಾರ್ಪಣೆಯಾಗಿತ್ತು ಮತ್ತು ಭರತ್ ಜಂಗಮರು ಅದರ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದರು. ಮುಂದೆ 2019(1962)ರಲ್ಲಿ ಈ ಗ್ರಂಥಾಲಯವನ್ನು 'ಭೀಮಸೇನ ಗೋಳ ಪುಸ್ತಕಾಲಯ' (ಭೀಮಸೇನ ಹಿಲ್ ಲೈಬ್ರರಿ) ಎಂದು ಬದಲಾಯಿಸಲಾಯಿತು. ಮತ್ತು ಇದು ಬಾಣೇಶ್ವರ ಪ್ರದೇಶದ ಮೊಟ್ಟಮೊದಲ ಗ್ರಂಥಾಲಯವಾಗಿದೆ. 2017–18(1960–61)ರ ಅವಧಿಯಲ್ಲಿ ಅವರು ನೇಪಾಳ ಆಕಾಶವಾಣಿಯ 'ಮಕ್ಕಳ ಕಾರ್ಯಕ್ರಮ'ದಲ್ಲಿ ಭಾಗವಹಿಸಿದ್ದರು.

ಭರತ್ ಜಂಗಮರು ಆರಂಭದಲ್ಲಿ ಕವಿತೆ ಮತ್ತು ಹಾಡುಗಳು ಎರಡನ್ನೂ ಬರೆಯತೊಡಗಿದ್ದರು. ಆದಾಗ್ಯೂ, ಅವರು ತಮ್ಮ ಯಾವುದೇ ಆರಂಭಿಕ ಕೃತಿಯನ್ನು ದಾಖಲಿಸಿ ಇಟ್ಟಿಲ್ಲ. ಅವರು ಸಮಾಜದಲ್ಲಿದ್ದ ಭ್ರಷ್ಟಾಚಾರ, ಅನ್ಯಾಯ ಮತ್ತು ಭಯೋತ್ಪಾದನೆಗಳ ವಿರುದ್ಧ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಮುಂದುವರಿಯುತ್ತಿದ್ದಾಗ, ಕೆಲವು ಘಟನೆಗಳಿಗೆ ಸಾಕ್ಷಿಯಾಗಬೇಕಾಯಿತು. ಇದರಿಂದಾಗಿ 'ಕಪ್ಪುಸೂರ್ಯ' ಕಾದಂಬರಿ ಅವರಿಂದ ರಚಿತವಾಯಿತು. ಪತ್ರಿಕೋದ್ಯಮದ ಪ್ರಭಾವ ಸೀಮಿತ ಮತ್ತು ಕ್ಷಣಿಕ, ಆದರೆ ಒಂದು ಕಥೆ ಅಥವಾ ಕಾದಂಬರಿಯು ದೀರ್ಘಕಾಲೀನ ಮತ್ತು ದೂರಗಾಮಿ ಪ್ರಭಾವವನ್ನು ಹೊಂದಿರುತ್ತದೆ ಎಂಬ ಭಾವನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವರು ಕಾದಂಬರಿಯನ್ನು ಬರೆದರು. ಇದಕ್ಕೆ ಉದಾಹರಣೆಯೆಂದರೆ, ದಿನಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳ ಪ್ರಭಾವವು ಅದೇ ದಿನಕ್ಕೆ ಕೊನೆಯಾಗುತ್ತದೆ. ಅಂತೆಯೇ, ವಾರಪತ್ರಿಕೆ ಅಥವಾ ಪಾಕ್ಷಿಕ ಪತ್ರಿಕೆಗಳ ಪ್ರಭಾವವು ಅವುಗಳ ಮುಂದಿನ ಪ್ರಕಟಣೆಯವರೆಗಷ್ಟೇ ಇರುತ್ತವೆ. ಆದರೆ ಅದೇ ವಿಷಯಗಳನ್ನು ಸಾಹಿತ್ಯಾತ್ಮಕವಾಗಿ ಕಥೆಗಳ ರೂಪದಲ್ಲಿಯೋ ಅಥವಾ ಕಾದಂಬರಿಗಳ ರೂಪದಲ್ಲಿಯೋ ಪ್ರಸ್ತುತಪಡಿಸಿದಾಗ, ಭರತ್ ಜಂಗಮ್‌ರಂತಹ ಕಾಲಾತೀತ ವ್ಯಕ್ತಿತ್ವಗಳಾಗುತ್ತಾರೆ ಮತ್ತು ಅವುಗಳ ಪ್ರಭಾವವು ಕೇವಲ ವರ್ಷಗಳವರೆಗೆ ಮಾತ್ರವಲ್ಲ, ಶತಮಾನಗಳವರೆಗೂ, ಯುಗಗಳನ್ನು ಮೀರಿಯೂ ಶಾಶ್ವತವಾಗಿರುತ್ತದೆ. 'ಕಪ್ಪುಸೂರ್ಯ' ಕಾದಂಬರಿಯು ತುಂಬಾ ಮಹತ್ವಪೂರ್ಣವಾಗಿ ಜಗತ್ತಿನ ಗಮನ ಸೆಳೆಯಿತು ಮತ್ತು ಆ ಕೃತಿಯು ಅನೇಕ ಭಾಷೆಗಳಿಗೆ ಅನುವಾದಗೊಂಡಿತು. ಇದು ನಿಜವಾಗಿಯೂ ಅವರ ನಿರೀಕ್ಷೆಗಳನ್ನು ಪೂರೈಸಿತು. ಒಬ್ಬ ಬರಹಗಾರನಿಗೆ ಬೇರೆ ಭಾಷೆಗಳಲ್ಲಿಯೂ ಓದುಗರು ದೊರೆಯುತ್ತಾರೆಂದರೆ, ಅದು ಆ ಬರಹಗಾರನ ಪಾಲಿಗೆ ನಿರೀಕ್ಷೆಗೂ ಮೀರಿದ ಅರ್ಥಪೂರ್ಣ ಕೊಡುಗೆ.

ಒಬ್ಬ ಬರಹಗಾರನು ಪಕ್ಷಪಾತರಹಿತನಾಗಿರಬೇಕು ಅಥವಾ ಪೂರ್ವಾಗ್ರಹಗಳಿಂದ ಹೊರತಾಗಿರಬೇಕು. ಭರತ್ ಜಂಗಮ್ ಅವರು 'ವ್ಯೂಹಚಕ್ರ' ಕಥೆಯಲ್ಲಿ ಯಾವುದೇ ಪಕ್ಷಪಾತ ಮಾಡಿಲ್ಲ. ಬರಹಗಾರನು ಪ್ರಾಮಾಣಿಕನಾಗಿರಬೇಕು, ಸತ್ಯವಂತನಾಗಿರಬೇಕು ಮತ್ತು ಸ್ಪಷ್ಟ ದೃಷ್ಟಿಕೋನವನ್ನು ಹೊಂದಿರಬೇಕು. ಅವರು ಇವೆರಡರ ಬಗ್ಗೆ ಎಂದಿಗೂ ಗೊಂದಲಕ್ಕೆ ಒಳಗಾಗಿಲ್ಲ.

'ರಾತೋ ಘಂ' ಕೃತಿಯು ಕಮ್ಯೂನಿಸ್ಟರ ಪ್ರಭಾವವನ್ನು ತಡೆಗಟ್ಟಲು ಪ್ರಯತ್ನಿಸುತ್ತಿರುವಂತೆ ತೋರುತ್ತದೆ. ಎಲ್ಲರಿಗೂ ತಿಳಿದಿರುವಂತೆ, ಸಾಹಿತ್ಯವು ತಾನು ಸೃಷ್ಟಿಯಾದ ಕಾಲದ ಸಮಾಜ ಮತ್ತು ಸಂದರ್ಭಗಳನ್ನು ಪ್ರತಿಬಿಂಬಿಸುತ್ತದೆ. ಹೌದು, ಓದುಗರು 'ರಾತೋ ಘಂ' ಕೃತಿಯು ಪ್ರತಿನಿಧಿಸುವ ಸಂದರ್ಭವನ್ನು ಅನುಭವಿಸಬಲ್ಲರು ಮತ್ತು ಅರ್ಥೈಸಿಕೊಳ್ಳಬಲ್ಲರು. ಒಂದು ವೇಳೆ, ಅದಕ್ಕೆ ಕಮ್ಯೂನಿಸ್ಟ್ ಪ್ರಭಾವಗಳೊಟ್ಟಿಗೆ ನಿಲ್ಲುವ ಅಥವಾ ಅದನ್ನು ಪ್ರತಿರೋಧಿಸುವ ಸಾಮರ್ಥ್ಯವಿದೆ ಎಂದಾದರೆ, ಅದನ್ನು ಯಶಸ್ವಿ ಸಾಹಿತ್ಯ ಎಂದೇ ಪರಿಗಣಿಸಬೇಕಾಗುತ್ತದೆ. ಅಂದರೆ ಅಂದು ಜೀವಂತವಾಗಿರುತ್ತದೆ ಎಂದರ್ಥ.

ಭರತ್ ಜಂಗಮ್ ಅವರು ತಮ್ಮ ಜನ್ಮಸ್ಥಳವಾದ ಭಕ್ತಾಪುರದಲ್ಲಿ ಚಾಲ್ತಿಯಲ್ಲಿದ್ದ ಇತಿಹಾಸ, ವಾಸ್ತುಶಿಲ್ಪ, ಶಿಕ್ಷಣ, ನಾಗರೀಕತೆ, ನೇವಾರಿ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಜಗತ್ತಿಗೆ ಪರಿಚಯಿಸುವ ದೃಷ್ಟಿಯಿಂದ 'ಖ್ವಾಪದೇಶ್' ಕೃತಿಯನ್ನು ಬರೆಯಲು ನಿರ್ಧರಿಸಿದರು.

ತಾವೇ ಬರೆದ ಕಾದಂಬರಿಗಳು ವಿವಿಧ ವಿದೇಶೀ ಭಾಷೆಗಳಿಗೆ ಅನುವಾದಗೊಂಡು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಾಗ, ಮೂಲ ಕಾದಂಬರಿಕಾರರಾದ ಭರತ್ ಜಂಗಮ್ ಅವರಿಗೆ ಅದೊಂದು ವಿಧದಲ್ಲಿ ಹೃದಯದ ತುಂಬಾ ಪಸರಿಸುವ ನವಿರಾದ ಸಂತೋಷದ ಅನುಭವವಾಗುತ್ತದೆ. ತಮ್ಮ ಮನಸ್ಸಿನಲ್ಲಿ ಹುಟ್ಟಿದ ಯೋಚನೆಯು ಜನರ ಹೃದಯವನ್ನು ತಟ್ಟಿದೆ ಮತ್ತು ಅವರಿಗೆ ಸಂತೋಷ ನೀಡಿದೆ ಎಂಬುದು ಅವರಿಗೆ ನಿಜಕ್ಕೂ ಅತ್ಯಂತ ತೃಪ್ತಿಕರ ವಿಷಯವೇ ಸರಿ.

ತಮ್ಮ ಮುಂದಿನ ಕಾದಂಬರಿಗೆ ಅವರು ಮಹಿಳೆಯರ ವಿಷಯದ ಕುರಿತು ಬರೆಯಲು ಯೋಚಿಸಿದ್ದಾರೆ. ಆರಂಭದಲ್ಲಿ, ಅವರು ಮಹಿಳೆಯರ ವಿಷಯಗಳನ್ನೇ ಬರೆಯಲು ಯೋಚಿಸಿದ್ದರು, ಆದರೆ ನಂತರ ಮಹಿಳೆಯ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ತಾತ್ವಿಕ ದೃಷ್ಟಿಕೋನದ ಮೂಲಕ, ವಿಮರ್ಶಾತ್ಮಕ ಚಿಂತನೆಗಳ ಮೂಲಕ ಕಾದಂಬರಿಯ ಬದಲಿಗೆ ಕಥಾಸಂಕಲನದ ರೂಪದಲ್ಲಿ ಬರೆಯಲು ನಿಶ್ಚಯಿಸಿದರು. ಅದಕ್ಕೆ ಅವರು 'ನಿರ್ಬಂಧ ಬಂಧನ' ಎಂದು ಹೆಸರಿಟ್ಟಿದ್ದಾರೆ. ಅವರು ತಮ್ಮ ಕಾದಂಬರಿಗಳನ್ನು ನೇಪಾಳಿ ಸಾಹಿತ್ಯಕ ಸಂಪ್ರದಾಯದ ಶೈಲಿಗಿಂತ ಭಿನ್ನವಾದ ರೂಪದಲ್ಲಿ ರಚಿಸಿದ್ದಾರೆ. ಇದಕ್ಕೆ ಕಾರಣವೆಂದರೆ ಸಾಂಪ್ರದಾಯಿಕ ಅಥವಾ ಶಾಸ್ತ್ರೀಯ ಶೈಲಿಯಲ್ಲಿಯೇ ಬರೆಯಬೇಕೆಂಬ ಅವಶ್ಯಕತೆ ಇಲ್ಲ. ಅವರು 'ಕಪ್ಪು ಸೂರ್ಯ'ವನ್ನು ಪ್ರಯೋಗಾತ್ಮಕವಾಗಿ ಬರೆದರು. ಈ ಪ್ರಯೋಗವು ಕಾದಂಬರಿಗಳಿಗೆ ಒಂದು ಸಿದ್ಧಮಾದರಿಯನ್ನು ಒದಗಿಸಿತು. ಪ್ರತಿಯೊಂದು ಕೃತಿಯನ್ನೂ ಹೊಸರೂಪದಲ್ಲಿ ಬದಲಾಗುವ ಕಾಲಕ್ಕೆ ಅನುಗುಣವಾಗಿ ಪ್ರಸ್ತುತಪಡಿಸಿದಾಗ, ಅದರ ಉಪಯುಕ್ತತೆ ಮತ್ತು ಪ್ರಾಮುಖ್ಯತೆಗಳು ಕಾಲವನ್ನೂ ಮೀರಿ ವೃದ್ಧಿಸುತ್ತವೆ ಎಂದು ಅವರು ಅಭಿಪ್ರಾಯಿಸುತ್ತಾರೆ.

ಅವರು ಕಿರುಗವಿತೆಗಳು ಮತ್ತು ಹಾಡುಗಳನ್ನೂ ಬರೆದಿದ್ದಾರೆ. ಅವುಗಳೂ ಕೂಡಾ ಸಂಗ್ರಹಗಳಾಗಿ ಪ್ರಕಟಣೆಯಾಗಿವೆ. ಅವುಗಳಲ್ಲಿಯೂ ಕೂಡಾ ಪ್ರೀತಿ–ಪ್ರೇಮ, ಪ್ರಕೃತಿ ಮತ್ತು ಭಾವನಾತ್ಮಕ ಕೆರಳಿಸುವಿಕೆಗಳು ಇರುತ್ತವೆ, ಆದರೆ ಸ್ವಲ್ಪ ಪ್ರಮಾಣದಲ್ಲಿ ಅಷ್ಟೇ. ಸಾಹಿತ್ಯ ಸೃಜನೆಯ ಪ್ರಮುಖ ಗುರಿ ಹೇಗಿರಬೇಕೆಂಬುದರ ಕುರಿತು ಭರತ್ ಜಂಗಮ್ ಅವರು ಈ ಮುಂದಿನಂತೆ ಹೇಳುತ್ತಾರೆ. ಒಬ್ಬ ವ್ಯಕ್ತಿಯಲ್ಲಿನ ಆಂತರಿಕ ಚಿಂತನೆಗಳು ಕ್ರೋಡೀಕರಣಗೊಂಡು ಅಥವಾ ವಿಘಟನೆಗೊಂಡು ನಂತರ ಶಬ್ದಗಳಲ್ಲಿ ವ್ಯಕ್ತವಾಗುತ್ತವೆ. ಆ ಮೂಲಕ ಆಂತರಿಕ ಚಿಂತನೆಗಳು ಸಾಹಿತ್ಯವಾಗಿ ಮಾರ್ಪಾಡಾಗುತ್ತವೆ. ಇದನ್ನೇ ಸಾಹಿತ್ಯ ಸೃಜನೆ ಎನ್ನುತ್ತೇವೆ. ಈ ರೀತಿ ಸೃಜನೆಯಾದ ಸಾಹಿತ್ಯವು ಹೆಚ್ಚು ಹೆಚ್ಚು ಓದುಗರು ಅಥವಾ ಕೇಳುಗರನ್ನು ತಲುಪುತ್ತದೆ ಹಾಗೂ ಅವರ ಮನಸ್ಸು, ಬುದ್ಧಿ ಮತ್ತು ಕ್ರಿಯೆಗಳನ್ನು ಪ್ರಚೋದಿಸುತ್ತದೆ. ತನ್ಮೂಲಕ ಸಾಹಿತ್ಯ ಪ್ರೇಮಿಗಳ ಮನಸ್ಸು, ಬುದ್ಧಿ ಮತ್ತು ಕ್ರಿಯೆಗಳನ್ನು ಪ್ರಭಾವಿಸುತ್ತವೆ.

ಒಂದು ಹಂತದವರೆಗೆ ಮಾತ್ರ ಯಶಸ್ಸನ್ನು ಪರಿಗಣಿಸಲಾಗುತ್ತದೆ. ಯಶಸ್ಸಿನ ಮಾನದಂಡವು ಈ ಸಮಾಜದ ಬುದ್ಧಿಜೀವಿಗಳು, ಸಾಹಿತ್ಯ ಪ್ರೇಮಿಗಳು, ಓದುಗರು ಮತ್ತು ವಿಮರ್ಶಕರ ಮೇಲೆ ನಿಂತಿದೆ. ಆದ್ದರಿಂದ ಯಾರೂ ತಮ್ಮ ಯಶಸ್ಸಿನ ಉದ್ದ ಮತ್ತು ಎತ್ತರವನ್ನು ತಾವೇ ಅಳೆಯಬಾರದು ಎನ್ನುತ್ತಾರೆ ಭರತ್ ಜಂಗಮ್ ಅವರು.

ಪ್ರಗತಿಶೀಲ ಸಾಹಿತ್ಯದ ಅಲೆಯು ಎಲ್ಲಿಗೆ ತಲುಪುತ್ತಿದೆ ಎಂಬುದರ ಕುರಿತು ಅವರನ್ನು ಕೇಳಿದರೆ ಹೀಗೆ ಹೇಳುತ್ತಾರೆ. "ಸಾಹಿತ್ಯವು ಸಾಗುವ/ತಲುಪುವ ಮಾರ್ಗವನ್ನು ನಿರ್ದಿಷ್ಟವಾಗಿ ನಾನು ಊಹಿಸಲಾರೆ. ಸಾಹಿತ್ಯವು ತನ್ನ ಸುತ್ತಲಿನ ಸಮಾಜದ ಪ್ರಗತಿಯನ್ನು ಅಂದಾಜಿಸುತ್ತದೆ ಹಾಗೂ ಅದರ ಕಾಲ ಮತ್ತು ಸಂದರ್ಭ, ವಾತಾವರಣಗಳನ್ನು ಪ್ರತಿನಿಧಿಸುತ್ತದೆ. ಪ್ರಸ್ತುತ ನೇಪಾಳಿ ಸಮಾಜವು ರಾಜಕೀಯ ಪ್ರಕ್ಷುಬ್ಧತೆಗಳಿಂದಾಗಿ ಅಸ್ಥಿರಗೊಂಡಿದೆ. ಈ ಅಸ್ಥಿರತೆಯು ಸಮಾಜಕ್ಕೆ ಉಪಯೋಗವಾಗುವ ಮತ್ತು ಉತ್ಕೃಷ್ಟ ಪ್ರತಿಭಾನ್ವಿತ ಸಾಹಿತ್ಯದ ಸೃಷ್ಟಿಗೆ ಅಡ್ಡಿಯುಂಟುಮಾಡಬಹುದು. ಆದರೂ ಹೊಸ ತಾತ್ವಿಕ ದೃಷ್ಟಿಕೋನಗಳ ಅನ್ವೇಷಣೆ, ವಿಮರ್ಶಾತ್ಮಕ ಚಿಂತನೆ ಹಾಗೂ ಭರತ್ ಜಂಗಮ್‌ರಂತಹ ಕಾಲಾತೀತ ವ್ಯಕ್ತಿತ್ವಗಳು ಎಂದಿಗೂ ಖಾಲಿಯಾಗಲಾರವು. ಆದಾಗ್ಯೂ, ಈ ಅಲೆಯು ಏನನ್ನು ಸಾಧಿಸಬಲ್ಲದು, ಯಾವ ಮಾರ್ಗವನ್ನು ಅದು ಅನ್ವೇಷಿಸಬಹುದು ಹಾಗೂ ಅದು ಸಾಹಿತ್ಯವನ್ನು ಯಾವ ಎತ್ತರಕ್ಕೆ ಕೊಂಡೊಯ್ಯಬಲ್ಲದು ಎಂಬ ಪ್ರಶ್ನೆಗಳು ಸಂದಿಗ್ಧತೆಯಲ್ಲಿ ಅಸ್ಪಷ್ಟವಾಗಿಯೇ ಉಳಿಯುತ್ತವೆ."

ಸಾಹಿತ್ಯ ಲೋಕದ ವರ್ಗೀಕರಣವು ಸಾಹಿತ್ಯಕ್ಷೇತ್ರದಲ್ಲಿ ನಿಜವಾಗಿಯೂ ಬಂಡಾಯಕ್ಕೆ ಕಾರಣವಾಗುವುದಿಲ್ಲ. ಸಾಹಿತ್ಯ ವರ್ಗೀಕರಣದ ಸಮಯದಲ್ಲಿ ಸ್ಪಷ್ಟತೆ ಅತ್ಯಗತ್ಯ. ವರ್ಗೀಕರಣವು ಸಾಕಷ್ಟು ಪ್ರಚಾರ ಮತ್ತು ಅವಕಾಶಗಳನ್ನು ಒದಗಿಸಬಹುದಾದರೂ, ಅದು ಸಾಹಿತ್ಯದ ಶ್ರೇಷ್ಠತೆ ಮತ್ತು ಬಾಳಿಕೆಯನ್ನು ದೀರ್ಘಾವಧಿಯವರೆಗೆ ಖಚಿತಪಡಿಸಲಾಗುವುದಿಲ್ಲ ಎಂಬುದು ಅವರ ನಿಲುವು. ಪಾಂಡಿತ್ಯಪೂರ್ಣ ವಿಮರ್ಶೆಯ ಮೂಲಕವೇ ನ್ಯಾಯವನ್ನು ಪಡೆಯಬಹುದು ಎಂಬುದನ್ನು ಅವರು ನಂಬುತ್ತಾರೆ. ಸಾಹಿತ್ಯ ಕೃತಿಗಳನ್ನು ಹಿಂದಿನ ಕೃತಿಗಳೊಂದಿಗೆ ಹೋಲಿಸಿ ನೋಡುವುದರ ಬದಲಾಗಿ ಸಮಯಕ್ಕೆ ತಕ್ಕಂತೆ (ಕಾಲಾನುಕೂಲಕ್ಕೆ) ನಕಾರಾತ್ಮಕ ಅಥವಾ ಸಕಾರಾತ್ಮಕ ದೃಷ್ಟಿಕೋನದ ಮೂಲಕ ವಿಶ್ಲೇಷಿಸುವಂಥ ವಿಮರ್ಶಕರು ನೇಪಾಳಿ ಸಾಹಿತ್ಯಲೋಕದಲ್ಲಿ ಇದ್ದಾರೆ. ಇಂತಹ ತೀಕ್ಷ್ಣ ವಿಮರ್ಶಕರಿಂದ ಸಾಹಿತ್ಯಕ್ಕೆ ಯಾವತ್ತಿಗೂ ನ್ಯಾಯ ಸಿಗುವುದಿಲ್ಲ ಎನ್ನುತ್ತಾರೆ.

ಸಾಹಿತ್ಯ ಸಂಸ್ಥೆಗಳು ನಾಮಕಾವಸ್ಥೆಗೆ ಅಸ್ತಿತ್ವದಲ್ಲಿರಬಾರದು. ಅವು ಗುರುತಿಸುವಂತಹ ಕೆಲಸಗಳನ್ನು ಮಾಡಬೇಕು. ಹಾಗಾಗಿ, ತಳಮಟ್ಟದಿಂದ ಸ್ಥಾಪಿತವಾದ ಸಾಹಿತ್ಯಿಕ ಸಂಸ್ಥೆಗಳು, ಸಾಹಿತಿಗಳ ಸಾಹಿತ್ಯಯಾತ್ರೆಯನ್ನು ಪ್ರಕಟಿಸುವುದು,

ಆಕಾಶವಾಣಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಉಪನ್ಯಾಸ ಮಾಲೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ಅಂಕಣಗಳನ್ನು ಸೃಜಿಸುವುದು, ಗ್ರಂಥಾಲಯಗಳನ್ನು ಸ್ಥಾಪಿಸುವುದು, ಸರಸ್ವತಿ ಮಂದಿರಗಳ ನಿರ್ಮಾಣ, ಸಾಹಿತ್ಯಲೋಕದಲ್ಲಿ ಶ್ರಮಿಸುತ್ತಿರುವ ಉತ್ಸಾಹಿ ಯುವಜನತೆಗೆ ಆರ್ಥಿಕ ಸಹಕಾರ, ಗೌರವ ಹಾಗೂ ಪ್ರಶಸ್ತಿಗಳನ್ನು ನೀಡುವುದು ಹಾಗೂ ವಿದ್ಯಾರ್ಥಿವೇತನಗಳನ್ನು ವಿತರಿಸುವುದು ಇನ್ನಿತರೆ ಕಾರ್ಯಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬೇಕು. ಸಾಹಿತ್ಯಿಕ ಸಂಸ್ಥೆಗಳು ಇಂತಹ ವೈವಿಧ್ಯಮಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಸಾಹಿತ್ಯಿಕ ಸಂಸ್ಥೆಗಳು ಪುಸ್ತಕ ಪ್ರಕಟಣೆ, ನಿಯತಕಾಲಿಕಗಳ ಪ್ರಕಟಣೆ, ಆಕಾಶವಾಣಿ ಕಾರ್ಯಕ್ರಮಗಳ ನಿರ್ವಹಣೆ, ಉಪನ್ಯಾಸ ಕಾರ್ಯಕ್ರಮಗಳು, ಅಂಕಣರಚನೆ, ಗ್ರಂಥಾಲಯ ಸ್ಥಾಪನೆ, ಸರಸ್ವತಿ ಮಂದಿರಗಳ ನಿರ್ಮಾಣ, ಸಾಹಿತ್ಯಲೋಕದಲ್ಲಿ ಶ್ರಮಿಸುತ್ತಿರುವ ಉತ್ಸಾಹಿ ಯುವಜನತೆಗೆ ಆರ್ಥಿಕ ಸಹಕಾರ, ಗೌರವ ಸಮರ್ಪಣೆ, ಪ್ರಶಸ್ತಿ ಪ್ರದಾನ, ವಿದ್ಯಾರ್ಥಿವೇತನ ವಿತರಣೆ ಇತ್ಯಾದಿ ವಿವಿಧ ಚಟುವಟಿಕೆಗಳನ್ನು ಅಗತ್ಯವಾಗಿ ಮಾಡಲೇಬೇಕು ಎಂದು ಅವರು ಹೇಳುತ್ತಾರೆ.

ಜೀವನೋಪಾಯಕ್ಕಾಗಿ ಶ್ರಮಿಸುತ್ತಿದ್ದ ಸಮಯದಲ್ಲಿ, ಉದ್ಯಮಶೀಲತೆಯು ಅತ್ಯಂತ ಅಗತ್ಯವಾಗಿದೆ. ಆದರೆ ಅವರು ಯಾವುದೇ ಒಂದು ರೀತಿಯ ವ್ಯಾಪಾರಕ್ಕೆ ಶಾಶ್ವತವಾಗಿ ಅಂಟಿಕೊಳ್ಳಲಿಲ್ಲ. ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಹಲವಾರು ಬಾರಿ, ಹಲವಾರು ಉದ್ಯಮಗಳಲ್ಲಿ ತೊಡಗಿಕೊಂಡರು. ಕಾಲ ಮತ್ತು ಅವಕಾಶಗಳಿಗನುಸಾರವಾಗಿ, ಅವರು ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮತ್ತಿತರೆ ಉದ್ಯಮಗಳಲ್ಲಿ ತೊಡಗಿದರು. ಜೀವನಕ್ಕೆ ಅಗತ್ಯವೆನಿಸಿದ ಎಲ್ಲಾ ಉದ್ಯಮಗಳಲ್ಲೂ ಅಗತ್ಯಕ್ಕಿಂತ ಹೆಚ್ಚಾಗಿಯೇ ಅವರು ತೊಡಗಿಕೊಂಡರು. ಅವರು ತೊಡಗಿಕೊಂಡ ಉದ್ಯಮದಿಂದ ತಮ್ಮ ಸೀಮಿತ ಅಗತ್ಯಗಳನ್ನು ಪೂರೈಸಿಕೊಳ್ಳುವಷ್ಟು ಲಾಭವನ್ನು ಮಾತ್ರ ಗಳಿಸಿದರು. ಕೇವಲ ಆರ್ಥಿಕ ಸಮೃದ್ಧಿಯ, ಆಸ್ತಿ ಶೇಖರಣೆಯ ಉದ್ದೇಶದಿಂದ ಅವರೆಂದೂ ಉದ್ಯಮದಲ್ಲಿ ತೊಡಗಿಕೊಳ್ಳಲಿಲ್ಲ.

ಉದ್ಯಮದಲ್ಲಿ ಸ್ವಲ್ಪ ಸಮಯ ಕಳೆದಿದ್ದನ್ನು ಬಿಟ್ಟರೆ, ಉದ್ಯಮಿಗಳ ಸಮುದಾಯದೊಂದಿಗೆ ಅವರು ಯಾವುದೇ ಗಾಢ ಸಂಬಂಧವನ್ನು ಸೃಜಿಸಲಿಲ್ಲ. ಅವರು ಯಾವಾಗಲೂ ದೊಡ್ಡ ಮತ್ತು ಯಶಸ್ವಿ ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಿಗಳಿಂದ ಹಿಂದುಳಿದುಬಿಟ್ಟರು. ಪ್ರಸ್ತುತ, ಅವರು ನೇಪಾಳಿ ಸಮಾಜದಲ್ಲಿ ದೊಡ್ಡದೊಡ್ಡ ಉದ್ಯಮಿಗಳೆಂದು ಗುರುತಿಸಿಕೊಂಡಿರುವವರನ್ನು ಕಂಡಾಗ, ಅವರ ಆರ್ಥಿಕ ಪರಿಸ್ಥಿತಿಯು ನನ್ನದಕ್ಕಿಂತಲೂ ದುರ್ಬಲವಾಗಿದೆ ಅಥವಾ ಹದಗೆಡುತ್ತಿದೆ ಎಂಬುದನ್ನು ತಿಳಿದುಕೊಂಡರು. ಈಗ ಹೇಗೆ ಅವರು ದೊಡ್ಡ ಉದ್ಯಮಿಗಳಾಗುತ್ತಾರೆ? ಅವರು ಬಹಳಷ್ಟು ಮೋಸ ಮತ್ತು ವಂಚನೆಯಲ್ಲಿ ತೊಡಗಿದ್ದಾರೆ. ಹಾಗೂ ಬಹಳ ಬುದ್ಧಿವಂತಿಕೆಯಿಂದ ಸರ್ಕಾರಕ್ಕೆ ಕಂದಾಯ ಪಾವತಿಸುವುದನ್ನು ತಪ್ಪಿಸಿಕೊಳ್ಳುತ್ತಾರೆ ಎಂದು ಅವರು ಖಚಿತವಾಗಿ ನುಡಿಯುತ್ತಾರೆ. ಮೊಟ್ಟಮೊದಲಿಗೆ ಅವರು ಸಾಕ್ಷಿಯಾದ ಮತ್ತು ಅನುಭವಿಸಿದ ವಿಷಯಗಳ ಹಿನ್ನೆಲೆಯಲ್ಲಿ ಹೇಳುವುದಾದರೆ, ನೇಪಾಳಿ ಕೈಗಾರಿಕೆ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಉದ್ಯಮಿಗಳು ವ್ಯಾಪಾರದ ನೈತಿಕತೆಯನ್ನು ಬಿಟ್ಟು ಅವಕಾಶವಾದಿಗಳಾಗಿದ್ದಾರೆ ಮತ್ತು ಕಮೀಷನ್ ಪಡೆಯುವಿಕೆ/ದಲ್ಲಾಳಿ ಮತ್ತು ಭ್ರಷ್ಟಾಚಾರಗಳನ್ನು ಪೋಷಿಸುವಂತಹ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದು ಅವರು ಹೇಳುತ್ತಾರೆ. ಪ್ರಸ್ತುತ ಅಸ್ಥಿರತೆಯ ಸಂದರ್ಭದಲ್ಲಿ ಯಾವ ಹೊಸತನವೂ ಇಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ.

ನೇಪಾಳದಲ್ಲಿ ಕೈಗಾರಿಕೆ, ಉದ್ಯಮ ಮತ್ತು ವ್ಯಾಪಾರ ಸೌಲಭ್ಯಗಳ ವೈಫಲ್ಯಕ್ಕೆ ಕಾರಣಗಳನ್ನು ವಿವರಿಸುತ್ತಾ ಅವರು ಮೊದಲನೆಯದಾಗಿ, ಇಂತಹ ವ್ಯಾಪಾರಗಳನ್ನು ನಿರ್ವಹಿಸುವ ಸಾಮರ್ಥ್ಯವುಳ್ಳ ಉದ್ಯಮಶೀಲ ಒಲವನ್ನು ಹೊಂದಿರುವ ವ್ಯಕ್ತಿಗಳ ಇಲ್ಲದಿರುವಿಕೆ, ಎರಡನೆಯದಾಗಿ, ಸರ್ಕಾರದ ನೀತಿ–ನಿಯಮಗಳನ್ನು ರೂಪಿಸುವವರ ಅಪ್ರಬುದ್ಧತೆ ಹಾಗೂ ಮೂರನೆಯದಾಗಿ, ತಮ್ಮ ಸಂಬಂಧಿಕರ ಸಂಸ್ಥೆಗಳ ಮೇಲಿನ ರಾಜಕಾರಣಿಗಳ ಹಿಡಿತ/ಪ್ರಭಾವ – ಈ ಮೂರು ಅಂಶಗಳು ಸಾಮಾಜಿಕ ಮತ್ತು ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯುಳ್ಳ ಕೈಗಾರಿಕೆಗಳ, ಉದ್ಯಮಗಳ ಮತ್ತು ವ್ಯಾಪಾರಗಳ ಸೌಲಭ್ಯಗಳನ್ನು ಸ್ಥಾಪಿಸುವುದಕ್ಕೆ ಅಡ್ಡಿಯಾಗಿವೆ ಎಂದು ಹೇಳುತ್ತಾರೆ.

ಕೈಗಾರಿಕೆಗಳ ಅಭಿವೃದ್ಧಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು ಪಾರದರ್ಶಕ ತತ್ವದ ಆಧಾರದ ಮೇಲೆ ಸರ್ಕಾರದ ನೀತಿಗಳನ್ನು ರೂಪಿಸುವುದು ಹಾಗೂ ದೇಶೀಯ ನಿಯಮಗಳನ್ನು ಪ್ರೋತ್ಸಾಹಿಸುವ ಸಂದರ್ಭದಲ್ಲಿ ವಿದೇಶೀ ಘಟಕಗಳನ್ನು ನಿರ್ಬಂಧಿಸುವ ವಾತಾವರಣವನ್ನು ಸೃಷ್ಟಿಸುವುದು ಅಗತ್ಯವಾಗಿದೆ. ಎಲ್ಲಿಯವರೆಗೆ ದೇಶೀಯ ಕಾರ್ಮಿಕ, ಬಂಡವಾಳ ಮತ್ತು ಹೂಡಿಕೆಗಳನ್ನು ರಕ್ಷಿಸುವ ದೃಢವಾದ ಕಾನೂನುಗಳಿರುವುದಿಲ್ಲವೋ, ರಾಷ್ಟ್ರೀಯತೆಗೆ ಪ್ರಾಮಾಣಿಕವಾಗಿ ಬದ್ಧವಾಗಿರುವ ರಾಜಕೀಯ ಪಕ್ಷಗಳಿರುವುದಿಲ್ಲವೋ ಅಲ್ಲಿಯವರೆಗೂ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಬೆಳವಣಿಗೆಗೆ

ಅಡ್ಡಿಯುಂಟಾಗುತ್ತದೆ. ಇದನ್ನು ಅರ್ಥೈಸಿಕೊಂಡು ಅಧಿಕಾರರೂಢವಾದ ಸರ್ಕಾರವು ಸ್ಪರ್ಧಾತ್ಮಕ ಉದ್ಯಮಗಳ ಕಾರ್ಯಾಚರಣೆಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಿಕೊಡಬೇಕು.

-----

## ಆಡಳಿತ ನೈಪುಣ್ಯತೆ

ಪ್ರತಿ ವ್ಯಕ್ತಿಯೂ ಯೌವ್ವನಕ್ಕೆ ಬಂದ ನಂತರ/ಪ್ರಾಪ್ತವಯಸ್ಕನಾದ ನಂತರ ದೇಶದ ಆಡಳಿತ ವ್ಯವಸ್ಥೆಯೊಂದಿಗೆ ನೇರ ಸಂಬಂಧವನ್ನು ಹೊಂದುತ್ತಾನೆ. ಪೌರತ್ವ ಪ್ರಮಾಣಪತ್ರಗಳನ್ನು ಪಡೆಯುವುದರಿಂದ ಹಿಡಿದು, ನಿತ್ಯಜೀವನದ ವಿವಿಧ ಸಮಸ್ಯೆಗಳನ್ನು ಪರಿಹರಿಸುವವರೆಗೆ, ದೇಶದ ಆಡಳಿತ ವ್ಯವಸ್ಥೆಯ ಮೂಲಕವೇ ಪರಿಹಾರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಈ ಅಂಶಗಳನ್ನು ಪರಿಗಣಿಸಿದಲ್ಲಿ, ಭರತ್ ಜಂಗಮ್ ಅವರಿಗೆ ದೇಶದ ಆಡಳಿತದಲ್ಲಿ ತೊಡಗಿಸಿಕೊಳ್ಳುವ ಅವಕಾಶವು 2017–18(1960–61)ನೇ ಸಾಲಿನ ಆರ್ಥಿಕ ವರ್ಷದಿಂದಲೇ ದೊರೆಯಿತು.

2037–2038(1980–81)ನೇ ಸಾಲಿನ ಆರ್ಥಿಕ ವರ್ಷದಲ್ಲಿ ಅವರಿಗೆ ರಾಜದರ್ಬಾರ್‌ನಲ್ಲಿರುವ ಸಂಶೋಧನಾ ಕೇಂದ್ರದಲ್ಲಿ ವಿಶೇಷಾಧಿಕಾರಿಯಾಗಿ ಕೆಲಸ ಮಾಡುವ ಅವಕಾಶ ದೊರೆಯಿತು. ಆ ಸಂದರ್ಭದಲ್ಲಿ ಅವರಿಗೆ ಅನೇಕ ದೊಡ್ಡದೊಡ್ಡ ಕಾರ್ಯಕ್ರಮಗಳಿಗೆ ಹಾಜರಾಗಿ, ಪರಿಶೀಲಿಸುವ ಅವಕಾಶ ಲಭ್ಯವಾಯಿತು. ಹೆಟೌಡಾ ಸಿಮೆಂಟ್ ಫ್ಯಾಕ್ಟರಿಯ ಸ್ಥಾಪನೆಯ ಸಂದರ್ಭದಲ್ಲಿ, ಕುಲೇಖಾನಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನ ಪರಿಶೀಲನೆ ಮತ್ತು ಉದ್ಘಾಟನೆಯೂ ಆಗಿತ್ತು. ಅದೇ ಸಮಯದಲ್ಲೇ ಹೆಚ್ಚುವರಿಯಾಗಿ ಪೂರ್ವ–ಪಶ್ಚಿಮ ಹೆದ್ದಾರಿಗಳ ವಿವಿಧ ವಿಭಾಗಗಳಲ್ಲಿ ಕಾಮಗಾರಿಯೂ ನಡೆಯುತ್ತಿತ್ತು. ಅದರ ಜೊತೆಯಲ್ಲೇ, ಮಹಾಕಾಳಿ ನೀರಾವರಿ ಯೋಜನೆ ಕೂಡಾ ಪಶ್ಚಿಮದಲ್ಲಿ ಆರಂಭವಾಗಿತ್ತು. ಇವೆಲ್ಲಾ ಅಭಿವೃದ್ಧಿ ಯೋಜನೆಗಳ ಜೊತೆಗೆ, ಇಡೀ ಆಡಳಿತ ವ್ಯವಸ್ಥೆಯು ಕೇಂದ್ರದಲ್ಲಿತ್ತು ಮತ್ತು ಸ್ಥಳೀಯವಾಗಿ ಆಡಳಿತ ವ್ಯವಸ್ಥೆಗಳು ಸಂಪೂರ್ಣ ತೃಪ್ತಿಕರವಾಗಿರಲಿಲ್ಲ. ಆದಾಗ್ಯೂ ಇವತ್ತಿಗೆ ಹೋಲಿಸಿದರೆ, ಅದು ಹೆಚ್ಚು ನೈಜವಾಗಿತ್ತು.

ಬಹುದಾಳರ ಕಾಲದಲ್ಲಿ ಭರತ್ ಜಂಗಮ್ ಅವರು ಬಾಗ್‌ಮತಿ–ನಾರಾಯಣಿ ಪ್ರದೇಶಗಳ ನಿರ್ವಹಣೆ ಮತ್ತು ಮೌಲ್ಯಮಾಪನ ತಂಡ 'ದೌದಾಹ'ದ ಸಮನ್ವಯಕಾರರಾಗಿ ಕೆಲಸ ಮಾಡಿದ್ದರು. ಮಾಘ 11, 2059(ಜನವರಿ 24, 2003) ರಿಂದ ವೈಶಾಖದ ಕೊನೆಯವರೆಗೆ (ಮೇ 13, 2003), ನನಗೆ ಬಾಗ್‌ಮತಿ ಮತ್ತು ನಾರಾಯಣಿ ಪ್ರದೇಶಗಳ ನಿರ್ವಹಣೆ ಮತ್ತು ಮೌಲ್ಯಮಾಪನ ತಂಡದ ಸಮನ್ವಯಕಾರನಾಗಿ ಸಾರ್ವಜನಿಕ ಸೇವೆ ಮಾಡುವ ಅವಕಾಶ ದೊರೆತಿತ್ತು. ನೇಮಕವಾಗಿದ್ದು 4 ತಿಂಗಳುಗಳನ್ನು ಹೊರತುಪಡಿಸಿ, ಕೆಲವು ಅನಿವಾರ್ಯ ಸಂದರ್ಭಗಳಿಂದಾಗಿ ಮತ್ತು ಉಪಕಾರ್ಯಗಳಲ್ಲಿನ ವಿಳಂಬಗಳಿಂದಾಗಿ, ಅವರ ನೈಜ ಕೆಲಸದ ಅವಧಿಯು 70–71 ದಿನಗಳಿಗೆ ಮಾತ್ರ ಸೀಮಿತಗೊಂಡಿತು. ಅದು ತುಂಬಾ ಅಲ್ಪಾವಧಿಯಾಗಿತ್ತು ಹಾಗೂ ಹೊಸ ದೃಷ್ಟಿಕೋನದ ಭರತ್ ಜಂಗಮ್‌ರ ದೃಷ್ಟಿಯಲ್ಲಿ ಆ ಸಮಯದಲ್ಲಿ ಯಾವುದೇ ಘನಕಾರ್ಯದ ಸಾಧನೆಯೂ ಆಗಿಲ್ಲ ಎಂದೇ ಹೇಳಬಹುದು. ಆದಾಗ್ಯೂ, ಆ ಅವಧಿಯಲ್ಲಿ ಮಾಡಿದ್ದ ಕೆಲಸಗಳ ಪರಿಣಾಮಗಳು ಇಂದಿಗೂ ಮುಂದುವರಿದಿವೆ. ಬಹುಶಃ ನೇಪಾಳದ ಆಡಳಿತ ವ್ಯವಸ್ಥೆಯ ಕುರಿತಾಗಿ ಅವರ ತಿಳಿವಳಿಕೆಯನ್ನು ಪರಿಗಣಿಸಿ, ರಾಜ್ಯ ಸರ್ಕಾರ ಅವರಿಗೆ ಆ ಜವಾಬ್ದಾರಿಯನ್ನು ವಹಿಸಿತ್ತು ಅನ್ನಿಸುತ್ತದೆ.

ಆರಂಭದಿಂದಲೂ ತಂಡದ ಆಡಳಿತ ವ್ಯವಸ್ಥೆಯು ಅದಾಗಲೇ ಹಾಳಾಗಿದೆ ಎಂಬುದನ್ನು ಅವರು ಗ್ರಹಿಸಿದ್ದರು. ಅವರಿಗೆ ಅದರಲ್ಲಿನ ದುರ್ಬಲ ಅಂಶಗಳ ಅರಿವಿದ್ದುದರಿಂದ, ಅದರ ತ್ವರಿತ ಸುಧಾರಣೆಯ ಬೆಳವಣಿಗೆಗಳನ್ನು ಅವರು ನಿರೀಕ್ಷಿಸಲಿಲ್ಲ. ಅತ್ಯಂತ ದುರ್ಬಲ ಸ್ಥಿತಿಯಲ್ಲಿರುವ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಗಣನೀಯ ಪ್ರಮಾಣದ ಕಾಲಾವಕಾಶ ಬೇಕಾಗುತ್ತದೆ. ಆದರೂ, ಪ್ರಾರಂಭಿಕ ಸುಧಾರಣೆಗಳಿಗೆಂದು ಕೆಲವು ನಿರ್ಣಾಯಕ ನೀತಿಗಳನ್ನು ಜಾರಿಗೊಳಿಸಲಾಯಿತು. ಆಡಳಿತವು ರಾಜ್ಯದ ವ್ಯವಹಾರಗಳ ಮೂಲತತ್ವವಾಗಿದೆ. ರಾಜಕೀಯ ಅಸ್ಥಿರತೆಯ ಸಂದರ್ಭದಲ್ಲಿ, ಆಡಳಿತಾತ್ಮಕ ಅಸಮರ್ಥತೆಗಳು ಅತ್ಯಂತ ಸಹಜವಾಗಿವೆ. ಅಂತಹ ಸಮಯದಲ್ಲಿ ಸ್ಥಿರ ಸರ್ಕಾರದಿಂದ ಮುನ್ನಡೆಸಬೇಕಾದ ಆಡಳಿತ ವ್ಯವಸ್ಥೆಯ ಪರಿಸ್ಥಿತಿಯು ತೀರಾ ಹದಗೆಟ್ಟಿರುತ್ತದೆ ಹಾಗೂ ದುರ್ಬಲವಾಗಿರುತ್ತದೆ. ಇಂದಿಗೂ ಕೂಡ, ಆಡಳಿತ ವ್ಯವಸ್ಥೆಯು ಹೆಚ್ಚೂಕಡಿಮೆ ಹಾಗೆಯೇಇದೆ.

ಪಂಚಾಯತ್ ಯುಗದಲ್ಲಿ ಸ್ವಹಿತಾಸಕ್ತಿಯ ಮತ್ತು ಸರ್ವಾಧಿಕಾರಿ ಮನೋಧರ್ಮದ ವ್ಯಕ್ತಿಗಳು ಆಡಳಿತದಲ್ಲಿ ತಮ್ಮ ಪ್ರಾಬಲ್ಯವನ್ನು ಹೊಂದಿದ್ದರು. ಅದಕ್ಕೆ ವ್ಯತಿರಿಕ್ತವಾಗಿ, ಬಹುಪಕ್ಷೀಯ ಯುಗದಲ್ಲಿ ರಾಜಕೀಯ ಪರಿಭಾಷೆಯಲ್ಲಿ ಆಡಳಿತ ವಲಯದಲ್ಲಿ ವಿಭಜನೆಯು ನಡೆಯುತ್ತಿದೆ. ಪರಿಣಾಮವಾಗಿ, ಪಂಚಾಯತ್ ಯುಗದಲ್ಲಿ ಒಂದು ಗುಂಪು ಪ್ರಬಲವಾದ ಪ್ರಭಾವವನ್ನು ಹೊಂದಿದ್ದರೆ, ಬಹುಪಕ್ಷೀಯ ಯುಗದಲ್ಲಿ ಮತ್ತೊಂದು ಗುಂಪು ಪ್ರಬಲ ಶಕ್ತಿಯಾಗಿ ಹೊರಹೊಮ್ಮಿತು.

ಪ್ರಸ್ತುತ, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ದೇಶದ ಆಡಳಿತವು ಒಂದು ಅನಿಯಂತ್ರಿತ ಮತ್ತು ನಿಷ್ಪರಿಣಾಮಕಾರಿ ಮಾದರಿಯಲ್ಲಿ ನಡೆಯುತ್ತಿದೆ. ಹೀಗೆ ಆಡಳಿತ ವಲಯದಲ್ಲಿ ಒಂದು ಬೇಜವಾಬ್ದಾರಿ ತಂಡವು ಅಭಿವೃದ್ಧಿಯಾಗುತ್ತಿದೆ. ಇದು ದೇಶಕ್ಕೆ ಪ್ರಯೋಜನಕಾರಿಯಲ್ಲ. ಹೀಗಾದರೆ ಭವಿಷ್ಯದಲ್ಲಿ ಯಾವ ಗುಂಪು ಪ್ರಬಲವಾಗುತ್ತದೆ ಎಂದು ಊಹಿಸಲು ಕಷ್ಟವಾಗುತ್ತದೆ ಎನ್ನುತ್ತಾರೆ ಭರತ್ ಜಂಗಮ್ ಅವರು.

ಆ ಸಮಯದಲ್ಲಿ ಆಡಳಿತ ಸುಧಾರಣೆಗಾಗಿ ಬಹಳಷ್ಟು ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. ತಂಡದ ನಾಯಕನು ಮಾರ್ಗದರ್ಶನ ನೀಡುತ್ತಿದ್ದನು ಹಾಗೂ ನೀತಿ–ನಿಬಂಧನೆಗಳನ್ನು ರೂಪಿಸುವಲ್ಲಿ ಉತ್ತೇಜಿಸುತ್ತಿದ್ದನು. ಅಂದಿನ ಸರ್ಕಾರದ ಸಚಿವಾಲಯಗಳ ಮತ್ತು ಇಲಾಖೆಗಳ ಮೇಲ್ವಿಚಾರಣೆ ಹಾಗೂ ತಪಾಸಣೆ ಶಾಖೆಗಳನ್ನು ಹೆಚ್ಚು ಸಕ್ರಿಯವಾಗಿಡಲು ಪ್ರಯತ್ನಗಳನ್ನು ಮಾಡಲಾಗುತ್ತಿತ್ತು. ಪ್ರಮುಖವಾಗಿ ತತ್ವಜ್ಞಾನಿ ಭರತ್ ಜಂಗಮರು ಆರಂಭಿಸಿದ ರಾಷ್ಟ್ರೀಯ ವಸ್ತ್ರಸಂಹಿತೆ ನೀತಿಯನ್ನು ಜಾರಿಗೊಳಿಸುವುದಾಗಿತ್ತು. ಇದರ ಅಂಗವಾಗಿ, ಸರ್ಕಾರಿ ನೌಕರರಿಗೆ ತಮ್ಮ ಲಾಂಛನಸಹಿತ ಸಾಂಪ್ರದಾಯಿಕ ನೇಪಾಳಿ ಟೋಪಿಗಳನ್ನು ಧರಿಸುವುದನ್ನು ಹಾಗೂ ಅಧಿಕಾರಿಗಳಿಗೆ ದೌರಾ–ಸುರುವಾಲ್, ಕೋಟು ಮತ್ತು ಟೋಪಿಗಳನ್ನು ಕಛೇರಿಗೆ ಬರುವ ಸಮಯದಲ್ಲಿ ಧರಿಸುವುದನ್ನು ಕಡ್ಡಾಯಗೊಳಿಸಲಾಯಿತು. ಇದರೊಂದಿಗೆ ಸರ್ಕಾರಿ ಕಛೇರಿಗಳಲ್ಲಿ ನಿಗದಿತ ಸಮಯಪಾಲನೆಯನ್ನು ರೂಢಿಸಲು ಹೆಚ್ಚುವರಿಯಾಗಿ ಒಂದು ವ್ಯವಸ್ಥೆಯನ್ನು ಅಳವಡಿಸಲಾಯಿತು. ಆ ಸಂದರ್ಭದಲ್ಲಿ, ಈ ನಿರ್ದೇಶನಗಳನ್ನು ಜಾರಿಗೊಳಿಸಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಹೇಗಾದರೂ, ತಂಡವು ನಿಗದಿಪಡಿಸಿದ ನೀತಿ–ನಿಬಂಧನೆಗಳನ್ನು–ನಿರ್ದೇಶನಗಳನ್ನು ಶಾಶ್ವತವಾಗಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿತ್ತು. ಆದರೆ ಅವು ಕ್ರಮೇಣ ವಿಳಂಬಗೊಂಡವು. ಏನೇ ಆದರೂ, ಅಂತಹ ಪ್ರಕ್ರಿಯೆಗಳಿಗೆ ಸಮಯ ತೆಗೆದುಕೊಳ್ಳುವುದು ಸಹಜವೇ ಆಗಿದೆ.

ಅವರಿಗೆ ಬಹಳ ಕಡಿಮೆ ಸಮಯವಿದ್ದಾಗ್ಯೂ, ಅವರು ಬಹಳಷ್ಟು ಕಾರ್ಯಯೋಜನೆಗಳನ್ನು ಕೈಗೆತ್ತಿಕೊಳ್ಳಲು ಯೋಜನೆ ರೂಪಿಸಿದ್ದರು. ಖಾಸಗಿಯಾಗಿ ನಡೆಸುವ ಶಾಲೆಗಳಲ್ಲಿ ಶುಲ್ಕ ನಿಗದಿಗೊಳಿಸುವುದು, ಸರ್ಕಾರಕ್ಕೆ ವಂಚನೆ ಮಾಡುವ ಅಭ್ಯಾಸ ಹೊಂದಿರುವ ಮಾನವ ಸಂಪನ್ಮೂಲದ ಕಂಪೆನಿಗಳು ನಡೆಸುವ ಮೋಸದ ಚಟುವಟಿಕೆಗಳನ್ನು ನಿಯಂತ್ರಿಸುವುದು, ಅನಧಿಕೃತವಾಗಿ ನಡೆಸಲಾಗುತ್ತಿದ್ದ ಇಟ್ಟಿಗೆ ಗೂಡುಗಳನ್ನು ಮುಚ್ಚಿಸುವುದು, ಜೂಜಿನ ಅಡ್ಡೆಗಳಲ್ಲಿ ಮಿತಿಮೀರಿದ ಅವ್ಯವಹಾರಗಳ ನಿಯಂತ್ರಣ, ಸಾರ್ವಜನಿಕ ಸೇವಾಧಾರಿತ ಸರ್ಕಾರಿ ಕಛೇರಿಗಳಲ್ಲಿ ಸೇವೆಗಳು ಕ್ರಮಬದ್ಧವಾಗಿ ನಡೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ನೋಟೀಸುಗಳನ್ನು ಹೊರಡಿಸುವುದು, ಸರ್ಕಾರದ ಮಾಲೀಕತ್ವದಡಿಯಲ್ಲಿ ಖಾಸಗಿಯವರಿಂದ ನಿರ್ವಹಿಸುವ ಬಸ್ಸುಗಳು ಮತ್ತು ಟ್ರಾಲೀ ಬಸ್ಸುಗಳನ್ನು ಪಡೆಯುವ ಮೂಲಕ ಸಾರ್ವಜನಿಕವಾಗಿ ಸ್ಥಗಿತಗೊಂಡ/ಹಾಳಾದ ಸಾರಿಗೆ ವ್ಯವಸ್ಥೆಗಳನ್ನು ಪುನರಾರಂಭಿಸುವುದು ಇತ್ಯಾದಿ ಬಹಳಷ್ಟು ಕಾರ್ಯಗಳನ್ನು ಆರಂಭಿಸಲಾಯಿತು ಹಾಗೂ ಕೆಲವು ಅಪೂರ್ಣವಾಗಿ ಉಳಿದವು.

ನೇಪಾಳದ ಆಡಳಿತ ವ್ಯವಸ್ಥೆಯನ್ನು ತಳಮಟ್ಟದಿಂದ ಸುಧಾರಿಸಲು ಆಡಳಿತಾತ್ಮಕವಾಗಿ ಸರ್ಕಾರದಿಂದ ಕೈಗೊಂಡಿರುವ ಕುರಿತು ಅವರು ಯಾವುದೇ ಸರ್ಕಾರದ ಆಡಳಿತ ವ್ಯವಸ್ಥೆಯು ದಕ್ಷವಾಗಿ ಮತ್ತು ಸೇವಾ ಮನೋಭಾವದ್ದಾಗಿರಬೇಕು, ಇಲ್ಲವಾದಲ್ಲಿ ರಾಜ್ಯ/ದೇಶವು ಅಸಮರ್ಥವಾಗುತ್ತದೆ ಎನ್ನುತ್ತಾರೆ. ಆಡಳಿತವೇ ಸರ್ಕಾರದ ಬೆನ್ನೆಲುಬು. ಕೇವಲ ನಿಯಮಗಳು, ಕಾನೂನುಗಳು ಮತ್ತು ಶಾಸನಗಳನ್ನು ರೂಪಿಸುವ ಮಾತ್ರದಿಂದಲೇ ಅದರ ಸಮರ್ಪಕ ಅನುಷ್ಠಾನವಾಗುವುದಿಲ್ಲ. ಅದರೊಂದಿಗೆ ಕಾಲಕಾಲಕ್ಕೆ ಅವುಗಳ ಮೇಲ್ವಿಚಾರಣೆ, ಪರಿಶೀಲನೆ ಮತ್ತು ಮೌಲ್ಯಮಾಪನಗಳೂ ಅತ್ಯಂತ ಅಗತ್ಯವಾಗಿವೆ. ಈ ಚೌಕಟ್ಟಿನಲ್ಲಿ ಯಾವುದೇ ನಿರಂಕುಶತೆ ಇರಬಾರದು. ತಪ್ಪಿತಸ್ಥರನ್ನು ಶಿಕ್ಷಿಸಬೇಕು ಹಾಗೂ ಪರಿಶ್ರಮಿಗಳಿಗೆ ಸೂಕ್ತ ಪ್ರತಿಫಲ ನೀಡುವಂತಾಗಬೇಕು. ಖಂಡಿತವಾಗಿಯೂ, ಈ ಕಾರ್ಯವನ್ನು ಸರ್ಕಾರದ ಹಂತದಲ್ಲಿಯೇ ಕೈಗೆತ್ತಿಕೊಳ್ಳಬೇಕು. ಆಡಳಿತ ವಲಯದಲ್ಲಿ ನೀತಿ–ನಿಯಮಗಳಿಗನುಸಾರವಾಗಿ ಶಿಸ್ತನ್ನು ಕೂಡಾ ನಿರ್ವಹಿಸಬೇಕು. ಆಗ ಮಾತ್ರ, ಆಡಳಿತವು ತನ್ನ ಸೇವೆಯನ್ನು ಪರಿಣಾಮಕಾರಿಯಾಗಿ ಒದಗಿಸಬಲ್ಲುದು. ಅದನ್ನು ಈಗ ಇರುವಂತೆಯೇ ಬಿಡಬಾರದು ಎಂದು ಅವರು ಹೇಳುತ್ತಾರೆ.

ಸರ್ಕಾರಿ ನೌಕರರನ್ನು ಸಂಘಟಿಸಲು ಪ್ರಯತ್ನಗಳನ್ನು ಮಾಡಲಾಗಿತ್ತು. ಆದಾಗ್ಯೂ ಕೆಲವು ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಸ್ವಾರ್ಥಪರ ಧೋರಣೆಗಳಿಂದಾಗಿ ಅವರ ಯೋಜನೆಯು ಅಪೂರ್ಣವಾಗಿಯೇ ಉಳಿಯಿತು. ಒಮ್ಮೆ, ಅಂದಿನ ನೇಪಾಳದ ಸರ್ಕಾರದ ಕಛೇರಿಗಳು ವೈಶಾಖ 1, 2062(ಏಪ್ರಿಲ್ 14, 2005) ರಿಂದ ತೆರೆಯುತ್ತಿದ್ದವು ಮತ್ತು ನ್ಯಾಯಾಲಯಗಳು ಶ್ರಾವಣ 1, 2062 (ಜುಲೈ 17, 2005)ರ ನಂತರ ತೆರೆಯುತ್ತಿದ್ದವು. ಅಭಿವೃದ್ಧಿ ಹೊಂದಿದ ದೇಶಗಳಾದ ಯುನೈಟೆಡ್ ಸ್ಟೇಟ್ಸ್ ಮತ್ತು ಯೂರೋಪಿನ ಬಹುತೇಕ ದೇಶಗಳಲ್ಲಿ (ವರ್ಷದ 356 ದಿನಗಳಲ್ಲಿ ಕನಿಷ್ಠ 250 ದಿನಗಳು

ಸೇವೆಗೆ ಲಭ್ಯವಿರಲು ಸರ್ಕಾರಿ ಕಛೇರಿಗಳು ತೆರೆದಿರಬೇಕೆನ್ನುವ ದೃಷ್ಟಿಯಿಂದ) ಸರ್ಕಾರಿ ನೌಕರರಿಗೆ ಪ್ರತಿವರ್ಷಕ್ಕೆ ಕನಿಷ್ಠ 110 ದಿನಗಳ ರಜೆಯನ್ನು ನೀಡಲಾಗುತ್ತಿತ್ತು. ಆದರೆ ನೇಪಾಳದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ, ಸಾರ್ವಜನಿಕರಿಗೆ ಅಗತ್ಯವಿರುವ ಸೇವೆಗಳನ್ನು ಪಡೆಯಲು ತೊಂದರೆಯಾಗುವಂತೆ, ವಾರ್ಷಿಕವಾಗಿ ಕೇವಲ 145 ದಿನಗಳ ರಜೆಯನ್ನು ಮಾತ್ರ ನೀಡಲಾಗುತ್ತಿತ್ತು!!! ಅವರ ಉದ್ದೇಶ ಈ ಅಸಮಂಜಸ ಪದ್ಧತಿಯನ್ನು ಸರಿಪಡಿಸುವುದಾಗಿತ್ತು. ರಜೆ ನೀಡುವ ಪ್ರಕರಣಗಳಲ್ಲಿ, ಹಿರಿಯ ಸರ್ಕಾರಿ ಅಧಿಕಾರಿಗಳು ಅನ್ಯಾಯದ ತೀರ್ಮಾನಗಳನ್ನು ಮಾಡಿದ್ದರ ಪರಿಣಾಮವಾಗಿ ಕಠ್ಮಂಡುವಿನ ಪ್ರಾದೇಶಿಕ ಕಛೇರಿಗಳಿಂದ ಭಾನುವಾರದ ರಜೆಯನ್ನು ಪಡೆಯುವಂತಾಯಿತು. ಆ ಸಮಯದಲ್ಲಿ, ಕೇಂದ್ರ ಮತ್ತು ಪ್ರಾದೇಶಿಕ ಆಡಳಿತಗಳಲ್ಲಿ ಒಂದೇ ಸರ್ಕಾರವಿದ್ದರೂ, ತಮ್ಮ ಉದ್ಯೋಗಿಗಳಿಗೆ ರಜೆ ನೀಡುವ ಸಂಬಂಧ ಪರಸ್ಪರ ವಿರೋಧಾತ್ಮಕ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಹೀಗೆ ರಜೆ ತೆಗೆದುಕೊಳ್ಳುವ ಪದ್ಧತಿಯು ಭಾದ್ರಪದ 2056 (ಆಗಸ್ಟ್/ಸೆಪ್ಟೆಂಬರ್, 1999) ರಿಂದ ಚೈತ್ರ 2061 (ಮಾರ್ಚ್/ಏಪ್ರಿಲ್ 2005)ವರೆಗೂ ಚಾಲ್ತಿಯಲ್ಲಿತ್ತು.

-----

## ಸಾಮಾಜಿಕ ಏಕೀಕರಣ

ಭರತ್ ಜಂಗಮ್ ಅವರು ಸಮಾಜಸೇವೆಯಲ್ಲಿಯೂ ಸಕ್ರಿಯರಾಗಿದ್ದಾರೆ. ಪ್ರಸ್ತುತ, ಅವರು ಕಳೆದ ಐದು ದಶಕಗಳಿಂದಲೂ ಬಹಳಷ್ಟು ಸಾಮಾಜಿಕ ಸಂಘ–ಸಂಸ್ಥೆಗಳಲ್ಲಿ ಸಂಯೋಜನೆ ಹೊಂದಿದ್ದು, ಸಮಾಜಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೆ. ಅಷ್ಟು ದೀರ್ಘಕಾಲ ಸಮಾಜಸೇವಾ ಕ್ಷೇತ್ರದಲ್ಲಿ ಸಕ್ರಿಯನಾಗಿರುವ ವ್ಯಕ್ತಿಯೊಬ್ಬ ತಾನು ಸಂಯೋಜಿತನಾಗಿರುವ ಸಂಘ–ಸಂಸ್ಥೆಗಳ ದೊಡ್ಡ ಪಟ್ಟಿಯನ್ನೇ ನೀಡಬಹುದು. ಒಬ್ಬ ಸಮಾಜ ಸೇವಕನಂತೆ, ಅವರೂ ಕೂಡಾ ತಮ್ಮ ಸಮುದಾಯಕ್ಕೆ ಅಗತ್ಯಕ್ಕನುಗುಣವಾಗಿ ಹಲವಾರು ಸಂಘ–ಸಂಸ್ಥೆಗಳ ಮೂಲಕ ಸೇವೆಯನ್ನು ಮಾಡಿದ್ದಾರೆ.

ಅವರೇ ಸ್ಥಾಪಿಸಿದ 'ಜಂಗಮ್ ಫೌಂಡೇಷನ್'ನ ಪ್ರಮುಖ ಕಾರ್ಯಚಟುವಟಿಕೆಗಳೆಂದರೆ, ಅಲ್ಪಸಂಖ್ಯಾತ ಜಂಗಮ ಸಮುದಾಯಕ್ಕೆ ಸಾಂಪ್ರದಾಯಿಕ ಅಸ್ಮಿತೆಯನ್ನು ಉತ್ತೇಜಿಸಲು ಹಾಗೂ ಸಂಸ್ಕೃತಿ ಮತ್ತು ಸಂಪ್ರದಾಯಗಳ ಮುಂದುವರಿಕೆಯನ್ನು ನಿರ್ವಹಿಸಲು ಆಧ್ಯಾತ್ಮಿಕ ಜ್ಞಾನವನ್ನು ಒದಗಿಸುವುದು. ಫೌಂಡೇಷನ್‌ನ ಮೂಲಕಾರ್ಯವು ಪುಸ್ತಕಗಳ ಪ್ರಕಟಣೆಯಾಗಿದ್ದು, 2060(2003)ರಲ್ಲಿ ಪ್ರಕಟವಾಗಿದ್ದ ಸುಪ್ರಸಿದ್ಧ ಸಮಾಜ ಸೇವಕರಾದ ಶ್ರೀ ಗೋವಿಂದ ಹರಿಜಂಗಮರ ಆತ್ಮಚರಿತ್ರೆ 'ಯುಗಪುರುಷ ಶ್ರೀ ಗೋವಿಂದ ಹರಿಜಂಗಮ' ಪುಸ್ತಕದ ಮರುಮುದ್ರಣದಂಥ ಕಾರ್ಯಗಳನ್ನು ಮಾಡಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಸಂಸ್ಥೆಯು ಜಂಗಮ ಸಮುದಾಯದ ಧಾರ್ಮಿಕ ಗ್ರಂಥಗಳನ್ನು ನೇಪಾಳಿ ಭಾಷೆಗೆ ಭಾಷಾಂತರಿಸಿ, ಪ್ರಕಟಿಸುವ ಕೆಲಸವನ್ನೂ ಮಾಡುತ್ತಿದೆ. ಇದರೊಂದಿಗೆ ಹೆಚ್ಚುವರಿಯಾಗಿ, ಈ ಸಂಸ್ಥೆಯು ಶಿವದೇವಾಲಯಗಳ ಮತ್ತು ಪುಣ್ಯಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳನ್ನು ವಿಶೇಷವಾಗಿ ಶೈವಪ್ರದೇಶಗಳ ಅಭಿವೃದ್ಧಿಯನ್ನು ಕೇಂದ್ರೀಕರಿಸಿ ಕೆಲಸ ಮಾಡುತ್ತಿದೆ.

2044(1987)ರಿಂದಲೂ ಅವರು ಭಕ್ತಾಪುರ ಜಿಲ್ಲೆಯಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ದುರ್ಬಲರಾಗಿರುವ ಮತ್ತು ಶೈಕ್ಷಣಿಕವಾಗಿ ಉತ್ತಮವಾಗಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಒದಗಿಸುತ್ತಿದ್ದಾರೆ. ವಿದ್ಯಾರ್ಥಿವೇತನ ಕಾರ್ಯಕ್ರಮವು 10 ವರ್ಷಗಳವರೆಗೂ ಮುಂದುವರಿಯಿತು. ಆ ಸಮಯದಲ್ಲಿ ಒಟ್ಟಾರೆ 35 ಜನ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಪ್ರಸ್ತುತ ಅವರುಗಳು ತಮ್ಮ ಉನ್ನತ ಶಿಕ್ಷಣವನ್ನು ಪೂರೈಸಿ, ಜವಾಬ್ದಾರಿಯುತ ಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದಾಗ್ಯೂ ಈಗ ವಿದ್ಯಾರ್ಥಿವೇತನ ಕಡಿಮೆಯಾಗಿದೆ ಎನ್ನುತ್ತಾರೆ.

ಅಲ್ಲದೆ, ಭರತ್ ಜಂಗಮ್ ಅವರು ಶಾಲೆಗಳು, ದೇವಾಲಯಗಳು, ನದಿಗಳು ಮತ್ತು ಧಾರ್ಮಿಕ ಕ್ಷೇತ್ರಗಳ ನಿರ್ಮಾಣ ಮತ್ತು ಜೀರ್ಣೋದ್ಧಾರಗಳಿಗಾಗಿ ಖರ್ಚು ಮಾಡುತ್ತಿರುತ್ತಾರೆ. ಸದಾ ನಿರ್ಮಾಣಕಾರ್ಯಗಳಿಗೆ ಕೊಡುಗೆ ನೀಡುತ್ತಿದ್ದಾರೆ. ದೇವಸ್ಥಾನಗಳು, ಕೊಳಗಳು, ಮತ್ತು ಶಾಲೆಗಳು ಅವರು ಜೀರ್ಣೋದ್ಧಾರಕ್ಕೆ ಕೈಗೆತ್ತಿಕೊಂಡಿರುವ ಸ್ಥಳಗಳು. ತಮ್ಮ ಸಣ್ಣ ಸಣ್ಣ ಉಳಿತಾಯದ ಕೊಡುಗೆಗಳು ತಮ್ಮ ಪ್ರೋತ್ಸಾಹದ ಭಾವನೆಯನ್ನು ಸಮಾಜಕ್ಕೆ ಪ್ರತಿನಿಧಿಸುತ್ತವೆ ಎಂದು ಅವರು ನಂಬಿದ್ದಾರೆ. ಈ ಕೊಡುಗೆಗಳು ಭೌತಿಕ, ಮಾನಸಿಕ ಮತ್ತು ಆರ್ಥಿಕ ರೂಪದಲ್ಲಿಯೂ ಬರುತ್ತವೆ.

ಪ್ರಸ್ತುತ, ಕೆಲವು ಖಾಸಗಿ ಸಾಮಾಜಿಕ ಸಂಘ–ಸಂಸ್ಥೆಗಳು ವಿದೇಶಗಳಿಂದ ಆರ್ಥಿಕ ಸಹಕಾರವನ್ನು ಪಡೆಯುತ್ತಿವೆ ಹಾಗೂ ಆ ಹಣವನ್ನು ಉಪಯೋಗಿಸಿಕೊಂಡು ಭ್ರಷ್ಟಾಚಾರದಲ್ಲಿ ತೊಡಗಿವೆ ಎಂದು ಆರೋಪಿಸಲಾಗಿದೆ. ಅಲ್ಲದೆ, ಇಂತಹ ಸಂಸ್ಥೆಗಳಲ್ಲಿ ಕೆಲವು ಸಂಸ್ಥೆಗಳು ನೇಪಾಳದ ಆಂತರಿಕ ವಿಚಾರಗಳ ಬಗ್ಗೆ ರಹಸ್ಯವಾಗಿ ವಿದೇಶಿಗರಿಗೆ ಮಾಹಿತಿ ಒದಗಿಸುತ್ತಿವೆ ಎಂದೂ ಸಹಾ ಆರೋಪಿಸಲಾಗಿದೆ. ಹೊರದೇಶಗಳಿಂದ ಆರ್ಥಿಕ ಸಹಕಾರ ಪಡೆದು ಕಾರ್ಯನಿರ್ವಹಿಸುತ್ತಿರುವ ಸಾಮಾಜಿಕ ಸಂಘ–ಸಂಸ್ಥೆಗಳು ಸ್ಥಳೀಯ ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವುದಿಲ್ಲ. ಸೇವಾ ಉದ್ದೇಶಕ್ಕಾಗಿ ಸ್ಥಾಪಿತವಾದ ಸಾಮಾಜಿಕ ಸಂಘ–ಸಂಸ್ಥೆಗಳನ್ನು ನಿಯಂತ್ರಿಸಲು ಶಾಸನಗಳಿವೆ. ಆದರೆ, ಲಭ್ಯವಿರುವ ಶಾಸನಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ರಾಜ್ಯ ಸರ್ಕಾರವು ಅಸಮರ್ಥವಾಗಿದೆ. ಪರಿಣಾಮವಾಗಿ, ಈ ಸಾಮಾಜಿಕ ಸಂಘ–ಸಂಸ್ಥೆಗಳು, ಖಾಸಗಿ ಸಂಘ–ಸಂಸ್ಥೆಗಳ ರೂಪದಲ್ಲಿ ತಮ್ಮ ಸ್ವ–ಆಸಕ್ತಿಗಳನ್ನು ಸಾಧಿಸಿಕೊಳ್ಳಲು ಶಾಸನಗಳನ್ನೂ ಮೀರಿ ಕಾರ್ಯನಿರ್ವಹಿಸುತ್ತವೆ ಹಾಗೂ ದೇಶದ ಮತ್ತು ಪ್ರಜೆಗಳ ಘನತೆ ಮತ್ತು ಪ್ರಗತಿಗೆ ಕುಂದುಂಟುಮಾಡುವಂಥ ಚಟುವಟಿಕೆಗಳಲ್ಲಿ ತೊಡಗುತ್ತವೆ. ಇಂತಹ ದುಷ್ಟ ಸಂಸ್ಥೆಗಳು ಸ್ಥಳೀಯ ಶಾಸನಗಳ ವ್ಯಾಪ್ತಿಯನ್ನೂ ಮೀರಿ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳುತ್ತವೆ ಮತ್ತು ಅವುಗಳ ಧ್ಯೇಯೋದ್ದೇಶಗಳಿಂದ ಹೊರತಾದ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಳ್ಳುತ್ತವೆ. ಅದಕ್ಕಿಂತ ಹೆಚ್ಚಾಗಿ, ಅಂತಹ ಸಾಮಾಜಿಕ ಸಂಘ–ಸಂಸ್ಥೆಗಳ ನಿರ್ದೇಶಕರುಗಳು ಖಾಸಗಿ ವಕೀಲರುಗಳಾಗಿದ್ದು, ಸ್ವತಃ ಭ್ರಷ್ಟಾಚಾರದ ಕೂಪಗಳಾಗಿದ್ದಾರೆ. ಹೀಗೆ ವಿದೇಶಿ ಸಂಸ್ಥೆಗಳೊಂದಿಗೆ ಬಾಂಧವ್ಯವನ್ನು ಹೊಂದಿರುವ ಅಥವಾ ತಮ್ಮ ದೇಶದೊಳಗೆ ಅಭಿವೃದ್ಧಿಪರ ಕಾರ್ಯಚಟುವಟಿಕೆಗಳನ್ನು ನಡೆಸಲು ವಿದೇಶಿ ಸಂಸ್ಥೆಗಳಿಂದ ಧನಸಹಾಯ ಪಡೆಯುವ ಸಂಸ್ಥೆಗಳನ್ನು ಸ್ಥಳೀಯ ಕಾನೂನಿನಡಿ ಕಡ್ಡಾಯವಾಗಿ

ಪರಿಶೀಲನೆಗೆ ಒಳಪಡಿಸಬೇಕು. ಇಲ್ಲವಾದಲ್ಲಿ, ಆರ್ಥಿಕ ಸ್ವೇಚ್ಛೆಗೆ ಎಡೆಮಾಡಿಕೊಟ್ಟಂತೆ ಆಗುವುದು, ಮಾತ್ರವಲ್ಲ, ದೇಶದ ಮತ್ತು ಜನರ ಖ್ಯಾತಿ ಮತ್ತು ವಿಶ್ವಾಸಾರ್ಹತೆಗಳಿಗೂ ಅಪಾಯವನ್ನುಂಟು ಮಾಡಬಲ್ಲದು. ಇಂತಹ ಅನಿಯಂತ್ರಿತ ಸಂಘ–ಸಂಸ್ಥೆಗಳನ್ನು ಕಾನೂನಿನ ವ್ಯಾಪ್ತಿಗೆ ಒಳಪಡಿಸುವ ಮೊದಲು ಒಂದು ಅಗತ್ಯ ತಂತ್ರಜ್ಞಾನವನ್ನು ರೂಪಿಸಿ, ಸ್ಥಾಪಿಸುವ ಕೆಲಸವನ್ನು ಅತ್ಯಂತ ವೇಗವಾಗಿ ಸರ್ಕಾರವು ಮಾಡಬೇಕಿದೆ ಎಂದು ಅವರು ಹೇಳುತ್ತಾರೆ.

ಸರ್ಕಾರದಿಂದ ಅಥವಾ ವಿದೇಶಿ ಸಂಸ್ಥೆಗಳಿಂದ ಯಾವುದೇ ಧನಸಹಾಯವನ್ನು ಪಡೆಯದೇ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿವೆ ಎನ್ನುತ್ತಾರೆ. ಉದಾಹರಣೆಗೆ, 'ಇಂಡಿಪೆಂಡೆಂಟ್ ಥಾಟ್ ಫೋರಂ' ಅಥವಾ 'ವರ್ಡ್‌ಜರ್ನಿ ಪಬ್ಲಿಕೇಷನ್ಸ್'ನಂತಹ ಸಂಸ್ಥೆಗಳು ತಮ್ಮಿಂದಲೇ ಸ್ಥಾಪಿತವಾಗಿ, ಯಾವುದೇ ವಿದೇಶಿ ಸಂಸ್ಥೆಗಳಿಂದ ಹಣಬೆಂಬಲ ಅಥವಾ ಇನ್ನಾವುದೇ ಸಹಕಾರಗಳನ್ನು ಪಡೆಯದೇ ದೇಶ ಮತ್ತು ಜನತೆಯ ಸೇವೆಗಾಗಿ ಸಕ್ರಿಯವಾಗಿ ಕಾರ್ಯಾಚರಣೆ ನಡೆಸುತ್ತಿವೆ. ಇಂತಹ ಸಂಸ್ಥೆಗಳ ಅಭಿವೃದ್ಧಿಯು ದೇಶಕ್ಕೆ ಮತ್ತು ಪ್ರಜೆಗಳಿಗೆ ಪೂರಕವಾಗಿರುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ಸಾಮಾಜಿಕ ಸಂಘ–ಸಂಸ್ಥೆಗಳು ತಮ್ಮ ಮೂಲ ಉದ್ದೇಶಗಳನ್ನು ಕ್ರಮಬದ್ಧವಾಗಿ ಪೂರೈಸುವಲ್ಲಿ ಸಕ್ರಿಯವಾಗಿರುವಾಗ, ಅವು ದೇಶದ, ಜನರ ಮತ್ತು ರಾಜ್ಯದ ಕಾರ್ಯವಿಧಾನಗಳಿಗೆ ಯಾವುದೇ ಹಾನಿಯನ್ನುಂಟುಮಾಡುವುದಿಲ್ಲ. ಖಾಸಗಿ ಸಾಮಾಜಿಕ ಸಂಘ–ಸಂಸ್ಥೆಗಳ ನೋಂದಣಿಕಾಯಿದೆ–1977ರನ್ವಯ, ಸಾಮಾಜಿಕ ಸಂಘ–ಸಂಸ್ಥೆಗಳ ಪ್ರಾಥಮಿಕ ಜವಾಬ್ದಾರಿಯು ಜನರಿಗೆ ಸೇವೆಯನ್ನು ಒದಗಿಸುವುದಾಗಿರುತ್ತದೆ ಎಂದು ಕಾನೂನು ವಿಧಿಸಲಾಗಿದೆ. ಎಲ್ಲಾ ಸಾಮಾಜಿಕ ಸಂಘ–ಸಂಸ್ಥೆಗಳು ವಾಣಿಜ್ಯ ಉದ್ದೇಶದಿಂದಲೇ ಸ್ಥಾಪನೆಯಾಗಿರುವುದರಿಂದ, ಇಂತಹ ಸಂಘ–ಸಂಸ್ಥೆಗಳು ಸಾಮಾನ್ಯವಾಗಿ ವಿದೇಶಿ ಸಂಸ್ಥೆಗಳನ್ನು ಒಳಗೊಂಡಿರುತ್ತವೆ. ಇವು ಕುರುಡು ಆರ್ಥಿಕ ಬಂಡವಾಳ ಹೂಡಿಕೆಯಲ್ಲಿ ತೊಡಗಿರುತ್ತವೆ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರತಿಭೆಗಳನ್ನು ಸಾಲಗಳಾಗಿ ಪರಿವರ್ತಿಸುತ್ತವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಕಾನೂನಿನಡಿ, ಇಂತಹ ಸಂಸ್ಥೆಗಳನ್ನು ಕಾನೂನಿನ ಮೂಲಕ ನಿಯಂತ್ರಿಸಲಾಗುತ್ತದೆ.

–––––

# ದೇವಾಲಯಗಳ ಜೀರ್ಣೋದ್ಧಾರ

## 1) ಪಶುಪತಿನಾಥನ ದೇವಾಲಯದ ಅಭಿವೃದ್ಧಿ

ಭರತ್ ಜಂಗಮ್ ಅವರು ತಮ್ಮ ಆರಾಧ್ಯದೈವವಾದ ಪಶುಪತಿನಾಥನ ದೇವಾಲಯದ ಜೀರ್ಣೋದ್ಧಾರಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಇದರ ಬಗೆಗಿನ ವಿವರಗಳನ್ನು ತಿಳಿಯೋಣ.

ಸುಮಾರು ಏಳು ದಶಕಗಳ ಅವರ ಜೀವನ ವ್ಯಾಪ್ತಿಯಲ್ಲಿ ಬಾಲ್ಯದಿಂದಲೂ ಪಶುಪತಿನಾಥನ ಪವಿತ್ರ ಲಿಂಗದ ದರ್ಶನವನ್ನು ಪಡೆದಿರುವ ಅದೃಷ್ಟವನ್ನು ಅವರು ಹೊಂದಿದ್ದಾರೆ. ಪ್ರತಿಕ್ಷಣದ ದರ್ಶನವೂ ಅವರಲ್ಲಿ ಅತ್ಯಂತ ಸಂತೋಷವನ್ನು ಉಂಟುಮಾಡುತ್ತದೆ. ಆ ಅದ್ಭುತ ಅನುಭವಕ್ಕಾಗಿ ಅವರ ಮನವು ಸಹಜವಾಗಿಯೇ ಸದಾಕಾಲವೂ ತುಡಿಯುತ್ತದೆ. ಕಾಲದ ಹಂಗಿಲ್ಲದೇ–ಅದು ಬೆಳಗ್ಗೆಯೋ, ಮಧ್ಯಾಹ್ನವೋ, ಸಂಜೆಯೋ ಅಥವಾ ಇಡೀ ದಿನ – ಯಾವುದೇ ಕಾಲದಲ್ಲಾದರೂ ಭಗವಂತ ಶಿವನ ದರ್ಶನದ ಆಕಾಂಕ್ಷೆಯು ಅವರ ಮನದಲ್ಲಿ ಸದಾ ಅತೃಪ್ತವಾಗಿಯೇ ಇದೆ. ಅವರು ದೇವರಿಂದ ಎಲ್ಲವನ್ನೂ ಪಡೆದಿರುವುದಕ್ಕಾಗಿ ಅವರು ಅವನಿಗೆ ಕೃತಜ್ಞರಾಗಿದ್ದಾರೆ. ಅವರು ನಿತ್ಯವೂ ಪಶುಪತಿನಾಥನ ದರ್ಶನಕ್ಕೆ ತೆರಳುವ ಭಕ್ತಾದಿಗಳಲ್ಲಿ ಒಬ್ಬರಾಗಿ ಪಶುಪತಿನಾಥನ ದೇವಾಲಯದ ದರ್ಶನವನ್ನು ದಿನವೂ ಪಡೆಯುತ್ತಿದ್ದಾರೆ.

1942(1985)ರಿಂದಲೂ 23 ವರ್ಷಗಳ ಕಾಲ, ಅವರು ಪ್ರತಿ ಸೋಮವಾರ ಬೆಳಗಿನ ಜಾವ 4.00 ಗಂಟೆಗೆ ದೇವಸ್ಥಾನಕ್ಕೆ ಹೋಗುತ್ತಿದ್ದರು, ಪಶುಪತಿನಾಥನ ದೇವಾಲಯದ ಪ್ರಾಕಾರವನ್ನು ಪ್ರವೇಶಿಸುತ್ತಿದ್ದರು ಮತ್ತು ದೇವಾಲಯದ ಪಶ್ಚಿಮ ದ್ವಾರ ತೆರೆದ ಬಳಿಕ ದರ್ಶನವನ್ನು ಪಡೆಯುತ್ತಿದ್ದರು. ಈ ಅಭ್ಯಾಸವನ್ನು ನಿರಂತರವಾಗಿ 1963(2008)ರವರೆಗೂ ಮುಂದುವರಿಸಿದರು. ನಿರಂತರ ಭೇಟಿಗಳ ಮಧ್ಯೆ ಒದಗಿದ ಹಲವಾರು ಅಡೆತಡೆಗಳು ಮತ್ತು ತೊಂದರೆಗಳನ್ನು ಹೊರತುಪಡಿಸಿದರೆ, ಇಂದಿನವರೆಗೂ ಅವರು ಪ್ರತಿ ಸೋಮವಾರವೂ ದೇವಾಲಯಕ್ಕೆ ಭೇಟಿ ನೀಡುವುದನ್ನು ಇನ್ನೂ ಮುಂದುವರಿಸಿದ್ದಾರೆ.

1963(2008)ರಲ್ಲಿ, ಶ್ರಾವಣ ಮಾಸದ ಮೊದಲ ವಾರ, ಅವರು ದೇವಸ್ಥಾನದ ಮೊದಲ ಬಾಗಿಲ ಮಧ್ಯೆ ಕುಳಿತುಕೊಂಡು ಕಣ್ಣುಮುಚ್ಚಿ ಓಂಕಾರ ಜಪ ಮಾಡುತ್ತಾ ಜ್ಯೋತಿರ್ಲಿಂಗದಲ್ಲಿ ಮನವನ್ನು ಕೇಂದ್ರೀಕರಿಸಿ ಧ್ಯಾನ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ, ಅವರಿಗೆ ಒಂದು ದೈವಿಕ ಆಜ್ಞೆ ಕೇಳಿಸಿತು, "ಅಪಾಯ ಎದುರಾಗುತ್ತಿದೆ!! ಜಾಗೃತನಾಗು!!!" ಎಂದಿತು ಅದು. ಅವರು ಗಾಬರಿಗೊಂಡರು ಮತ್ತು ಓಂಕಾರದ ಜಪವನ್ನು ನಿಲ್ಲಿಸಿದರು ಮತ್ತು ಕುತೂಹಲದಿಂದ ಕೇಳಿದರು, "ಭಗವಂತಾ! ಅಪಾಯವು ಸಂಭವಿಸುವುದೇ?" ಎಂದು. ತಕ್ಷಣವೇ ಅವರಿಗೆ ಉತ್ತರ ದೊರೆಯಿತು, "ಧರ್ಮ, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಬೆದರಿಸಲಾಗುವುದು; ಎಚ್ಚರಿಕೆಯಿಂದಿರು." ಭಗವಂತನ ಆದೇಶವನ್ನು ಪಾಲಿಸಲು ನಿರ್ಧರಿಸಿ, ಎದ್ದು ದೇವಾಲಯವನ್ನು ಪ್ರದಕ್ಷಿಣೆ ಹಾಕಿದರು ಮತ್ತು ಪಶ್ಚಿಮದ ದ್ವಾರದಿಂದ ಪರಮಾತ್ಮನ ದರ್ಶನವನ್ನು ಪಡೆದರು. ತಮ್ಮ ಬುದ್ಧಿಯು ಈ ವಿಷಯವನ್ನು ತರ್ಕಕ್ಕೆ ಒಡ್ಡುವುದನ್ನು ತಡೆದು, ಅವರು ಭಗವಂತನ ಆದೇಶವನ್ನು ಶಿರಸಾ ಅನುಸರಿಸಿ, ಮನೆಗೆ ಮರಳಿದರು.

ಮನೆಯಲ್ಲಿ ತಮ್ಮ ಬೆಳಗ್ಗಿನ ಪೂಜೆಯನ್ನು ಮುಗಿಸಿದ ಮೇಲೆ, ಸನಾತನ ಧರ್ಮ ಸೇವಾ ಸಮಿತಿಯ ಕೇಂದ್ರ ಅಧ್ಯಕ್ಷರಾದ ಡಾ. ಹರಿಭಕ್ತ ನ್ಯಾಪಣೆಯವರನ್ನು ಮತ್ತು ಪಂಡಿತ್ ಕೃಷ್ಣಪ್ರಸಾದ್ ಖನಾಲ್ ಅವರನ್ನು ಫೋನಿನಲ್ಲಿ ಸಂಪರ್ಕಿಸಿ, ಬೆಳಗಿನ ಜಾವ ಭಗವಂತನು ತಮಗೆ ನೀಡಿದ ದಿವ್ಯ ಸಂದೇಶದ ವಿಷಯವನ್ನು ಅವರಿಗೆ ತಿಳಿಸಿದರು. ಅವರು ಸಂಪರ್ಕಿಸಿದ ಮೂವರಲ್ಲಿ, ಕೇಶವ ಶರಣ್ ಅವರು ಮಾತ್ರ ವಿಶೇಷವಾಗಿ ಕುತೂಹಲದಿಂದ ವಿಚಾರಿಸಿದರು ಮತ್ತು ಅನೇಕ ಪ್ರಶ್ನೆಗಳನ್ನು ಕೇಳಿದರು. ಭರತ್ ಜಂಗಮ್ ಅವರು ಅವರ ಪ್ರಶ್ನೆಗಳಿಗೆ ಉತ್ತರ ನೀಡಲು ಮುಂಚಿತವಾಗಿ ಸಿದ್ಧರಾಗಿರಲಿಲ್ಲ. ಆದಾಗ್ಯೂ ಅವರ ಪ್ರಶ್ನೆಗಳನ್ನು ಕೇಳಿದ ನಂತರ, ತಕ್ಷಣವೇ ಅವರ ಮನಸ್ಸಿನಲ್ಲಿ ಉತ್ತರಗಳು ಸಿದ್ಧವಾದವು ಮತ್ತು ಅವರಿಗೆ ಅದನ್ನೇ ನೇರವಾಗಿ ಹೇಳಿದರು– "ನೇಪಾಳದಲ್ಲಿರುವ ಈಗಿನ ಸರ್ಕಾರವು ಅಧಾರ್ಮಿಕವಾಗಿದೆ. ಅದು ಧಾರ್ಮಿಕ ಪ್ರದೇಶಗಳನ್ನು ಅತಿಕ್ರಮಣ ಮಾಡಿಕೊಳ್ಳಲು ಆರಂಭಿಸುತ್ತದೆ. ಈ ಅತಿಕ್ರಮಣದ ಪ್ರಕ್ರಿಯೆಯು ಪಶುಪತಿನಾಥ ದೇವಾಲಯದ ಪ್ರದೇಶದಿಂದಲೇ ಆರಂಭಗೊಳ್ಳಲಿದೆ. ಅವರು ದೇವಾಲಯದಲ್ಲಿ ಇರುವ ದೇವರ ಬೆಲೆಬಾಳುವ ವಜ್ರದ ಆಭರಣಗಳು, ಚಿನ್ನ, ಬೆಳ್ಳಿಯ ಆಭರಣಗಳನ್ನು ದೋಚುವ ಉದ್ದೇಶ ಹೊಂದಿದ್ದಾರೆ." ಎಂದು ತಿಳಿಸಿದರು. "ಇದರಿಂದ ರಕ್ಷಣೆ ಹೇಗೆ ಸಾಧ್ಯ?" ಎಂಬ ಕೇಶವ ಶರಣ್‌ರವರ ಪ್ರಶ್ನೆಗೆ ಉತ್ತರವಾಗಿ, "ದೇವಸ್ಥಾನಕ್ಕೆ ಹೊರಗಿನಿಂದ ಬಂದು ನೇಮಕವಾಗಿರುವ ಎಲ್ಲಾ ಪೂಜಾರಿಗಳನ್ನೂ

ಬದಲಾಯಿಸುವ ಮೂಲಕ ಮತ್ತು ಅವರ ಜಾಗದಲ್ಲಿ ಸ್ಥಳೀಯವಾದ ಮತ್ತು ಚೆನ್ನಾಗಿ ತಿಳಿದಿರುವ ನೇಪಾಳಿ ಪೂಜಾರಿಗಳನ್ನು ನೇಮಿಸುವ ಮೂಲಕ, ರಾಷ್ಟ್ರೀಯ ಹೇಳಿಕೆಗಳನ್ನು ಜಪಿಸುವ ಮತ್ತು ರಾಷ್ಟ್ರೀಯ ಭಾವನೆಗಳನ್ನು ಹೊಂದಿರುವ ನಮ್ಮದೇ ಸ್ವಂತ ನೆಲದ ಪೂಜಾರಿಗಳನ್ನು ನೇಮಿಸುವ ಮೂಲಕ ಹಾಗೂ ರಾಜ್ಯ ಸರ್ಕಾರವನ್ನು ಮಧ್ಯೆಪ್ರವೇಶಿಸುವಂತೆ ಮಾಡುವ ಮೂಲಕ ದೇವಾಲಯದ ಆಸ್ತಿಯನ್ನು ರಕ್ಷಿಸಿಕೊಳ್ಳಬಹುದು." ಎಂದು ಹೇಳಿದರು. ಅವರು ಈ ಯೋಜನೆಗಳನ್ನು ವಿವರಿಸುತ್ತಿದ್ದಂತೆಯೇ, ಅವರ ಮನಸ್ಸಿನಲ್ಲಿ ಭವಿಷ್ಯದ ಆಡಳಿತ ವ್ಯವಸ್ಥೆಯ ಯೋಜನೆಯ ರೂಪುರೇಷೆಗಳು ಸ್ಪಷ್ಟವಾಗತೊಡಗಿದವು. ಇದರ ನಂತರ, ಪಶುಪತಿನಾಥ ದೇವಾಲಯದಲ್ಲಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಉಂಟಾಗಬಹುದಾದ ಸಂಭಾವ್ಯ ಅವಘಡಗಳನ್ನು ತಡೆಗಟ್ಟಲು ಅಗತ್ಯವಾದ ಯೋಜನೆಗಳನ್ನು ರೂಪಿಸುವುದು ಅವರಿಗೆ ತುಂಬಾ ಸುಲಭವಾಯಿತು. ಆದರೆ ಆ ಯೋಜನೆಗಳನ್ನು ಹೇಗೆ ಮತ್ತು ಯಾವಾಗ ಕಾರ್ಯರೂಪಕ್ಕೆ ತರುವುದು ಮತ್ತು ಕಳೆದುಕೊಳ್ಳಬಹುದಾದ ಸಂಪತ್ತನ್ನು ಹೇಗೆ ಹಿಂಪಡೆಯುವುದು ಎಂಬ ವಿಷಯಗಳ ಕುರಿತು ಅವರು ಅನನುಭವಿಯಾಗಿದ್ದರು.

2065ರ ಪುಷ್ಯ ತ್ರಯೋದಶಿಯಂದು (2008ರ ಜನವರಿ 13) (ನೇಪಾಳಿ ಕ್ಯಾಲೆಂಡರ್), ಭರತ್ ಜಂಗಮರು ತಮ್ಮ ಮನೆಯಲ್ಲಿ ನಿತ್ಯದ ಪೂಜೆ ಮುಗಿಸಿದ ಮೇಲೆ ದೇವಾಲಯಕ್ಕೆ ಬಂದು ಪ್ರಾರ್ಥಿಸಲು ಪಶುಪತಿನಾಥ ದೇವಾಲಯದ ಪಶ್ಚಿಮ ದ್ವಾರದ ಬಳಿ ನಿಂತಿದ್ದರು. ಅವರ ಹಿಂದೆ ಪಶುಪತಿನಾಥ ದೇವಸ್ಥಾನದ ಖಜಾನೆಯ ಆಸುಪಾಸಿನಲ್ಲಿ, ದೇವಸ್ಥಾನದ ಮುಖ್ಯ ಖಜಾನಾಧಿಕಾರಿ ಶ್ರೀ ಶಿವಶರಣ್ ರಾಜಭಂಡಾರಿ ಅವರು ನಿಂತಿದ್ದರು. ಅವರ ಪ್ರಾರ್ಥನೆಯು ಮುಗಿದ ಬಳಿಕ, ಅವರು ಭರತ್ ಜಂಗಮರೊಂದಿಗೆ ಏನನ್ನೋ ಚರ್ಚಿಸಲು ಕಾಯುತ್ತಿದ್ದರು. ಅವರಿಬ್ಬರೂ ಹನುಮಾನ್ ದೇವಾಲಯದ ಪಶ್ಚಿಮ ಭಾಗಕ್ಕಿರುವ ತೆರೆದ ಕಿಟಕಿಯ ಬಳಿಗೆ ತೆರಳಿದರು. "ಎಲ್ಲಾ ಹಾಳಾಗಿದೆ, ಸರಿಪಡಿಸಲು ಸಾಧ್ಯವಿಲ್ಲ" ಎಂದು ಅವರು ತುಂಬಾ ದುಃಖದಿಂದ ಹೇಳಿದರು. "ಏನಾಯಿತು?" ಎಂದು ಭರತ್ ಕೇಳಿದರು. ಅದಕ್ಕೆ ಉತ್ತರವಾಗಿ ಅವರು ಹೀಗೆ ಹೇಳಿದರು, "ಮೂಲಭಟ್ಟ ಮಹಾಬಲೇಶ್ವರರ ರಾಜೀನಾಮೆಯನ್ನು ಅಂಗೀಕರಿಸಿದ ನಂತರ ಡಾ. ವಿಷ್ಣು ಪ್ರಸಾದ್ ದಹಾಲ್ ಅವರನ್ನು ದೇವಾಲಯದ ಪ್ರಧಾನ ಅರ್ಚಕರನ್ನಾಗಿ ನೇಮಿಸಲಾಗಿದೆ." ಮತ್ತು ಅವರು ಮುಂದುವರಿಸಿ, "ಈಗ ಏನಾಗುವುದು ಭರತ್‌ಜೀ? ನಾನು ನಿಮಗೆ ನೆನ್ನೆಯ ಘಟನೆಯ ಬಗ್ಗೆ ಹೇಳಿದ್ದೆ. ಈಗ, ಮುಂದೆ ಏನು ಮಾಡುವುದು ಎಂದು ಯೋಚಿಸಿ." ಎಂದರು. ಇದನ್ನು ಕೇಳಿ ಭರತ್‌ರ ಮನಸ್ಸು ಹೇಳಿತು, "ನಾನು ಪಶ್ಚಿಮ ದ್ವಾರದ ಹತ್ತಿರ 7.00 ಗಂಟೆಗೆ ಬರುತ್ತೇನೆ. ನೀವೂ ಬರಬೇಕು." ಎಂದು ಹೇಳಿ, ಅವರು ಮನೆಗೆ ಹಿಂತಿರುಗಿದರು. ಅವರ ಮನೆಗೆ ತಗುಲಿಕೊಂಡಿರುವ ರಸ್ತೆಯಲ್ಲಿನ ವಾಹನಗಳ ಶಬ್ದಗಳಿಂದಾಗಿ ಅವರು ಯೋಜನೆ ಸಿದ್ಧಪಡಿಸುವಲ್ಲಿ ಪದೇ ಪದೇ ತೊಂದರೆಯಾಗುತ್ತಿತ್ತು. ತಮ್ಮ ಬೆಳಗಿನ ಪೂಜೆ ಆರಂಭಿಸುವಾಗಲೇ ಬೆಳಗ್ಗಿನ 7.00 ಗಂಟೆ ಆಗಿಹೋಗಿತ್ತು. ಆದಾಗ್ಯೂ ಬೆಳಗ್ಗಿನ ಪೂಜೆಯನ್ನು ಬೇಗ ಬೇಗ ಮುಗಿಸಿದರು. ನಂತರ ಮೊದಲಿಗೆ ಅವರು ಕಾಂತಿಪುರ ಟಿವಿಯ ವ್ಯವಸ್ಥಾಪಕರಾದ ತೀರ್ಥ ಕೋಯಿರ್ಲ ಅವರಿಗೆ ಕರೆಮಾಡಿ, "7.30 ರಿಂದ ಸರ್ಕಾರದ ತೀರ್ಮಾನವನ್ನು ವಿರೋಧಿಸಿ, ಪಶುಪತಿನಾಥ ದೇವಾಲಯದ ಪಶ್ಚಿಮದ್ವಾರದ ಹೊರಭಾಗದಲ್ಲಿ ಒಂದು ಪ್ರತಿಭಟನೆ ನಡೆಯಲಿದೆ. ದಯವಿಟ್ಟು ಈ ಸುದ್ದಿ ಸಂಗ್ರಹಣೆಗಾಗಿ ತಮ್ಮ ಚಾನಲ್‌ನ ಪ್ರತಿನಿಧಿಯನ್ನು ಕಳುಹಿಸಿಕೊಡಿ" ಎಂದು ಹೇಳಿದರು. ಮುಂದಿನ 5 ನಿಮಿಷಗಳಲ್ಲಿ ಅವರು ನೇಪಾಳ ಟೆಲಿವಿಷನ್, ಇಮೇಜ್ ಚಾನಲ್ ಮತ್ತು ಎಬಿ ನ್ಯೂಸ್ ಟಿವಿ ಚಾನಲ್‌ಗಳಿಗೆ ಈ ಮಾಹಿತಿಯನ್ನು ತಿಳಿಸಿದರು.

ಭರತ್ ಜಂಗಮ್ ಅವರು ಅಲ್ಲಿಗೆ ತಲುಪುವುದಕ್ಕೆ ಮುನ್ನವೇ ಕಾಂತಿಪುರ ಚಾನಲ್‌ನ ಕ್ಯಾಮೆರಾ ಸ್ಥಳಕ್ಕೆ ತಲುಪಿತ್ತು. ಅವರು ಅಲ್ಲಿಗೆ ತಲುಪುವ ಹೊತ್ತಿಗಾಗಲೇ ಸಾಕಷ್ಟು ಜನರು ಅಲ್ಲಿ ಸೇರಿದ್ದರು. ದೇವಾಲಯದ ಖಜಾನಾಧಿಕಾರಿಗಳಲ್ಲಿ ಒಬ್ಬರು ದೇವರ ಮೂರ್ತಿಗೆ ಹಾರಗಳು ಮತ್ತು ನೈವೇದ್ಯಗಳನ್ನು ಸಮರ್ಪಿಸಿದರು. ಭರತ್ ಅವರು ಆ ಗುಂಪಿನಲ್ಲಿ ವಿಶೇಷ ಆಕರ್ಷಣೆಯಾಗಿದ್ದರು. ಕಪ್ಪುಕೋಟು, ಕಪ್ಪುಟೋಪಿ ಧರಿಸಿ, ಹಣೆಯಲ್ಲಿ ಕೆಂಪುನಾಮವನ್ನು ಧರಿಸಿ, ಅವರೊಂದು ಕಲ್ಲಿನ ಮೆಟ್ಟಿಲ ಮೇಲೆ ನಿಂತಿದ್ದರು. ಅವರ ಕುತ್ತಿಗೆಯ ಸುತ್ತ ಬಹಳಷ್ಟು ಹಾರಗಳನ್ನು ಹಾಕಲಾಯಿತು. ಜನರು ಅವರನ್ನು ಸುತ್ತುವರಿದರು. ಆ ಸಮಯದಲ್ಲಿ ಕಾಂತಿಪುರ ಟಿವಿಯ ಒಬ್ಬ ವರದಿಗಾರ ಭರತ್‌ರನ್ನು ಮಾತಾಡಿಸಿದ ಮತ್ತು ಈ ಹೋರಾಟದ ಪ್ರಸ್ತುತತೆ ಮತ್ತು ಅಗತ್ಯದ ಕುರಿತು ಅವರನ್ನು ಪ್ರಶ್ನಿಸಿದ. ಭರತ್ ಜಂಗಮ್ ಅವರು ಈ ಹೋರಾಟದ ಅಗತ್ಯ ಮತ್ತು ಪ್ರಾಮುಖ್ಯತೆಗಳ ಕುರಿತು 15 ನಿಮಿಷಗಳ ಕಾಲ ವಿರಾಮವಿಲ್ಲದೆ ಅವರಿಗೆ ವಿವರಿಸಿದರು. ಅಲ್ಲದೆ, ಅವರು ಹಿಂದೂ ದೇವಸ್ಥಾನಗಳನ್ನು ಅತಿಕ್ರಮಿಸುವ ಸರ್ಕಾರದ ನಿರ್ಧಾರವು ಅಕ್ರಮವಾಗಿದೆ ಮತ್ತು ಅಸಾಂವಿಧಾನಿಕವಾಗಿದೆ ಎಂಬ ಅಂಶವನ್ನು ಮುಖ್ಯವಾಗಿ ಉದ್ದೇಶಿಸಿ ಹೇಳಿ ಮತ್ತು ಮುಕ್ತ ಚರ್ಚೆಗೆ ಆಹ್ವಾನಿಸಿದರು. ಸರ್ಕಾರದ ನಿಯಮಗಳ ಸಾಧಕ–ಬಾಧಕ ಎರಡೂ ಮುಖಗಳನ್ನು ಪ್ರಶ್ನಿಸಿ ಇತರೆ ಟಿವಿ ಚಾನೆಲ್‌ಗಳ ಕ್ಯಾಮೆರಾಗಳು ಕೂಡಾ ಅವರನ್ನು ಸುತ್ತುವರಿದವು. ಅವರಲ್ಲಿ ಒಂದು ಜೋಡಿ ಪತ್ರಕರ್ತರು ಭರತ್‌ರನ್ನು "ನೇಪಾಳಿ ಪೂಜಾರಿಗಳನ್ನು ನೇಮಿಸುವ ಬಗ್ಗೆ ನೀವು ಏನು ಹೇಳುತ್ತೀರಿ?" ಎಂದು ಪ್ರಶ್ನಿಸಿದಾಗ,

ಅವರು ತಮ್ಮ ದೃಷ್ಟಿಕೋನವನ್ನು ಸಂಕ್ಷಿಪ್ತವಾಗಿ ವಿವರಿಸಲು ದೊರೆತ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು. ಅವರು ಪತ್ರಕರ್ತರಿಗೆ ಉತ್ತರಿಸುತ್ತಾ, "ರಾಜಕೀಯ ವಲಯವು ಧಾರ್ಮಿಕ ವಿಷಯಗಳಲ್ಲಿ ಅತಿಕ್ರಮ ಪ್ರವೇಶ ಮಾಡಬಾರದು. ಭಾರತದ ಕಾಶಿಯಲ್ಲಿ ನೇಪಾಳಿ ಪೂಜಾರಿಗಳಿದ್ದಾರೆ ಹಾಗೂ ಅಮೇರಿಕಾ ಮತ್ತು ಯೂರೋಪುಗಳ ಹಿಂದೂ ದೇವಾಲಯಗಳಲ್ಲಿ ಭಾರತೀಯ ಮತ್ತು ನೇಪಾಳಿ ಪೂಜಾರಿಗಳಿದ್ದಾರೆ. ಸಂಪ್ರದಾಯ ಮತ್ತು ಸಂಸ್ಕೃತಿಗಳು ಅವು ಪ್ರಚಲಿತದಲ್ಲಿರುವ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಅಭ್ಯಾಸಗಳೆಂದು ಒಪ್ಪಿಕೊಳ್ಳಲಾಗಿದೆ. ಅದು ಆ ಪ್ರದೇಶದ ಸ್ಥಳೀಯ ಸಂಸ್ಕೃತಿ ಮತ್ತು ಧರ್ಮವಾಗಿರುತ್ತದೆ. ಅವುಗಳನ್ನು ಬದಲಾಯಿಸುವುದೆಂದರೆ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ಅತಿಕ್ರಮಣ ಮಾಡಿದಂತೆಯೇ ಸರಿ." ಎಂದು ದಿಟ್ಟತನದಿಂದ ಹೇಳಿದರು.

ಕಾಂತಿಪುರ ಟಿವಿಯು ಈ ಸುದ್ದಿಯನ್ನು ಪ್ರಸಾರ ಮಾಡುತ್ತಿದ್ದಂತೆ, ಬೆಳಗ್ಗೆ 9 ಗಂಟೆಯಿಂದ 11 ಗಂಟೆಯೊಳಗೆ ಸಾವಿರಾರು ಬೆಂಬಲಿಗರು ಅಲ್ಲಿ ಸೇರಿದರು. ಈ ಕಾರ್ಯಕ್ರಮವು ಮಧ್ಯಾಹ್ನದವರೆಗೂ ಮುಂದುವರಿಯಿತು. ಪ್ರತಿದಿನ ಬೆಳಗ್ಗೆ 7 ಗಂಟೆಯಿಂದ ಈ ಕಾರ್ಯಕ್ರಮವನ್ನು ಪ್ರಸಾರವನ್ನು ನಿರಂತರವಾಗಿ ಮಾಡಲು ನಿರ್ಧಾರ ಕೈಗೊಳ್ಳಲಾಯಿತು. ಅದರಂತೆ, 14ನೇ ದಿನದಂದೂ ಈ ಪ್ರತಿಭಟನಾ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.

15ನೇ ದಿನ, ಪ್ರತಿಯೊಬ್ಬರೂ ಭರತ್ ಜಂಗಮ್ ಅವರಿಗೆ 15ನೇ ದಿನದ ಪ್ರತಿಭಟನೆಯಲ್ಲಿ ಉಪಸ್ಥಿತರಿರಲು ತಿಳಿಸಿದರು. ಕೇಶವ ಶರಣರು ಇಬ್ಬರು ಬೆಂಬಲಿಗರೊಂದಿಗೆ ಬೆಳಗ್ಗೆ 7 ಗಂಟೆಗೆ ಪ್ರತಿಭಟನೆಯ ಸ್ಥಳಕ್ಕೆ ಬಂದರು. ಅವರು ಭರತ್ ಅವರ ಸ್ಥಳದಲ್ಲಿ ಕುಳಿತು, ಶಿವನ ಸ್ತೋತ್ರಗಳನ್ನು ಹಾಡಿದರು ಮತ್ತು ನೇಪಾಳಿ ಮಾತೆಯನ್ನು ಪ್ರಶಂಸಿಸುವ ಗೀತೆಗಳನ್ನು ಹಾಡಿದರು. ಅಲ್ಲಿದ್ದ ಎಲ್ಲರೂ ಪ್ರತಿಭಟನೆಗೆ ಜೊತೆಯಾದರು. ಭಾರತೀಯ ನ್ಯೂಸ್ ಚಾನೆಲ್‌ಗಳಾದ 'ಆಜ್‌ತಕ್' ಮತ್ತು 'ನ್ಯೂಸ್‌ಇಂಡಿಯಾ' ಚಾನೆಲ್‌ಗಳ ಪ್ರತಿನಿಧಿಗಳೂ ಬಂದರು. ಮೊದಲು ಭರತ್‌ರ ಅಭಿಪ್ರಾಯಗಳನ್ನು ಮತ್ತು ನಂತರ ಕೇಶವ ಶರಣರ ಅಭಿಪ್ರಾಯಗಳನ್ನು ದಾಖಲಿಸಿಕೊಳ್ಳಲಾಯಿತು. ಅವರಿಬ್ಬರೂ 15 ನಿಮಿಷಗಳ ಕಾಲ ಹಿಂದಿಯಲ್ಲಿ ಮಾತನಾಡಿದರು. ನೇಪಾಳಿ ಮತ್ತು ಭಾರತದ ಎರಡೂ ಮಾಧ್ಯಮಗಳೂ ಅವರ ಪ್ರತಿಭಟನೆಯ ಕಾರ್ಯಕ್ರಮವನ್ನು ತುಂಬಾ ವ್ಯಾಪಕವಾಗಿ ಪ್ರಸಾರ ಮಾಡಿದರು.

16ನೇ ದಿನಾಂಕದಂದು ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಒಯ್ಯಲು ತೀರ್ಮಾನಿಸಿದರು. ಭರತ್ ಜಂಗಮ್ ಅವರ ಕಡೆಯಿಂದ ಒಂದು ರಿಟ್ ಅರ್ಜಿಯನ್ನು ಮತ್ತು ಕೃಷ್ಣಮನ್ ಭಂಡಾರಿ ಸೇರಿದಂತೆ ದೇವಾಲಯದ ಎಲ್ಲಾ ಖಜಾನಾಧಿಕಾರಿಗಳ ಕಡೆಯಿಂದ ಒಂದು ರಿಟ್ ಅರ್ಜಿಯನ್ನು ದಾಖಲಿಸಲಾಯಿತು. ಎರಡೂ ರಿಟ್ ಅರ್ಜಿಗಳನ್ನು 17ನೇ ದಿನಾಂಕದಂದು ಸುಪ್ರೀಂಕೋರ್ಟಿಗೆ ಸಲ್ಲಿಸಲಾಯಿತು. ಅದೇ ದಿನ ಮಧ್ಯಾಹ್ನ 3 ಗಂಟೆಗೆ ಈ ರಿಟ್ ಅರ್ಜಿಗಳ ವಿಚಾರಣೆಯನ್ನು ನಡೆಸಲಾಯಿತು. 17ನೇ ದಿನಾಂಕದ ಬೆಳಗ್ಗೆ ನೇಪಾಳಿ ಪೂಜಾರಿಗಳನ್ನು ದೇವಾಲಯದೊಳಕ್ಕೆ ಪ್ರವೇಶಿಸುವ ಕಾರ್ಯಕ್ರಮಕ್ಕೆ ತಯಾರಿಗಳನ್ನು ಮಾಡಿಕೊಳ್ಳಲಾಗಿತ್ತು, ಆದರೆ ಭರತ್ ಜಂಗಮ್ ಮತ್ತು ಸಹಚರರು ಅದನ್ನು ವಿರೋಧಿಸಲು ಒಂದು ಕಾರ್ಯಕ್ರಮವನ್ನು ಆಯೋಜಿಸಿದ್ದರು. ನೇಪಾಳಿ ಕಾಂಗ್ರೆಸ್ ಪಕ್ಷದ ಸಂಸದರಾದ ಸುಪ್ರಭಾ ಘಿರ್ಮಿರೆ ಮತ್ತು ಯುವ ನಾಯಕರಾದ ಗಗನ್ ಥಪಾ ಸೇರಿದಂತೆ ಬಹಳಷ್ಟು ಜನ ರಾಜಕಾರಣಿಗಳು ಅಲ್ಲಿ ಹಾಜರಿದ್ದರು. ಭರತ್ ಅವರು ಮಾತನಾಡಲು ಶುರುಮಾಡುತ್ತಿದ್ದಂತೆ, ಹೊಡೆದಾಟಕ್ಕೆ ಕೈ ಕೈ ಮಿಲಾಯಿಸಲು ಆರಂಭವಾಯಿತು. ಪೊಲೀಸರು ಲಾಠಿಚಾರ್ಜ್ ಮಾಡಲು ಮುಂದಾದರು ಮತ್ತು ಈ ಅವ್ಯವಸ್ಥೆಯ ನಡುವೆ, ಒಬ್ಬ ಹೊಸದಾಗಿ ನೇಮಕವಾದ ಪೂಜಾರಿಯು ದೇವಾಲಯವನ್ನು ಪ್ರವೇಶಿಸಲು ನುಗ್ಗಿದ, ಆದರೆ ಪ್ರತಿಭಟನಾಕಾರರಿಂದ ತಡೆಯಲ್ಪಟ್ಟ. ಭರತ್ ಮತ್ತು ಸಹಚರರು ತಮ್ಮನ್ನು ಮತ್ತು ತಮ್ಮವರನ್ನು ರಕ್ಷಿಸಿಕೊಳ್ಳುತ್ತಾ ಪರಿಸ್ಥಿತಿಯನ್ನು ನಿಯಂತ್ರಿಸಲು ತೊಡಗಿದರು. ಸಾಂಪ್ರದಾಯಿಕವಾಗಿ ದೇವರ ಪೂಜೆಯನ್ನು ನೆರವೇರಿಸುವಂತೆ ಆದೇಶಿಸಿ ಸುಪ್ರೀಂಕೋರ್ಟಿನ ಏಕಸದಸ್ಯ ಪೀಠವು ಮಧ್ಯಂತರ ತಡೆಯಾಜ್ಞೆಯನ್ನು ಘೋಷಿಸಿತು. ಇದೇ ಸಂದರ್ಭದಲ್ಲಿ ಸುಮಾರು ಸಂಜೆ: 4.30 ರ ಹೊತ್ತಿಗೆ ಅಂದಿನ ಸಚಿವ ಕೋಪಾಲ ಕಿರಾಟಿಯವರ ನೇತೃತ್ವದಲ್ಲಿ, ಮುಂದೆ ಆಗಬಹುದಾದ ಯಾವುದೇ ರೀತಿಯ ತೊಂದರೆಗಳನ್ನು ತಡೆಗಟ್ಟಲು ನಾಲ್ಕು ಟ್ರಕ್‌ಗಳು ದೇವಸ್ಥಾನವನ್ನು ಸುತ್ತುವರಿದವು. ಸರ್ಕಾರವು ಕೋರ್ಟಿನ ಆದೇಶವನ್ನು ಉಲ್ಲಂಘಿಸಿದೆ ಎಂಬ ಸುದ್ದಿಯು ಪ್ರಸಾರವಾದ ಕೂಡಲೇ, ಭಾರತೀಯ ಟಿವಿ ಚಾನೆಲ್ 'ಆಜ್‌ತಕ್'ನ ಪ್ರತಿನಿಧಿಗಳು ವಿಶೇಷ ಸಂದರ್ಶನಕ್ಕಾಗಿ ಭರತ್‌ಅವರ ಮನೆಗೆ ಬಂದರು. ಈ ಸಂದರ್ಶನವನ್ನು 'ಆಜ್‌ತಕ್' ಚಾನೆಲ್‌ನಲ್ಲಿ ಪ್ರತಿ 3 ಗಂಟೆಗೊಮ್ಮೆ ಪ್ರಸಾರ ಮಾಡಲಾಯಿತು. ಇದರಂತೆಯೇ, ಇತರೆ ಸ್ಥಳೀಯ ಮತ್ತು ಅಂತಾರಾಷ್ಟ್ರೀಯ ಟಿವಿ ಚಾನೆಲ್‌ಗಳು ಮತ್ತು ಅಂತರ್ಜಾಲ ಸುದ್ದಿ ಮಾಧ್ಯಮಗಳು ಅಂದಿನ ನೇಪಾಳ ಸರ್ಕಾರದ ಕ್ರಮವನ್ನು ಖಂಡಿಸುವ ನಿಟ್ಟಿನಲ್ಲಿ ಈ ಸಂದರ್ಶನವನ್ನು ಪದೇ ಪದೇ ಪ್ರಸಾರ ಮಾಡತೊಡಗಿದವು.

ಇವೆಲ್ಲದರ ಮಧ್ಯೆ, 23ನೇ ಜನವರಿಯಂದು ಮಧ್ಯಾಹ್ನ ನರನಾರಾಯಣ ಬಾಬಾ ಎಂಬ ಹೆಸರಿನ ಸಂತರೊಬ್ಬರು ಅದೇ ದಿನ ಸಂಜೆ 5 ಗಂಟೆಗೆ ನೇಪಾಳದ ಪ್ರಧಾನಮಂತ್ರಿಗಳಾದ ಪುಷ್ಪಕಮಲ್ ದಹಾಲ್‌ರವರೊಂದಿಗೆ ಭರತ್‌ರ ಭೇಟಿಯನ್ನು ನಿಗದಿಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು. ಅದಕ್ಕನುಸಾರವಾಗಿ ಭರತ್ ಪಶುಪತಿನಾಥ ದೇವಾಲಯದ ಆವರಣದಲ್ಲಿ ಬಾಬಾರನ್ನು ಸಂಜೆ 4 ಗಂಟೆಗೆ ಭೇಟಿಯಾದರು. ಅವರು ಭರತ್‌ಅವರಿಗೆ ಹೀಗೆ ಹೇಳಿದರು. "ಪ್ರಧಾನಮಂತ್ರಿ ಪುಷ್ಪಕಮಲ ದಹಾಲ್‌ರವರು ನಿಮ್ಮೊಂದಿಗೆ 5 ಗಂಟೆಗೆ ಭೇಟಿಯನ್ನು ನಿಗದಿಗೊಳಿಸಿದ್ದಾರೆ. ನೀವು ಮತ್ತು ನಾನು 5 ಗಂಟೆಗೆ ಬಲುವತಾರ್‌ಗೆ ಹೋಗಬೇಕು." ಅವರು ಬಹಳ ಪ್ರಸಿದ್ಧ ಸಂತರಾಗಿದ್ದರು ಮತ್ತು ಭರತ್ ಅವರನ್ನು ತುಂಬಾ ಗೌರವಿಸುತ್ತಿದ್ದರು. ಆದಾಗ್ಯೂ, ಅವರು ತಮ್ಮನ್ನು ಸ್ವತಃ ಪ್ರತಿಪಕ್ಷದ ವ್ಯಕ್ತಿಯಾಗಿ ಪರಿವರ್ತನೆಯಾಗಿರಬಹುದು ಹಾಗೂ ಸ್ವತಃ ಅವರೇ ದೇವಾಲಯದ ಆವರಣವನ್ನು ಸ್ವಾರ್ಥಸಾಧನೆಗಾಗಿ ಧ್ವಂಸಗೊಳಿಸಲು ಯತ್ನಿಸುತ್ತಿರಬಹುದು ಎಂಬ ಅನುಮಾನದಿಂದ ಭರತ್ ಅವರ ಮಾತನ್ನು ನಂಬಲಿಲ್ಲ. ಕೇವಲ ಒಂದು ಬಾರಿಯ ಭೇಟಿಯಿಂದ ಭರತ್ ಅವರನ್ನು ಹೇಗೆ ನಂಬಬಹುದು? ನರನಾರಾಯಣ ಬಾಬಾ ಅವರನ್ನು ನಂಬಿಸಲು ಶತಪ್ರಯತ್ನ ಮಾಡಿದರು. ಅವರು ಭರತ್‌ರನ್ನು ಯಾವುದೇ ಪರಿಸ್ಥಿತಿಯಲ್ಲಾದರೂ ಭೇಟಿ ಮಾಡಿಸಲೇಬೇಕೆಂದು ಪಣತೊಟ್ಟಂತಿದ್ದರು. ಆದರೆ, ಅಂದಿನ ಸಂದರ್ಭದಲ್ಲಿ, ವಿರೋಧಪಕ್ಷದ ವ್ಯಕ್ತಿಗಳನ್ನು ಭೇಟಿಯಾಗುವುದು ಭರತ್‌ರ ನಿಯಮಗಳಿಗೆ ಹಾಗೂ ಪದ್ಧತಿಗಳಿಗೆ ವಿರುದ್ಧವಾಗಿತ್ತು. ಹಾಗಾಗಿ ಅವರು ಈ ಭೇಟಿಯನ್ನು ಒಪ್ಪಿಕೊಳ್ಳಲು ನಿರಾಕರಿಸಿದರು. ತತ್ಪರಿಣಾಮವಾಗಿ, ಬಲುವತಾರ್‌ಗೆ ಆ ಸನ್ಯಾಸಿ ಒಬ್ಬರೇ ಹೋದರು. ಸಂಜೆ 7 ಗಂಟೆಗೆ ಭರತ್ ಅವರು ಟಿವಿಯನ್ನು ವೀಕ್ಷಿಸಿದರು. ನೇಪಾಳದ ಪ್ರಧಾನಮಂತ್ರಿಗಳಾದ ಪುಷ್ಪಕಮಲ್ ದಹಾಲ್‌ರವರು ಸಂಸತ್ತಿನಲ್ಲಿ ಪಶುಪತಿನಾಥ ದೇವಾಲಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಎಲ್ಲಾ ನಿರ್ಧಾರಗಳನ್ನೂ ಹಿಂಪಡೆಯಲಾಗಿದೆ ಎಂದು ಘೋಷಿಸಿದಾಗ, ಅವರು ಖುಷಿಯಂದ ಉದ್ಗರಿಸಿದ್ದರು, "ಶ್ರೀ ಪಶುಪತಿನಾಥನಿಗೆ ಜಯವಾಗಲಿ!!!"

ನಂತರ, ದೇವಸ್ಥಾನದ ನಿತ್ಯಪೂಜೆಗೆ ವ್ಯವಸ್ಥೆ ಮಾಡುವುದು ಭರತ್‌ರ ಕರ್ತವ್ಯವಾಗಿತ್ತು. ಜನವರಿ 24ರ ಬೆಳಗ್ಗೆ 8 ಗಂಟೆಗೆ ಅವರು ಮೂಲಭಟ್ಟ ಮಹಾಬಲೇಶ್ವರರಿಗೆ ದೇವಸ್ಥಾನಕ್ಕೆ ಹೊರಡಲು ಸಿದ್ಧರಾಗುವಂತೆ ತಿಳಿಸಿದರು. ಪುಷ್ಯ ಮಾಸದ 17 ರಿಂದ 23 ರವರೆಗೆ ಏಳು ದಿನಗಳ ಕಾಲ ದೇವಸ್ಥಾನದ ಪೂಜೆಯು ಸ್ಥಗಿತವಾಗಿತ್ತು. ಆ ದಿನ ಬೆಳಗ್ಗೆ 8.30ಕ್ಕೆ ಸರಿಯಾಗಿ ಎಲ್ಲಾ ಪೂಜಾರಿಗಳಿಗೂ ದೇವಸ್ಥಾನ ಪ್ರವೇಶಿಸಲು ಅನುಮತಿಸಲಾಯಿತು ಮತ್ತು ಕಳೆದ ಏಳು ದಿನಗಳಿಂದ ನಿಂತಿದ್ದ ಪೂಜಾಕಾರ್ಯಗಳನ್ನು ನೆರವೇರಿಸಲಾಯಿತು. ಅದೇ ದಿನ, ಪ್ರಾಯಶ್ಚಿತ್ತ ಪೂಜೆಯನ್ನೂ ಕೂಡಾ ನೆರವೇರಿಸಲಾಯಿತು.

1360ನೇ ವರ್ಷದಲ್ಲಿ, ದೆಹಲಿಯ ಸುಲ್ತಾನ ಘಿಯಾತ್ ಅಲ್-ದೀನ್ ತುಘಲಕ್ ಮತ್ತು ಬಂಗಾಳದ ಸುಲ್ತಾನ ಶಾಮ್ಸುದ್ದೀನ್‌ರವರ ಆಳ್ವಿಕೆಯ ಕಾಲದಲ್ಲಿ ಭಾರತದ ಹಿಂದೂ ದೇವಾಲಯಗಳನ್ನು ಒಂದಾದ ಮೇಲೊಂದರಂತೆ ನಾಶಗೊಳಿಸಲಾಯಿತು. ಬಂಗಾಳದ ದಾಳಿಗಳು ಮುಂದುವರಿದು, ಅವರು ನೇಪಾಳವನ್ನು ಪ್ರವೇಶಿಸಿದರು ಮತ್ತು ಶ್ರೀಲಿಂಗವನ್ನು ಭಿನ್ನಗೊಳಿಸಿದರು. ಸ್ಥಳೀಯ ಆಡಳಿತಗಾರರಾಗಿದ್ದ ಬನೆಪ ವಂಶದ ರಾಜ ಜಯರಾಮ ಸಿಂಗ್ ವಧ್ರಹನ್ನನ ಆಡಳಿತದ ಸಮಯದಲ್ಲಿ ಈಗಿರುವ ಶ್ರೀಲಿಂಗವನ್ನು ನಿರ್ಮಿಸಲಾಯಿತು ಮತ್ತು ಜಂಗಮ ಸಮುದಾಯದ ಉತ್ತರಾಧಿಕಾರಿಯಾಗಿದ್ದ ಶ್ರೀಪತಿ ಆರಾಧ್ಯ ಶರ್ಮರಿಂದ ಪ್ರತಿಷ್ಠಾಪಿಸಲಾಗಿತ್ತು. ಆ ಸಂದರ್ಭದಲ್ಲಿ ಪೂಜೆಯನ್ನು ಸ್ಥಗಿತಗೊಳಿಸಲಾಗಿತ್ತು. ಈಗ 648 ವರ್ಷಗಳ ಅವಧಿಯ ನಂತರ, ಮತ್ತೊಮ್ಮೆ ಸ್ಥಗಿತಗೊಂಡಿದ್ದ ಶ್ರೀಲಿಂಗದ ಪೂಜೆಯನ್ನು ಪುನಃ ಪ್ರಾರಂಭಿಸುವ ಸದವಕಾಶ ಜಂಗಮ ವಂಶದ ಪೀಳಿಗೆಗೆ ಸಿಕ್ಕಿತ್ತು. ಇದನ್ನು ಅವರು ಸಾಕ್ಷಾತ್ ಪಶುಪತಿನಾಥನ ಆಶೀರ್ವಾದವೆಂದೇ ಭಾವಿಸಿದ್ದರು.

ಧಾರ್ಮಿಕ ವಿರೋಧಿ ಕಮ್ಯೂನಿಸ್ಟ್‌ಗಳ ಯೋಜನೆಯ ಪ್ರಕಾರ, ಪಶುಪತಿನಾಥ ದೇವಾಲಯದ ಮೂಲ ಖಜಾನೆ 'ಧುಕುಟಿ'ಯನ್ನು ತೆರೆಯುವ ಯೋಜನೆ ಇತ್ತು. ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದಿದ್ದ ದೇವಾಲಯದ ಆಸ್ತಿಯನ್ನು ಅತಿಕ್ರಮಿಸುವ ಮೂಲ ಯೋಜನೆಯನ್ನು ಇವರು ಬಹಳ ವರ್ಷಗಳಿಂದಲೂ ಹೊಂದಿದ್ದು, ಅದನ್ನು ಈಗ ಕಾರ್ಯಗತಗೊಳಿಸುವರಿದ್ದರು. ಅಲ್ಲದೇ, ಈ ಮಾವೋವಾದಿಗಳು ಮಾಧವಕುಮಾರ್ ನೇಪಾಳ್‌ರವರ ಕಾಲದಲ್ಲಿಯೇ ಈ ಯೋಜನೆಯನ್ನು ತಯಾರಿಸಿ, ಅದನ್ನು ಅನುಷ್ಠಾನಗೊಳಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದರು. ದೇವಾಲಯದ ಮೂಲ ಖಜಾನೆ 'ಧುಕುಟಿ'ಯನ್ನು ತೆರೆಯಲು 27 ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿತ್ತು. ದೇವಾಲಯದ ಆಸ್ತಿಯನ್ನು ಮೂರು ಸ್ಥಳಗಳಲ್ಲಿ ಹಂಚಿಕೆ ಮಾಡಿ ಇಡಲು ನಿರ್ಧರಿಸಲಾಗಿತ್ತು. ದಿನನಿತ್ಯ ಬಳಸುವ ವಸ್ತುಗಳನ್ನು ಪಶುಪತಿನಾಥನ ಭಂಡಾರದಲ್ಲಿಯೂ, ಪುರಾತನ ಮೌಲ್ಯಯುತ ವಸ್ತುಗಳನ್ನು ಮ್ಯೂಸಿಯಂನಲ್ಲಿಯೂ ಹಾಗೂ ದೇವರಿಗೆ ಸಮರ್ಪಿಸುತ್ತಿದ್ದ ಬೆಲೆಬಾಳುವ ಆಭರಣಗಳನ್ನು ನ್ಯಾಷನಲ್ ಬ್ಯಾಂಕ್‌ನಲ್ಲಿಯೂ ಇಡಲು ಯೋಜಿಸಲಾಗಿತ್ತು. ನ್ಯಾಷನಲ್

ಬ್ಯಾಂಕ್ ಒಂದು ಸರ್ಕಾರಿ ಸಂಸ್ಥೆಯಾಗಿದ್ದು, ರಾಜ್ಯ ಸರ್ಕಾರವು ಬೇಕೆನಿಸಿದಾಗ ಅಲ್ಲಿನ ಸಂಪತ್ತನ್ನು ಉಪಯೋಗಿಸಬಹುದಿತ್ತು. ರಾಜ್ಯವು ಈ ಅಕ್ರಮ ಅತಿಕ್ರಮಣಕ್ಕೆ ಮುಂದಾದಾಗ, ಭರತ್ ಅವರು ತಮ್ಮ ಕಡೆಯಿಂದಲೇ ದೂರುದಾರನಾಗಿ ಸ್ವತಃ ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣವನ್ನು ದಾಖಲಿಸಿದರು. ಈ ಕಾರ್ಯಾಚರಣೆಯನ್ನು ಮುಂದುವರಿಸದಂತೆ ನ್ಯಾಯಾಲಯವು ಮಧ್ಯಂತರ ತಡೆಯಾಜ್ಞೆ ಆದೇಶವನ್ನು ನೀಡಿತು. ಇದರಿಂದಾಗಿ ದೇವಳದ ಮೂಲ ಖಜಾನೆ 'ಧುಕುಟಿ'ಯನ್ನು ಸರ್ಕಾರವು ತೆರೆಯದಂತೆ ತಡೆಯಲಾಯಿತು.

ಕ್ರಿಶ್ಚಿಯನ್ನರ ಸ್ಮಶಾನಕ್ಕಾಗಿ ಜಿಂಕೆ ಪಾರ್ಕ್‌ನಲ್ಲಿ ಸುಮಾರು 9000 ಚದರ ಅಡಿ ಪ್ರದೇಶದ ನೆಲವನ್ನು ಅಗೆಯುವ ಕೆಲಸ ಆರಂಭವಾಯಿತು. ಕ್ರಿಶ್ಚಿಯನ್ನರ ಗ್ರಂಥಗಳ ಪ್ರಕಾರ "ಸತ್ತ ವ್ಯಕ್ತಿಯು ಒಂದು ದಿನ ಜೀವಿಸುತ್ತಾನೆ" ಎಂಬ ನಂಬಿಕೆ ಇದೆ. ಆದ್ದರಿಂದ, ಅವರಲ್ಲಿ ಸತ್ತ ವ್ಯಕ್ತಿಗಳನ್ನು ಹೂಳುವ ಗುಂಡಿಯು ಕನಿಷ್ಠ 150 ಚದರ ಅಡಿ ವ್ಯಾಪ್ತಿಯನ್ನು ಹೊಂದಿರಬೇಕು. ಒಂದು ಸಿಮೆಂಟಿನ ಮುಚ್ಚಳವನ್ನು ತಯಾರಿಸಿ, ಅದರಿಂದ ತೋಡಿದ ಗುಂಡಿಯನ್ನು ಮುಚ್ಚಲಾಗುತ್ತದೆ. ಜಿಂಕೆ ಪಾರ್ಕ್‌ನಂತಹ ಹಿಂದೂಗಳ ಪವಿತ್ರ ಮತ್ತು ಪುಣ್ಯಭೂಮಿಯನ್ನು ಕ್ರಿಶ್ಚಿಯನ್ನರ ಸ್ಮಶಾನವಾಗಿ ಪರಿವರ್ತಿಸುತ್ತಿರುವ ಪ್ರಕ್ರಿಯೆಯನ್ನು ನೋಡಿದ ಕೂಡಲೇ, ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕ್ರಿಯೆಯ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಇದರಿಂದ ಜಿಂಕೆ ಪಾರ್ಕ್‌ಗೆ ಭದ್ರತೆ ಸ್ಥಿರಗೊಂಡಿತು.

ಭರತ್ ಜಂಗಮ್ ಅವರು ಒಂದೊಂದೇ ಪ್ರಕರಣಗಳಲ್ಲಿ ಗೆಲ್ಲುತ್ತಾ ಹೋದಂತೆ, "ಪಶುಪತಿನಾಥನು ಮಾತನಾಡುವುದಿಲ್ಲ" ಎಂಬ ಹೇಳಿಕೆಯು ಸುಳ್ಳೆನಿಸಲು ಪ್ರಾರಂಭವಾಯಿತು. ಆ ಸಮಯದಲ್ಲಿ, ಪಶುಪತಿನಾಥ ದೇವಾಲಯದ ಎಲ್ಲಾ ಆಯಕಟ್ಟಿನ ಅಧಿಕಾರ ಸ್ಥಾನಗಳನ್ನೂ ಮಾವೋವಾದಿ ವಿಚಾರದ ಕಮ್ಯೂನಿಸ್ಟರೇ ಅಥವಾ ವೈಸಿಎಲ್ ಪಕ್ಷದವರೇ ಆಕ್ರಮಿಸಿಕೊಂಡಿದ್ದರು. ಅವರುಗಳು ಅರಣ್ಯಪ್ರದೇಶವನ್ನು ಆಟದ ಮೈದಾನವಾಗಿ ಬದಲಾಯಿಸಿದ್ದರು. ಪಶುಪತಿನಾಥ ದೇವಾಲಯದ ಪ್ರದೇಶಾಭಿವೃದ್ಧಿ ನಿಧಿಯ ಪ್ರಧಾನ ಕಛೇರಿಯಲ್ಲಿಯೂ ಕೂಡಾ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿಗಳು ಇತ್ಯಾದಿ ಪ್ರಮುಖ ಅಧಿಕಾರಿ ಸ್ಥಾನಗಳಲ್ಲಿ ಈ ಮಾವೋವಾದಿ ಕಾರ್ಯಕರ್ತರೇ ತುಂಬಿಕೊಂಡಿದ್ದರು. ಪಶುಪತಿನಾಥನ ಪ್ರದೇಶವು ಮಾವೋವಾದಿಗಳ ಅಧಿಕಾರ ವ್ಯಾಪ್ತಿಯಲ್ಲಿ ಬಿಡಿಸಿಕೊಳ್ಳಲು ಅಸಾಧ್ಯವೆಂಬಂತೆ ಸಿಲುಕಿಕೊಂಡಿತ್ತು. ಆದಾಗ್ಯೂ ಈ ಮಾವೋವಾದಿಗಳ ಹಿಡಿತದಿಂದ ಪಶುಪತಿನಾಥನ ಪ್ರದೇಶವನ್ನು ಮುಕ್ತಗೊಳಿಸುವ ಕೆಲಸವು ಬಹಳ ಸುಲಭವಾದ ರೀತಿಯಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿತು.

ಆ ದಿನಗಳಲ್ಲಿ ಪಶುಪತಿ ಸೇವಕ ಸಂಘ ಎಂಬ ಸಂಸ್ಥೆಯೊಂದನ್ನು ಆರಂಭಿಸುವ ಕೆಲಸ ಶುರುವಾಯಿತು. ಈ ಸಂಘಕ್ಕೆ ಪ್ರಧಾನ ಸಲಹೆಗಾರನಾಗಿ ನೇಮಕಗೊಳ್ಳಲು ಭರತ್ ಜಂಗಮ್ ಅವರನ್ನು ಮನವೊಲಿಸಲಾಯಿತು. ಇದರಿಂದಾಗಿ, ದೇವಳದ ಪೂಜಾರಿಗಳು ಸಂಘದಿಂದ ಕೈಬಿಡುವಂತಾಗಬಾರದು ಎಂಬುದು ಅವರ ನಿಲುವಾಗಿತ್ತು. ಸಂದರ್ಭ ಏನೇ ಇರಲಿ, ಎಂತಹ ಕಷ್ಟಕರ ಪರಿಸ್ಥಿತಿಯೇ ಇರಲಿ, ಈ ಹಿಂದೆ ದೇವಾಲಯದ ಪೂಜೆಯ ಸಂದರ್ಭದಲ್ಲಿ ನಡೆದಂತೆ ಈಗಲೂ ಈ ಘನ ಪೂಜಾರಿಗಳು ಜನರ ಸಂಪೂರ್ಣ ಬೆಂಬಲವನ್ನು ಪಡೆದರು. ಇಂದಿನ ದಿನಗಳಲ್ಲಿ, ಅಲ್ಲಿ ಯಾವುದೇ ವಿರೋಧಿ ಸಂದರ್ಭವಿಲ್ಲ. ದೇವಸ್ಥಾನಕ್ಕೆ ಸಂಬಂಧಿಸಿದ ಪ್ರತಿಯೊಂದು ಆಚರಣೆಯೂ ಅತ್ಯಂತ ಸಾಂಪ್ರದಾಯಿಕವಾಗಿ ಮತ್ತು ಪಾರದರ್ಶಕ ರೀತಿಯಲ್ಲಿ ಸಹಜವಾಗಿ ನಡೆಯುತ್ತಿದೆ.

"ಈ ಎಲ್ಲಾ ಚಟುವಟಿಕೆಗಳೂ ಭಗವಾನ್ ಪಶುಪತಿನಾಥನ ಆಶೀರ್ವಾದ ಮತ್ತು ಕರುಣೆಯಿಂದಲೇ ವ್ಯವಸ್ಥಿತವಾಗಿ ನಡೆಯುತ್ತಿವೆ, ಈ ಕಾರ್ಯಗಳನ್ನು ನಡೆಸಲು ಪರಮಾತ್ಮನಿಗೆ ನಾನು ನಿಮಿತ್ತ ಮಾತ್ರನಾಗಿದ್ದೇನೆ. ಪಶುಪತಿನಾಥನ ಅಪಾರ ದಯೆ ಮತ್ತು ಕರುಣೆ ಮಾತ್ರವೇಎಲ್ಲವನ್ನೂ ನಡೆಸಬಲ್ಲುದಾಗಿದೆ." ಎಂದು ಅವರು ದೃಢವಾಗಿ ನಂಬಿದ್ದಾರೆ.

**2) ಡೋಲೇಶ್ವರ ಮಹಾದೇವ ಪ್ರದೇಶದ ಅಭಿವೃದ್ಧಿ ಕಾರ್ಯಗಳು**

ಡೋಲೇಶ್ವರ ಮಹಾದೇವನದ್ದೂ ಕೂಡಾ ಒಂದು ದೊಡ್ಡ ಕಥೆ. ಅದು 2001ಕ್ಕೆ ಸಂಬಂಧಿಸಿದ್ದು. ಇತಿಹಾಸ, ಸಂಸ್ಕೃತಿ ಮತ್ತು ಧಾರ್ಮಿಕ ಪ್ರದೇಶಗಳ ಅಧ್ಯಯನ ಮಾಡುವ ಸಂದರ್ಭದಲ್ಲಿ ಭರತ್ ಜಂಗಮರ ಮಗ ಅನೂಪ್ ಜಂಗಮ್ ಅವರನ್ನು ಭಕ್ತಾಪುರದ ಸಿಪಡೋಲ್‌ನಲ್ಲಿರುವ ಡೋಲೇಶ್ವರ ಮಹಾದೇವ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಸಂಶೋಧನೆಗಳನ್ನು, ಚರ್ಚೆಗಳನ್ನು ಮಾಡುತ್ತಾ, ವಿಡಿಯೋ ಚಿತ್ರೀಕರಣಗಳನ್ನು ಮಾಡುತ್ತಾ ಅವರು ಇಡೀ ದಿನ ಅಲ್ಲೇ ಕಳೆದರು. ತಮ್ಮ ಕ್ಯಾಮೆರಾವನ್ನು ಉಪಯೋಗಿಸಿ ದೇವಾಲಯದ ಒಳ ಆವರಣ ಮತ್ತು ಹೊರ ಆವರಣಗಳನ್ನು

ಚಿತ್ರೀಕರಿಸಿದರು. ಆದರೆ ಅವರು ಮನೆಗೆ ಹಿಂದಿರುಗಿ ಬಂದು, ಕ್ಯಾಮೆರಾದಲ್ಲಿನ ಚಿತ್ರಗಳನ್ನು ವೀಕ್ಷಿಸಬೇಕೆಂದಾಗ, ಆ ಕ್ಯಾಮೆರಾದಲ್ಲಿ ಅವರು ತೆಗೆದ ಯಾವ ಚಿತ್ರಗಳೂ ಇರಲಿಲ್ಲ ಎಂಬುದನ್ನು ಗಮನಿಸಿದರು. ಭರತ್ ಮತ್ತು ಅವರ ಮಗ ಇಬ್ಬರೂ ಬೇರೆ ಬೇರೆ ಊರುಗಳಿಂದ ಬಂದು ಅಲ್ಲಿ ಸೇರಿದ್ದರು. ಭರತ್ ಈ ವೈಫಲ್ಯಕ್ಕಾಗಿ ತಮ್ಮ ಮಗನನ್ನು ಬೈದರು ಮತ್ತು ಮಗ ಆ ಕ್ಯಾಮೆರಾವನ್ನು ಬೈದರು. ಹೀಗೆ ಡೋಲೇಶ್ವರ ದೇವಸ್ಥಾನಕ್ಕೆ ಅವರ ಭೇಟಿಯು ವಿಫಲವಾಗಿತ್ತು. ಮತ್ತೆ 3–4 ತಿಂಗಳ ನಂತರ ಅವರಿಬ್ಬರೂ ಒಂದು ಸ್ಟಿಲ್ ಕ್ಯಾಮೆರಾವನ್ನು ತೆಗೆದುಕೊಂಡು ಹೋದರು. ಆದರೆ ಈ ಕ್ಯಾಮೆರಾವೂ ಸಹಾ ಸರಿಯಾಗಿ ಕೆಲಸ ಮಾಡಲಿಲ್ಲ ಮತ್ತು ಯಾವುದೇ ಫೋಟೋಗಳನ್ನು ತೆಗೆಯಲಾಗಲಿಲ್ಲ. ಈಗ, ಭರತ್ ನಿರಾಶರಾದರು. ಎರಡು ಕ್ಯಾಮೆರಾಗಳು ವಿಫಲವಾದವು ಮತ್ತು ಒಂದು ಫೋಟೋ ಕೂಡಾ ಸಿಗಲಿಲ್ಲ!! ತಡಮಾಡದೆ, ಭರತ್ ಸ್ಥಳೀಯ ಇತಿಹಾಸ, ಸಂಸ್ಕೃತಿ ಮತ್ತು ಪುರಾತನತೆಯ ಬಗ್ಗೆ ಚರ್ಚಿಸಿ, ಪರಿಶೀಲಿಸಲು ಡಾ. ಪುರುಷೋತ್ತಮ ಲೋಚನ ಶ್ರೇಷ್ಠರೊಂದಿಗೆ ಭೇಟಿಯಾಗಲು ಅನುವಾದರು.

ಒಂದು ದಿನ, ಭರತ್ ಡಾ. ಪುರುಷೋತ್ತಮ ಲೋಚನರನ್ನು ಡೋಲೇಶ್ವರ ದೇವಾಲಯಕ್ಕೆ ಭೇಟಿ ನೀಡಲು ವಿನಂತಿಸಿದರು. ಅವರು ಹೊರಟು ನಿಂತಾಗ, ಉತ್ತಮವಾದ ಒಂದು ಕ್ಯಾಮೆರಾವನ್ನೂ ಜೊತೆಗೊಯ್ಯುವಂತೆ ಅವರಿಗೆ ಸಲಹೆ ನೀಡಿದರು. ನಿಗದಿತ ಸಮಯಕ್ಕೆ ಅವರಿಬ್ಬರೂ ದೇವಾಲಯವನ್ನು ತಲುಪಿದರು. ಲೋಚನ ಅವರು ತಮ್ಮ ಕ್ಯಾಮೆರಾದಲ್ಲಿ 20 ರಿಂದ 30 ಫೋಟೋಗಳನ್ನು ತೆಗೆದರು. ಭರತ್ ಅವರ ಕ್ಯಾಮೆರಾದಲ್ಲಿದ್ದ ಫೋಟೋಗಳನ್ನು ನೋಡಬೇಕೆಂದಿದ್ದರು, ಆದರೆ ಅವರ ಕ್ಯಾಮೆರಾದಲ್ಲಿಯೂ ಕೂಡಾ ಯಾವುದೇ ಫೋಟೋಗಳಿರಲಿಲ್ಲ!!!

ಇದರ ನಂತರ, ಡೋಲೇಶ್ವರ ಮಹಾದೇವನ ಅತೀಂದ್ರಿಯ ಶಕ್ತಿಯ ಭಯದಲ್ಲಿ ಅವರಿದ್ದರು. ಕೆಲವರು ಇದನ್ನು ಪದಗಳಿಗೆ ಮೀರಿದ ಅನುಭೂತಿ ಎಂದರು. ಆದರೆ ಭರತ್‌ರಿಗೆ, ಇದು ಜವಾಬ್ದಾರಿಯ ಪ್ರಶ್ನೆಯೊಂದಿಗೆ ಮನಸ್ಸಿಗೆ ಭಾರೀ ಹೊರೆಯೆನಿಸಿತು. ಭರತ್ ಪಶುಪತಿನಾಥನ ಭಕ್ತರಲ್ಲಿ ಒಬ್ಬರಾಗಿದ್ದರು. ಡೋಲೇಶ್ವರ ಮಹಾದೇವನು ಅವರೊಳಗೆ ಒಂದು ಕುತೂಹಲ ಮತ್ತು ತೀರ್ಮಾನದ ಪ್ರಶ್ನೆಯನ್ನು ಮೂಡಿಸಿದ್ದ. ವಾತಾವರಣವು ಒಂದು ನಿರ್ದಿಷ್ಟ ಪರಿಹಾರವನ್ನು ಹುಡುಕಲು ಪಕ್ವವಾಗಿತ್ತು. ಮಹಾದೇವನ ದೇವಸ್ಥಾನಕ್ಕೆ ಪದೇ ಪದೇ ಹೋಗಿಬರುವ ಕೆಲಸವು ಮುಂದುವರಿಯಿತು. ಈ ಕುರಿತು ಜಾಗೃತರಾದ ಯುವಕರು ವಿಮಲೇಶ್ವರ ಮಹಾದೇವ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯನ್ನು ರಚಿಸಿದರು ಮತ್ತು ಆ ಪ್ರದೇಶದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. ಯುವಕರಾದ ಬಲಹರಿ ಛಾಲಿಸೆ, ರಾಜನ್ ಥಾಪ, ಬಚ್ಚುರಾಂ ಜಂಗಮ್ ಮತ್ತು ಸೂರ್ಯ ಖ್ಯೆತು ಮುಂತಾದವರು ಈ ಪ್ರದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದರು ಮತ್ತು ಭರತ್ ಕೂಡಾ ಇದರಲ್ಲಿ ಪಾಲುದಾರನಾಗಿ ಭಾಗವಹಿಸಿದರು. ಅವರು ವಿಮಲೇಶ್ವರನನ್ನು ಭರತ್‌ರಿಗಿಂತ ಭಿನ್ನವಾಗಿ ಅರ್ಥೈಸಿಕೊಂಡಿದ್ದರು, ಆದರೆ ಅವರು ಕೂಡಾ ಚೆನ್ನಾಗಿಯೇ ತಿಳಿದುಕೊಂಡಿದ್ದರು. ದೇವಾಲಯದ ಪ್ರವೇಶದ್ವಾರವನ್ನು ಅತಿಕ್ರಮಿಸಲಾಯಿತು ಮತ್ತು ಅವರು ದೇವಾಲಯದ ದಕ್ಷಿಣ ಭಾಗದಲ್ಲಿದ್ದ ಹಳೆಯ ಜಾಗದಲ್ಲಿ ಸಣ್ಣಕಟ್ಟಡವೊಂದನ್ನು ನಿರ್ಮಿಸುತ್ತಿದ್ದುದನ್ನು ಅವರು ಸಮರ್ಥಿಸಿದರು.

2002ರ ಹೇಮಂತ ಮಾಸದಲ್ಲಿ ಒಂದು ದಿನ, ಸುಮಾರು ಸಂಜೆ 4 ಗಂಟೆಯ ಹೊತ್ತಿಗೆ, ದೇವಾಲಯದ ಆವರಣದಲ್ಲಿದ್ದ ಪಾರಿಜಾತ ಮರವೊಂದರ ನೆರಳಿನಲ್ಲಿ ಇವರೆಲ್ಲ ನಿಂತಿದ್ದರು. ಅವರು ನಿಂತಲ್ಲಿಂದ ಶಿವಲಿಂಗವು ಚೆನ್ನಾಗಿ ಕಾಣುತ್ತಿತ್ತು ಮತ್ತು ಭರತ್ ಅದನ್ನು ತದೇಕಚಿತ್ತದಿಂದ ನೋಡುತ್ತಲೇ ಇದ್ದರು. ಭರತ್ ತಾವು ನಿಂತಲ್ಲಿಂದ 20–22 ಅಡಿ ದೂರದಲ್ಲಿರುವ ಮತ್ತು ಪೂರ್ವಾಭಿಮುಖವಾಗಿರುವ ಲಿಂಗದ 'ರಹಸ್ಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದ್ದಕ್ಕಿದ್ದಂತೆ, ಗಾಳಿ ಬೀಸುತ್ತಿರುವ ದನಿಯ ಮಧ್ಯೆ, ಭರತ್‌ರ ಕಿವಿಯಲ್ಲಿ ಒಂದು ಧ್ವನಿ **"ಕೇದಾರನಾಥ...?"** ಎಂದು ಉಸುರಿತು. ಭರತ್‌ರ ಗಮನವು ತಮ್ಮ ಮಡದಿ ಹರಿಪ್ರಿಯಾ ಜಂಗಮಳ ಕೊಠಡಿಯಲ್ಲಿ ತೂಗುಹಾಕಿದ್ದ ಕೇದಾರನಾಥದ ಚಿತ್ರದತ್ತ ಹರಿಯಿತು. 1951 ರಿಂದ 1957ರವರೆಗೂ ಭರತ್ ನೋಡುತ್ತಾ ಬಂದಿದ್ದ ಆ ಚಿತ್ರವು ಅವರ ಯುವ ಮತ್ತು ಭಾವನಾತ್ಮಕ ಮನಸ್ಸಿನಲ್ಲಿ ಅಚ್ಚಾಗಿತ್ತು. ಅದಾಗಿ 50 ವರ್ಷಗಳ ನಂತರವೂ, ಆ ಚಿತ್ರವು ಈ ದಿನ ಎದುರಿಗಿದ್ದ ಶಿವಲಿಂಗದೊಂದಿಗೆ ಅವರ ಮನಸ್ಸಿನಲ್ಲಿ ಸೇರಿಕೊಂಡಿತು. ಅವರ ಕಿವಿಯಲ್ಲಿ ಕೇದಾರನಾಥನ ಧ್ವನಿಯು ಮಾರ್ದನಿಸಿತು ಹಾಗೂ ಅವರ ಮನಸ್ಸಿಗೆ ಇತಿಹಾಸ, ಪುರಾಣ ಮತ್ತು ಪ್ರಸ್ತುತ ಸಂಸ್ಕೃತಿ ಎಲ್ಲವೂ ಒಗ್ಗೂಡಿ **'ಕೇದಾರನಾಥವು ನೇಪಾಳದಲ್ಲಿದೆ'** ಎಂಬ ಸತ್ಯವು ಅರ್ಥವಾಯಿತು. ಮಂದಮಾರುತದ ಸದ್ದು, ಶಿವಪರಮಾತ್ಮನ ಸುಮಧುರ ಧ್ವನಿಯಂತೆ ಭಾಸವಾಗಿ, ಭರತ್‌ರಲ್ಲಿ ಅರೆಜಾಗೃತಿಯನ್ನು ಮೂಡಿಸಿ, ಮಾಯವಾಯಿತು. ಅವರ ಮನಸ್ಸು ಹಗುರವಾಗಿಯೂ, ಉತ್ಸಾಹಭರಿತವಾಗಿಯೂ ಇದ್ದಂತೆ ಅನಿಸಿತು. ಅವರ ಹಿಂದಿನ ನೋವುಗಳೆಲ್ಲಾ ಮರೆತುಹೋದವು ಮತ್ತು ಸುತ್ತಲಿದ್ದ ಅವರ ಸ್ನೇಹಿತರನ್ನೆಲ್ಲಾ ಹತ್ತಿರ ಕರೆದರು.

ಬಲಹರಿ ಥಾಲಿಸೆ, ರಾಜನ್ ಥಾಪ, ಬಚ್ಚುರಾಂ ಜಂಗಮ್ ಮತ್ತು ಸೂರ್ಯಖೈತು ಭರತ್‌ರ ಮುಂದೆ ಉಪಸ್ಥಿತರಾದರು. ಅವರ ಮುಂದೆ ಭರತ್ "ಈ ಡೋಲೇಶ್ವರ ಮಹಾದೇವ ಕ್ಷೇತ್ರವು ಭಾರತದ ಉತ್ತರಾಖಂಡದ ಕೇದಾರನಾಥದ ನೆತ್ತಿಯ ಪ್ರದೇಶವಾಗಿದೆ" ಎಂದು ವಿವರಿಸಿದರು. ಅವರೆಲ್ಲ ಈ ವಿಷಯವನ್ನು ಕೇಳಿ ಆಶ್ಚರ್ಯಚಕಿತರಾದರು!!!

ಕೆಲವು ಸ್ನೇಹಿತರು ಇದನ್ನು ಕೇಳಿದೊಡನೆಯೇ ಸಂತೋಷಗೊಂಡರು ಮತ್ತು ಇತರರು ಪೂರಕವಾಗಿ ಪ್ರತಿಕ್ರಿಯಿಸಿದರು. ಆದರೂ, ಅವರು ಭರತ್‌ರ ಈ ಸಲಹೆಯನ್ನು ಬಹಳ ಗಂಭೀರವಾಗಿ ಪರಿಗಣಿಸಲಿಲ್ಲ. ಈ ವಿಷಯದ ಕುರಿತು ಚರ್ಚಿಸುವುದಾಗಲೀ ಅಥವಾ ಭಾವನಾತ್ಮಕವಾಗಿ ಪ್ರತಿಕ್ರಿಯಿಸುವುದಾಗಲೀ ನಿರರ್ಥಕವೆಂದು ಭರತ್‌ರಿಗೆ ತಕ್ಷಣ ಅರಿವಾಯಿತು. ಈ ಕುರಿತು ಅರ್ಥಹೀನ ಚರ್ಚೆಗಳಲ್ಲಿ ಕಾಲಕಳೆಯುವುದರ ಬದಲು, ತಾವೇ ಈ ಬಗ್ಗೆ ಲಭ್ಯವಿರುವ ದಾಖಲೆಗಳನ್ನು ಸಂಗ್ರಹಿಸುವ ಮತ್ತು ಆ ದಾಖಲೆಗಳನ್ನು ಆಧರಿಸಿ ತೀರ್ಮಾನಕ್ಕೆ ಬರುವ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಈ ವಿಷಯದ ಕುರಿತು ಸಾಧಿಸುವ ಅಥವಾ ನಿರಾಕರಿಸುವ ಕಾರ್ಯವು ಕೇವಲ ತಮ್ಮೊಬ್ಬರದ್ದೇ ಆಗಿದೆ ಎಂಬುದನ್ನು ಅವರು ಅರ್ಥೈಸಿಕೊಂಡರು. ಈ ನಿರ್ಧಾರದೊಂದಿಗೆ ಅವರು ಮನೆಗೆ ಹಿಂದಿರುಗಿದರು.

ಮೊದಲು, ದೇವಸ್ಥಾನದಲ್ಲಿ ಶಿವಲಿಂಗಕ್ಕೆ ನಿತ್ಯದರುದ್ರಾಭಿಷೇಕ (ಶಿವನಿಗೆ ಸಲ್ಲಿಸುವ ಒಂದು ಅಭಿಷೇಕ ಸೇವೆ) ಆರಂಭವಾಯಿತು. ದೇವಳದ ಸುತ್ತಲಿನ ಆವರಣದಲ್ಲಿ ನಿತ್ಯಪೂಜಾದಿಗಳನ್ನು ನೆರವೇರಿಸುವವರಿಗೆ ಶಾಶ್ವತ ವಾಸ್ತವ್ಯವನ್ನು ಕಲ್ಪಿಸುವ ಸಿದ್ಧತೆಗಳು ಆಗತೊಡಗಿದವು. ನಿಧಿ ಸಂಗ್ರಹಣೆ, ದೇಣಿಗೆಗಳ ಸಂಗ್ರಹಣೆ ಮತ್ತು ಆಜೀವ ಸದಸ್ಯತ್ವವನ್ನು ನೀಡುವ ಯೋಜನೆಗಳು ಆರಂಭಗೊಂಡವು. 2004 ರಲ್ಲಿ 'ಖೋಪ್ರಾಂಗ್' ಎಂಬ ಪತ್ರಿಕೆಯಲ್ಲಿ "ಡೋಲೇಶ್ವರ ಮಹಾದೇವ, ಕೇದಾರನಾಥನ ನೆತ್ತಿ" ಎಂಬ ಶೀರ್ಷಿಕೆಯಡಿ ಅಂಕಣವೊಂದು ಪ್ರಕಟವಾಗಿತ್ತು. ಆ ಅಂಕಣದ ನೂರಾರು ಪ್ರತಿಗಳನ್ನು ಹಂಚಲಾಯಿತು. ವ್ಯಾಪಕ ಪ್ರಚಾರದ ನಂತರ, 2008 ರಲ್ಲಿ ಈ ಸಮಿತಿಯನ್ನು 'ವಿಮಲೇಶ್ವರ ಸಮಿತಿ' ಎಂದು ಮರುನಾಮಕರಣ ಮಾಡಲಾಯಿತು ಮತ್ತು ಸಮಿತಿಯ ಹೆಸರಿನಲ್ಲಿ ವಿಮಲೇಶ್ವರನ ಹೆಸರನ್ನು ಸೇರಿಸುವ ಮೂಲಕ ಡೋಲೇಶ್ವರ ಮಹಾದೇವ ದೇವಾಲಯವು ತನ್ನ ವ್ಯಾಪ್ತಿಯಲ್ಲೇ ಉಳಿದುಕೊಂಡಿತು.

ಡೋಲೇಶ್ವರ ಮಹಾದೇವನು ಕೇದಾರನಾಥನ ನೆತ್ತಿ ಎಂಬ ವಿಚಾರವನ್ನು ಪ್ರಚುರಪಡಿಸಲು ಅನೇಕ ಪ್ರಯತ್ನಗಳು ತೀವ್ರಗೊಂಡವು. ದೇವಾಲಯವನ್ನು ತೀರ್ಥಕ್ಷೇತ್ರವನ್ನಾಗಿ ಬೆಳೆಸುವ ನಿಟ್ಟಿನಲ್ಲಿ ಮತ್ತು ಶಿವಲಿಂಗದ ದರ್ಶನ ಪಡೆಯಲು ಹಲವಾರು ಧರ್ಮಗುರುಗಳನ್ನು ಭಾರತದಿಂದ ಆಹ್ವಾನಿಸಲಾಯಿತು. ನಿರಂತರ ರುದ್ರಾಭಿಷೇಕದ ಕಾರ್ಯಕ್ರಮವು ಪ್ರವಾಸಿಗಳ ಸಂಖ್ಯೆಯಲ್ಲಿ ಹೆಚ್ಚಳವನ್ನುಂಟು ಮಾಡಿತು ಮತ್ತು ಸಾರ್ವಜನಿಕ ಪೂಜೆಗಳೂ ಹೆಚ್ಚಾದವು. ದೇವಾಲಯದಲ್ಲಿ ಸ್ವಾಮಿಗೆ ಮಾಡುವ ಪೂಜೆ-ಪುನಸ್ಕಾರಗಳ ಕುರಿತಾದ ಪ್ರಥಮ ಧಾರ್ಮಿಕ ಕಾರ್ಯಕ್ರಮವು ಶಾರದಾ ಉಪಾಧ್ಯಾಯರ ನಿರೂಪಣೆಯಲ್ಲಿ ನೇಪಾಳ ಟೆಲಿವಿಷನ್‌ನಲ್ಲಿ ಪ್ರಸಾರವಾಯಿತು. ಇದರ ಬೆನ್ನಿಗೇ, ದೇವಾಲಯದ ಸ್ವಾಮಿಯ ಕಾರ್ಯಗಳನ್ನು ಪ್ರಚುರಪಡಿಸುವ ಹಲವಾರು ಕಾರ್ಯಕ್ರಮಗಳು ಇತರೆ ಟಿವಿ ಚಾನೆಲ್‌ಗಳಲ್ಲಿ ಮತ್ತು ಎಫ್‌ಎಂ ರೇಡಿಯೋ ಕೇಂದ್ರಗಳಲ್ಲಿ ಪ್ರಸಾರವಾದವು.

2008ರ ವೈಶಾಖ ಮಾಸದಲ್ಲಿ, ಭಾರತದ ಕಾಶಿಯ ಜಂಗಂಬರಿ ಮಠದಲ್ಲಿ ಒಂದು ಧಾರ್ಮಿಕ ಸಮ್ಮೇಳನವೊಂದರಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು. ಸಹೋದರಿ ಸಾವಿತ್ರಿ ಜಂಗಮ್ ಥಾಪ, ಭರತ್ ಜಂಗಮರ ಪತ್ನಿ ಶ್ರೀಮತಿ ಇಂದಿರಾಜಂಗಮರವರೊಂದಿಗೆ ಮತ್ತು ಭರತ್ ಜಂಗಮ್ ಎಲ್ಲರೂ ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಮೂರು ದಿನಗಳ ಸಮ್ಮೇಳನದಲ್ಲಿ ಮೊದಲ ದಿನವೇ ಭರತ್‌ರಿಗೆ ಮಾತನಾಡುವ ಅವಕಾಶ ಸಿಕ್ಕಿತು. ಅವರಿಗೆ ಇಪ್ಪತ್ತು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದರು, ಆದರೆ ಅವರು ಹದಿನೈದು ನಿಮಿಷಗಳ ಕಾಲ ನಿರ್ದಿಷ್ಟವಾಗಿ ಡೋಲೇಶ್ವರ ಮಹಾದೇವನ ಕುರಿತೇ ಮಾತನಾಡಿದರು. ಡೋಲೇಶ್ವರನು ಕೇದಾರನಾಥನ ನೆತ್ತಿಯಾಗಿದ್ದಾನೆ ಎಂಬುದರ ಕುರಿತು ಅವರು ಪುರಾತನ ಗ್ರಂಥಗಳು, ಪುರಾಣಗಳು, ಹಿಂದಿನ ಇತಿಹಾಸಗಳಲ್ಲಿದ್ದ ಅಂಶಗಳು ಹಾಗೂ ಎರಡೂ ಲಿಂಗಗಳ ಕುರಿತಾದ ವಿವರಣೆಗಳನ್ನು ಉಲ್ಲೇಖಿಸಿ ಸಾಕ್ಷಿಸಹಿತ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಭಾರತದ ಉತ್ತರಾಖಂಡದಲ್ಲಿರುವ ಕೇದಾರಪೀಠದ ಪೀಠಾಧಿಪತಿಗಳಾದ ಶ್ರೀಶ್ರೀಶ್ರೀ 1008 ಜಗದ್ಗುರು ಭೀಮಾಶಂಕರ ಲಿಂಗಶಿವಾಚಾರ್ಯ ಮಹಾಸ್ವಾಮಿಗಳವರೂ ಕೂಡಾ ಉಪಸ್ಥಿತರಿದ್ದರು. ಭರತ್‌ರ ಸಲಹೆಗಳು ಅವರಿಗೂ ಕೂಡಾ ಹೊಸದಾಗಿ ಕಂಡಿರಬೇಕು. ಹಾಗಾಗಿ ಅವರು ಭರತ್‌ರನ್ನು ಸಂಜೆ ತಮ್ಮನ್ನು ಭೇಟಿಯಾಗಲು ಆಹ್ವಾನಿಸಿದರು ಮತ್ತು ಡೋಲೇಶ್ವರ ಮಹಾದೇವನ ಕುರಿತು ಹೆಚ್ಚಿನ ವಿವರವಾದ ಮಾಹಿತಿಗಳನ್ನು ವಿವರಿಸುವಂತೆ ಕೋರಿದರು. ಮುಂದಿನ ವರ್ಷದಲ್ಲಿ ನೇಪಾಳಕ್ಕೆ ಭೇಟಿಯನ್ನು ನಿಗದಿಪಡಿಸಿಕೊಂಡು, ಡೋಲೇಶ್ವರ ಮಹಾದೇವನನ್ನು ಸಂದರ್ಶಿಸಬೇಕೆಂದು ನಿರ್ಧರಿಸಿದರು.

2009ರ ಶ್ರಾವಣಮಾಸದಲ್ಲಿ, ಜಗದ್ಗುರು ಭೀಮಾಶಂಕರ ಲಿಂಗ ಮಹಾಸ್ವಾಮಿಗಳವರು ಕಠ್ಮಂಡುವಿಗೆ ಬಂದರು. ಪಶುಪತಿ ಅರಣ್ಯ ಧರ್ಮಶಾಲೆಯಲ್ಲಿ ಶ್ರಾವಣ ಮಾಸದ ಪೂಜೆಗಳು ಆರಂಭವಾದವು. ಒಮ್ಮೆ ಪೂಜೆ ಆರಂಭಗೊಂಡ ಬಳಿಕ, ಆ ಪ್ರದೇಶವನ್ನು ಬಿಟ್ಟು ಹೋಗಬಾರದೆಂಬ ನಿಯಮದ ಕಾರಣದಿಂದಾಗಿ, ಅವರಿಗೆ ಡೋಲೇಶ್ವರ ಮಹಾದೇವ ಲಿಂಗದ ದರ್ಶನ ಪಡೆಯಲು ಸಾಧ್ಯವಾಗಲೇ ಇಲ್ಲ. ಆದಾಗ್ಯೂ ಪ್ರತಿದಿನ ಡೋಲೇಶ್ವರ ಮಹಾದೇವ ಲಿಂಗದ ಕುರಿತಾಗಿ ಚರ್ಚೆಗಳ ನಡೆಯುತ್ತಿದ್ದವು. ಹೀಗೆ ಮಹಾಸ್ವಾಮಿಗಳು ಡೋಲೇಶ್ವರನನ್ನು ದರ್ಶಿಸಲು ಸಾಧ್ಯವಾಗದಿದ್ದರೂ ಕೂಡಾ, ಡೋಲೇಶ್ವರನು ಕೇದಾರನಾಥನ ನೆತ್ತಿಯ ಪ್ರದೇಶದಲ್ಲಿ ಇರುವುದು ಎಂದು ತೀರ್ಮಾನಿಸಲಾಯಿತು.

ಶ್ರಾವಣ ಪೂಜೆಯನ್ನು ಭಾದ್ರಪದ ಮಾಸದ 5ನೇ ತಾರೀಖಿನವರೆಗೂ ನಡೆಸುವುದು ಮತ್ತು ಭಾದ್ರಪದ 7ನೇ ದಿನಾಂಕದಂದು ಬೆಂಗಳೂರಿಗೆ ಮರಳುವುದು ಎಂದು ನಿರ್ಧರಿಸಿ, ಟಿಕೆಟ್‌ಗಳನ್ನು ಕಾಯ್ದಿರಿಸಿದಾಗ, ಕೇವಲ ಭಾದ್ರಪದ 6ನೇ ದಿನಾಂಕದ ಒಂದು ದಿನ ಮಾತ್ರ ಉಳಿದಿತ್ತು. ಭಾದ್ರಪದ 6 ರಂದು ನಿರ್ಣಯಿಸಲಾದಂತೆ, ಸಾಗರ ಮಾತಾ ಟೆಲಿವಿಷನ್ ಮತ್ತು ಅಭಿಯಾನ್ ಟೆಲಿವಿಷನ್ ಚಾನೆಲ್‌ಗಳಲ್ಲಿ ಜಗದ್ಗುರುಗಳ ಸಂದೇಶವನ್ನು ನೀಡುವ ಕಾರ್ಯಕ್ರಮವು ಶ್ರಾವಣದ 25ನೇ ತಾರೀಖಿನಂದು ಪ್ರಸಾರವಾಗಬೇಕಿತ್ತು. ಈ ಕುರಿತ ಸುದ್ದಿಯು ಎಲ್ಲಾ ಪತ್ರಕರ್ತರು ಮತ್ತು ಇತರೆ ಮಾಧ್ಯಮ ವಲಯಗಳಲ್ಲಿ ಹರಡಿತು.

ಜಗದ್ಗುರು ಭೀಮಾಶಂಕರ ಲಿಂಗ ಮಹಾಸ್ವಾಮಿಗಳು ಡೋಲೇಶ್ವರ ಮಹಾದೇವನಿಂದ ಸ್ವಲ್ಪಮಟ್ಟಿಗೆ ಪ್ರಭಾವಿಸಲ್ಪಟ್ಟರು. ಆದರೆ, ಅವರು ವರ್ಷಾನುಗಟ್ಟಲೆ ಪೂಜಿಸಿದ್ದ, ಅನುಭವಿಸಿದ್ದ ಮತ್ತು ನೋಡಿದ್ದ ಅನುಭವದ ಆಧಾರದ ಮೇಲೆ ಭರತ್‌ರ ಉಪಸ್ಥಿತಿಯಲ್ಲಿ ಡೋಲೇಶ್ವರ ಮಹಾದೇವನನ್ನು ವಿವರಿಸಿದರು ಮತ್ತು "ಡೋಲೇಶ್ವರ ಮಹಾದೇವನು ಕೇದಾರನಾಥನೇ ಹೊರತು ಪಶುಪತಿನಾಥನಲ್ಲ" ಎಂಬ ತೀರ್ಮಾನವನ್ನು ಹೇಳಿಬಿಟ್ಟರು. ವಿವಿಧ ಮೂಲಗಳಿಂದ ಪರಿಶೀಲಿಸಬಹುದಾದ ಪುರಾವೆಗಳನ್ನು ಉಲ್ಲೇಖಿಸಿ ಅವರು ಈ ಮಾತನ್ನು ದೃಢವಾಗಿ ಹೇಳಿದರು. ವಿವಿಧ ಮೂಲಗಳಿಂದ ಬೇಕಾದಷ್ಟು ಸಾಕ್ಷಿಗಳನ್ನು ಒದಗಿಸುವುದಾಗಿ ಅವರು ಭರತ್‌ರಿಗೆ ಭರವಸೆ ನೀಡಿದರು. ಇದರಿಂದ ಪತ್ರಕರ್ತರಿಗೆ ಮತ್ತು ಕೇಳುಗರಿಗೆ ಹೊಸ ವಿಷಯಗಳು ದೊರೆಯಲಿವೆ ಎಂದು ಭರತ್‌ರಿಗೆ ಅನ್ನಿಸಿತು. ತಮ್ಮ ವರ್ಷಗಟ್ಟಲೆಯ ಪ್ರಯತ್ನಗಳ ಫಲವು ಯಶಸ್ವಿಯಾಗುವುದನ್ನು ಕಂಡು ಅವರಿಗೆ ಅತ್ಯಂತ ಸಂತೋಷವಾಯಿತು.

ರೇಡಿಯೋ, ದೂರದರ್ಶನ ಮತ್ತು ಮುದ್ರಣ ಮಾಧ್ಯಮಗಳು ಈ ಸುದ್ದಿಯನ್ನು ಬಿತ್ತರಿಸಲು ಆರಂಭಿಸಿದವು. ಭಾರತೀಯ ಪತ್ರಿಕೆಗಳೂ ಕೂಡಾ ಈ ಮಾಹಿತಿಯನ್ನು ಪ್ರಸಾರಿಸಿದವು. ಶ್ರಾವಣ ಮಾಸದ 28 ಮತ್ತು 29 ರಂದು ಇಮೇಜ್ ಚಾನಲ್‌ನಲ್ಲಿ "ನ್ಯೂಸ್ ವಿತಿನ್ ದ ನ್ಯೂಸ್" ಎಂಬ ಶೀರ್ಷಿಕೆಯ ಕಾರ್ಯಕ್ರಮವು ಪ್ರಸಾರವಾದ ನಂತರ, ಸಾವಿರಾರು ಜನರು ಡೋಲೇಶ್ವರ ಮಹಾದೇವ ದೇವಸ್ಥಾನದ ಆವರಣದಲ್ಲಿ ಸೇರಿದರು.

ಇದೇ ಸಮಯದಲ್ಲಿ, ಅನಂತ ಪ್ರಸಾದ್ ಧೌಭದೇಲ್‌ರವರ ಸಹಕಾರದೊಂದಿಗೆ ಭಕ್ತಾಪುರ ನಗರಸಭೆಯಲ್ಲಿ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಯಿತು ಮತ್ತು ಭರತ್ ಜಂಗಮ್ ಅವರ ಸಹಕಾರದೊಂದಿಗೆ ಇನ್ನೊಂದು ಸ್ವಾಗತ ಸಮಿತಿಯನ್ನು ಸ್ಥಳೀಯ ದೇವಾಲಯದಲ್ಲಿ ರಚಿಸಲಾಯಿತು. ದೇವಾಲಯದ ಆವರಣವನ್ನು ಶುಚಿಗೊಳಿಸುವ ಮತ್ತು ವಿವಿಧ ಹೂವುಗಳಿಂದ ದೇವಾಲಯವನ್ನು ಅಲಂಕರಿಸುವ ಮತ್ತಿತರ ಕೆಲಸಗಳು ಆರಂಭವಾದವು. ಭರತ್ ಮತ್ತವರ ತಂಡಕ್ಕೆ ಬಹಳ ಕಡಿಮೆ ಕಾಲಾವಕಾಶವಿದ್ದರೂ ಕೂಡಾ, ಎಲ್ಲಾ ವಲಯಗಳಿಂದಲೂ ಅವರಿಗೆ ಸಹಕಾರ ದೊರೆಯಿತು. ನಿಗದಿತ ದಿನದಂದು ಅಂದರೆ ಭಾದ್ರಪದ 6, 2066 (ಆಗಸ್ಟ್ 9, 2009) ರಂದು ನೆರೆದಿದ್ದ ಇಪ್ಪತ್ತು ಸಾವಿರ ಜನರ ಸಮ್ಮುಖದಲ್ಲಿ ದೇವಾಲಯದ ಔಪಚಾರಿಕ ಅನಾವರಣ ಸಮಾರಂಭವೊಂದನ್ನು ನಡೆಸಲಾಯಿತು ಮತ್ತು "ಡೋಲೇಶ್ವರ ಮಹಾದೇವನು ಭಾರತದ ಉತ್ತರಾಖಂಡದಲ್ಲಿರುವ ಕೇದಾರನಾಥನ ನೆತ್ತಿಯ ಪ್ರದೇಶದಲ್ಲಿದ್ದಾನೆ" ಎಂದು ಜಗದ್ಗುರು ಭೀಮಾಶಂಕರ ಲಿಂಗ ಮಹಾಸ್ವಾಮಿಗಳವರು ಸಾರ್ವಜನಿಕವಾಗಿ ಘೋಷಿಸಿದರು.

ಆ ದಿನಗಳಲ್ಲಿ, ದೇವಾಲಯದ ಪ್ರದೇಶದಲ್ಲಿ ಸಾಕಷ್ಟು ಜನರು ನೆರೆದಿದ್ದರು ಮತ್ತು ದೇವಾಲಯದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಅಗತ್ಯ ಸೇವೆಯನ್ನು ಸಲ್ಲಿಸಲು ಸಿದ್ಧರಿದ್ದರು. ಉತ್ಸವ ಮೀಡಿಯಾದ ಖೇಮ್ ಗುರುಂಗ್ ಮತ್ತು ಓಂಕಾರ ಧ್ವನಿಕ ಮುಕುಂದ ಶರ್ಮಾರವರುಗಳು ಟೆಲಿವಿಷನ್ ಕಾರ್ಯಕ್ರಮಗಳಿಗೆ ಬೆಂಬಲ ನೀಡಿದರು. ಎಲ್ಲಾ ವಲಯಗಳಿಂದಲೂ ವ್ಯಾಪಕವಾದ ಬೆಂಬಲ ದೊರೆಯಿತು. ಆರಂಭದಲ್ಲಿ ದೇವಸ್ಥಾನದ ಆವರಣವು ಕೇವಲ 12 ಅನ್ನಾಗಳಷ್ಟು ಪ್ರದೇಶವನ್ನು ಮಾತ್ರ ಹೊಂದಿತ್ತು, ಆದರೆ ಈಗ ದೇವಸ್ಥಾನದ ಅಂದಾಜು ವೆಚ್ಚದಂತೆ ಪ್ರಗತಿಯಲ್ಲಿರುವ ನಿರ್ಮಾಣ ಕಾರ್ಯಗಳ ವ್ಯಾಪ್ತಿಯು 16

ರೋಪಾಣಿ ಪ್ರದೇಶದಲ್ಲಿ ನಡೆಯುತ್ತಿದೆ. ಇನ್ನೂ ಹೆಚ್ಚಿನ ಪ್ರದೇಶವು ಸೇರ್ಪಡೆಯಾಗುವ ನಿರೀಕ್ಷೆಗಳನ್ನು ತಳ್ಳಿಹಾಕುವಂತಿಲ್ಲ. ಹೀಗೆ, ಒಬ್ಬರು ತಮ್ಮ ಜೀವನದಲ್ಲಿ ದೈವಿಕ ಶಕ್ತಿಯ ಇರುವಿಕೆಯನ್ನು ನೋಡಬಹುದು, ಅನುಭವಿಸಬಹುದು ಮತ್ತು ಅರ್ಥಮಾಡಿಕೊಳ್ಳಬಹುದು.

ಡೋಲೇಶ್ವರ ಮಹಾದೇವ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿ ದೊರೆತಿರುವ ಕ್ರಿ.ಪೂ. 1764ಕ್ಕೆ ಸೇರಿದೆಯೆನ್ನಲಾದ ಶಾಸನವೊಂದು ಆ ಸಮಯದಲ್ಲಿನ ದೇವಾಲಯದ ಇತಿಹಾಸವನ್ನು ಹೇಳುತ್ತದೆ. ಭಕ್ತಾಪುರದ ಅಂದಿನ ದೊರೆಯಾದ ಭೂಪತೀಂದ್ರ ಮಲ್ಲನಿಂದ ಪ್ರತಿದಿನವೂ ದೇವಾಲಯದಲ್ಲಿ ಸಲ್ಲುತ್ತಿದ್ದ ಪೂಜೆ ಮತ್ತು ಸೇವೆಗಳ ಬಗೆಗೆ ಅದು ಉಲ್ಲೇಖಿಸುತ್ತದೆ. ಅದರ ಪ್ರಕಾರ ಸುಮಾರು 300 ವರ್ಷಗಳ ನಂತರ ನಡೆಯುತ್ತಿರುವ ಡೋಲೇಶ್ವರ ಮಹಾದೇವನ ದೇವಾಲಯದ ಪುನರುತ್ಥಾನದ ಪ್ರತ್ಯಕ್ಷ ಸಾಕ್ಷಿಯಾಗಿ ಭರತ್ ಅವರು ಮತ್ತೊಮ್ಮೆ ದೇವಾಲಯವು ವಿಶ್ವಪ್ರಸಿದ್ಧಿಯನ್ನು ಹೊಂದುತ್ತಿರುವುದನ್ನು ಅನುಭವಿಸಿದ್ದಾರೆ. ಯಾವುದೇ ಒಂದು ಸಣ್ಣ ಅಥವಾ ದೊಡ್ಡ ಅಗತ್ಯವಿದ್ದರೂ, ಅವುಗಳು ಭಗವಂತನ ಬಯಕೆಯೋ ಎಂಬಂತೆ ಪೂರ್ಣಗೊಳ್ಳುತ್ತಿದ್ದವು.

### 3) ಭಕ್ತಾಪುರದ ವಾಗೇಶ್ವರಿ ಸರಸ್ವತಿ ದೇವಸ್ಥಾನದ ಅಭಿವೃದ್ಧಿ

ಭಕ್ತಾಪುರ ಜಿಲ್ಲೆಯ ಈಶಾನ್ಯ ಭಾಗದಲ್ಲಿ ಇರುವ ರತ್ನಗಿರಿ ಬೆಟ್ಟಗಳನ್ನು ವಾಗೇಶ್ವರಿ ಎಂದು ಕರೆಯಲಾಗುತ್ತದೆ. ವಾಗೇಶ್ವರಿಯನ್ನು ಸರಸ್ವತಿ ಎಂದು ಗುರುತಿಸಲಾಗುತ್ತದೆ ಮತ್ತು ವಾಗೇಶ್ವರಿ ಬೆಟ್ಟದ ಮಧ್ಯಭಾಗದಲ್ಲಿ ಸರಸ್ವತಿ ದೇವಾಲಯವಿದೆ. ಭಕ್ತಾಪುರದ ನಿವಾಸಿಗಳು ಈ ಪ್ರದೇಶವನ್ನು "ಲಾಪಾಸಾ ಸಸ್ವಾದ್ಯೋ" ಎಂದು ಕರೆಯುತ್ತಾರೆ ಮತ್ತು ಕೆಲವರು ಮಹಾಮಂಜುಶ್ರೀ ಎಂದು ಕರೆಯುತ್ತಾರೆ. ಬೌದ್ಧ ಸಂತರ ಹೊರತಾಗಿ ಉಳಿದ ಸಂತರೆಲ್ಲ ಈ ಪ್ರದೇಶವನ್ನು ಸರಸ್ವತಿ ದೇವಾಲಯ ಎಂದೇ ಗುರುತಿಸುತ್ತಾರೆ ಮತ್ತು ಬೌದ್ಧ ಸಂತರು ಇದನ್ನು ಮಹಾಮಂಜುಶ್ರೀ ಎಂದು ಪೂಜಿಸುತ್ತಾರೆ. ಪ್ರತಿವರ್ಷವೂ ಪುಷ್ಯ ಹುಣ್ಣಿಮೆಯಿಂದ ಮೊದಲುಗೊಂಡು ಮಾಘ ಹುಣ್ಣಿಮೆಯವರೆಗೆ ಒಂದು ತಿಂಗಳ ಪರ್ಯಂತ ದೊಡ್ಡಜಾತ್ರೆಯನ್ನು ಈ ದೇವಾಲಯದಲ್ಲಿ ನಡೆಸಲಾಗುತ್ತದೆ. ಇದರೊಂದಿಗೆ ಹೆಚ್ಚುವರಿಯಾಗಿ ಶ್ರೀಪಂಚಮಿಯಂದು ವಿಶೇಷ ಉತ್ಸವವನ್ನು ನಡೆಸಲಾಗುತ್ತದೆ.

ಇಲ್ಲಿನ ಬಹಳಷ್ಟು ಧಾರ್ಮಿಕ ಪ್ರದೇಶಗಳನ್ನು ಶತಶತಮಾನಗಳಿಂದಲೂ ಎಲ್ಲಾ ಜಾತಿಯ ಹಿಂದೂಗಳೂ ಒಪ್ಪಿಕೊಂಡು, ಆರಾಧಿಸಿಕೊಂಡು ಬಂದಿದ್ದಾರೆ. ಲಿಚ್ಛವಿ ಕಾಲದಲ್ಲಿ ಇಲ್ಲಿ ಉನ್ನತ ಬೌದ್ಧಧರ್ಮ ಮತ್ತು ಉನ್ನತ ವೈಷ್ಣವ ಧರ್ಮಗಳ ಅದ್ಭುತ ಸಾಮರಸ್ಯವನ್ನು ಸ್ಥಾಪಿಸಲಾಯಿತು. ಆದ್ದರಿಂದ ನೇಪಾಳದ ಸಾಂಸ್ಕೃತಿಕ ಭೂಮಿಕೆಯು ಬೌದ್ಧ ಮತ್ತು ವೈಷ್ಣವ ತತ್ವಜ್ಞಾನಿಗಳ ಔನ್ನತ್ಯಗಳ ಅಂತ್ಯವನ್ನು ಪ್ರತಿನಿಧಿಸುತ್ತದೆ. ಈ ನಿಟ್ಟಿನಲ್ಲಿ, ಲಾಪಾಸಾ ಸಸ್ವದ್ಯವನ್ನು ಸ್ಥಾಪಿಸಲಾಯಿತು. ಅಲ್ಲಿನ ಬೃಹತ್ ಕಲ್ಲುಗಳ ಗೋಡೆಗಳ ಸಂದಿನಿಂದ ಗಾಳಿಯು ಬೀಸಿದಾಗ ಬ್ರಹ್ಮಸ್ಥಾನದಿಂದ ಹೊರಹೊಮ್ಮುವ ಓಂಕಾರದ ಶಬ್ದವನ್ನು ವೈಷ್ಣವರು ಸರಸ್ವತಿ ಎಂದು ಗುರುತಿಸುತ್ತಾರೆ ಹಾಗೂ ಬೌದ್ಧರು ಮಂಜುಶ್ರೀಯಿಂದ ಲ್ಹಾಸಾಕ್ಕೆ ತೆರಳುವ ದಾರಿ ಎಂದು ಗುರುತಿಸುತ್ತಾರೆ. ಹಾಗಾಗಿ ಇದು ಬೌದ್ಧ ಮತ್ತು ವೈಷ್ಣವ ಎರಡೂ ಸಂಪ್ರದಾಯದವರಿಗೂ ಪವಿತ್ರ ಸ್ಥಳವಾಗಿದೆ. 1947ರಲ್ಲಿ ಓಡಾರ್‌ನ ಮಧ್ಯದಲ್ಲಿ ಒಂದು ದೇವಾಲಯವನ್ನು ನಿರ್ಮಾಣ ಮಾಡಲಾಯಿತು ಮತ್ತು ನಿರ್ಮಾಣದ ಸಮಯದಲ್ಲಿ, ಈ ದೇವಾಲಯದ ಪೂಜೆಯ ಜವಾಬ್ದಾರಿಯನ್ನು ಶಾಕ್ಯ ಸಮುದಾಯಕ್ಕೆ ವಹಿಸಲಾಗಿತ್ತು. ಈ ದೇವಸ್ಥಾನವನ್ನು ಸರಸ್ವತಿ ಸ್ಥಾನವೆಂದು ಹೆಸರಿಸಲಾಯಿತು ಮತ್ತು ಅದರ ಮೇಲಿನ ಭಾಗವು ಒಂದು ದೊಡ್ಡ ಬಟ್ಟಲಿನಂತಿದ್ದು, ಅದನ್ನು ಥಕಾಲ ಮಠವೆಂದು ಕರೆಯಲಾಯಿತು. ಈ ಪ್ರದೇಶವನ್ನು ಸರಸ್ವತಿ ಸ್ಥಾನ, ಲಾಪಾಸ ಸಸ್ವಾದ್ಯ, ಥಕಾಲ ಮಠ ಮತ್ತು ವಾಗೇಶ್ವರಿ ಎಂಬ ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತಿದೆ.

2003ರಲ್ಲಿ ಈ ಪ್ರದೇಶವನ್ನು ಅಧ್ಯಯನ ಮಾಡಲು ತೊಡಗಿದಾಗ, ಓಡರ್‌ನಲ್ಲಿ ಬರುವ ಧ್ವನಿಯನ್ನು ನಿಯಂತ್ರಿಸಲು ಒಂದು ಪ್ರತಿಮೆಯನ್ನು ಇರಿಸಲಾಯಿತು ಎಂಬುದು ಕಂಡುಬಂದಿತು. 1957ರಲ್ಲಿ ಸರಸ್ವತಿ ಸ್ಥಾನಕ್ಕೆ ಭೇಟಿ ನೀಡುವಾಗ, ಓಡರ್ ಕಡೆಯಿಂದ ಬೀಸುವ ಗಾಳಿಯಲ್ಲಿ ಓಂಕಾರದ ಧ್ವನಿ ಕೇಳಿಬರುತ್ತಿತ್ತು. ಆದರೆ ಈ ಪ್ರತಿಮೆಯನ್ನು ಸ್ಥಾಪಿಸಿದ ನಂತರ, ಆ ಶಬ್ದವು ಹೆಚ್ಚು ಕೇಳಿಬರುತ್ತಿಲ್ಲ. ಇದರ ಕುರಿತಾಗಿ ನಡೆದ ಸಂಶೋಧನೆಗಳಿಂದ ತಿಳಿದು ಬಂದಿರುವುದೇನೆಂದರೆ, ಕಠ್ಮಂಡುವಿನ ನಿವಾಸಿಯಾದ ಶ್ರೀ ಮುಕ್ತಿಮನಂಧರ್ ಎಂಬ ಹೆಸರಿನ ಶಿಲ್ಪಿಯು 1967ರಲ್ಲಿ ಸ್ಥಾಪಿಸಲಾದ ಮಂಜುಶ್ರೀಯ ಪ್ರತಿಮೆಯನ್ನು ನಿರ್ಮಾಣ ಮಾಡಿದ್ದರು. ಸ್ಥಳೀಯರು ಈ ಮಂಜುಶ್ರೀ ಪ್ರತಿಮೆಯನ್ನೇ ಸರಸ್ವತಿ ಪ್ರತಿಮೆ ಎಂದು ತಪ್ಪಾಗಿ ಭಾವಿಸಿದ್ದರು. ತಪ್ಪಾಗಿ ಸ್ಥಾಪಿಸಲಾಗಿದ್ದ ಈ ಮಂಜುಶ್ರೀ ಪ್ರತಿಮೆಯನ್ನು ತೆರವುಗೊಳಿಸಿ, ಸರಸ್ವತಿ ಸ್ಥಾನದಲ್ಲಿ ಸರಸ್ವತಿಯ ಪ್ರತಿಮೆಯನ್ನು

ಸ್ಥಾಪಿಸಬೇಕೆಂಬ ಪ್ರಸ್ತಾವನೆಯನ್ನು ಸಲ್ಲಿಸಿದಾಗ, ಕೆಲವರು ರೊಚ್ಚಿಗೆದ್ದರು. ಶಾಕ್ಯ ಮತ್ತು ವಜ್ರಾಚಾರ್ಯ ಸಮುದಾಯಗಳ ಗುಂಪೊಂದು ಭರತ್ ಜಂಗಮ್‌ರವರು ಜನರ ಭಾವನೆಗಳಿಗೆ ವಿರುದ್ಧವಾಗಿ ಮಂಜುಶ್ರೀಯ ಪ್ರತಿಮೆಯನ್ನು ತೆಗೆದೆಸೆಯಲು ಮತ್ತು ದೇವಾಲಯವನ್ನು ನಾಶಗೊಳಿಸಲು ಯತ್ನಿಸುತ್ತಿದ್ದು, ಇವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿ ಭಕ್ತಾಪುರದ ಜಿಲ್ಲಾಡಳಿತ ಕಛೇರಿಗೆ ಲಿಖಿತ ದೂರನ್ನು ನೀಡಿದರು. ಆದರೆ ನಿಜವಾಗಿಯೂ ಅವರು ಹೇಳಿದ್ದೇನೆಂದರೆ, ಓಡರ್ ಪ್ರದೇಶದಲ್ಲಿರುವ ದೇವಾಲಯದ ಒಳಗಿನ ಗರ್ಭಗುಡಿಯ ಪ್ರದೇಶವನ್ನು 1967ಕ್ಕೆ ಮುಂಚೆ ಹೇಗಿತ್ತೋ ಹಾಗೆಯೇ ನಿರ್ವಹಿಸಬೇಕು, ದೇವಾಲಯದ ಹೊರಗಿನ ಪ್ರಾಕಾರದಲ್ಲಿ ಎಡಗಡೆ ಮತ್ತು ಬಲಗಡೆ ಎರಡು ಸಣ್ಣ ಸಣ್ಣ ದೇವಾಲಯಗಳನ್ನು ನಿರ್ಮಿಸಿ ಅಲ್ಲಿ ಮಂಜುಶ್ರೀ ಮತ್ತು ಸರಸ್ವತಿ ವಿಗ್ರಹಗಳನ್ನು ಸ್ಥಾಪಿಸಬೇಕು. ಹೀಗೆ ಎರಡೂ ಸಂಪ್ರದಾಯಗಳ ಪವಿತ್ರ ಕ್ಷೇತ್ರವಾದ ಓಡರ್ ಅನ್ನು ಹಿಂದೆ ಇದ್ದಂತೆಯೇ ಉಳಿಸಿಕೊಳ್ಳಬೇಕು ಮತ್ತು ಎರಡೂ ಧಾರ್ಮಿಕ ಸಂಪ್ರದಾಯಗಳನ್ನು ರಕ್ಷಿಸಬೇಕು ಎಂದು ಮಾತ್ರ ಹೇಳಿದ್ದರು. ಆದಾಗ್ಯೂ, ಈ ವಿವಾದವು ಇವೆರಡು ಸಮುದಾಯಗಳ ವ್ಯಕ್ತಿಗಳ ನಡುವೆ ದೈಹಿಕವಾಗಿ ಹಲ್ಲೆಗಳನ್ನು ಮಾಡುವಂತಹ ಪರಿಸ್ಥಿತಿಯನ್ನು ಉಂಟುಮಾಡುವ ಹಂತಕ್ಕೆ ಬೆಳೆಯಿತು. ಈ ಪರಿಸ್ಥಿತಿಯು ಆರು ವರ್ಷಗಳ ಕಾಲ ಮುಂದುವರಿಯಿತು.

ಮಂಜುಶ್ರೀ ಪ್ರತಿಮೆಯು 18 ಇಂಚುಗಳಷ್ಟು ಎತ್ತರವಿತ್ತು. ಭರತ್‌ರ ಮನಸ್ಸಿನಲ್ಲಿ ಕಡೇ ಪಕ್ಷ 54 ಇಂಚುಗಳಷ್ಟು ಎತ್ತರದ ಸರಸ್ವತಿ ಮೂರ್ತಿಯನ್ನು ನಿರ್ಮಿಸಬೇಕು ಮತ್ತು ಅದನ್ನು ಅದೇ ಸ್ಥಳದಲ್ಲಿ ಪ್ರತಿಷ್ಠಾಪಿಸಬೇಕು ಎಂದು ಯೋಚಿಸಿದ್ದರು. ಈ ತೀರ್ಮಾನವನ್ನು ಅವರು ತಮ್ಮೊಳಗೆ ಮಾಡಿಕೊಂಡಿದ್ದರು. ಆದರೆ ಯಾವಾಗ ಮತ್ತು ಹೇಗೆ ಇದನ್ನು ಮಾಡುವುದು? ಒಂದು ದಿನ, ಮಧ್ಯರಾತ್ರಿಯಲ್ಲಿ, ಅವರು ನಿದ್ದೆಯಿಂದ ಎದ್ದರು. ಸರಸ್ವತಿ ಸ್ಥಾನದ ಸಮಸ್ಯೆಯು ಭರತ್‌ರ ತಲೆಯಲ್ಲಿ ಕೊರೆಯುತ್ತಿತ್ತು. ಅವರು ಮಾರನೆಯ ದಿನ ಬೆಳಗ್ಗೆ ಎದ್ದೊಡನೆ, ಹಿಂದಿನ ರಾತ್ರಿಯ ನಿರ್ಧಾರದನ್ವಯ, ಸುಮಾರು 7 ಗಂಟೆಗೆ ಭಾರತದ ವಾರಣಾಸಿಯಲ್ಲಿದ್ದ ತಮ್ಮ ಸ್ನೇಹಿತರೊಬ್ಬರಿಗೆ ಕರೆ ಮಾಡಿ, ಒಬ್ಬರು ಶಿಲ್ಪಿಯ ದೂರವಾಣಿ ಸಂಖ್ಯೆಯನ್ನು ಪಡೆದು ಅವರಿಗೆ ಕರೆ ಮಾಡಿದರು. ಕಮಲದ ಪೀಠದ ಮೇಲೆ ಕುಳಿತಿರುವ 54 ಇಂಚಿನ ಸರಸ್ವತಿ ದೇವಿಯ ವಿಗ್ರಹ ಬೇಕಾಗಿತ್ತು. "ತಾವು ಸುಮಾರು 15–16 ವರ್ಷಗಳ ಹುಡುಗಿಯ ವಿಗ್ರಹವನ್ನು ಕಣ್ಣು, ಮೂಗು, ಕೈಗಳು ಮತ್ತು ಕಾಲುಗಳ ನಿಖರ ಅಳತೆಯೊಂದಿಗೆ ಮಾಡಬಹುದೇ?" ಎಂದು ಅವರು ಆ ಶಿಲ್ಪಿಯನ್ನು ಕೇಳಿದರು. ತಕ್ಷಣವೇ ಅವರು ಭರತ್‌ರ ಪ್ರಶ್ನೆಗೆ "ಇದು ಸಾಧ್ಯವಾಗುವ ಕಾರ್ಯವಲ್ಲ. 54 ಇಂಚುಗಳ ಪ್ರತಿಮೆಯನ್ನು ಮಾಡಲು ನಮಗೆ ಕನಿಷ್ಠ 62 ಇಂಚುಗಳಷ್ಟು ಉದ್ದ ಮತ್ತು ಅಷ್ಟೇ ಅಗಲವಿರುವ ಜೇಡಿಮಣ್ಣು ಬೇಕಾಗುತ್ತದೆ. ಇದಕ್ಕೆ ಸುಮಾರು ಎಂಟು ಕ್ವಿಂಟಾಲ್‌ಗಳಷ್ಟು ಜೇಡಿಮಣ್ಣು ಬೇಕಾಗುತ್ತದೆ. ಆದ್ದರಿಂದ ನಾನು ಮೊದಲು ಜೇಡಿಮಣ್ಣನ್ನು ಸಂಗ್ರಹಿಸುತ್ತೇನೆ, ನಂತರ ನಾನು ನಿಮಗೆ ಈ ಪ್ರತಿಮೆ ಮಾಡಲಾಗುತ್ತದೋ ಇಲ್ಲವೋ ಎಂದು ತಿಳಿಸುತ್ತೇನೆ" ಎಂದು ಉತ್ತರಿಸಿದರು. ಇದನ್ನು ಕೇಳಿ ಭರತ್‌ರಿಗೆ ತುಂಬಾ ನಿರಾಶೆಯಾಯಿತು. ಅವರು ತಾಯಿ ಸರಸ್ವತಿಯಲ್ಲಿ "ಇದೇಕೆ ಈ ಕಾರ್ಯ ಅಸಾಧ್ಯವೆಂದು ತೋರುತ್ತಿದೆ ತಾಯಿ?" ಎಂದು ಬೇಡಿಕೊಂಡರು.

ಬೆಳಗ್ಗೆ ಸ್ವಲ್ಪ ಹೊತ್ತಿಗೆ, ಅವರಿಗೆ ಬನಾರಸ್‌ನಿಂದ ಕರೆ ಬಂದಿತ್ತು – "ನಾವು ಚರ್ಚಿಸಿದಂತೆ ನಿಖರವಾಗಿ ಇಲ್ಲದಿದ್ದರೂ, ನಮ್ಮ ಗೋದಾಮಿನಲ್ಲಿ 8–9 ಇಂಚುಗಳಷ್ಟು ಸಣ್ಣ ಪ್ರಮಾಣದಷ್ಟು ಜೇಡಿಮಣ್ಣು ಕಂಡುಬಂದಿದೆ. ಇದು ಉಪಯೋಗಿಸಬಹುದಾದಲ್ಲಿ ಮತ್ತು ಮಧ್ಯೆ ಯಾವುದೇ ತೊಂದರೆ ಇಲ್ಲದಿದ್ದಲ್ಲಿ, ನಿಮಗೆ ಬೇಕಾದ ರೀತಿಯ ವಿಗ್ರಹವನ್ನು ನಿರ್ಮಿಸಲು ಸಾಧ್ಯವಾಗಬಹುದು. ಈ ಪ್ರಕ್ರಿಯೆಯು ಮೂರರಿಂದ ನಾಲ್ಕು ತಿಂಗಳವರೆಗಿನ ಸಮಯ ಹಾಗೂ ಅಷ್ಟೇ ದೊಡ್ಡ ಮೊತ್ತದ ಹಣವನ್ನು ಬಯಸುತ್ತದೆ. ಹಣದ ಬಗ್ಗೆ ಹೆಚ್ಚು ಯೋಚಿಸುವ ಅಗತ್ಯವಿಲ್ಲ. ತಾವು ಎಷ್ಟು ಬೇಗ ಮುಂಗಡ ಹಣವನ್ನು ಪಾವತಿಸುವಿರೋ ಅಷ್ಟೇ ಬೇಗ ನನ್ನ ಕೆಲಸವನ್ನು ನಾನು ಆರಂಭಿಸುತ್ತೇನೆ. ನಾನು ಅದೇ ದಿನ ಕಾಳಿಘಾಟ್‌ನಲ್ಲಿ ಇರುತ್ತೇನೆ." ಎಂದು ಶಿಲ್ಪಿಯು ತಿಳಿಸಿದರು. ಶಿಲ್ಪಿಯು ಕೋರಿದ ಮೊತ್ತವನ್ನು ಅದೇ ದಿನವೇ ಕಳುಹಿಸುವ ವ್ಯವಸ್ಥೆಗಳನ್ನು ಮಾಡಲಾಯಿತು ಮತ್ತು ಶಿಲ್ಪಿಯು ತಮ್ಮ ಕೆಲಸವನ್ನು ತಕ್ಷಣವೇ ಆರಂಭಿಸಿದರು.

ಸುಮಾರು 45 ದಿನಗಳ ನಂತರ, ಶಿಲ್ಪಿಯು ಭರತ್‌ರಿಗೆ ಕರೆ ಮಾಡಿ, "ವಿಗ್ರಹವು ಸಿದ್ಧವಾಗಿದೆ. ಬಂದು ತೆಗೆದುಕೊಂಡು ಹೋಗಿ. ಮೂರು ತಿಂಗಳು ಬೇಕಾಗಬಹುದು ಎಂದು ಅಂದಾಜಿಸಿದ್ದರೂ, ಈ ವಿಗ್ರಹವನ್ನು ಒಂದೂವರೆ ತಿಂಗಳ ಅವಧಿಯಲ್ಲಿ ಮುಗಿಸಿದ್ದೇನೆ." ಎಂದರು. ಭರತ್‌ರಿಗೆ ಅತ್ಯಾಶ್ಚರ್ಯವಾಯಿತು. "ನನಗೆ ಒಂದು ಫೋಟೋ ಕಳಿಸಿ" ಎಂದು ಅವರನ್ನು ಕೇಳಿದರು. ಭರತ್‌ರ ಕೋರಿಕೆಗೆ ಪ್ರತಿಯಾಗಿ ಶಿಲ್ಪಿಯು "ನೀವೇನು ಅದನ್ನು ನೋಡಬೇಕಾದ ಅಗತ್ಯವಿಲ್ಲ, ಸುಮ್ಮನೆ ಬಂದು ತಗೊಂಡು ಹೋಗಿ. ಇಲ್ಲಿ ಎಲ್ಲರೂ ಈ ಅನುಪಮ ಮೂರ್ತಿಯ ಅಸಾಮಾನ್ಯ ಸೌಂದರ್ಯವನ್ನು ಕಂಡು

ಆಶ್ಚರ್ಯಚಕಿತರಾಗಿದ್ದಾರೆ. ನಾವೆಲ್ಲರೂ ತುಂಬಾ ಸಂತೋಷಗೊಂಡಿದ್ದೇವೆ." ಎಂದುಬಿಟ್ಟರು. ಆದರೂ ಭರತ್‌ರ ಕೋರಿಕೆಯನ್ನು ಮನ್ನಿಸಿ, ಒಂದು ಫೋಟೋವನ್ನು ಕಳಿಸಿದರು. ಅದು ಇವರು ಊಹಿಸಿದ್ದಕ್ಕಿಂತಲೂ ತುಂಬಾ ಸುಂದರವಾಗಿತ್ತು.

ಭಾರತಕ್ಕೆ ಒಂದು ಭೇಟಿಯನ್ನು ನಿಗದಿಗೊಳಿಸಿ, ಶ್ರೀಮತಿ ಇಂದಿರಾ ಜಂಗಮ ಅವರನ್ನೂ ಜೊತೆಗೆ ಕರೆದೊಯ್ದರು. ಶಿಲ್ಪಿಯ ಕಾರ್ಯಸ್ಥಾನದಲ್ಲಿದ್ದ ನೂರಾರು ವಿಗ್ರಹಗಳ ನಡುವೆ ಈ ಪ್ರತಿಮೆಯು ಅತ್ಯಂತ ಮನಸೆಳೆಯುವಂತಿತ್ತು. ಅದರ ಸೌಂದರ್ಯಕ್ಕೆ ಯಾವುದೇ ಪದಬಳಕೆಯ ಅಗತ್ಯವಿರಲಿಲ್ಲ, ಅದು ತನ್ನಷ್ಟಕ್ಕೆ ತಾನೇ ಮಾತಾಡುತ್ತಿತ್ತು. ಅವರು ಆ ಪ್ರತಿಮೆಯನ್ನು ವೀಕ್ಷಿಸಿ, ತಾಯಿ ಸರಸ್ವತಿಯ ದರ್ಶನವನ್ನು ಪಡೆದರು. ಭರತ್ ಅವರು ಊಹಿಸಿದ್ದಕ್ಕಿಂತಲೂ ಹೆಚ್ಚಾಗಿ ಮಾನವ ಜೀವನದ ಮೂಲತತ್ವವನ್ನು ಬಿಂಬಿಸುವಂತೆ ಅದು ತುಂಬಾ ಆಕರ್ಷಕ ಮತ್ತು ಅತ್ಯುತ್ತಮವಾಗಿತ್ತು. ಈ ಪ್ರತಿಮೆಯನ್ನು ಕಠ್ಮಂಡುವಿಗೆ ಸಾಗಿಸಲು ಒಂದು ಟಾಟಾ ಮೊಬೈಲ್ ವ್ಯಾನ್ ವಾಹನವನ್ನು ಸಿದ್ಧಪಡಿಸಲಾಯಿತು. ಈ ವ್ಯಾನಿನಲ್ಲಿ ಈ ಪ್ರತಿಮೆಯೊಂದಿಗೆ ಇನ್ನೂ 9 ಪ್ರತಿಮೆಗಳನ್ನು ಸುರಕ್ಷಿತವಾಗಿ ಪ್ಯಾಕ್ ಮಾಡಿ ಕಳಿಸಲಾಯಿತು. ಅವುಗಳೊಂದಿಗೆ ಭರತ್ ಕಠ್ಮಂಡುವಿಗೆ ರೈಲು ಮತ್ತು ವಿಮಾನದಲ್ಲಿ ಬಂದು ತಲುಪಿದರು. ಬನಾರಸ್‌ನಿಂದ ಕಳುಹಿಸಲಾದ ಪ್ರತಿಮೆಗಳನ್ನು ಬಾಣೇಶ್ವರದಲ್ಲಿದ್ದ ಜಂಗಮ ನಿವಾಸದಲ್ಲಿ ಇಳಿಸಿಕೊಳ್ಳಲಾಯಿತು. ಈಗ ಈ ಪ್ರತಿಮೆಯನ್ನು ಸರಸ್ವತಿ ಸ್ಥಾನದಲ್ಲಿ ಎಂದು ಮತ್ತು ಹೇಗೆ ಪ್ರತಿಷ್ಠಾಪಿಸುವುದು? ಎಂಬ ಚಿಂತೆ ಉದ್ಭವಿಸಿತು.

ರಾಜಕೀಯ ಏರಿಳಿತಗಳು, ಧಾರ್ಮಿಕ ತಾರತಮ್ಯಗಳು, ಆರ್ಥಿಕ ಬಡತನ ಮತ್ತು ಬಹಳಷ್ಟು ಇತರೆ ಸಮಸ್ಯೆಗಳಿಂದಾಗಿ ಈ ದೇವಾಲಯದ ನಿರ್ಮಾಣ ಪೂರ್ಣಗೊಳಿಸಲಾಗಲಿಲ್ಲ. ಭರತ್‌ರ ಪ್ರಯತ್ನಗಳು ನಿರರ್ಥಕವೆಂದು ತೋರತೊಡಗಿದವು. ಬಹಳಷ್ಟು ತಲೆಕೆಡಿಸಿಕೊಂಡು ಸಾಕಷ್ಟು ಚರ್ಚೆಗಳ ನಂತರ ಸರಸ್ವತಿ ಕ್ಷೇತ್ರ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ನೇತೃತ್ವದಲ್ಲಿ 2011 ರಲ್ಲಿ ಒಂದು ವಾರದ ಕಾಲ ಶ್ರೀಮದ್ಭಾಗವತ ಮಹಾಪುರಾಣದ ಕಂಠಪಾಠ ಶಿಬಿರ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಧಾರ್ಮಿಕ ಕಾರ್ಯಕ್ರಮದಿಂದಾಗಿ ಸುಮಾರು 2.8 ಮಿಲಿಯನ್ ರೂಪಾಯಿಗಳಷ್ಟು ಧನಸಹಾಯವಾಯಿತು. ಈ ಆರಂಭಿಕ ನಿಧಿಯೊಂದಿಗೆ ತಾಯಿ ಸರಸ್ವತಿ ಮಂದಿರವನ್ನು ನಿರ್ಮಿಸುವ ಕೆಲಸವು ಪಶ್ಚಿಮ ಭಾಗದ ಕಡೆಗೆ ಮುಂದುವರಿಯಿತು.

ಭರತ್ ಭಾರತದಿಂದ ತಂದಿದ್ದ ವಿಗ್ರಹವು ಅವರ ಮನೆಯ ಪಡಸಾಲೆಯಲ್ಲಿ ಎರಡು ವರ್ಷಗಳಿಗೂ ಹೆಚ್ಚುಕಾಲ ಹಾಗೆಯೇ ಇತ್ತು. ಅವರು ಆ ಪ್ರತಿಮೆಯಲ್ಲಿ ತಾಯಿ ಸರಸ್ವತಿಯೊಂದಿಗೆ ಜೀವಿಸುತ್ತಿರುವ ಭಾವನೆ ಮೂಡಿ, ಅತ್ಯಂತ ಪೂಜ್ಯಭಾವದಿಂದ ಆ ವಿಗ್ರಹಕ್ಕೆ ನಮಸ್ಕರಿಸುತ್ತಿದ್ದರು. ಈ ಅನುಭವದಿಂದ ಅವರು ಮತ್ತು ಅವರ ಕುಟುಂಬಕ್ಕೆ ಪಡೆದುಕೊಂಡ ಲಾಭಗಳನ್ನು ವಿವರಿಸುವುದು ತುಂಬಾ ಕಷ್ಟ. ಭರತ್‌ರಿಗೆ ಅನುಭವಕ್ಕೆ ಬಂದ ಕೆಲವು ವೈಯಕ್ತಿಕ ಅನುಭವಗಳನ್ನು ಮಾತ್ರ ಅವರು ಹೇಳಿದರು. ಇವುಗಳಲ್ಲಿ ಈ ಕೆಳಗಿನ ಅನುಭವಗಳು ಅತ್ಯಂತ ಮುಖ್ಯವಾದವು.

1. ಕಲ್ಪನಾ ತಿಮಿಲ್ಸಿನಾಳಿಗೆ ವಿದ್ಯಾರ್ಥಿವೇತನ ದೊರೆಯಿತು.
2. ನಿಶಾ ಬುಹಾರಿಯು ಎಂ.ಬಿ.ಎ. ಪದವೀಧರೆಯಾದಳು.
3. ಅನೂಪ್ ಜಂಗಮನಿಗೆ ಎಂಫಿಲ್ ಪ್ರೋಗ್ರಾಮ್‌ಗೆ ದಾಖಲಾತಿ ದೊರೆಯಿತು ಹಾಗೂ
4. ಸಮಾಜದಲ್ಲಿ ತಾಂಡವವಾಡುತ್ತಿದ್ದ ಭ್ರಷ್ಟಾಚಾರದ ವಿರುದ್ಧ ಹೋರಾಡಲು ಭರತ್‌ರಿಗೆ ಈಗಾಗಲೇ ಇದ್ದ ಸಮಾಜಸೇವೆಯ ಕ್ಷೇತ್ರದೊಂದಿಗೆ ಭ್ರಷ್ಟಾಚಾರವಿರೋಧಿ ಕ್ಷೇತ್ರವೊಂದು ಹೊಸದಾಗಿ ಹೋರಾಟದ ಕ್ಷೇತ್ರವಾಗಿ ದೊರೆಯಿತು.

ತಾಯಿ ಸರಸ್ವತಿಯ ದೇವಾಲಯದ ಗರ್ಭಗುಡಿಯಲ್ಲಿ, ಭರತ್‌ರ ಕುಟುಂಬದ ಕೃತಜ್ಞತೆಯ ಪ್ರತೀಕವಾಗಿ ಸದಾ ನಂದಾದೀಪವೊಂದು ಬೆಳಗುತ್ತಿತ್ತು. ತಾಯಿ ಸರಸ್ವತಿಯ ಬಗ್ಗೆ ಹೊಸ ದೃಷ್ಟಿಕೋನ ಹೊಂದಿರುವ ಭರತ್ ಜಂಗಮ್ ಎಂಬ ಹೆಸರಿನ ತತ್ವಜ್ಞಾನಿಯು ಎಲ್ಲಾ ಆಸ್ತಿಕ ಭಕ್ತಾದಿಗಳ ನೆರವಿನಿಂದ ಒಂದು ಸುಂದರ ಪ್ರದೇಶವನ್ನು ಸೃಷ್ಟಿಸಿದ್ದರು. ಈ ಸ್ಥಳಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ದಿನೇದಿನೇ ವೃದ್ಧಿಸಿತು. ಇದು ಕೇವಲ ಕಾಕತಾಳೀಯವೋ ಅಥವಾ ತಾಯಿ ಸರಸ್ವತಿಯ ಸಂಕಲ್ಪವೋ ಎಂಬುದನ್ನು ಹೇಳಲಾಗದು.

ಕಾಳಿಮಾತಿ ಪಂಚಾಯಿತಿಯಲ್ಲಿ ಸುದಾಳ್ ಸರಸ್ವತಿ ಮತ್ತು ವಾಗೇಶ್ವರಿ ಸರಸ್ವತಿ ಎಂಬ ಹೆಸರಿನ ಎರಡು ಗ್ರಾಮ ಪಂಚಾಯಿತಿಗಳಿದ್ದವು. ಎರಡೂ ಗ್ರಾಮಗಳ ಹೆಸರುಗಳೂ ಜ್ಞಾನದ ಅಧಿದೇವತೆಯಾದ ಸರಸ್ವತಿಯನ್ನೇ ಪ್ರತಿನಿಧಿಸುತ್ತಿದ್ದವು. ಆದಾಗ್ಯೂ ಇವೆರಡೂ ಗ್ರಾಮಗಳಲ್ಲಿಯೂ ತಾಯಿ ಸರಸ್ವತಿಯ ವಿಗ್ರಹಗಳೇ ಇರಲಿಲ್ಲ. ಈ ಸ್ಥಳಗಳನ್ನು ಸರಸ್ವತಿ ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದರೂ ಕೂಡಾ, ಇಲ್ಲಿಯ ಪ್ರದೇಶಗಳು ಮಂಜುಶ್ರೀ ದೇವತೆಗೆ ಸಮರ್ಪಿತವಾಗಿದ್ದವು ಮತ್ತು ಇಲ್ಲಿನ ಪೂಜೆಗಳನ್ನು ಶಾಕ್ಯವಂಶದವರು ಬೌದ್ಧ ಸಂಪ್ರದಾಯದಂತೆ ಮಾಡಿಕೊಂಡು ಬರುತ್ತಿದ್ದರು. ಇದರ ಹೊರತಾಗಿ, ಇಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಶೈವ ಮತ್ತು ವೈಷ್ಣವ ಸಮುದಾಯದ ಜನರೂ ಇದ್ದರು. ಇಲ್ಲಿನ ಇತಿಹಾಸ ನೋಡಿದಾಗ ಇಲ್ಲಿ ಯಾವುದೇ ಬೌದ್ಧರ ಶಾಶ್ವತ ನೆಲೆಗಳು ಕಂಡುಬರಲಿಲ್ಲ ಮತ್ತು ಬೌದ್ಧ ಪೂಜಾರಿಗಳ ತಾತ್ಕಾಲಿಕ ವಸತಿಗಳು ಕಂಡುಬಂದವು. ಹೀಗೆ, ಇಲ್ಲಿ ಬೌದ್ಧರ ಶಾಶ್ವತ ನೆಲೆಗಳು ಇಲ್ಲದಿದ್ದರೂ, ಈ ಪ್ರದೇಶವು ಬೌದ್ಧರಿಂದ ವಶಪಡಿಸಿಕೊಳ್ಳಲಾದ ಸರಸ್ವತಿ ಸ್ಥಾನವೆಂದು ಮೇಲ್ನೋಟಕ್ಕೇ ಕಂಡುಬರುತ್ತಿತ್ತು. ಇದು ಹೇಗೆ ಮತ್ತು ಯಾವಾಗ ಹೀಗಾಯಿತು? ಯಾಕೆ ಸರಸ್ವತಿ ತಾಯಿಯು ಈ ಸ್ಥಳವನ್ನೇ ಆಯ್ದುಕೊಂಡಳು? ಎಂಬ ಪ್ರಶ್ನೆಯು ಭರತ್‌ರನ್ನು ಕಾಡತೊಡಗಿತು.

ಇಲ್ಲಿ ಮಂಜುಶ್ರೀಯನ್ನು ಜ್ಞಾನೋದಯವಾದ ಬೋಧಿಸತ್ವನ ರೂಪದಲ್ಲಿ ಪೂಜಿಸಲಾಗುತ್ತದೆ. ಇಲ್ಲಿನ ನೇವಾರ ಸಮುದಾಯದಲ್ಲಿ ಮಂಜುಶ್ರೀಯು ಭೋಭರ್‌ನಲ್ಲಿ ವಾಸ್ತವ್ಯವನ್ನು ನಿರ್ಮಿಸುವುದಕ್ಕಾಗಿ ಕಠ್ಮಂಡುವಿನ ಕಣಿವೆಯಲ್ಲಿದ್ದ ಸರೋವರವೊಂದರ ನೀರನ್ನು ತಿರುಗಿಸಿದರು ಎಂಬುದೊಂದು ಕಥೆಯಿದೆ. ಹಿಂದೂ ಧರ್ಮ ಸಂಪ್ರದಾಯದ ಇನ್ನೊಂದು ಕಥೆಯು ಶ್ರೀಕೃಷ್ಣನ ನಂತರ ಕಠ್ಮಂಡು ಕಣಿವೆಯನ್ನು ಆಳಿದ ಗೋಪಾಲಕರ ಕುಲದ ಒಬ್ಬ ರಾಜನಿಗಾಗಿ ನೀರನ್ನು ಒದಗಿಸಲು ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರದಿಂದ ಭೋಭರ್ ಬೆಟ್ಟವನ್ನು ಕತ್ತರಿಸಿ, ನೀರನ್ನು ಹರಿಸಿದನು ಎಂದು ಹೇಳುತ್ತದೆ. ಎರಡೂ ಕಥೆಗಳೂ, ಯಾರು ನಂಬಲಿ ಅಥವಾ ಬಿಡಲಿ, ಕಠ್ಮಂಡು ಕಣಿವೆಯ ಇತಿಹಾಸಕ್ಕೆ ಸಂಬಂಧಿಸಿವೆ. ಇದು ವಾಸ್ತವದಲ್ಲಿ, ಭಗವಂತ ಪಶುಪತಿಯ ಮೂಲವಾದ ಆದಿಜ್ಯೋತಿರ್ಲಿಂಗದ ರೂಪದಲ್ಲಿ ಸೃಷ್ಟಿಯು ಆರಂಭಗೊಂಡಿತೆನ್ನಲಾದ ನೇಪಾಳದ ಅತ್ಯಂತ ಪ್ರಾಚೀನ ಪ್ರದೇಶವಾಗಿದೆ. ಪಶುಗಳ ನಾಯಕನೆಂದು ಅಥವಾ ಜೀವಗಳ ಒಡೆಯನೆಂದು ಹೇಳಲಾಗುವ ಈ ಪಶುಪತಿಯು ದ್ವಾಪರ ಯುಗದ ಕೃಷ್ಣನಿಗಾಗಲೀ ಅಥವಾ ಕಲಿಯುಗದ ಬುದ್ಧನಿಗಾಗಲೀ ಸಂಬಂಧಿಸಿದವನಲ್ಲವೇ ಅಲ್ಲ!!!

ಮಂಜುಶ್ರೀ ಬುದ್ಧನ ಬೋಧನೆಗಳ ಅನುಯಾಯಿಯಾಗಿದ್ದರು. ವಿಕ್ರಮ ಶಕೆಯ ಐದನೇ ಶತಮಾನದಲ್ಲಿ, ಬೌದ್ಧಧರ್ಮದಲ್ಲಿ ಆಚಾರ್ಯರು ಇದ್ದ ಕಾಲದಲ್ಲಿ, ಮಂಜುಶ್ರೀ ಎಂದು ಖ್ಯಾತರಾದ ಮಂಜುಘೋಷ ಎಂಬ ವ್ಯಕ್ತಿಯು ಭಾರತ ಉಪಖಂಡದ ಉತ್ತರ ಭಾಗದಲ್ಲಿ ಬೌದ್ಧಮತವನ್ನು ಪ್ರಸಾರ ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಬೌದ್ಧತತ್ವ ಮತ್ತು ಜ್ಞಾನಕ್ಕೆ ಅನೇಕ ಆಚಾರ್ಯರುಗಳನ್ನು ಸಮರ್ಪಿಸಿದ ನಂತರ, ಮಂಜುಶ್ರೀಯು ಪಂಚ ಬುದ್ಧರಲ್ಲಿ ಒಬ್ಬರೆನಿಸಿದರು. ಹೀಗೆ, ಮಂಜುಘೋಷರು ಮಹಾಮಂಜುಶ್ರೀಯಾದರು ಮತ್ತು ಬೌದ್ಧಧರ್ಮದ ಮಹಾಮಂಜುಶ್ರೀಯಾಗಿ ಕಂಗೊಳಿಸಿದರು. ಬೌದ್ಧಧರ್ಮಾನುಯಾಯಿಗಳ ಲಿಖಿತ ಮತ್ತು ಮೌಖಿಕ ಗ್ರಂಥಗಳಲ್ಲಿ ದ್ವಾಪರಯುಗದ ಅಂತ್ಯಕ್ಕೂ ಮೊದಲು ಹತ್ತುಸಾವಿರ ವರ್ಷಗಳ ಹಿಂದೆ ಬೌದ್ಧಧರ್ಮವನ್ನು ಸ್ಥಾಪಿಸಲಾಯಿತು ಎಂದು ಹೇಳಲಾಗಿದೆ, ಆದರೆ, ದಾಖಲೆಗಳ ಪ್ರಕಾರ ದ್ವಾಪರಯುಗವು ಅಂತ್ಯಗೊಂಡ ಎರಡು ಸಾವಿರ ವರ್ಷಗಳ ನಂತರ ಸಿದ್ಧಾರ್ಥನ ಜನ್ಮವಾಗಿದೆ ಎಂಬುದು ಕಂಡುಬರುತ್ತದೆ. ಈ ವಿಷಯದ ಕುರಿತು ಇನ್ನಿಷ್ಟು ಅಧ್ಯಯನಗಳಾಗಬೇಕಿದೆ. ಭಕ್ತಾದಿಗಳ ಸಹಕಾರದಿಂದ ಇಲ್ಲಿನ ದೇವಾಲಯದ ಮುಂದೆ ಸುಂದರವಾದ ಪ್ರಾಂಗಣವನ್ನು ನಿರ್ಮಿಸಲಾಯಿತು. ದಿನಗಳೆದಂತೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗತೊಡಗಿತು.

ಇದು ಕಾಕತಾಳೀಯವೋ ಅಥವಾ ಮಾತೆ ಸರಸ್ವತಿಯ ಇಚ್ಛೆಯೋ ಎಂಬುದನ್ನು ಹೇಳಲಾಗದು. ಪಂಚಾಯಿತಿ ಯುಗದಲ್ಲಿ, ರತ್ನಗಿರಿ ಬೆಟ್ಟದಲ್ಲಿ, ಸುದಾಳ್ ಸರಸ್ವತಿ ಗ್ರಾಮ ಪಂಚಾಯಿತಿ ಮತ್ತು ವಾಗೇಶ್ವರಿ ಗ್ರಾಮ ಪಂಚಾಯಿತಿ ಎಂಬ ಹೆಸರಿನ ಎರಡು ಗ್ರಾಮಪಂಚಾಯಿತಿಗಳಿದ್ದವು. ಎರಡೂ ಗ್ರಾಮಗಳ ಹೆಸರುಗಳೂ ಸರಸ್ವತಿಯನ್ನೇ ಪ್ರತಿನಿಧಿಸುತ್ತವೆ. ಆದಾಗ್ಯೂ ಈ ಎರಡೂ ಪ್ರದೇಶಗಳಲ್ಲಿಯೂ ಸರಸ್ವತಿಯ ವಿಗ್ರಹಗಳೇ ಇರಲಿಲ್ಲ. ಇವುಗಳನ್ನು ಸರಸ್ವತಿ ಸ್ಥಾನವೆಂದು ಕರೆಯಲಾಗುತ್ತಿದ್ದರೂ, ಅಲ್ಲಿನ ದೇವಸ್ಥಾನ ಮತ್ತು ಪೂಜೆಯನ್ನು ಬೌದ್ಧಸಂಪ್ರದಾಯದ ಶಾಕ್ಯಪರಂಪರೆಯ ಅನುಸಾರವಾಗಿ ನಡೆಸಿಕೊಂಡು ಬರಲಾಗುತ್ತಿತ್ತು. ಆದರೂ ಅಲ್ಲಿನ ಸ್ಥಳೀಯ ಇತಿಹಾಸವು ಸಾಂಪ್ರದಾಯಿಕ ಹಿಂದೂಗಳ ಶಾಶ್ವತ ವಾಸಸ್ಥಾನವನ್ನು ಸೂಚಿಸುತ್ತಿದೆ, ಯಾವುದೇ ಬೌದ್ಧರ ಶಾಶ್ವತ ಸ್ಥಾನವಾಗಿಲ್ಲ, ಕೇವಲ ಬೌದ್ಧರ ತಾತ್ಕಾಲಿಕ ವಾಸ್ತವ್ಯಗಳು ಮಾತ್ರ ಕಂಡುಬರುತ್ತಿವೆ. ಹೀಗೆ, ಸರಸ್ವತಿ ಸ್ಥಾನವು ಶಾಶ್ವತವಾದ ಬೌದ್ಧರ ನೆಲೆಯಾಗಿಲ್ಲವಾದ್ದರಿಂದ ಇದನ್ನು ಬೌದ್ಧರ ಆಕ್ರಮಣದ ಪ್ರದೇಶ ಎಂಬಂತೆ ಕಂಡುಬರುತ್ತದೆ. ಇದು ಯಾವಾಗ ಮತ್ತು ಹೇಗೆ ಆಯಿತು? ಸರಸ್ವತಿಯು ಹೇಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡಳು? ಎಂಬ ಪ್ರಶ್ನೆ ಭರತ್‌ರನ್ನು ನಿರಂತರ ಕಾಡುತ್ತಿತ್ತು.

ಮಹಾಮಂಜುಶ್ರೀಯು ಬುದ್ಧತ್ವವನ್ನು ಪಡೆದಿದ್ದು, ಬೋಧಿಸತ್ವನ ರೂಪದಲ್ಲಿ ಪೂಜೆಗೊಳ್ಳುತ್ತಾರೆ. ನೇವಾರ ಸಮುದಾಯದಲ್ಲಿರುವ ಕಥೆಯ ಪ್ರಕಾರ ಮಂಜುಶ್ರೀಯು ಛೋಭರ್ ಬೆಟ್ಟವನ್ನು ಕತ್ತರಿಸುವುದರ ಮೂಲಕ ಕಠ್ಮಂಡು ಕಣಿವೆಯಲ್ಲಿನ ನೀರನ್ನೆಲ್ಲಾ ಒಣಗಿಸಿಬಿಟ್ಟರು ಮತ್ತು ಅಲ್ಲಿನ ನಿವಾಸಿಗಳಿಗೆ ಎಲ್ಲಾ ಅಗತ್ಯ ವ್ಯವಸ್ಥೆಗಳನ್ನೂ ಮಾಡಿಕೊಟ್ಟರು ಎಂದು ಹೇಳಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಸಾಂಪ್ರದಾಯಿಕ ಹಿಂದೂಗಳಲ್ಲಿ ಇನ್ನೊಂದು ಬಗೆಯ ಕಥೆಯಿದೆ. ನೇಪಾಳ ಉಪಖಂಡದ ಪ್ರಥಮ ದೊರೆಯು ಗೋಪಾಲ ಕುಲಕ್ಕೆ ಸೇರಿದವನಾಗಿದ್ದನು. ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರದಿಂದ ಛೋಭರ್ ಬೆಟ್ಟವನ್ನು ಕತ್ತರಿಸಿ, ಕಠ್ಮಂಡು ಕಣಿವೆಯಿಂದ ನೇಪಾಳಕ್ಕೆ ನೀರನ್ನು ಒದಗಿಸಿದ ನಂತರ ಗೋಪಾಲ ಕುಲದ ಅರಸನು ಪಟ್ಟಕ್ಕೆ ಬಂದನು ಮತ್ತು ಅಲ್ಲಿನ ಎಲ್ಲಾ ಅಗತ್ಯ ಅನುಕೂಲಗಳನ್ನೂ ನಿರ್ಮಿಸಿದನು. ಹೀಗೆ ಇಲ್ಲಿ ಎರಡು ವಿಭಿನ್ನ ಕಥೆಗಳಿವೆ, ಅವುಗಳನ್ನು ಯಾರಾದರೂ ನಂಬಲಿ ಅಥವಾ ಬಿಡಲಿ. ಆದರೆ ವಾಸ್ತವದಲ್ಲಿ, ನೇಪಾಳ ಉಪಖಂಡದಲ್ಲಿನ ವ್ಯವಸ್ಥೆಗಳು ಸಾವಿರಾರು ವರ್ಷಗಳ ಹಿಂದೆಯೇ, ಅಂದರೆ ಆದಿಜ್ಯೋತಿರ್ಲಿಂಗವು ಭಗವಂತ ಪಶುಪತಿಯ ರೂಪದಲ್ಲಿ ಸ್ಥಾಪನೆಗೊಂಡಾಗಲೇ ನಿರ್ಮಿಸಲು ಆರಂಭವಾಗಿತ್ತು. ಪಶುಗಳ ದೈವ ಅಥವಾ ಪಶುಗಳ ನಾಯಕನಾಗಿದ್ದ ಪಶುಪತಿನಾಥನು ಪಶುಗಳ ಪಾಲಕನಾಗಿದ್ದನು ಮತ್ತು ಭಗವಂತ ಪಶುಪತಿಯನ್ನು ದ್ವಾಪರಯುಗದ ಭಗವಂತ ಶ್ರೀಕೃಷ್ಣನೊಂದಿಗಾಗಲೀ ಅಥವಾ ಕಲಿಯುಗದ ಬುದ್ಧನೊಂದಿಗಾಗಲೀ ಹೊಂದಿಸುವುದು ಸರಿಯಲ್ಲ.

ಮಂಜುಶ್ರೀಯ ಅನುಯಾಯಿಗಳು ಬೌದ್ಧಧರ್ಮದ ತತ್ವಗಳನ್ನು ಪ್ರಚಾರ ಮಾಡಿದರು. ಬೌದ್ದಮತದ ಆಚಾರ್ಯನೆಂದು ಖ್ಯಾತನಾದ ಮಂಜುಶ್ರೀಯು ವಿಕ್ರಮ ಶಕೆಯ ಐದನೇ ಶತಮಾನದಲ್ಲಿ ಮಂಜುಘೋಷ ಎಂಬ ಹೆಸರಿನವನಾಗಿದ್ದನು. ಅವನಿಗೆ ಆಚಾರ್ಯ ಪದವಿಯು ದೊರಕಿದ ನಂತರ, ಮಂಜುಘೋಷನು ಭಾರತದ ಉತ್ತರ ಭಾಗಗಳಲ್ಲಿ ಬೌದ್ಧತತ್ವವನ್ನು ಪ್ರಚಾರಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದನು. ಕೆಲವು ಇತರೆ ಆಚಾರ್ಯಗಳನ್ನು ಬೌದ್ಧಮತ ಮತ್ತು ಜ್ಞಾನದಲ್ಲಿ ನಿಷ್ಣರಾಗಿಸಿದ ನಂತರ, ಮಂಜುಶ್ರೀಯು ಪಂಚ ಬುದ್ಧರಲ್ಲಿ ಒಬ್ಬನೆಂದು ಸ್ಥಾಪಿತನಾದನು. ಹೀಗೆ, ಮಂಜುಘೋಷನು, ಮಹಾಮಂಜುಶ್ರೀಯಾಗಿ ಬದಲಾದನು ಮತ್ತು ಬೌದ್ಧರ ನಂಬಿಕೆಯಲ್ಲಿ ಬುದ್ಧನ ರೂಪದಲ್ಲಿ ಕಾಣಿಸತೊಡಗಿದನು. ಆದಾಗ್ಯೂ, ಬೌದ್ಧಮತದ ತತ್ವಗಳಲ್ಲಿ ಮೌಖಿಕ ಮತ್ತು ಲಿಖಿತ ರೂಪಗಳೆರಡರಲ್ಲೂ ಕೂಡಾ ಬೌದ್ಧಮತವು ವರ್ತಮಾನಕ್ಕಿಂತ ಹತ್ತುಸಾವಿರ ವರ್ಷಗಳಿಗೂ ಮುಂಚಿನಿಂದಲೇ ಅಸ್ತಿತ್ವದಲ್ಲಿತ್ತೆಂದು ದಾಖಲಿಸಲಾಗಿದೆ, ಆದರೆ ಸಿದ್ಧಾರ್ಥನ ಜನ್ಮವು ದ್ವಾಪರ ಯುಗದ ಅಂತ್ಯದ ನಂತರ ಎರಡು ಸಾವಿರ ವರ್ಷಗಳಾದ ಮೇಲೆ ಆಗಿದೆ ಎಂದು ಐತಿಹಾಸಿಕ ದಾಖಲೆಗಳಲ್ಲಿದೆ. ಈ ವಿಷಯವನ್ನು ಇನ್ನಷ್ಟು ಅಧ್ಯಯನಕ್ಕೆ ಒಳಪಡಿಸಬೇಕಿದೆ.

ಹೊಸ ತಾತ್ವಿಕ ದೃಷ್ಟಿಕೋನದ ವ್ಯಕ್ತಿತ್ವವುಳ್ಳ ಭರತ್ ಜಂಗಮ್‌ರಂತಹ ಒಬ್ಬ ವಾಸ್ತವಿಕ ಚಿಂತಕರು ಸರಸ್ವತಿ ಸ್ಥಾನದ ಪ್ರಾದೇಶಿಕ ದ್ವಂದ್ವಗಳ ಸಂದರ್ಭದಲ್ಲಿ ಆ ಸ್ಥಾನದ ವ್ಯುತ್ಪತ್ತಿಯ ಕುರಿತು ಅಂದಾಜಿಸುವುದು ಸುಲಭಸಾಧ್ಯವಲ್ಲ. ಇದನ್ನು ಇನ್ನೊಂದು ರೀತಿಯಲ್ಲಿ ಲಿಚ್ಛವಿ ಅವಧಿಯಲ್ಲಿ, ಬಹಳಷ್ಟು ಬೌದ್ಧವಿಹಾರಗಳನ್ನು ನಿರ್ಮಿಸಲಾದ ಸಮಯದಲ್ಲಿ ನೇಪಾಳ ಮಂಡಲ ಪ್ರದೇಶದಲ್ಲಿ ಬೌದ್ಧಧರ್ಮದ ತತ್ವಗಳನ್ನು ಪ್ರಚಾರ ಮಾಡುತ್ತಿದ್ದ ಸಂದರ್ಭದಲ್ಲಿ ಇವು ಹುಟ್ಟಿರಬಹುದು. ಭಾರತದಂತಹ ಇತರೆ ದೇಶಗಳಲ್ಲಿ ಬೌದ್ಧಧರ್ಮದ ಸಂಸ್ಕೃತಿಗಳನ್ನು ಪಸರಿಸುತ್ತಿದ್ದ ಸಮಯದಲ್ಲಿ, ಇದೇ ರೀತಿಯ ಪ್ರಚಾರದ ಮತ್ತೊಂದು ರೂಪವು ನೇಪಾಳ ಮಂಡಲದ ಪ್ರದೇಶದಲ್ಲಿ ಸ್ಥಾಪಿತವಾಯಿತು ಹಾಗೂ ಅಂದಾಜು ಸುಮಾರು 1500 ವರ್ಷಗಳ ಹಿಂದೆ ಇದು ಆರಂಭವಾಯಿತು, ಅಲ್ಲದೆ ವಾಗೇಶ್ವರಿ, ಸರಸ್ವತಿ ಸ್ಥಾನ ಮತ್ತು ಲಾಪಸಾ ಸಸ್ವಧ್ಯೋ ಎಂಬ ಹೆಸರುಗಳು ಇಂದಿಗೂ ಚಾಲ್ತಿಯಲ್ಲಿರುವುದರಿಂದ ತಾಯಿ ಸರಸ್ವತಿಯು ಇಲ್ಲಿ ಸಶರೀರ ರೂಪಿಣಿಯಾಗಿ ನೆಲೆಸಿ ಪೂಜೆಗೊಳ್ಳುತ್ತಿದ್ದಾಳೆ ಎಂದು ನಂಬಲಾಗಿದೆ. ಇದನ್ನು ಮಾತೆ ಸರಸ್ವತಿಯ ಇಚ್ಛಾಶಕ್ತಿಯ ಪರಿಣಾಮ ಎಂದು ಅಗತ್ಯವಾಗಿ ಪರಿಗಣಿಸಲಾಗಿದೆ. ಬೌದ್ಧರೂ ಕೂಡಾ ಹಿಂದೆ ಹಿಂದೂ ಅಥವಾ ಸನಾತನ ವಂಶಸ್ಥರಾಗಿದ್ದುದರಿಂದಲೇ ಮಾತೆ ಸರಸ್ವತಿಯಲ್ಲಿ ಈ ಪರಿಯ ನಂಬಿಕೆಯನ್ನು ಹೊಂದಿದ್ದಾರೆ.

**4) ಭಕ್ತಾಪುರದ ಅನಂತಲಿಂಗೇಶ್ವರ ಮಹಾದೇವ ದೇವಾಲಯ ಪ್ರದೇಶದ ಅಭಿವೃದ್ಧಿ ಕಾರ್ಯಗಳು**

ಭಕ್ತಾಪುರದಲ್ಲಿರುವ ಅನಂತಲಿಂಗೇಶ್ವರ ದೇವಾಲಯದ ಪ್ರದೇಶವು ಇನ್ನೂ ಯಾವ ರೀತಿ ಅಭಿವೃದ್ಧಿಪಡಿಸಬೇಕೆಂದು ನಿರ್ಣಯಿಸಬೇಕಾಗಿದೆ. ಅದು ಬಹಳ ಕಾಲದಿಂದಲೂ ಒಂದು ಸಿದ್ಧ ಸ್ಥಿರ ಪರಿಸ್ಥಿತಿಯಲ್ಲಿದೆ ಮತ್ತು ಈಗಲೂ ಹಾಗೆಯೇ ಇದೆ. 1993ರಲ್ಲಿ, ದೇವಾಲಯದ ಉತ್ತರ ಭಾಗದ ಮೆಟ್ಟಿಲುಗಳ ನವೀಕರಣ ಕಾರ್ಯವು ಆರಂಭಗೊಂಡಿತು. ಆ ಸಂದರ್ಭದಲ್ಲಿ, ಸ್ಥಳೀಯ ಯುವಕರ ಸಹಾಯ ಮತ್ತು ದೇಣಿಗೆಗಳಿಂದ ದೇವಸ್ಥಾನಕ್ಕೆ ತಲುಪಲು ಅನುಕೂಲವಾಗುವಂತೆ ಸುಮಾರು 250 ಮೆಟ್ಟಿಲುಗಳನ್ನು ನಿರ್ಮಿಸಲಾಯಿತು. 2003 ರಲ್ಲಿ ಅನಂತಲಿಂಗೇಶ್ವರ ಮಹಾದೇವನ ಪ್ರದೇಶಕ್ಕೆ ಸೇರಿದ ಭಕ್ತಾಪುರದ

ಕಾಟುಂಜೆ ನವನಿರ್ಮಿತ ಗ್ರಾಮದಲ್ಲಿ 'ಪ್ರೀತಿ' ಎಂಬ ಹೆಸರಿನಲ್ಲಿ ಒಂದು ಭವ್ಯ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ವ್ಯಾಸಾಚಾರ್ಯ ಕಿಶೋರ್ ಗೌತಮ್ ಅವರ ನೇತೃತ್ವದಲ್ಲಿ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಾಯಿತು, ಆದರೂ ದೇವಾಲಯಕ್ಕೆ ಬೇಕಾಗಿದ್ದ ಸ್ಥಿರವಾದ ಬೆಂಬಲವನ್ನು ಪಡೆಯಲು ಸಾಧ್ಯವಾಗಲಿಲ್ಲ.

ಇದೇ ಸಮಯದಲ್ಲಿ, ಡೋಲೇಶ್ವರ ಮಹಾದೇವ ದೇವಾಲಯದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದವು. 2011ನೇ ವರ್ಷದಲ್ಲಿ, ತ್ರಿನೇತ್ರ ಆಧ್ಯಾತ್ಮಿಕ ಕೇಂದ್ರ ಹಾಗೂ ಡೋಲೇಶ್ವರ ಮಹಾದೇವ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿ ಜೊತೆಯಾಗಿ ಶಿವಪುರಾಣವನ್ನು ಪ್ರಸ್ತುತಪಡಿಸಲು ಒಂದು ಕಾರ್ಯಕ್ರಮವನ್ನು ಆಯೋಜಿಸಿದರು. ಈ ಕಾರ್ಯಕ್ರಮದ ಆಯೋಜಕರಾಗಿದ್ದ ವ್ಯಾಸಾಚಾರ್ಯ ತ್ರಿನೇತ್ರ ಅವರು ಮತ್ತು ಸಂಬಂಧಪಟ್ಟ ಸಮಿತಿಯ ಸಹಸದಸ್ಯರುಗಳು ಅನಂತ ಲಿಂಗೇಶ್ವರದ ಅರಣ್ಯಪ್ರದೇಶವನ್ನು ಡೋಲೇಶ್ವರನ ಆಡಳಿತ ವ್ಯಾಪ್ತಿಗೆ ಸೇರಿದ ಪ್ರದೇಶವೆಂದು ಒಪ್ಪಿಕೊಂಡರು ಮತ್ತು ಅವರೆಲ್ಲ ಆ ಪ್ರದೇಶದತ್ತ ಆಕರ್ಷಿತರಾದರು. ಈ ಪ್ರದೇಶದ ಅಭಿವೃದ್ಧಿ ಯೋಜನಾ ಸಂಸ್ಥೆಯನ್ನು ನೋಂದಣಿ ಮಾಡಿಸುವ ಕೆಲಸವು ಆರಂಭವಾಯಿತು. ನಿತ್ಯವೂ ರುದ್ರಾಭಿಷೇಕ ಪೂಜೆ ನಡೆಸಲು ಸಿದ್ಧತೆಗಳನ್ನು ಮಾಡಲಾಯಿತು. ಪೂಜೆಯಲ್ಲಿ ಯಾವುದೇ ಕೊರತೆಯಾಗಬಾರದೆಂಬ ದೃಷ್ಟಿಯಿಂದ ಇಲ್ಲಿನ ಪೂಜಾರಿಗಳಿಗೆ ತಿಂಗಳ ವೇತನ ಕೊಡುವ ಪದ್ಧತಿಯನ್ನು ಆರಂಭಿಸಲಾಯಿತು. 2012ರಲ್ಲಿ, ಶಿವಪುರಾಣ ಕಾರ್ಯಕ್ರಮದ ಪ್ರದರ್ಶನದಿಂದ ಒಂದಿಷ್ಟು ಅಗತ್ಯ ಹಣ ಹೊಂದಾಣಿಕೆಯೂ ಆಗಿತ್ತು.

ಈ ಕಾರ್ಯಕ್ರಮದಿಂದ ಒಟ್ಟಾರೆ ರೂ. 12.00 ಲಕ್ಷಗಳ ಒಟ್ಟಾರೆ ಮೊತ್ತವು ಸಂಗ್ರಹಣೆಯಾಗಿ, ಬ್ಯಾಂಕಿನಲ್ಲಿ ಹೂಡಿಕೆಯಾಯಿತು ಹಾಗೂ ಅದರಿಂದ ಬರುವ ಬಡ್ಡಿಯ ಮೊತ್ತದಲ್ಲಿ ನಿತ್ಯದ ಖರ್ಚುಗಳನ್ನು ನಿಭಾಯಿಸಲಾಗುತ್ತಿತ್ತು. 2013ರಲ್ಲಿ ತ್ರಿನೇತ್ರ ಆಧ್ಯಾತ್ಮಿಕ ಕೇಂದ್ರ ಮತ್ತು ಶ್ರೀ ಅನಂತಲಿಂಗೇಶ್ವರ ಸಂರಕ್ಷಣಾ ಮತ್ತು ಅಭಿವೃದ್ಧಿ ಸಮಿತಿಗಳ ಜಂಟಿ ನೇತೃತ್ವದಲ್ಲಿ ಪಂಡಿತ್ ದಿವಾಕರ್ ಭಂಡಾರಿಯವರ ನಾಯಕತ್ವದಲ್ಲಿ ಶ್ರೀಮದ್ ಭಾಗವತ ಮಹಾಪುರಾಣ ಮತ್ತು ಧನ್ಯಾಂಚಲ ಮಹಾಯಜ್ಞ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಕಾರ್ಯಕ್ರಮದಿಂದಲೂ ಕೂಡಾ ಧನಲಾಭವು ಒದಗಿ ಬಂದಿತು. ಸಾಲಿಕರಮ್ ನ್ಯೂಪಣೆ ಅವರು ಮೂಲ ಸಮಿತಿಯ ಅಧ್ಯಕ್ಷರಾಗಿದ್ದರು ಮತ್ತು ರಾಮ್ ಪ್ರಸಾದ್ ನ್ಯೂಪಣೆಯವರು ಕಾರ್ಯದರ್ಶಿಗಳಾಗಿದ್ದರು. ದೇವಿಪ್ರಸಾದ್ ನ್ಯೂಪಣೆಯವರು ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಗಳ ಸಮನ್ವಯಕಾರರಾಗಿ ನೇಮಕವಾದರು. ಇಂಜಿನಿಯರ್ ಕುಮಾರ್ ಉಪ್ರೇತಿಯವರ ಸಂಪೂರ್ಣ ಬೆಂಬಲದೊಂದಿಗೆ ನಿರ್ಮಾಣ ಕಾರ್ಯಗಳು ಆರಂಭವಾದವು ಮತ್ತು ಗಣೇಶ ದೇವಾಲಯವನ್ನು ನಿರ್ಮಿಸಲಾಯಿತು. ಪ್ರಧಾನ ದೇವಾಲಯದ ಗರ್ಭಗುಡಿಯಲ್ಲಿ ಅಖಂಡ ನಂದಾದೀಪ ಸೇವೆಯು ಕೂಡಾ ಕುಮಾರ್ ಉಪ್ರೇತಿಯವರ ಅಮೃತಹಸ್ತದಿಂದ ನೆರವೇರಿಸಲಾಯಿತು. 2015ರಲ್ಲಿ, ವೈಶಾಖದಲ್ಲಿ ಸಂಭವಿಸಿದ ಭೂಕಂಪದಿಂದಾಗಿ ದೇವಾಲಯವು ಭಗ್ನಗೊಂಡ ನಂತರ, ಪುರಾತತ್ವ ಇಲಾಖೆಯೊಂದಿಗಿನ ಸಹಯೋಗದಲ್ಲಿ ಎರಡು ಅಂತಸ್ತುಗಳ ಕಲ್ಲಿನ ದೇವಾಲಯಗಳನ್ನು ಪುನರ್ನಿರ್ಮಿಸಲಾಯಿತು.

ಪ್ರಾಚೀನ ಕಾಲದಲ್ಲಿ ಎರಡು ಅಂತಸ್ತುಗಳ ಕಲ್ಲಿನ ದೇವಾಲಯಗಳನ್ನು ನಿರ್ಮಿಸಲಾಗುತ್ತಿತ್ತು. 1935ರಲ್ಲಿ ಭೂಕಂಪದಿಂದಾಗಿ ದೇವಾಲಯವು ಧ್ವಂಸಗೊಂಡ ನಂತರ ಅದನ್ನು ಗುಂಬಜ್ ವಿನ್ಯಾಸದಲ್ಲಿ ಮರುನಿರ್ಮಾಣ ಮಾಡಲಾಗಿತ್ತು. ಅದಾಗಿ 82 ವರ್ಷಗಳ ನಂತರ ಮತ್ತೊಮ್ಮೆ ಭೂಕಂಪ ಸಂಭವಿಸಿದಾಗಲೂ ಕೂಡಾ ದೇವಾಲಯವು ತನ್ನ ಹಿಂದಿನ ಪರಿಸ್ಥಿತಿಯನ್ನೇ ಹೊಂದಿತ್ತು. ಅದನ್ನು ಮತ್ತೊಮ್ಮೆ ಮರುನಿರ್ಮಾಣ ಮಾಡಲಾಯಿತು. ಪ್ರಾಚೀನ ಕಾಲದಿಂದಲೂ ಈ ದೇವಾಲಯವು ಅಲೆಮಾರಿ ಸಮುದಾಯದಿಂದ ಪೂಜೆಗೊಳ್ಳುತ್ತಿದ್ದು, ಪ್ರಸ್ತುತ ನವರಾಜ್ ಜಂಗಮ್ ಅವರು ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ದೇವಾಲಯದ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯು ಭರತ್ ಜಂಗಮ್ ಅವರನ್ನು ಪೋಷಕರಾಗಿ ಸ್ವೀಕರಿಸಿದಾಗಿನಿಂದ, ಅವರ ಜವಾಬ್ದಾರಿಯು ಮತ್ತಷ್ಟು ಹೆಚ್ಚಿತು.

ಈ ಪ್ರದೇಶದಲ್ಲಿ ಬೃಂದಾವನ ನಿರ್ಮಾಣದ ಕಾರ್ಯವು ನೇಪಾಳ ಸರ್ಕಾರದ ಅರಣ್ಯ ಇಲಾಖೆಯಿಂದ ಸಾಕಷ್ಟು ತೊಂದರೆಗಳನ್ನು ಎದುರಿಸಿತು, ಇದರಿಂದಾಗಿ ಕೆಲವೊಮ್ಮೆ ನಿರ್ಮಾಣ ಕಾರ್ಯವು ಸ್ಥಗಿತಗೊಂಡಿತು ಅಥವಾ ಬಹಳ ನಿಧಾನಗತಿಯಿಂದ ಸಾಗಬೇಕಾಯಿತು. ಏನೇ ಆದರೂ, ಎಲ್ಲಾ ದೇವಾಲಯಗಳು ಮತ್ತು ಸ್ಥಳೀಯ ಸಮಿತಿಗಳು ಅನಂತಲಿಂಗೇಶ್ವರ ಅರಣ್ಯಪ್ರದೇಶವನ್ನು 'ಬೃಂದಾವನ' ಎಂದು ಕರೆಯಲು ಒಪ್ಪಿದವು ಮತ್ತು ಇದಕ್ಕೆ ಬಹಳ ಸುಲಭವಾಗಿ ಅನುಮೋದನೆಯೂ ದೊರೆಯಿತು. ವಾಸ್ತವದಲ್ಲಿ ಬೃಂದಾವನದ ನಿರ್ಮಾಣವು ಪೂರ್ಣಗೊಂಡಾಗ, ಅದು ಕೇವಲ ಅರಣ್ಯ

ಪ್ರದೇಶವನ್ನು ಮಾತ್ರ ರಕ್ಷಿಸುವುದಲ್ಲದೇ, ಅನೇಕ ಧಾರ್ಮಿಕ ಪ್ರವಾಸಿಗರನ್ನೂ ಸೆಳೆಯಿತು. ಸರ್ಕಾರದಿಂದ ಅನುಮೋದಿತ ನಿರ್ಮಾಣ ಕಾರ್ಯಗಳೊಂದಿಗೆ ಬೃಂದಾವನದ ನಿರ್ಮಾಣ ಪ್ರಗತಿಯಾಗುವುದೆಂಬ ಭರವಸೆಯು ಭರತ್ ಜಂಗಮ್ ಅವರಿಗೆ ಸ್ಥಿರವಾಗಿತ್ತು.

ತ್ರಿನೇತ್ರ ಆಧ್ಯಾತ್ಮಿಕ ಕೇಂದ್ರದ ಅಧ್ಯಕ್ಷರಾದ ಶ್ರೀಮತಿ ರೇಖಾ ಆರ್ಯಾಳ್‌ರವರು ಈ ನಿರ್ಮಾಣ ಕಾಮಗಾರಿಗಳ ಮೇಲುಸ್ತುವಾರಿಯನ್ನು ಹಲವು ರೀತಿಗಳಿಂದ ನಿಭಾಯಿಸುವಲ್ಲಿ ಅತ್ಯಂತ ಚಟುವಟಿಕೆಯಿಂದ ತೊಡಗಿಕೊಂಡರು. ಈ ಸಂದರ್ಭದಲ್ಲಿ ತ್ರಿನೇತ್ರ ಅವರೂ ಕೂಡಾ ವಿಶೇಷ ಸಲಹೆಗಾರರಾಗಿ ಆಕೆಯ ಎಲ್ಲಾ ಕಾರ್ಯಗಳಿಗೂ ಬೆಂಬಲವಾಗಿ ನಿಂತರು. ಭರತ್ ಜಂಗಮ್ ಅವರು ತ್ರಿನೇತ್ರ ಅವರ ಸಂಸ್ಥೆಯಲ್ಲಿ ಅಧ್ಯಕ್ಷರಾಗಿ ಬಹಳ ಕಡಿಮೆ ಸಮಯ ಕೆಲಸ ನಿರ್ವಹಿಸಿದ್ದರೂ ಕೂಡಾ, ಬೃಂದಾವನದ ನಿರ್ಮಾಣಕಾರ್ಯಗಳಲ್ಲಿ ತ್ರಿನೇತ್ರರವರ ಒಳಗೊಳ್ಳುವಿಕೆಯನ್ನು ನಿರೀಕ್ಷಿಸಿದ್ದರು. ನಿಂತು ಹೋಗಿದ್ದ ಬೃಂದಾವನದ ನಿರ್ಮಾಣಕಾರ್ಯಗಳನ್ನು ಪೂರೈಸಲು ತ್ರಿನೇತ್ರ ಅವರು ರೇಖಾ ಆರ್ಯಾಳ್ ಅವರಿಗೆ ಖಂಡಿತವಾಗಿ ಸಹಕಾರ ನೀಡುತ್ತಾರೆ ಎಂಬುದು ಭರತ್ ಜಂಗಮ್ ಅವರ ದೃಢವಾದ ನಂಬಿಕೆಯಾಗಿತ್ತು.

ಭರತ್ ಜಂಗಮ್‌ರವರು ಅನಂತಲಿಂಗೇಶ್ವರ ಪ್ರದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಾಗ, ಅವರ ಇತರೆ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳಿಗೆ ಹೋಲಿಸಿದರೆ, ಪೂರಕ ಅಭಿವೃದ್ಧಿ ಕಾರ್ಯಗಳು ಇನ್ನೂ ಸಾಧ್ಯವಾಗಿರಲಿಲ್ಲ. ದೇವಾಲಯದ ನಿರ್ಮಾಣ ಕಾರ್ಯಕ್ಕೆ ಅಡಿಪಾಯವನ್ನು ಹಾಕಿದ ನಂತರ ಮತ್ತು ಅಭಿವೃದ್ಧಿ ಕಾರ್ಯದ ಕುರಿತು ಅಗತ್ಯ ಪ್ರಯತ್ನಗಳು ಆದ ನಂತರ ಈ ಕಾರ್ಯವು ಮುಂದೆ ಪ್ರಗತಿಯಾಗುವುದೆಂಬ ಆಶಯವು ಅವರಿಗೆ ಬಂದಿತು. ಈ ಪ್ರದೇಶದಲ್ಲಿನ ಅಭಿವೃದ್ಧಿಗಾಗಿ ಅನಂತಲಿಂಗೇಶ್ವರ ಮಹಾದೇವನ ಕರುಣೆಯನ್ನು ಅವರು ಅಂತರಾಳದಿಂದ ಬೇಡಿದ್ದರು.

### 5) ದಕ್ಷಿಣ ಗೋದಾವರಿ ಪ್ರದೇಶದ ಶ್ರೀ ಶಿಖರೇಶ್ವರ ಮಹಾದೇವ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಯ ನಾಯಕತ್ವ

ಕಠ್ಮಂಡು ಜಿಲ್ಲೆಯ ಫಾರ್ಪಿಂಗ್‌ನಲ್ಲಿರುವ ಸತೀ ದೇವಿ ಗೋಶಾಳೆಯು ಈಗ ದಕ್ಷಿಣ ಗೋದಾವರಿಯ ದಕ್ಷಿಣಕಾಳಿ ಮುನಿಸಿಪಾಲಿಟಿ ಪ್ರದೇಶದ ವ್ಯಾಪ್ತಿಯಲ್ಲಿದೆ. ಅಲ್ಲಿ, 12 ವರ್ಷಗಳಿಗೊಮ್ಮೆ ಒಂದು ತಿಂಗಳ ಪರ್ಯಂತ ಜಾತ್ರೆಯನ್ನು ನಡೆಸಲಾಗುತ್ತದೆ. ಗೋದಾವರಿ ನದಿಯು ಲಲಿತಪುರ ಜಿಲ್ಲೆಯಲ್ಲಿದೆ ಮತ್ತು ಇಲ್ಲಿನ ಜಾತ್ರೆಯು ವಿಶ್ವಪ್ರಸಿದ್ಧವಾಗಿದೆ. ಲಲಿತಪುರದ ಗೋದಾವರಿಯು ತೆರೆದ ಪ್ರದೇಶದಲ್ಲಿದ್ದು, ಹಬ್ಬಗಳ ಸಂದರ್ಭದಲ್ಲಿ ಅಗತ್ಯವಾದ ನೀರಿನ ಪೂರೈಕೆಯ ವ್ಯವಸ್ಥೆಯನ್ನು ಮಾಡಲಿಕ್ಕಾಗಿ ಇಲ್ಲಿ ನೂರು ವರ್ಷಗಳ ಹಿಂದೆ ನಿರ್ಮಿಸಿದ ಕೊಳವೊಂದಿತ್ತು ಮತ್ತು ಜಾತ್ರೆಯ ಸಂದರ್ಭದಲ್ಲಿ ಅಗತ್ಯವಾದ ಸಾರಿಗೆ ಸಂಪರ್ಕಗಳ ವ್ಯವಸ್ಥೆಯನ್ನು ಒದಗಿಸಲಾಗುತ್ತಿತ್ತು. ಇವುಗಳಿಂದಾಗಿ ಅವರ ಗಮನವು 'ಗೋದಾವರಿ ಜಾತ್ರೆ'ಯ ಕಡೆಗೆ ಸೆಳೆಯಿತು. ಆದರೆ ಕಠ್ಮಂಡು ಜಿಲ್ಲೆಯಲ್ಲಿ ಗೋದಾವರಿ ಜಾತ್ರೆಯನ್ನು ಬಹಳ ಪ್ರಾಚೀನ ಕಾಲದಿಂದಲೂ ನಡೆಸಿಕೊಂಡು ಬರಲಾಗುತ್ತಿತ್ತು. ಇದನ್ನು ದಕ್ಷಿಣ ಗೋದಾವರಿ ಎಂದು ಕೂಡಾ ಕರೆಯಲಾಗುತ್ತಿತ್ತು. ಈ ಪವಿತ್ರ ಕ್ಷೇತ್ರವನ್ನು ಸಂದರ್ಶಿಸಿದ ನಂತರ, ಭರತ್ ಜಂಗಮ್ ಅವರು ಬಹಳಷ್ಟು ವಿಷಯಗಳನ್ನು ಕಲಿತರು.

2015ರಲ್ಲಿ, ಭದ್ರಾ ಉತ್ಸವದ ಸಂದರ್ಭದಲ್ಲಿ ಮಾಧ್ಯಮದ ಮುಖ್ಯಸ್ಥರಾದ ಶ್ರೀ ಖೇಮ್ ಗುರುಂಗ್ ಅವರು ಭರತ್ ಜಂಗಮ್ ಅವರನ್ನು ದಕ್ಷಿಣ ಗೋದಾವರಿಯ ಭೇಟಿಗಾಗಿ ವಿನಂತಿಸಿದರು. ಸ್ಥಳೀಯರಾದ ಶ್ರೀ ಗೌತಮ್ ಕೇಸಿಯವರು ಅವರಿಗೆ ಭರತ್ ಜಂಗಮ್ ಅವರ ಬಗ್ಗೆ ತಿಳಿಸಿದ್ದರು. ಅದೊಂದು ಧಾರ್ಮಿಕ ಕ್ಷೇತ್ರವಾಗಿದ್ದರಿಂದಲೂ ಮತ್ತು 'ದಕ್ಷಿಣ ಗೋದಾವರಿ' ಎಂಬ ಹೊಸ ಹೆಸರಿನಿಂದ ಗುರುತಿಸಿದ್ದರಿಂದಲೂ, ಭರತ್ ಜಂಗಮ್ ಅವರು ಈ ಭೇಟಿಗೆ ಸಮ್ಮತಿಸಿದರು. ಇಂದಿರಾ ಜಂಗಮ್ ಮತ್ತು ಖೇಮ್ ಗುರುಂಗ್ ಅವರ ತಂಡವು ದಕ್ಷಿಣ ಗೋದಾವರಿ ಪ್ರದೇಶಕ್ಕೆ ನಿಗದಿತ ಸಮಯದಲ್ಲಿ ಭೇಟಿ ನೀಡಿತು.

1964ರಲ್ಲಿ ಏಷಿಯಾದಲ್ಲಿ ನಿರ್ಮಿಸಲಾದ ಪ್ರಥಮ ಜಲವಿದ್ಯುತ್ ಯೋಜನೆಯಡಿ ಜಲಾಶಯದವರೆಗೆ ಉತ್ತಮ ರಸ್ತೆಯನ್ನು ನಿರ್ಮಿಸಲಾಗಿತ್ತು. ಆದರೆ ಸುಮಾರು 300 ಮೀಟರ್ ರಸ್ತೆಯನ್ನು ಉತ್ತಮಗೊಳಿಸುವುದು ನಿಜವಾಗಲೂ ಕಷ್ಟವಾಗಿದೆ. ಅದರಲ್ಲೂ ವಿಶೇಷವಾಗಿ ಕೆಳಗಿನ ನದಿಯವರೆಗೆ ಹೋಗುವ ರಸ್ತೆಯಲ್ಲಿ ಕಡಿದಾದ ಬಂಡೆಯ ಭಾಗಗಳು ಇವೆ. ಈ ಭೂಪ್ರದೇಶವನ್ನು ಅಭಿವೃದ್ಧಿಪಡಿಸುವ ಸವಾಲನ್ನು ಹೊರತುಪಡಿಸಿದರೆ, ಈ ಸ್ಥಳವು ಅತ್ಯಂತ ಆನಂದದಾಯಕವಾಗಿದೆ.

ಕಠ್ಮಂಡುವಿನ ರಾಜ ಪ್ರತಾಪಮಲ್ಲನು ದಕ್ಷಿಣಕಾಳಿ ದೇವಾಲಯವನ್ನು ನಿರ್ಮಾಣ ಮಾಡುವಾಗ ಮತ್ತು ಅಭಿವೃದ್ಧಿ ಮಾಡುವ ಸಂದರ್ಭದಲ್ಲಿ ಗೋದಾವರಿ ನದಿಯಲ್ಲಿ ಸ್ನಾನ ಮಾಡಲಿಕ್ಕೆ ಈ ಪ್ರದೇಶವನ್ನು ಬಳಸಿಕೊಂಡಿರಬಹುದು ಎಂದು

ಭರತ್ ಜಂಗಮ್‌ರವರು ತರ್ಕಿಸಿದ್ದರು. ವಿಕ್ರಮ ಯುಗದ ಆರಂಭದ ದಶಕದಲ್ಲಿ ದಕ್ಷಿಣಕಾಳಿ ದೇವಿಯ ಪ್ರಭಾವವು ಹೆಚ್ಚಾಗಿದ್ದಿತು ಮತ್ತು ಆ ಪ್ರದೇಶದಲ್ಲಿ ಅಗತ್ಯ ನೀರಿನ ಸೌಕರ್ಯವೂ ಇದ್ದಿದ್ದರಿಂದಾಗಿ, ಗೋದಾವರಿ ನದೀತಟದಲ್ಲಿ ದೇವಸ್ಥಾನ ನಿರ್ಮಾಣದ ಕಾರ್ಯಗಳನ್ನು ಕೈಗೊಂಡಿರಬಹುದು. ಭಾರತದಲ್ಲಿ, ಮೂಲ ಗೋದಾವರಿ ನದಿಯು ದಕ್ಷಿಣ ಭಾರತದಲ್ಲಿ ಹರಿಯುತ್ತದೆ ಹಾಗೂ ನದಿಯು ಹರಿಯುವ ದಾರಿಯುದ್ದಕ್ಕೂ ಹಲವಾರು ಸ್ನಾನಘಟ್ಟಗಳು ಮತ್ತು ದೇವಾಲಯಗಳು ಇವೆ. ಗೋದಾವರಿ ನದಿಯ ಉಗಮಸ್ಥಾನಕ್ಕೆ ಹೋಗಲು ಸಾಧ್ಯವಾಗದ ಜನರು ನದಿಯು ಹರಿಯುವ ಮಾರ್ಗದ ಇಕ್ಕೆಲಗಳಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಅಲ್ಲಲ್ಲೇ ಸ್ನಾನಘಟ್ಟಗಳನ್ನು ಮತ್ತು ದೇವಾಲಯಗಳನ್ನು ನಿರ್ಮಿಸಿಕೊಂಡಿದ್ದಾರೆ. ಅದರಂತೆಯೇ ಕಠ್ಮಂಡುವಿನ ರಾಜ ಪ್ರತಾಪಮಲ್ಲನು ಫಾರ್ಪಿಂಗ್‌ನಲ್ಲಿಯೂ ಮತ್ತು ನಂತರ ರಾಜ ಶ್ರೀನಿವಾಸ ಮಲ್ಲನು ಉತ್ತರದಲ್ಲಿ ಫುಲ್ಚೋಕಿಯ ಹತ್ತಿರ, ಸಾಕಷ್ಟು ನೀರಿರುವ ಪ್ರದೇಶದಲ್ಲಿಯೂ ಸ್ನಾನಘಟ್ಟಗಳನ್ನು ನಿರ್ಮಿಸಿರಬಹುದು.

ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಸೂರ್ಯ ಮತ್ತು ಗುರುಗ್ರಹಗಳು ಸಿಂಹರಾಶಿಯಲ್ಲಿರುವಾಗ ಅದನ್ನು ಸಿಂಹಯೋಗವೆಂದು ಪರಿಗಣಿಸಲಾಗುತ್ತದೆ. ಸಿಂಹಯೋಗವಿರುವಾಗ ಒಂದು ತಿಂಗಳು ಪವಿತ್ರ ನದಿಗಳಲ್ಲಿ ಸ್ನಾನಮಾಡುವುದು ಪವಿತ್ರಕಾರ್ಯವೆಂಬ ನಂಬಿಕೆ ಸನಾತನ ಹಿಂದೂಧರ್ಮದಲ್ಲಿ ಇದೆ. ಆದ್ದರಿಂದಲೇ ಗೋದಾವರಿ ನದಿಯ ದಡದಲ್ಲಿ ಕುಂಭಮೇಳವನ್ನು ಆಯೋಜಿಸಲಾಗುತ್ತದೆ. ಈ ಕುಂಭಮೇಳವನ್ನು ಹನ್ನೆರಡು ವರ್ಷಗಳಿಗೊಮ್ಮೆ ಆಚರಿಸಲಾಗುತ್ತದೆ. ಮುಂದಿನ ಗೋದಾವರಿ ಕುಂಭಮೇಳವು 2027ರಲ್ಲಿ ನಡೆಯಲಿದೆ.

2015ರಲ್ಲಿ ಕುಂಭಮೇಳವು ನಡೆದಾಗ ಭರತ್ ಜಂಗಮ್ ಅವರು ಅದರಲ್ಲಿ ಭಾಗವಹಿಸಿದ್ದರು ಹಾಗೂ ಮೇಳದ ಕುರಿತಾಗಿ ಅವರ ವೈಯಕ್ತಿಕ ಭಾವನೆಗಳನ್ನು ಹಂಚಿಕೊಳ್ಳಲು ಚರ್ಚಿಸಿ, ಅವುಗಳ ಪ್ರಸಾರವನ್ನು ಮೇಳದುದ್ದಕ್ಕೂ ಹಿಮಾಲಯ ಟಿವಿಯಲ್ಲಿ ಮಾಡಲಾಗಿತ್ತು. ಇದೇ ಸಮಯದಲ್ಲಿ ಅವರ ಗೆಳೆಯರೊಬ್ಬರು ಅವರಿಗೆ ಲಲಿತಪುರದ ಗೋದಾವರಿ ಮೇಳದ ಕುರಿತು ಹೇಳಿದ್ದರು ಹಾಗೂ ಮೂರ್‍ನಾಲ್ಕು ದಿನಗಳ ನಂತರ ಅಲ್ಲಿಗೂ ಭೇಟಿ ನೀಡಲು ನಿರ್ಧರಿಸಲಾಯಿತು. ಅಲ್ಲಿನ ಧಾರ್ಮಿಕ ಕಾರ್ಯಕ್ರಮವೊಂದಕ್ಕೆ ಭರತ್ ಜಂಗಮ್ ಅವರನ್ನೂ ಆಹ್ವಾನಿಸಲಾಯಿತು. ಅವರು ಆ ಕಾರ್ಯಕ್ರಮಕ್ಕೆ ಹೋಗಿ ವೇದಿಕೆಯ ಸಮೀಪ ಕುಳಿತಿದ್ದರು. ಅಲ್ಲಿ ಕೆಲವು ಜನರು ಧಾರ್ಮಿಕ ನೀತಿಗಳಿಗೆ ವಿರುದ್ಧವಾಗಿ ವರ್ತಿಸುವ ಸ್ವಭಾವವುಳ್ಳ ಕೆಲವರನ್ನು ಕೈತೋರಿಸಿ ಗುರುತಿಸುತ್ತಿದ್ದರು ಹಾಗೂ ಕಳೆದ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದ್ದ ಗೋದಾವರಿ ಮೇಳದ ಪ್ರಯೋಜನವನ್ನು ಪಡೆಯುವಂತಹವರನ್ನು ಹುಡುಕುತ್ತಿದ್ದರು ಹಾಗೂ ತಮ್ಮನ್ನು ತಾವು ದಕ್ಷಿಣ ಗೋದಾವರಿಯವರು ಎಂದು ಕರೆದುಕೊಳ್ಳುತ್ತಾ ಮಿಕ್ಕವರನ್ನು ಕುರಿತು ಆಡಿಕೊಳ್ಳುತ್ತಿದ್ದರು ಎಂಬುದನ್ನು ಭರತ್ ಜಂಗಮ್‌ರವರು ಗಮನಿಸಿದರು. ಅವರು ಸುಮ್ಮನೆ ಕುಳಿತು ಅವರಾಡುವುದನ್ನೆಲ್ಲಾ ಕೇಳಿಸಿಕೊಂಡರು ಮತ್ತು ಅಲ್ಲಿಂದ ಸದ್ದಿಲ್ಲದೆ ಹೊರಟುಬಿಟ್ಟರು. ಹಲವಾರು ಭೇಟಿಗಳ ಬಳಿಕ, ಕಠ್ಮಂಡು ಮತ್ತು ಲಲಿತಪುರಗಳಲ್ಲಿ ಗೋದಾವರಿ ಕುಂಭಮೇಳಗಳನ್ನು ಒಂದೇ ಬಾರಿಗೆ ಆರಂಭಿಸುವುದರ ವಾಸ್ತವಾಂಶವನ್ನು ಅವರು ಕಂಡುಕೊಂಡರು. ವಾಸ್ತವದಲ್ಲಿ ಇದು ತನಿಖೆಯಾಗಬೇಕಾದ ವಿಚಾರವಾಗಿತ್ತು. ಈ ಕುರಿತು ಸತ್ಯವನ್ನು ಜನರ ಮುಂದಿಡುವಂತೆ ಇತರೆ ವಿದ್ವಾಂಸರನ್ನು ಅವರು ಕಳಕಳಿಯಿಂದ ವಿನಂತಿಸಿದರು.

ಆ ಪ್ರದೇಶದ ಜೀರ್ಣೋದ್ಧಾರದ ಸಂದರ್ಭದಲ್ಲಿ, ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು. ಕೇಶವ ಪ್ರಸಾದ್ ಪೌದೇಲರು ಆ ಸಮಿತಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು. ರಾಮ್ ಪ್ರಸಾದ್ ಪೌದೇಲರು ಉಪಾಧ್ಯಕ್ಷರಾಗಿಯೂ, ಬದ್ರಿ ಕರ್ಕಿಯವರನ್ನು ಕಾರ್ಯದರ್ಶಿಯವರನ್ನಾಗಿಯೂ ನೇಮಿಸಿ ಒಟ್ಟಾರೆ 9 ಜನ ಸದಸ್ಯರ ಸಮಿತಿಯು ಆ ಪ್ರದೇಶದ ಅಭಿವೃದ್ಧಿಗಾಗಿ ನೇಮಿಸಲ್ಪಟ್ಟಿತು. ಸ್ವಲ್ಪ ದಿನದ ನಂತರ, ರಾಮ್ ಪ್ರಸಾದ್‌ಜೀಯವರು ನನ್ನನ್ನು ಭೇಟಿಯಾದಾಗ "ಈ ಹಿಂದೆ ಅಲ್ಲಿ ವಿಗ್ರಹವಿತ್ತು ಅನಿಸುತ್ತದೆ. ಈಗ ಅಲ್ಲಿ ಏನೂ ಇಲ್ಲ. ಬರೀ ಗೋಮಾತಾ ಸರೋವರ ಅಷ್ಟೇ ಇದೆ. ಅದೂ ಕೂಡಾ ಗೋವಿನ ಪಾದವನ್ನು ಹೋಲುವ ಕಲ್ಲಿನಂತೆ ಕಾಣುತ್ತದೆ. ನಾವು ಕೆಲವು ಪ್ರತಿಮೆ/ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡೋಣ" ಎಂದರು. ಇದಕ್ಕೆ ಭರತ್ ಜಂಗಮ್‌ರವರು ತಕ್ಷಣವೇ "ನಾವಿಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸುವುದು ಬೇಡ" ಎಂದು ಉತ್ತರಿಸಿದರು.

ಭರತ್ ಜಂಗಮ್‌ರ ಮನೆಯಲ್ಲಿದ್ದ ಶಿವಲಿಂಗವನ್ನು ಅವರು ಅರಿತಿದ್ದರು. ಆ ಲಿಂಗಕ್ಕೆ ಏನೆಂದು ಹೆಸರಿಡುವುದು ಎಂಬುದೇ ಪ್ರಶ್ನೆಯಾಗಿತ್ತು. ಅವರು ಆ ಶಿವಲಿಂಗದ ಹೆಸರನ್ನು ಒಂದು ಹಾಳೆಯಲ್ಲಿ ಬರೆದು, ಅದನ್ನು ದಕ್ಷಿಣ ಕಾಳಿ ಮತ್ತು ಶೇಷನಾರಾಯಣ ಎಂದು ಪರಿಗಣಿಸುವಂತೆ ತಿಳಿಸಿದರು. ನಂತರ ಅದನ್ನು ರಾಮ್‌ಪ್ರಸಾದ್‌ರವರ ಕೈಯಲ್ಲಿ ಕೊಟ್ಟು "ಬೇಗ ಒಂದು ಬ್ಯಾನರ್ ಮಾಡಿಸಿ, ಮತ್ತು ಒಂದು ಪೀಠವನ್ನು ಸಿದ್ಧಪಡಿಸಿ. ಈ ಶಿವಲಿಂಗವನ್ನು ಮೇಳ ನಡೆಯುವ ಸ್ಥಳದ ವೇದಿಕೆಗೆ

ಫಾರ್ಪಿಂಗ್ ಪೊಖಾರಿಯಿಂದ ಮೆರವಣಿಗೆಯಲ್ಲಿ ತನ್ನಿ. ನಾವು ನಾಳೆ ಬೆಳಗ್ಗೆ 9.00 ಗಂಟೆಗೆ ಈ ಶಿವಲಿಂಗವನ್ನು ಪಡೆಯಲು ಬರುತ್ತೇವೆ" ಎಂದು ತಿಳಿಸಿದರು.

ಡಾ. ವಿಶ್ವಾಸಾನಂದರು ದಕ್ಷಿಣ ಭಾರತದಿಂದ ಬಂದವರಾಗಿದ್ದರು. ಅವರನ್ನೂ ಕೂಡಾ ಈ ಸಮಾರಂಭದಲ್ಲಿ ಸೇರಿಸಿಕೊಳ್ಳಬೇಕಿತ್ತು. ಭರತ್ ಜಂಗಮ್‌ರವರು ತಮ್ಮ ಸ್ನೇಹಿತರಾಗಿದ್ದ, ಗಾಯಿತ್ರಿ ಕುಟುಂಬದ ಅಧ್ಯಕ್ಷರಾಗಿದ್ದ ಕೇಶವ್ ಮರಾಠಾರನ್ನೂ ಜೊತೆಯಲ್ಲಿ ಕರೆತರಲು ಸಲಹೆ ನೀಡಿದ್ದರು. ಮೇಳದ ಮಾಧ್ಯಮ ವರದಿ ಸಮಿತಿಯ ಗುಂಪು, ಖೇಮ್ ಗುರುಂಗ್‌ರವರನ್ನೂ ಜೊತೆಯಲ್ಲಿ ಕರೆದುಕೊಂಡು, ಫಾರ್ಪಿಂಗ್‌ನಲ್ಲಿ ನಿಗದಿಯಾಗಿದ್ದ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ತಲುಪುವಂತೆ ವ್ಯವಸ್ಥೆ ಮಾಡಲಾಯಿತು. ನೂರಾರು ಸಂಖ್ಯೆಯ ಯುವಭಕ್ತರು ತಮ್ಮ ಕೈಗಳಲ್ಲಿ ಸಣ್ಣ ಪೀಠವನ್ನು ಹಿಡಿದುಕೊಂಡು, ಅದರೊಂದಿಗೆ ನೇಪಾಳಿ ಸಾಂಪ್ರದಾಯಿಕ ಶೈಲಿಯಲ್ಲಿ 'ಶಿಖರೇಶ್ವರ ಮಹಾದೇವನಿಗೆ ಜಯವಾಗಲಿ' ಎಂಬ ಬರಹದ ಬ್ಯಾನರ್‌ಗಳನ್ನು ಹಿಡಿದುಕೊಂಡು ಬರುತ್ತಿದ್ದುದನ್ನು ಕಂಡು ಭರತ್ ಜಂಗಮರಿಗೆ ಆಶ್ಚರ್ಯವಾಯಿತು. ಬ್ಯಾನರ್‌ಗಳ ಮೇಲಿದ್ದ 'ಶಿಖರೇಶ್ವರ ಮಹಾದೇವ' ಎಂಬ ಹೆಸರು ಅವರನ್ನು ಚಕಿತಗೊಳಿಸಿತ್ತು. ಈ ಬ್ಯಾನರ್‌ಗಳನ್ನು ಭರತ್ ಜಂಗಮ್ ಅವರು ಕೊಟ್ಟಿದ್ದ ಹಾಳೆಯಲ್ಲಿದ್ದ ಪ್ರಕಾರವೇ ತಯಾರಿಸಲಾಗಿತ್ತಾದ್ದರಿಂದ ಈ ಕುರಿತು ಅವರು ರಾಮ್ ಪ್ರಸಾದ್‌ಜೀಯವರನ್ನು ಪ್ರಶ್ನಿಸಲು ಹೋಗಲಿಲ್ಲ. ಅದು ಹೇಗೆ ಅವರು ತಮ್ಮ ಇಚ್ಛೆಗೆ ವಿರುದ್ಧವಾಗಿ ಹಾಳೆಯಲ್ಲಿ ಹಾಗೆ ಬರೆದರು ಎಂಬುದೇ ಅವರಿಗೆ ಯಕ್ಷಪ್ರಶ್ನೆಯಾಗಿತ್ತು!!!

ಐದು ವರ್ಷಗಳ ನಂತರ, ಪುಸ್ತಕವೊಂದನ್ನು ಓದುತ್ತಿದ್ದಾಗ, ಫಾರ್ಪಿಂಗ್ ಪ್ರದೇಶದ ಮೊದಲಿನ ಹೆಸರು ಶಿಖರಪುರ ಎಂದಿತ್ತು ಎಂಬುದು ಅವರಿಗೆ ತಿಳಿದು ಬಂತು!!! ಇದಾದ ನಂತರ 'ಶಿಖರೇಶ್ವರ ಮಹಾದೇವನ ಇಚ್ಛೆಯನುಸಾರವಾಗಿಯೇ ತಮ್ಮ ಲೇಖನಿಯಿಂದ ತಮಗೆ ಅರಿವಿಲ್ಲದಂತೆಯೇ ಭಗವಂತನ ಹೆಸರನ್ನು ಬರೆಯಲಾಗಿದೆ ಹಾಗೂ ತಾವು ಇಲ್ಲಿ ಕೇವಲ ನಿಮಿತ್ತಮಾತ್ರ' ಎಂಬ ಸತ್ಯವು ಭರತ್ ಜಂಗಮರಿಗೆ ಮನವರಿಕೆಯಾಯಿತು, ಏನಾದರೂ ಆಗಿರಲಿ, ಒಟ್ಟಾರೆಯಾಗಿ ಶಿಖರೇಶ್ವರ ಮಹಾದೇವನ ಶಿವಲಿಂಗವನ್ನು ಮೆರವಣಿಗೆಯ ಮೂಲಕ ತಂದು, ದಕ್ಷಿಣಕಾಳಿ ಪ್ರದೇಶದಲ್ಲಿ ಪ್ರತಿಷ್ಠಾಪಿಸುವ ಕೆಲಸವು ದೇವಾಲಯದ ಆವರಣದಲ್ಲಿ ಯಜ್ಞವನ್ನು ಮಾಡುವ ಮೂಲಕ ಯಶಸ್ವಿಯಾಗಿ ಪೂರ್ಣಗೊಂಡಿತು.

ನೆರೆದಿದ್ದ ಎಲ್ಲಾ ಭಕ್ತಾದಿಗಳು, ಸಮಿತಿಯ ಅಧಿಕಾರಿಗಳು ಹಾಗೂ ಅಲ್ಲಿಗೆ ತೆರಳಿದ್ದ ಸ್ವಯಂಸೇವಕರ ಸಮ್ಮುಖದಲ್ಲಿ ಶಿವಲಿಂಗವು ಸಂಭ್ರಮದಿಂದ ಪ್ರತಿಷ್ಠಾಪಿಸಲ್ಪಟ್ಟಿತು ಹಾಗೂ ಅದರ ನಂತರದ ಪೂಜಾ ವಿಧಿವಿಧಾನಗಳು ಸಾಂಗವಾಗಿ ನೆರವೇರಿ, ಯಶಸ್ವಿಯಾಗಿ ಪೂರ್ಣಗೊಂಡಿತು. ಈ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ಮೊದಲುಗೊಂಡವು. ಅದೇ ಸಮಯದಲ್ಲಿ ಶಿಖರೇಶ್ವರ ಮಹಾದೇವನಿಗೆ, ಗೋಮಾತೆ ಮತ್ತು ಗೋದಾವರಿ ನದಿಗೆ ನಿತ್ಯಪೂಜೆ ಸಲ್ಲಿಸುವಿಕೆ ಆರಂಭವಾಯಿತು. ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಸಮಯಪ್ರಜ್ಞೆಯುಳ್ಳ ವ್ಯಕ್ತಿತ್ವದ ಹೆಸರಾಂತ ತತ್ವಜ್ಞಾನಿಯಾದ ಭರತ್ ಜಂಗಮ್‌ರವರು ತಾವು ಈಗಾಗಲೇ ನಿರ್ವಹಿಸುತ್ತಿದ್ದ ದೇವಸ್ಥಾನದ ಪ್ರಾಂಗಣ ವಿಸ್ತರಣೆ ಹಾಗೂ ನದೀತೀರದಲ್ಲಿ ದೇವಾಲಯದ ಪ್ರದೇಶದ ಅಭಿವೃದ್ಧಿ ಕಾರ್ಯಗಳ ಜೊತೆಜೊತೆಗೆ ಭಕ್ತರಿಗೆ ಮಾರ್ಗದರ್ಶಕರಾಗಿ, ಸ್ಥಳೀಯ ಇತಿಹಾಸ ತಿಳಿಸಲು ನಿಯುಕ್ತರಾದರು.

2015ರವರೆಗೂ, ದಕ್ಷಿಣ ಗೋದಾವರಿ ಪ್ರದೇಶದ ತೀರ್ಥಕ್ಷೇತ್ರಗಳು ಅಷ್ಟೊಂದು ಅಭಿವೃದ್ಧಿಯನ್ನು ಹೊಂದಿರಲಿಲ್ಲ. ಇಲ್ಲಿ ಜಾತ್ರೆಯು ಪ್ರತಿ ವರ್ಷಕ್ಕೊಮ್ಮೆ ಮಾತ್ರ ನಡೆಯುತ್ತಿದ್ದುದರಿಂದ, ಜಾತ್ರೆಯ ಹೊತ್ತಿಗೆ ಮಾತ್ರ ರಸ್ತೆಗಳನ್ನು ತಾತ್ಕಾಲಿಕವಾಗಿ ರಿಪೇರಿ ಮಾಡಲಾಗುತ್ತಿತ್ತು. ಆದರೆ ಈಗ ಪ್ರತಿವರ್ಷ ತಪ್ಪದೇ ಜಾತ್ರೆಯು ನಡೆಯುವುದರೊಂದಿಗೆ, ಉತ್ತಮ ರಸ್ತೆಗಳ ನಿರ್ಮಾಣ, ಭಕ್ತಾದಿಗಳಿಗೆ ಅಗತ್ಯ ವಾಸ್ತವ್ಯ ನಿರ್ಮಾಣ, ನದೀತೀರದ ಪ್ರದೇಶಗಳನ್ನು ಅಚ್ಚುಕಟ್ಟುಗೊಳಿಸುವಿಕೆಗಳಂತಹ ಕಾರ್ಯಗಳನ್ನು ಕೈಗೊಂಡಿರುವುದರಿಂದ ದಕ್ಷಿಣ ಗೋದಾವರಿಗೆ ಹೊಸ ಅಸ್ಮಿತೆಯನ್ನು ನೀಡಿದಂತಾಗಿದೆ. ಪ್ರಸ್ತುತ ಇಲ್ಲಿನ ಅಭಿವೃದ್ಧಿ ಕಾರ್ಯಗಳು, ನಿರ್ಮಾಣ ಕಾರ್ಯಗಳು ಹಾಗೂ ಇಲ್ಲಿನ ಧಾರ್ಮಿಕ ನೀತಿಗಳ ಕುರಿತಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ಇಲ್ಲಿನ ಸ್ಥಳೀಯ ಸಮಿತಿಗೆ ವಹಿಸಲಾಗಿದ್ದು, ಶ್ರೀ ಭರತ್ ಜಂಗಮ್‌ರವರು ಈ ಪ್ರದೇಶದ ಅಭಿವೃದ್ಧಿ ಕಾರ್ಯಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾಗ, ಇಲ್ಲಿನ ಪ್ರದೇಶದ ಅಭಿವೃದ್ಧಿಯ ಜವಾಬ್ದಾರಿಯು ನಿಜಕ್ಕೂ ಸವಾಲಿನ ಕೆಲಸವಾಗಿತ್ತು ಎಂದರೆ ತಪ್ಪಾಗಲಾರದು.

**6) ವಾಗೇಶ್ವರ ಮಹಾದೇವ ಪ್ರದೇಶದ ಪುನರ್ನಿರ್ಮಾಣ ಕಾರ್ಯ**

ಹಿಂದೆ, ವಾಗೇಶ್ವರ ಮಹಾದೇವ ದೇವಸ್ಥಾನವು ಭಕ್ತಾಪುರ ಜಿಲ್ಲೆಯಲ್ಲಿ ವಾಗೇಶ್ವರಿ ಗ್ರಾಮವೆಂದೇ ಹೆಸರಾಗಿದ್ದ ಚಂಗುನಾರಾಯಣ ಮುನಿಸಿಪಾಲಿಟಿ ವ್ಯಾಪ್ತಿಗೆ ಬರುವ ವಾರ್ಡ್ ನಂ. 4ರ ಪ್ರದೇಶದಲ್ಲಿ ಇತ್ತು. ಈ ದೇವಾಲಯವನ್ನು ಕಳೆದ ಸುಮಾರು 50 ವರ್ಷಗಳಿಂದ ವಲ್ಮೀಕೇಶ್ವರ ಮಹಾದೇವ ದೇವಾಲಯ ಅಂತ ಗುರುತಿಸಲಾಗುತ್ತಿತ್ತು. ಹಿಮಾಲಯನ್ ಖಂಡವನ್ನು ಓದಿದ ಕೆಲವು ಬ್ರಾಹ್ಮಣರು ಇಲ್ಲಿನ ದೇವತೆ ವಾಗೇಶ್ವರ ಮಹಾದೇವ ಅಲ್ಲ, ಬದಲಿಗೆ ವಲ್ಮೀಕೇಶ್ವರ ಎಂದು ದಾವೆ ಹೂಡಿದ ಕಾರಣದಿಂದಾಗಿ ಈ ತಪ್ಪುತಿಳಿವಳಿಕೆ ಉಂಟಾಗಿದೆ. ಅದಕ್ಕೆ ಅನುಗುಣವಾಗಿ ಇಲ್ಲಿನ ನಿವಾಸಿಗಳೂ ಕೂಡಾ ಈ ದೇವಸ್ಥಾನವನ್ನು ವಲ್ಮೀಕೇಶ್ವರ ಮಹಾದೇವ ಎಂದೇ ಗುರುತಿಸಲು ತೊಡಗಿದರು. ಇಲ್ಲಿನ ಸ್ಥಳೀಯ ಶಾಲೆಯ ಹೆಸರೂ ಸಹಾ ವಲ್ಮೀಕೇಶ್ವರ ಎಂದೇ ಇದೆ.

ಸ್ಥಳದ ಹೆಸರು ಬದಲಾದ ವರ್ಷಗಳಲ್ಲಿ ಅಂದರೆ ಸುಮಾರು 2000ನೇ ಇಸವಿಯಲ್ಲಿ ಭರತ್ ಜಂಗಮ್ ಅವರು ಈ ಪ್ರದೇಶಕ್ಕೆ ಮೊದಲು ಭೇಟಿ ನೀಡಿದರು. ಆ ಸಂದರ್ಭದಲ್ಲಿ ದೇವಾಲಯದ ಆವರಣದಲ್ಲಿ, ಮುಖ್ಯ ದೇವಾಲಯವು ವಾಗೇಶ್ವರ ಮಹಾದೇವನದ್ದೇ ಆಗಿದ್ದರೂ, ಅಲ್ಲಿ ಮೂಲ ಲಿಂಗವೇ ಇರಲಿಲ್ಲ ಮತ್ತು ಅದರ ಬದಲಿಗೆ ಇತರೆ ಲಿಂಗಗಳನ್ನು ಪೂಜಿಸಲಾಗುತ್ತಿತ್ತು. ದೇವಾಲಯದ ಒಳಗೆ, ಮೊದಲನೆಯ ಮಹಡಿಯಲ್ಲಿ ಅರ್ಧನಾರೀಶ್ವರನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿತ್ತು. ಅಲ್ಲದೆ ದೇವಾಲಯದ ಒಳಗೆ ಎರಡು ಭಾಗಗಳಾಗಿ ಒಡೆದು ಹೋಗಿದ್ದ ಉಮಾಮಹೇಶ್ವರರ ವಿಗ್ರಹವೂ ಇತ್ತು. ಗಣೇಶನ ವಿಗ್ರಹವಿದ್ದ ದೇವಾಲಯದ ಮೇಲ್ಛಾವಣಿಯು ಒಡೆದು ಹೋಗಿತ್ತು. ಮುಖ್ಯ ದೇವಾಲಯದ ಪಶ್ಚಿಮಕ್ಕೆ, ಒಂದು ದೃಢವಾಗಿ ಕಟ್ಟಿದ್ದ ಕಲ್ಲಿನ ಗೋಡೆಯಿತ್ತು, ಒಂದು ಸಣ್ಣ ಕೊಳವನ್ನು ನಿರ್ಮಿಸಲಾಗಿತ್ತು ಮತ್ತು ಹೊಳೆಯ ಕಾಲುವೆಯಿಂದ ಹರಿದ ನೀರು ಆ ಕೊಳದ ಉತ್ತರ ಭಾಗಕ್ಕೆ ಬರುವಂತೆ ವ್ಯವಸ್ಥೆ ಮಾಡಲಾಗಿತ್ತು. ಹೊಳೆಯ ಕಾಲುವೆಯ ಎರಡೂ ಬದಿಗಳಲ್ಲಿ ಕಲ್ಲಿನ ಸಿಂಹಗಳನ್ನು ನಿರ್ಮಿಸಲಾಗಿತ್ತು. ದೇವಾಲಯದ ನೇರ ಪಶ್ಚಿಮದಿಕ್ಕಿಗೆ ಸರಿಯಾಗಿ ಒಂದು ಕೊಳವಿತ್ತು, ಆ ಕೊಳದಲ್ಲಿ ಉತ್ತರದಿಕ್ಕಿನತ್ತ ಕಲ್ಲಿನ ಒಂದು ಚಪ್ಪಡಿಯನ್ನು ಹಾಕಲಾಗಿತ್ತು. ದೇವಸ್ಥಾನಕ್ಕೆ ಸೇರಿದ ಕೆಲವು ಪ್ರದೇಶಗಳು ದೇವಾಲಯಕ್ಕೆ ಹೊಂದಿಕೊಂಡಿದ್ದವು ಮತ್ತು ಆ ಪ್ರದೇಶದ ದಕ್ಷಿಣಕ್ಕೆ, ಅಂದಾಜು ಎರಡು ಮೂರು ಎಕರೆ ಪ್ರದೇಶವನ್ನು ತ್ರಿವೇಣಿ ಘಾಟ್ ಎಂದು ಕರೆಯಲಾಗುತ್ತಿತ್ತು. ಇದು ಆ ಪ್ರದೇಶದ ಸ್ಮಶಾನವಾಗಿತ್ತು.

ಈ ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ ಸ್ಮಶಾನವನ್ನು ಉಪಯೋಗಿಸುತ್ತಿದ್ದ ಹಳ್ಳಿಗರು ವಾಗೇಶ್ವರ ಮಹಾದೇವನತ್ತ ಆಕರ್ಷಿತರಾಗಿಲ್ಲ ಎಂಬುದನ್ನು ಗಮನಿಸಲಾಯಿತು. ದೇವಾಲಯದ ಜಮೀನನ್ನು ಅಭಿವೃದ್ಧಿಪಡಿಸಲು ಗುತ್ತಿಗೆದಾರರಿಗೆ ನೀಡಲಾಗಿದ್ದು, ಗುತ್ತಿಗೆ ಕಾನೂನು ಜಾರಿಗೆ ಬಂದ ನಂತರ, ಗುತ್ತಿಗೆದಾರರ ಜಮೀನನ್ನು ರೈತಾಪಿ ಜಮೀನೆಂದು ಘೋಷಿಸಲಾಯಿತು ಮತ್ತು ದೇವಾಲಯದಲ್ಲಿ ಪೂಜೆ ಸಲ್ಲಿಸುವ ಪದ್ಧತಿಯು ಬಹುತೇಕ ಮರೆಯಾಯಿತು. ಈ ಸಂದರ್ಭದಲ್ಲಿ 2003ರಲ್ಲಿ ಭರತ್ ಜಂಗಮ್‌ರವರು ಈ ಪ್ರದೇಶಕ್ಕೆ ಮತ್ತೊಮ್ಮೆ ಭೇಟಿ ನೀಡಿದ್ದರು ಮತ್ತು ಆ ಪ್ರದೇಶದ ಬಗ್ಗೆ ಒಂದು ಲೇಖನವನ್ನು ಬರೆದಿದ್ದರು. ಆ ಲೇಖನವು 2004ರಲ್ಲಿ 'ಖೋಪ್ರಾಂಗ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರ ನಂತರ, ಭರತ್ ಜಂಗಮ್‌ರವರು ಎರಡು ಮೂರು ಬಾರಿ ಆ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿನ ಸ್ಥಳೀಯ ಮುಖ್ಯಸ್ಥರಾದ ಪ್ರೇಮ್ ಪ್ರಸಾದ್ ಕಾಫ್ಲೆ ಮತ್ತು ರಾಮಕೃಷ್ಣ ಲಾಗಾಯತ್ ಅವರೊಂದಿಗೆ ಭೇಟಿಯಾಗಿ ದೇವಸ್ಥಾನವನ್ನು ಅಭಿವೃದ್ಧಿಪಡಿಸಲು ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಚರ್ಚಿಸಿದರು. ಅವರು ದೇವಾಲಯದಲ್ಲಿ ನಿತ್ಯಪೂಜಾದಿ ಕೈಂಕರ್ಯಗಳನ್ನು ನೆರವೇರಿಸಲು ಭರತ್ ಜಂಗಮ್ ಅವರಿಂದ ಒಂದಿಷ್ಟು ಆರ್ಥಿಕ ಸಹಕಾರ ಕೇಳಿದರು. ಭರತ್ ಜಂಗಮ್ ಅವರು ಒಂದಿಷ್ಟು ಹಣಸಹಾಯ ಮಾಡಿದರು. ಸ್ಥಳೀಯರು ಒಂದಿಷ್ಟು ಜಾಗೃತರಾದೊಡನೆ, ಆ ಸ್ಥಳದಲ್ಲಿ ಒಂದು ವಾರ ಪರ್ಯಂತ ಮಹಾಯಜ್ಞವನ್ನು ಆಯೋಜಿಸಲಾಯಿತು. ಈ ಯಜ್ಞದಿಂದ ಬಂದ ದೇಣಿಗೆ ಮೊತ್ತದಲ್ಲಿ ದೇವಾಲಯದ ಮೆಟ್ಟಿಲುಗಳನ್ನು ದುರಸ್ತಿಗೊಳಿಸಲಾಯಿತು ಮತ್ತು ದೇವಾಲಯಕ್ಕೆ ಸೇರಿದ ಪ್ರದೇಶದ ಪಶ್ಚಿಮ ಭಾಗದಲ್ಲಿ ಜೀರ್ಣೋದ್ಧಾರ ಕಾರ್ಯವನ್ನು ಮಾಡಲಾಯಿತು.

ವಾಗೇಶ್ವರ ಮಹಾದೇವ ದೇವಾಲಯನ್ನು ಮೂರು ಕಡೆಗಳಿಂದ ತಲುಪಬಹುದು. ಖಾರಿಪತಿಯ ಬಿದಿರು ಅರಣ್ಯಪ್ರದೇಶದಿಂದ ಗುರುಂಗ್ ಗ್ರಾಮದ ಮೂಲಕ ಹಾದು, ನೇವಾರ್ ಗ್ರಾಮದ ಮೂಲಕ ಹಾದು ದೇವಾಲಯಕ್ಕೆ ತಲುಪುವುದು ಒಂದು ಮಾರ್ಗ. ಈ ರಸ್ತೆಯು ಭಕ್ತಾಪುರದ ಕಮಲ್ಬಿನಾಯಕ್ ಪ್ರದೇಶದಿಂದ ಸುಮಾರು 5 ಕಿಲೋಮೀಟರ್ ದೂರವಿದೆ. ಇದೇ ಅತ್ಯಂತ ಚಿಕ್ಕ ರಸ್ತೆಯಾಗಿದೆ. ಇನ್ನೊಂದು ಮಾರ್ಗವು ಖಾರಿಪತಿಯಿಂದ ಪಾಣಿ ಮುಹಾನ್ ಮುಖಾಂತರ ದೇವಾಲಯವನ್ನು ತಲುಪುವುದಾಗಿದೆ ಹಾಗೂ ಮೂರನೆಯದು ಜಿತ್‌ಪುರದ ಸಿರಾಣಿಯಿಂದ ಹೋಗುವುದಾಗಿದೆ. ಈ

ರಸ್ತೆಯು ಸರಕುಗಳನ್ನು ಸಾಗಿಸುವ ಮುಖ್ಯ ರಸ್ತೆಯಾಗಿದೆ. ಪ್ರಸ್ತುತ ಈ ಮೂರೂ ಕಡೆಗಳಲ್ಲೂ ಮೋಟಾರು ವಾಹನಗಳು ಓಡಾಡುವ ಕಚ್ಚಾ ರಸ್ತೆಗಳಿವೆ.

ಮೆಟ್ಟಿಲುಗಳ ಸುತ್ತಲಿದ್ದ ಪ್ರದೇಶವು ತುಂಬಾ ಸುಂದರವೂ ಮತ್ತು ಅನುಕೂಲಕರವಾಗಿಯೂ ಇತ್ತು. ಯಾಕೆಂದರೆ ಅಲ್ಲಿ ಮೂಲ ಸ್ಮಶಾನದ ಸ್ಥಳವಿದ್ದು, ಅಲ್ಲಿ ಪ್ರತಿವರ್ಷವೂ ವಾರ್ಷಿಕ ನಿರ್ವಹಣೆ ಮತ್ತು ಅಗತ್ಯ ಪುನರ್ನಿರ್ಮಾಣಗಳನ್ನು ಕಾಲಕಾಲಕ್ಕೆ ಮಾಡಲಾಗುತ್ತಿತ್ತು. ಅಲ್ಲಿ ದೊಡ್ಡವು ಮತ್ತು ಚಿಕ್ಕವು ಸೇರಿದಂತೆ ಒಟ್ಟು ಮೂರು ಮೆಟ್ಟಿಲುಗಳಿದ್ದವು. ದೊಡ್ಡ ಮೆಟ್ಟಿಲುಗಳಲ್ಲಿ ಒಂದನ್ನು ಸುಮಾರು ನೂರು ಜನರಿದ್ದ ತಂಡವೊಂದು ನಿತ್ಯದ ಭಜನೆ–ಕೀರ್ತನೆ ಇತ್ಯಾದಿಗಳಿಗಾಗಿ ಬಳಸಿಕೊಂಡಿದ್ದು, ಅದು ಒಂದು ದೊಡ್ಡ ಸಭೆಯಂತೆ ತೋರುತ್ತಿತ್ತು. ಈ ಸ್ಥಳದಲ್ಲಿ ವಾಲ್ಮೀಕಿ ಮಹರ್ಷಿಯು ತಪಸ್ಸು ಮಾಡಿದ್ದರೆಂದು ಹೇಳಲಾಗುತ್ತಿದ್ದು, ವಲ್ಮೀಕೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಲಾಗಿತ್ತು ಮತ್ತು ಭಕ್ತರಾದ ಪ್ರೇಮ್ ಪ್ರಸಾದ್ ಕಾಫ್ಲೆಯವರಿಂದ ಮಹರ್ಷಿ ವಾಲ್ಮೀಕಿಯ ಪ್ರತಿಮೆಯೊಂದನ್ನು ಸ್ಥಾಪಿಸಲಾಗಿತ್ತು. ಇದು ಮೂಲ ವಾಗೇಶ್ವರ ಲಿಂಗವನ್ನು ವಲ್ಮೀಕೇಶ್ವರ ಎಂದು ಕರೆಯುವ ತಪ್ಪುಕಲ್ಪನೆಯನ್ನು ಹೋಗಲಾಡಿಸಿತು.

ವಾಗೇಶ್ವರ ಮಹಾದೇವ ಲಿಂಗದ ಅನುಪಸ್ಥಿತಿಯ ಸಂದರ್ಭವು ಬಹಳ ದೀರ್ಘಕಾಲದವರೆಗೆ ಮುಂದುವರೆದಿತ್ತು. ಸ್ಥಳೀಯ ಒಪ್ಪಿಗೆಯನ್ನು ಪಡೆಯದಿದ್ದರೂ ಕೂಡಾ ದೇವಾಲಯದ ಲಿಂಗವನ್ನು ಬದಲಾಯಿಸುವ ನಿರ್ಧಾರವನ್ನು ಮಾಡಿರಲೇ ಇಲ್ಲ. ಈ ವಿಚಾರದ ಕುರಿತು ಹಲವಾರು ಬಾರಿ ಚರ್ಚಿಸಲಾಗಿದ್ದರೂ, ಯಾವುದೇ ಒಂದು ದೃಢ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ. ಭರತ್ ಜಂಗಮ್ ಅವರು ಭಾರತದಲ್ಲಿದ್ದ ಬಾಣೇಶ್ವರ ಜಂಗಮರ ಮನೆಯಿಂದ ಕೆಲವು ಮೂರ್ತಿಗಳನ್ನು ಮತ್ತು ಲಿಂಗಗಳನ್ನು ತಂದರು. ಅವುಗಳನ್ನು ತಕ್ಷಣವೇ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವ ಬದಲು, ಅವರು ಕೆಲವು ಸ್ಥಳೀಯ ಪ್ರಮುಖ ಸ್ನೇಹಿತರನ್ನು ಬಾಣೇಶ್ವರದ ತಮ್ಮ ಮನೆಗೆ ಆಹ್ವಾನಿಸಿದರು. ಅವರ ಆಹ್ವಾನವನ್ನು ಮನ್ನಿಸಿ, ಪ್ರೇಮ್ ಪ್ರಸಾದ್ ಕೋಫ್ಲೆ, ರಾಮಕೃಷ್ಣ ನೇಪಾಳ್ ಮತ್ತು ಭಕ್ತ ನೈಬಾ ಅವರು ಬಂದರು. ಅವರ ಹಿರಿಯರಿಂದ ನೂರಾರು ವರ್ಷಗಳ ಕೆಳಗೆ ಪ್ರತಿಷ್ಠಾಪಿಸಲಾಗಿದ್ದ ಕೆಲವು ವಿಗ್ರಹಗಳು ಕಾಣೆಯಾಗಿದ್ದವು ಅಥವಾ ಹಾಳಾಗಿದ್ದವು, ಆದ್ದರಿಂದ ಅವರೆಲ್ಲರೂ ಆ ವಿಗ್ರಹಗಳನ್ನು ಒಂದೇ ಕಡೆ ಪ್ರತಿಷ್ಠಾಪಿಸುವುದಾಗಲೀ ಅಥವಾ ತಳಮಟ್ಟದಲ್ಲಿ ಇಡುವುದಾಗಲೀ ಅಥವಾ ಕೇವಲ ಸ್ನೇಹಿತರಿಗೆ ತೋರಿಸುವುದಾಗಲೀ ಅಥವಾ ಅವುಗಳನ್ನು ಮುಚ್ಚಿಡುವುದಾಗಲೀ ಬೇಡವೆಂದು ನಿರ್ಧರಿಸಿದರು. ಆ ಸಮಯದಲ್ಲಿ ನೇವಾರ ಸಮುದಾಯವನ್ನು ಪ್ರತಿನಿಧಿಸುವ ಭಕ್ತ ನೈಬಾ ಅವರೂ ಕೂಡಾ ಉಪಸ್ಥಿತರಿದ್ದದ್ದು ಅವರಿಗೆ ತಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಸುಲಭವಾಗಿತ್ತು. ಶಿವಲಿಂಗಗಳನ್ನು ಇಡುವ ಕಡೆ ಮೂರು ದೊಡ್ಡ ದೊಡ್ಡ ಕಲ್ಲುಗಳ ಪೀಠಗಳನ್ನೂ ಮತ್ತು ಮೂರು ಸಣ್ಣ ಸಣ್ಣ ಕಲ್ಲುಗಳ ಪೀಠಗಳನ್ನೂ ನಿರ್ಮಿಸಲು ತೀರ್ಮಾನಿಸಲಾಯಿತು ಹಾಗೂ ಎರಡು ಪ್ರದೇಶಗಳಲ್ಲಿ ಆ ಲಿಂಗಗಳನ್ನು ಪ್ರತಿಷ್ಠಾಪಿಸಲು ನಿರ್ಧರಿಸಲಾಯಿತು. ಎರಡೂ ಲಿಂಗಗಳೂ ಸುಮಾರು ನೂರು ಕೆಜಿಗಳಿಗಿಂತಲೂ ಹೆಚ್ಚಾಗಿದ್ದರಿಂದ ಅವುಗಳನ್ನು ತಕ್ಷಣವೇ ಸಾಗಿಸಲಾಗಲಿಲ್ಲ. ಅರ್ಧನಾರೀಶ್ವರ ವಿಗ್ರಹದ ಅರ್ಧಭಾಗವೂ ಕಳೆದುಹೋದಾಗ ಭಕ್ತ ನೈಬಾ ಅವರು ಅದನ್ನು ಪುನರ್ನಿರ್ಮಿಸಬೇಕೆಂದು ನಿರ್ಧರಿಸಲಾಯಿತು. ಭರತ್ ಜಂಗಮ್ ಅವರು ಉಮಾಮಹೇಶ್ವರ ವಿಗ್ರಹವನ್ನು ಮರುನಿರ್ಮಿಸುವ ಜವಾಬ್ದಾರಿ ಹೊತ್ತರು. ಹೀಗೆ ಎಲ್ಲಾ ನಾಲ್ಕೂ ಕಡೆಗಳಲ್ಲೂ ವಿಗ್ರಹಗಳನ್ನು ಪ್ರತಿಷ್ಠಾಪಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು.

ಶಾಸ್ತ್ರಬದ್ಧವಾದ ಕ್ರಿಯೆಗಳನ್ನು ಪೂರೈಸಿದ ನಂತರ, ಈ ವಿಗ್ರಹಗಳನ್ನು ಪ್ರತಿಷ್ಠಾಪಿಸಲು ಮೂರು ದಿನಗಳ ಕಾಲ ಬೇಕಾಯಿತು. ಆದ್ದರಿಂದ ಅಗತ್ಯ ವಸ್ತುಗಳನ್ನು ಪೂರೈಸುವ ಹಾಗೂ ಒಬ್ಬ ಬ್ರಾಹ್ಮಣನನ್ನು ಈ ಕಾರ್ಯಕ್ಕೆ ನೇಮಿಸುವ ಜವಾಬ್ದಾರಿಯನ್ನು ಡಾ. ದೇವಮಣಿ ಭಟ್ಟಾರೈ ಅವರಿಗೆ ಒಪ್ಪಿಸಲಾಯಿತು. ಜ್ಯೋತಿಷ್ಯ ಶಾಸ್ತ್ರದ ನಿಯಮಗಳನ್ವಯ, ಸೂಕ್ತ ದಿನವನ್ನು ನಿರ್ಧರಿಸಿದ ನಂತರ, ಪುನಃಪ್ರತಿಷ್ಠಾಪನಾ ಕಾರ್ಯವು 2017ರ ವೈಶಾಖ ಮಾಸದ 23ರಿಂದ 25ರವರೆಗೆ ಸಾಂಗವಾಗಿ ನೆರವೇರಿತು. ಒಂದು ದೊಡ್ಡ ಲಿಂಗವನ್ನು ಪ್ರಧಾನ ದೇವಾಲಯದಲ್ಲಿಯೂ ಹಾಗೂ ಅರ್ಧನಾರೀಶ್ವರ ಮತ್ತು ಉಮಾಮಹೇಶ್ವರ ಪ್ರತಿಮೆಗಳನ್ನು ಮೂಲ ದೇವಾಲಯದಲ್ಲಿಯೂ ಹಾಗೂ ಒಂದು ಸಣ್ಣ ಲಿಂಗವನ್ನು ಜಲೇಶ್ವರ ಎಂಬ ಹೆಸರಿನೊಂದಿಗೆ ಎರಡು ಸರೋವರಗಳ ಮಧ್ಯದಲ್ಲಿಯೂ ಪ್ರತಿಷ್ಠಾಪಿಸಲಾಯಿತು ಮತ್ತು ಶಿಲಾಫಲಕಗಳನ್ನೂ ಸ್ಥಾಪಿಸಲಾಯಿತು.

ಆ ದಿನಗಳಲ್ಲಿ ಆ ದೇವಸ್ಥಾನದಲ್ಲಿ ಪೂಜೆ, ಅರ್ಚನೆ, ನಿತ್ಯೋತ್ಸವ ಮತ್ತು ವಾರ್ಷಿಕ ಜಾತ್ರೆಗಳನ್ನು ನಡೆಸುವ ಬಗ್ಗೆ ಹಲವಾರು ಸಲಹೆಗಳು ಬಂದವು. ಕೃಷ್ಣ ಸಪ್ಕೋಟ ಅವರಿಗೆ ಪೂಜೆಯ ಜವಾಬ್ದಾರಿ ವಹಿಸಲಾಗಿತ್ತು. ಈ ಹಿಂದೆ ನಡೆಯುತ್ತಿದ್ದ ಹಾಗೆ ಪೂಜಾದಿಗಳನ್ನು ನಡೆಸಲು ಸಾಧ್ಯವಾಗಲಿಲ್ಲ. ಹಾಗಾಗಿ ಪೂಜಾದಿಗಳ ವ್ಯವಸ್ಥೆಯು ಸರಿಯಾಗಿ ನಡೆಯುತ್ತಿಲ್ಲವೆಂಬ

ದೂರು ಕೂಡಾ ಭರತ್ ಜಂಗಮ್ ಅವರಿಗೆ ಬಂದಿತ್ತು. ಇತ್ತೀಚಿಗೆ ವಿದ್ಯಾವಂತ ಮತ್ತು ಜ್ಞಾನವಂತರಾದ ಯುವಕರು ದೇವಾಲಯ ಮತ್ತು ಅದರ ಪ್ರಾಕಾರದಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಭುವನ್ ಕಾಫ್ಲೆ, ಹರಿಶರಣ್ ಲಮಿಛಾನೆ, ಶ್ಯಾಮ್ ಶ್ರೇಷ್ಠ, ಕೇದಾರ್ ಕಾಫ್ಲೆ, ಭರತ್ ಕಾಫ್ಲೆ, ದೀನನಾಥ್ ಶ್ರೇಷ್ಠ, ಬಾಬು ಕಾಜಿ ನಯಾಜು ಮತ್ತು ಶ್ಯಾಮ್ ಕಾಜಿ ನಯಾಜು ಮತ್ತಿತರ ಯುವಮುಖಂಡರು ದೇವಾಲಯದ ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಈಗ ಭರತ್ ಜಂಗಮ್ ಅವರು ಆ ಪ್ರದೇಶದ ಅಭಿವೃದ್ಧಿಯ ಕುರಿತು ಹೆಮ್ಮೆಪಡುತ್ತಾರೆ.

**7) ಬಾಣೇಶ್ವರ ದೇವಾಲಯ ಪ್ರದೇಶದ ಅಭಿವೃದ್ಧಿ ಕುರಿತ ವಿವರಗಳು**

ಬಾಣೇಶ್ವರದಲ್ಲಿರುವ ಬಾಣೇಶ್ವರ ಮಹಾದೇವನ ದೇವಾಲಯವು ಅತ್ಯಂತ ಪುರಾತನವಾದ ದೇವಾಲಯವಾಗಿದ್ದು, ಮೆಟ್ರೊ ಪಾಲಿಟನ್ ಸಿಟಿ ಎಂದು ಹೆಸರಾದ ಕಠ್ಮಂಡುವಿನ ವಾರ್ಡ್ ನಂ. 10ರ ಪ್ರದೇಶದಲ್ಲಿದೆ. ಇದು ಬಾಗ್ಮತಿ ನದಿಯ ಪೂರ್ವ ಮತ್ತು ಪಶ್ಚಿಮ ಭಾಗಗಳೊಂದಿಗೆ ಹೊಂದಿರುವ ಸಂಬಂಧಗಳಿಗೆ ಪ್ರಸಿದ್ಧವಾಗಿದೆ. ಇದರ ಆವರಣದಲ್ಲಿ, ಮೂರು ದೊಡ್ಡ ಕಟ್ಟಡಗಳಿದ್ದು, ಅವುಗಳ ಪೈಕಿ ರತ್ನ ರಾಜ್ಯ ಸೆಕೆಂಡರಿ ಶಾಲೆ, ಲೈಬ್ರರಿ ಮತ್ತು ಅರ್ಚಕರ ನಿವಾಸವನ್ನು ಒಳಗೊಂಡಿದೆ. ಈ ದೇವಾಲಯ ಸಂಕೀರ್ಣವು ಹಲವಾರು ವಸತಿ ಕಟ್ಟಡಗಳಿಂದ ಸುತ್ತುವರಿಯಲ್ಪಟ್ಟಿದೆ.

ಈ ದೇವಾಲಯದ ಕಟ್ಟಡವು ಎರಡು ಪ್ರಧಾನ ದೇವಾಲಯಗಳನ್ನೊಳಗೊಂಡಿದೆ; ಒಂದು ಪ್ರಾಚೀನ ಬಾಣೇಶ್ವರ ಮಹಾದೇವ ದೇವಸ್ಥಾನ ಮತ್ತು ಇನ್ನೊಂದು ಚಿಕ್ಕದು ಚಿತ್ರೇಶ್ವರ ಮಹಾದೇವ ದೇವಸ್ಥಾನ. ದೇವಾಲಯದ ದಕ್ಷಿಣಕ್ಕೆ ಲಲಿತಾದೇವಿ ದೇವಾಲಯವಿದೆ, ಮತ್ತು ಉತ್ತರಕ್ಕೆ ಜಲನಾರಾಯಣ ಪೊಖಾರಿ ಎಂಬ ಹೆಸರಿನ ಕೊಳವಿದೆ. ದೇವಾಲಯದ ಸುತ್ತ ಇರುವ ದೊಡ್ಡ ದೊಡ್ಡ ಶಾಲಾ ಕಟ್ಟಡಗಳಿಂದಾಗಿ ದೇವಾಲಯವು ತುಂಬಾ ಚಿಕ್ಕದಾಗಿಯೂ ಮತ್ತು ಇಕ್ಕಟ್ಟಾಗಿಯೂ ಇರುವಂತೆ ಕಾಣುತ್ತದೆ.

1956–57ರ ಸಮಯದಲ್ಲಿ ಭಕ್ತಾಪುರದಿಂದ ಬಾಣೇಶ್ವರಕ್ಕೆ ಬರುವವರೆಗೂ ಭರತ್ ಜಂಗಮ್ ಅವರು ಮಹಾದೇವನ ದೇವಸ್ಥಾನಕ್ಕೆ ಹಲವು ಬಾರಿ ಭೇಟಿ ನೀಡಿದ್ದರು. ನಂತರ ಅವರ ನಿವಾಸವು ಭೀಮಸೇನ್ ಗೋಲಾ ಪ್ರದೇಶಕ್ಕೆ ಸ್ಥಳಾಂತರಗೊಂಡ ಮೇಲಂತೂ ಅವರು ಮಹಾದೇವನ ದೇವಾಲಯದ ಆವರಣವನ್ನು ಮನಃಶಾಂತಿಗಾಗಿ ಮತ್ತು ನಡಿಗೆಗಾಗಿ ಪದೇ ಪದೇ ಬಳಸಲುತೊಡಗಿದರು. ದೇವಾಲಯದ ಸುತ್ತಮುತ್ತಲಿನ ಪ್ರದೇಶವು ಭಗ್ನಾವಶೇಷಗಳು ಮತ್ತು ಶಿಥಿಲಗೊಂಡ ಕಟ್ಟಡಗಳಿಂದ ತುಂಬಿಹೋಗಿತ್ತು. ಬಾಗಮತಿ ಪ್ರದೇಶವು ಒಂದಾನೊಂದು ಕಾಲದಲ್ಲಿ ದಟ್ಟ ಅರಣ್ಯಪ್ರದೇಶವಾಗಿದ್ದು, ಅಲ್ಲಿಂದ ನದಿಯು ಸ್ವೇಚ್ಛೆಯಾಗಿ ಹರಿಯುತ್ತಿತ್ತು. ಆದರೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರೀಕರಣದ ಪ್ರಭಾವದಿಂದಾಗಿ, ಈ ಅರಣ್ಯಪ್ರದೇಶವು ಬಂಜರು ಭೂಮಿಯಾಗಿ ಪರಿವರ್ತನೆ ಹೊಂದಿತು ಮತ್ತು ನದಿಯು ಕಲುಷಿತವಾಯಿತು. ಮಕ್ಕಳು ಆಟವಾಡುವ ಬಯಲು ಪ್ರದೇಶಗಳಿದ್ದು, ಅವು ಆಗಾಗ ಭೂಕುಸಿತಕ್ಕೆ ಒಳಗಾಗುತ್ತವೆ. ಮಹಾದೇವ ದೇವಾಲಯದ ಸುತ್ತಮುತ್ತಲಿನ ಪ್ರದೇಶವು ಬಂಜರಾಗಿದೆ.

ರಾಜಾ ಮಹೇಂದ್ರನ ಕಾಲದಲ್ಲಿ, ಪ್ರತಿ ಗ್ರಾಮಪಂಚಾಯಿತಿಗೂ ಒಂದು ಪ್ರಾಥಮಿಕ ಶಾಲೆಯನ್ನು ನೀಡಲಾಗಿತ್ತು. ಅದರಂತೆಯೇ, ಮಹಾದೇವಸ್ಥಾನದ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲೂ ಒಂದು ಶಾಲೆಯನ್ನು ಸ್ಥಾಪಿಸಲಾಗಿತ್ತು. ಅಂದಿನ ಮುಖಂಡರಾಗಿದ್ದ ಫ್ಯಾಟೆಬಹದ್ದೂರ್ ಪಾಂಡೇಯವರು ಮಹಾದೇವಸ್ಥಾನದ ಪ್ರಾಥಮಿಕ ಶಾಲೆಯ ಕಾರ್ಯಾಚರಣೆಯನ್ನು ಪಶ್ಚಿಮದ ಕಡೆಗೆ ನಡೆಸಲು ಆರಂಭಿಸಿದರು. 1963ರಲ್ಲಿ, ಅದೇ ಶಾಲೆಯ ಆವರಣದಲ್ಲಿ ರತ್ನ ಲೈಬ್ರರಿಯನ್ನೂ ಕೂಡಾ ಸ್ಥಾಪಿಸಲಾಯಿತು. ಹೀಗೆ ಮಹಾದೇವಸ್ಥಾನದ ಪ್ರದೇಶವು ತನ್ನದೇ ಆದ ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದಿದೆ.

ಮಹಾದೇವಸ್ಥಾನಕ್ಕೆ ಸಂಬಂಧಿಸಿದಂತೆ 2014ರ ಮಾಘಮಾಸದಲ್ಲಿ ನಡೆದ ಇತ್ತೀಚಿನ ಘಟನೆಗಳ ಬಗ್ಗೆ ಮಾತನಾಡುವುದಾದರೆ, ಡಾ. ಶ್ರೀರಾಮ ಬಾನ್ಸ್‌ಕೋಟರವರು ತಮ್ಮ ಮನೆಯಲ್ಲಿ ಚರ್ಚೆಯೊಂದನ್ನು ಏರ್ಪಡಿಸಿರುವುದಾಗಿ ಪತ್ರ ಬರೆದರು. ಹಾಗೂ ಕೆಲವು ಪ್ರಮುಖ ಸೂಚನೆಗಳನ್ನು ಭರತ್ ಜಂಗಮ್ ಅವರಿಗೆ ನೇರವಾಗಿಯೇ ಸೂಚಿಸಬೇಕಾಗಿದ್ದರಿಂದ ರಾಜೇಂದ್ರ ಮರಾಠರವರು ಭರತ್ ಜಂಗಮ್ ಅವರಿಗೆ ಚರ್ಚೆಯಲ್ಲಿ ಭಾಗವಹಿಸಲು ತಿಳಿಸಿದರು. ನಿಗದಿತ ಸಮಯಕ್ಕೆ ಸರಿಯಾಗಿ ರಾಜೇಂದ್ರ ಜೀ, ಶಂಕರ್ ಪೌದೇಲ್, ರಿಷಭ್ ಖನಾಲ್ ಮತ್ತು ಪ್ರಕಾಶ್ ಆಚಾರ್ಯ ಅವರು ಉಪಸ್ಥಿತರಿದ್ದರು. ಭರತ್ ಜಂಗಮ್ ಅವರು ಬಹುನಿರೀಕ್ಷೆಯಿಂದ ಕಾದಿದ್ದಂತೆ, ಚರ್ಚೆಯು ನಿಗದಿತ ಸಮಯಕ್ಕೆ ಸರಿಯಾಗಿ ಆರಂಭವಾಯಿತು. ದೇವಸ್ಥಾನದ ಮೇಲಿನ ಹಿಡಿತವನ್ನು ಶಾಲೆಯು ಬಿಗಿಗೊಳಿಸಿದ್ದು, ಪರೀಕ್ಷೆಗಳು ನಡೆಯುವ ಸಮಯದಲ್ಲಿ

ದೇವಾಲಯದ ದರ್ಶನಕ್ಕೆ ಪ್ರವೇಶವನ್ನು ನಿರ್ಬಂಧಿಸಲಾಗುತ್ತಿತ್ತು. ಈ ವಿಚಾರವು ಅಲ್ಲಿದ್ದವರ ಮನವನ್ನು ಕಲಕಿತ್ತು. ದೇವಾಲಯದ ದರ್ಶನ ಮತ್ತು ಪೂಜಾದಿಗಳಿಗೂ ಪ್ರವೇಶ ನಿರ್ಬಂಧವಾದಾಗ, ಅದಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಬೇಕಾದ್ದು ಅನಿವಾರ್ಯವಾಯಿತು. ಅಲ್ಲಿದ್ದ ಪ್ರತಿಯೊಬ್ಬರೂ ತಮಗೆ ತೋಚಿದ ಆಲೋಚನೆಗಳನ್ನು ಹಂಚಿಕೊಂಡರು. ಶ್ರೀರಾಮ್‌ಜೀಯವರು "ಭರತ್‌ಜೀ, ತಾವು ಪಶುಪತಿನಾಥ ದೇವಾಲಯವೂ ಸೇರಿದಂತೆ ಹಲವಾರು ದೇವಾಲಯಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದ್ದೀರಿ. ಆದ್ದರಿಂದ, ತಮ್ಮ ಕಡೆಯಿಂದ ಬೆಂಬಲ ಸಿಗುವ ಭಾರೀ ನಿರೀಕ್ಷೆಯನ್ನು ನಾವು ಹೊಂದಿದ್ದೇವೆ" ಎಂದರು.

ಇದನ್ನೆಲ್ಲಾ ಕೇಳಿದ ನಂತರ, ಅವರೆಲ್ಲರೂ ಭರತ್ ಜಂಗಮ್ ಅವರೊಟ್ಟಿಗೆ ನಿಲ್ಲುವ ಸಂಕಲ್ಪ ಮಾಡಿದರು. ದೇವಸ್ಥಾನದ ಆವರಣದೊಳಗೆ ಪ್ರವೇಶವನ್ನು ನಿರ್ಬಂಧಿಸುವುದು, ಜನರ ನಂಬಿಕೆಗೆ ಕೊಡಲಿ ಪೆಟ್ಟು ಕೊಟ್ಟಂತೆ ಎಂಬುದನ್ನು ಎಲ್ಲರೂ ಅರ್ಥಮಾಡಿಕೊಂಡರು. ಇದಕ್ಕೆ ಪೂರಕವಾಗಿ ಕೆಲವು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಬೇಕಿತ್ತು ಮತ್ತು ದೇವಾಲಯದ ಪೂಜೆಗೆ ಪ್ರವೇಶಿಸಲು ಅವಕಾಶ ಮಾಡಿಕೊಡಬೇಕಿತ್ತು. ಅದೇ ವರ್ಷ ಚೈತ್ರಮಾಸದಲ್ಲಿ ರಾಜೇಂದ್ರ ಮರಾಠ ಅವರ ಅಧ್ಯಕ್ಷತೆಯಲ್ಲಿ, ಸಂಘವನ್ನು ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸುವ ಕಾರ್ಯ ಸಂಪೂರ್ಣವಾಯಿತು. ಸಂಘವನ್ನು ಕ್ರಿಯಾಶೀಲವಾಗಿಡುವ ಪ್ರಯತ್ನಗಳು ನಂತರ ಆರಂಭವಾದವು.

1964ರ ಜನಗಣತಿಯ ಪರಿಣಾಮವನ್ನು ಅವರು ನೆನೆದರು. ಜನಗಣತಿಯನ್ನು ಅರ್ಚಕರ ಪತ್ನಿ ಮೋಹಿಯಾನಿಯವರ ಹೆಸರಿನಲ್ಲಿ ಮಾಡಲಾಗಿತ್ತು. 1987ರ ಜನಗಣತಿಯಲ್ಲಿ, ಜೈಮನಸಿಂಹ ಬಾಸ್ನೆಟ್‌ರ ಉತ್ತರಾಧಿಕಾರಿಗಳು ಖಾಸಗಿ ಒಡೆತನಕ್ಕಾಗಿ ದಾವೆ ಹೂಡಿದರು ಮತ್ತು 90 ಮತ್ತು 91ನೇ ಸಂಖ್ಯೆಗಳ ನಿವೇಶನಗಳನ್ನು ಚಿತ್ರೇಶ್ವರ ಮಹಾದೇವ ದೇವಾಲಯದ ನಿರ್ಮಾಣಕ್ಕಾಗಿ ತಮ್ಮ ಹೆಸರಿಗೆ ಲಾಲ್‌ಪುರ್ಜಾ (ಜಮೀನು ಮಾಲೀಕತ್ವದ ಪ್ರಮಾಣಪತ್ರ) ಮಾಡಿಕೊಂಡರು. ಬಾಸ್ನೆಟ್‌ರ ಹೆಸರಿಗೆ ಸದರಿ ಸ್ಥಳವು ಖಾತೆಯಾದ ನಂತರ, ಎರಡೂ ನಿವೇಶನಗಳನ್ನೂ ಪಶ್ಚಿಮ ದಿಕ್ಕಿಗೆ ಶಾಲೆಯು ಇದ್ದಿದ್ದರಿಂದ, ಸುಮಾರು 50 ಮಿಲಿಯನ್ ರೂ.ಗಳಿಗೆ ಶಾಲೆಗೇ ಮಾರಿಬಿಟ್ಟರು. ನಿವೇಶನ ಸಂಖ್ಯೆ 192 ಇನ್ನೂ ಬೇರೆ ಯಾರದ್ದೋ ಹೆಸರಿನಲ್ಲಿ ನೋಂದಣಿಯಾಗಿದೆ.

ದೇವಾಲಯದ ಆವರಣದಲ್ಲಿ ಸ್ಥಳೀಯ ಮುಖಂಡರು ಕಾರ್ಯಾಚರಣೆ ಪ್ರಾರಂಭಿಸಿದಾಗ, ಶಾಲಾಡಳಿತ ಮಂಡಳಿಯವರು ಮತ್ತು ಪ್ರಾಂಶುಪಾಲರು ದೇವಸ್ಥಾನವನ್ನೇ ವಿರೋಧಿಸಲು ತೊಡಗಿದರು. ಶಾಲೆ ಮತ್ತು ದೇವಸ್ಥಾನಗಳ ನಡುವಿನ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಕಾರ್ಯಗಳು ಆರಂಭವಾದಾಗ ಸಂಘರ್ಷಗಳು ಮೊದಲಾದವು. ರಾಷ್ಟ್ರೀಯ ಭೂಕಂಪ ಮರುನಿರ್ಮಾಣ ಕಾಮಗಾರಿ ಪ್ರಾಧಿಕಾರದ ವತಿಯಿಂದಲೇ ನಿರ್ಮಾಣಕಾರ್ಯಗಳು ಆರಂಭವಾದರೂ ಕೂಡಾ, ಲಲಿತಾದೇವಿ ದೇವಾಲಯದ ದಕ್ಷಿಣ ಭಾಗವನ್ನು ಜೀರ್ಣೋದ್ಧಾರಗೊಳಿಸಲು ಮುಂದಾದಾಗ ಆಕ್ಷೇಪಣೆ ಶುರುವಾಯಿತು, ಹಾಗೂ ದೇವಸ್ಥಾನ, ಲೈಬ್ರರಿ ಮತ್ತು ವಾರ್ಡ್ ಕಛೇರಿಗಳ ವಿರುದ್ಧ ದಾವೆ ಹೂಡಲಾಯಿತು. ತತ್ಪರಿಣಾಮವಾಗಿ ಕಾಮಗಾರಿಯು ಸ್ಥಗಿತಗೊಂಡಿತು. ಈ ಸಂದರ್ಭವು ಶಾಲೆಯೊಂದಿಗಿನ ಸಂಘರ್ಷವನ್ನು ಪರಿಹರಿಸುವ ನಿಟ್ಟಿನಲ್ಲಿ ಇದ್ದಂತೆ ಕಾಣಲಿಲ್ಲ.

1961ರಲ್ಲಿ, ದೇವಾಲಯದ ಆವರಣದಲ್ಲಿ ಪ್ರಾಥಮಿಕ ಶಾಲೆಯಾಗಿ ಆರಂಭಗೊಂಡ ಶಾಲೆಯು ಕ್ರಮೇಣ ಸೆಕೆಂಡರಿ ಶಾಲೆಯಾಗಿ ಪರಿವರ್ತಿತವಾಯಿತು. ಅಂದಾಜು 2000 ವಿದ್ಯಾರ್ಥಿಗಳು ಅಂಗನವಾಡಿಯ ಹಂತದಿಂದ ಹಿಡಿದು 12ನೇ ತರಗತಿಯವರೆಗೂ ಅಭ್ಯಾಸ ಮಾಡುವ ಸ್ಥಳವಾಯಿತು. ಅದಕ್ಕನುಗುಣವಾಗಿ ಸರ್ಕಾರವೂ ಈ ಶಾಲೆಯ ಪರವಾಗಿಯೇ ಇರುವಂತೆ ಕಂಡುಬರುತ್ತಿತ್ತು. ಮಹಾದೇವನ ಕಡೆಯಿಂದ ಯಾರೊಬ್ಬರೂ ಮಾತನಾಡುತ್ತಿರಲಿಲ್ಲ ಮತ್ತು ಒಬ್ಬಿಬ್ಬರು ಮಾತನಾಡಿದರೂ ಅವರ ದನಿ ಬಹಳ ಕ್ಷೀಣವಾಗಿತ್ತು. ಸುಮಾರು ಮೂರು ರೋಪಣಿಗಳಷ್ಟು ಭೂಮಿಯನ್ನು ಬಾಣೇಶ್ವರ ಮಹಾದೇವನ ಪ್ರದೇಶದಲ್ಲಿ ಆಕ್ರಮಿಸಿಕೊಂಡಿದ್ದು, ಅದನ್ನು ನೂರು ರೋಪಣಿಗಳಿಗೆ ಹೆಚ್ಚಿಸಲಾಗಿತ್ತು. ಅಲ್ಲಿಯೂ ಕೂಡಾ ಶಾಲೆಯ ಕಟ್ಟಡವು ಉತ್ತರ ಭಾಗಕ್ಕೆ ಅರ್ಧದಷ್ಟು ಭಾಗವನ್ನು ಆಕ್ರಮಿಸಿಕೊಂಡಿತ್ತು. ದೇವಾಲಯದ ಭೂಮಿಯಲ್ಲಿ ಕಟ್ಟಡಗಳನ್ನು ಕಟ್ಟಿ ಶಾಲೆಯು ಪ್ರತಿವರ್ಷ ರೂ. 1.8 ಮಿಲಿಯನ್‌ಗಳಷ್ಟು ಬಾಡಿಗೆ ಮೊತ್ತವನ್ನು ಗಳಿಸುತ್ತಿತ್ತು. ಇದೇ ಸಮಯದಲ್ಲಿ ತತ್ವಜ್ಞಾನಿಯಾಗಿದ್ದ ಭರತ್ ಜಂಗಮ್‌ರವರು ದೇವಸ್ಥಾನಕ್ಕೆ ಹೊಸರೀತಿಯ ದರ್ಶನ ವ್ಯವಸ್ಥೆ, ಎಚ್ಚರಿಕೆಯಿಂದ ಪೂಜಾಕಾರ್ಯಗಳ ಗಮನಿಸುವಿಕೆ, ದೇವಾಲಯಕ್ಕೆ ಅಗತ್ಯ ವಸ್ತುಗಳ ಪೂರೈಕೆ ಇತ್ಯಾದಿಗಳಿಂದ ರೂ. 60,000/- ಗಳನ್ನು ಪ್ರತಿ ತಿಂಗಳೂ ಗಳಿಸುತ್ತಿದ್ದರು. ಹೀಗೆ, ದೇವಾಲಯದ ಮೇಲೆ ಆಕ್ರಮಣಗಳಾದಾಗ ದನಿಯೆತ್ತುವ ವ್ಯಕ್ತಿಗಳು ಕೇವಲ ಕೆಲವರು ಮಾತ್ರ ಇದ್ದರು.

ದೈವಕ್ಕೆ ಶಕ್ತಿ ಬರಬೇಕಾದರೆ, ದೇವರಿಗೆ ನಿತ್ಯ ಪಂಚಾಮೃತ ಅಭಿಷೇಕ ಮತ್ತು ರುದ್ರಾಭಿಷೇಕಗಳೂ ಸೇರಿದಂತೆ ಮಾಸಿಕ ಮತ್ತು ವಾರ್ಷಿಕ ಪೂಜಾ ಕೈಂಕರ್ಯಗಳನ್ನು ಮತ್ತು ಉತ್ಸವಗಳನ್ನು ಒಳಗೊಂಡ ದೇವರ ಪೂಜಾವಿಧಾನಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ನಿರ್ಧರಿಸಲಾಯಿತು. ಪೂಜಾ ವಿಧಾನಗಳು, ರುದ್ರಾಭಿಷೇಕ ಅಥವಾ ಆರತಿಗಳಲ್ಲಿ ಪಾಲ್ಗೊಳ್ಳಲು ಬಯಸುವ ಭಕ್ತಾದಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ನಡೆಸಿಕೊಡುವ ವ್ಯವಸ್ಥೆ ಮಾಡಲಾಯಿತು. ಇದು ಕೆಲವು ಬ್ರಾಹ್ಮಣರಿಗೆ, ಅರ್ಚಕರಿಗೆ ಮತ್ತು ಧಾರ್ಮಿಕ ಮನೋಭಾವದ ಬೆಂಬಲಿತ ವ್ಯಕ್ತಿಗಳಿಗೆ ಒಂದಿಷ್ಟು ಪ್ರತಿಫಲವನ್ನು ನೀಡುವ ಸಂದರ್ಭ ಸೃಷ್ಟಿಯಾಗಲು ಕಾರಣವಾಯಿತು. ದೇವಾಲಯಕ್ಕೆ ಬರುವ ಭಕ್ತಾದಿಗಳ ಸಂಖ್ಯೆ ಹೆಚ್ಚಾದಂತೆ, ದೇವಾಲಯಕ್ಕೆ ದೇಣಿಗೆ ನೀಡುವವರ ಸಂಖ್ಯೆ ಕಡಿಮೆಯಾಯಿತು. 1961ರಲ್ಲಿ ದೇವಾಲಯದ ಭೂಮಿಯ ಮೇಲಿನ ಹಿಡಿತವನ್ನು ಕಳೆದುಕೊಂಡ ನಂತರ, ಆ ಪ್ರದೇಶದ ಮೇಲಿನ ಹಕ್ಕುಗಳನ್ನು ಬಲಪಡಿಸಬೇಕಾದ ಅಗತ್ಯದ ಕುರಿತು ಯೋಚಿಸುತ್ತಿರುವಂತೆಯೇ, ಭರತ್ ಜಂಗಮ್ ಅವರಿಗೆ ಅವರ ಕಛೇರಿಯಲ್ಲಿ ಒಂದು ಅನಿರೀಕ್ಷಿತ ದೂರವಾಣಿ ಕರೆಯು ಬಂದಿತ್ತು. ಅದು ಗುಥಿ ಸಂಸ್ಥಾನದ ಸಹಆಡಳಿತಗಾರರಾಗಿದ್ದ ದೀಪಕ್ ಬಹಾದುರ್ ಪಾಂಡೇಯವರ ಕರೆಯಾಗಿತ್ತು ಮತ್ತು ಭರತ್ ಜಂಗಮ್ ಅವರು ಬಿಡುವಾಗಿದ್ದರೆ, ಅಲ್ಲಿಯೇ ಬಳಿಯಿದ್ದ ದೀಪಕ್ ಅವರ ಕಛೇರಿಯಲ್ಲಿ ಭೇಟಿಯಾಗಲು ಸಾಧ್ಯವೇ? ಎಂದು ವಿನಂತಿಸಲಾಗಿತ್ತು. ಭರತ್ ಜಂಗಮ್ ಅವರು ದೀಪಕ್ ಅವರಿಗೆ ತಮ್ಮ ಕಛೇರಿಗೇ ಬರಲು ವಿನಂತಿಸಿದರು ಮತ್ತು ಮುಂದಿನ ಹತ್ತೇ ನಿಮಿಷಗಳಲ್ಲಿ ದೀಪಕ್ ಅವರು ಭರತ್ ಜಂಗಮ್ ಅವರ ಕಛೇರಿಗೆ ಬಂದರು. ದೇವಸ್ಥಾನದ ಜಾಗಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನೂ ದೀಪಕ್ ಅವರಿಗೆ ತೋರಿಸಲಾಯಿತು. ಅವರು ಅವುಗಳನ್ನು ಪರಿಶೀಲಿಸಿ "ಈ ದಾಖಲಾತಿಗಳು ಬಾಣೇಶ್ವರ ಮಹಾದೇವ ದೇವಸ್ಥಾನದ ಆವರಣದಲ್ಲಿರುವ ನಿವೇಶನಗಳ ಸಂಖ್ಯೆ 290, 291 ಮತ್ತು 292 ಗಳಲ್ಲಿ ಗುಥಿ ಸಂಸ್ಥಾನದ ಒಡೆತನವನ್ನು ಸೂಚಿಸುತ್ತವೆ. ನಿವೇಶನದ ಸಂಖ್ಯೆ 290 ಮತ್ತು 291 ಗಳ ಲಾಲ್‌ಪೂರ್ಜಾವನ್ನು ಶಾಲೆಯ ಹೆಸರಿಗೆ ಬದಲಾಯಿಸಲಾಗಿದೆ ಮತ್ತು ನಿವೇಶನ ಸಂಖ್ಯೆ 292ರಲ್ಲಿರುವ 3–11–0 ಅಳತೆಯ ನಿವೇಶನವನ್ನು ಶಾಶ್ವತವಾಗಿ ಕಟ್ಟಡ ನಿರ್ಮಾಣದ ಉದ್ದೇಶಕ್ಕೆ ನೀಡಲಾಗಿದೆ." ಎಂದು ವಿವರಿಸಿದರು. ಅವರು ಈ ದಾಖಲಾತಿಗಳನ್ನು ಗುಥಿ ಕಛೇರಿಗೆ ತರುವಂತೆ ಸಲಹೆ ನೀಡಿದರು. ಆ ಸಮಯದಲ್ಲಿ ಅಲ್ಲಿ ರಾಜೇಂದ್ರ ಮರಾಠಾ, ಪ್ರಕಾಶ್ ಆಚಾರ್ಯ, ಶಂಕರ್ ಪೌದೇಲ್ ಮತ್ತು ವೈಕುಂಠ ಪ್ರಸಾದ್ ಗೌತಮ್ ಅವರುಗಳು ಹಾಜರಿದ್ದರು. ಅವರೆಲ್ಲರೂ ಮಹಾದೇವ ದೇವಸ್ಥಾನ ಸಂರಕ್ಷಣಾ ಸಮಿತಿಯ ಸದಸ್ಯರಾಗಿದ್ದರು.

ದೇವಸ್ಥಾನದ ಸದಸ್ಯರುಗಳನ್ನು ಗುಥಿ ಸಂಸ್ಥಾನಕ್ಕೆ ಕಳುಹಿಸುವ ಕೆಲಸವನ್ನು ತಕ್ಷಣವೇ ಮಾಡಲಾಯಿತು. ನಿವೇಶನ ಸಂಖ್ಯೆ 292 ರಲ್ಲಿದ್ದ 3–11–0 ಅಳತೆಯ ನಿವೇಶನವನ್ನು ಮಹಾದೇವ ದೇವಸ್ಥಾನದ ರಾಜಗುಥಿ ಹೆಸರಿಗೆ ಲಾಲ್‌ಪೂರ್ಜಾ ಮಾಡುತ್ತಿದ್ದಂತೆಯೇ, ಭರತ್ ಜಂಗಮ್ ಅವರು ಭೂಕಂದಾಯ ಇಲಾಖೆಯ ಕಛೇರಿಗೆ ತೆರಳಿದರು. ಭೂಮಿಯೇ ಇಲ್ಲದ ಬಾಣೇಶ್ವರ ಮಹಾದೇವನ ಹೆಸರಿನಲ್ಲಿ ದೇವಾಲಯದ ಲಾಲ್‌ಪೂರ್ಜಾ ಮಾಡಲು ನಿರ್ಧರಿಸಿದಾಗ, ದೇವಾಲಯದ ಸದಸ್ಯರೆಲ್ಲ ಅತ್ಯಂತ ಸಂತಸಪಟ್ಟರು. ದೇವಾಲಯವನ್ನು ವರ್ಗಾಯಿಸದೇ, ಶಾಲೆಯನ್ನು ಸ್ಥಳಾಂತರಿಸುವುದು ಸಾಧ್ಯವಾದಾಗ ದೇವಾಲಯದ ಮೇಲಿನ ಜನರ ನಂಬಿಕೆಯು ಬಲವಾಯಿತು.

ಈಗ ಶಾಲೆಯ ಆಡಳಿತ ಮಂಡಳಿ ಮತ್ತು ಶಿಕ್ಷಕ ವೃಂದದ ಮಧ್ಯೆ ಸಂಘರ್ಷ ಆರಂಭವಾಯಿತು. ಪ್ರಸ್ತುತ ಇದ್ದ ಪ್ರಾಂಶುಪಾಲರ ಏಕಪಕ್ಷೀಯ ಆಡಳಿತವು ಶಾಲೆಗೆ ನಷ್ಟ ಮತ್ತು ದಾವೆಗಳನ್ನು ತಂದೊಡ್ಡಿತ್ತು. ಇದರಿಂದಾಗಿ, ಶಾಲೆಯ ಆಡಳಿತ ಮಂಡಳಿಯಲ್ಲಿ ಬದಲಾವಣೆಯಾಗಿ, ಹೊಸ ಪ್ರಾಂಶುಪಾಲರನ್ನು ನೇಮಕ ಮಾಡಲಾಯಿತು. ನಂತರ, ಕಾಲಾನುಕ್ರಮದಲ್ಲಿ ಶಾಲೆ ಮತ್ತು ದೇವಸ್ಥಾನದ ನಡುವೆ ಉತ್ತಮ ಬಾಂಧವ್ಯ ಬೆಳೆಯತೊಡಗಿತು. ಶಾಲೆ, ಗ್ರಂಥಾಲಯ ಮತ್ತು ದೇವಾಲಯದ ಆಡಳಿತ ಮಂಡಳಿಯ ಸದಸ್ಯರ ಮಧ್ಯೆ ಪರಸ್ಪರ ಸಹಕಾರ ಮನೋಭಾವ ಬೆಳೆದಿತ್ತು. ಸುಮಾರು ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ರೂಢಿಸಿಕೊಂಡು ಬಂದಿದ್ದ ಪದ್ಧತಿಗಳು ಕ್ರಮೇಣ ಬದಲಾಗತೊಡಗಿದವು. ದೇವಾಲಯ ನಿರ್ವಹಣಾ ಮಂಡಳಿಗೆ ಶಾಲೆಯವರು ಯಾವುದೇ ಮೊತ್ತವನ್ನು ಪಾವತಿಸದೇ ಇದ್ದರೂ ಕೂಡ, ದೇವಾಲಯದ ಸ್ವಂತ ಆದಾಯವು ಪ್ರಸ್ತುತ ಅಂದಾಜು 2 ಮಿಲಿಯನ್ ರೂಪಾಯಿಗಳ ಮೊತ್ತದಷ್ಟು ಖಜಾನೆಯಲ್ಲಿ ಉಳಿಕೆಯಾಗತೊಡಗಿತ್ತು. ಶಾಲೆಯು ಉಪಯೋಗಿಸಿಕೊಳ್ಳುತ್ತಿದ್ದ ಜಾಗಕ್ಕೆ ನೀಡಲಾಗುತ್ತಿದ್ದ 40% ಬಾಡಿಗೆ ಮೊತ್ತವನ್ನು ಹೊರತುಪಡಿಸಿ, ದೇವಸ್ಥಾನದ ಖಜಾನೆಗೆ ಪ್ರತಿ ವರ್ಷಕ್ಕೆ ಸುಮಾರು ಹತ್ತು ಮಿಲಿಯನ್ ರೂಪಾಯಿಗಳಷ್ಟು ಆದಾಯ ಬರುತ್ತಿತ್ತು.

ದೇವಾಲಯದ ಆವರಣದಲ್ಲಿದ್ದ ಜಲಶಯನ ನಾರಾಯಣ ಅಥವಾ ಬುಧಾನಿಕಂಠ ಎಂದು ಕರೆಯುತ್ತಿದ್ದ ಕೊಳದಲ್ಲಿ ಇದ್ದ ನೀರನ್ನು ಉಳಿಸಿಕೊಳ್ಳಲು ಮತ್ತು ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಲು ದುರಸ್ತಿ ಮತ್ತು ಸೂಕ್ತ

ನಿರ್ವಹಣೆ ಅಗತ್ಯವಾಗಿತ್ತು. ಲಲಿತಾದೇವಿ ದೇವಾಲಯ ಪ್ರದೇಶದ ಮುಂಭಾಗದಲ್ಲಿ ಲಲಿತಪುರ, ಕಾಂತಿಪುರ ಮತ್ತು ಭಕ್ತಾಪುರ ರಾಜ್ಯಗಳನ್ನು ಪ್ರತಿನಿಧಿಸುವಂತೆ ಒಂದು ಕೊಳದ ಸ್ಥಾಪನೆ ಮಾಡುವುದಕ್ಕೆ ಸ್ಥಳಾನ್ವೇಷಣೆಯನ್ನು ಅಗತ್ಯವಾಗಿ ನಡೆಸಬೇಕಾಗಿತ್ತು. ಪ್ರಸ್ತುತ ಲಲಿತಪುರ ರಾಜ್ಯದ ರಾಜನಾಗಿದ್ದ ಶ್ರೀನಿವಾಸ ಮಲ್ಲನು ತನ್ನನ್ನು ತಾನು ನೇಪಾಳೇಶ್ವರನೆಂದು ಕರೆದುಕೊಂಡು ಲಲಿತಾ ತ್ರಿಪುರಸುಂದರಿ ದೇವಾಲಯವನ್ನು ನಿರ್ಮಿಸಿದ್ದರಿಂದ ಈ ಪ್ರದೇಶದ ರಕ್ಷಣೆಯು ಬಾಕಿ ಉಳಿಯಿತು. ನೀರಿನ ಸಂರಕ್ಷಣೆಗಾಗಿ ವಜ್ರಯಾನದ ಹೆಸರಿನ ಎರಡು ಕಾಲುವೆಗಳಿಗೆ ನಿರಂತರ ನೀರಿನ ಹರಿವನ್ನು ಒದಗಿಸುವುದು ಅತ್ಯಗತ್ಯವಾಗಿತ್ತು. ದೇವಾಲಯದ ಒಳಗೆ ಯಜ್ಞದ ಅಗ್ನಿಯು ಗರ್ಭಗುಡಿಯಲ್ಲಿ ಮತ್ತು ದೇವಾಲಯದ ಆವರಣದಲ್ಲಿ ನಿರಂತರವಾಗಿ ಉರಿಯುತ್ತಿರುವಂತೆ ವ್ಯವಸ್ಥೆ ಮಾಡಬೇಕಿತ್ತು. ಈ ಎಲ್ಲಾ ಕೆಲಸಗಳೂ ಆಗುತ್ತವೆ ಮತ್ತು ಪೂರ್ಣಗೊಳ್ಳುತ್ತವೆ ಎಂಬ ವಿಶ್ವಾಸ ಭರತ್ ಜಂಗಮ್ ಅವರಿಗಿತ್ತು.

ಜನ ಬಾಣೇಶ್ವರ ಮಹಾದೇವನ ದೇವಾಲಯಕ್ಕೆ ವಿವಿಧ ಹೆಸರುಗಳನ್ನು ಕೊಟ್ಟಿದ್ದರು. ಈಗಾಗಲೇ ಇಲ್ಲವಾಗಿರುವ ಮಹಾದೇವನ ದೇವಾಲಯಕ್ಕೆ ಹಲವಾರು ಹೆಸರುಗಳಿಂದ ಕರೆಯುವುದು ಸ್ವಾಭಾವಿಕವಾಗಿದೆ. ಸುಮಾರು ಇಪ್ಪತ್ತರಿಂದ ಮೂವತ್ತು ವರ್ಷಗಳ ಕಾಲ ಬಾಣೇಶ್ವರ ಮಹಾದೇವನ ದೇವಾಲಯದ ಪ್ರದೇಶದಲ್ಲಿ ವಾಸಿಸುತ್ತಿರುವ ಕೆಲವರಿಗೆ ಬಾಣೇಶ್ವರ ಮಹಾದೇವನ ಹೆಸರು ತಿಳಿದಿತ್ತು ಮತ್ತು ಇನ್ನೂ ಕೆಲವರಿಗೆ ಏನೂ ತಿಳಿದಿರಲಿಲ್ಲ! ಭರತ್ ಜಂಗಮ್ ಅವರು ಈ ಕುರಿತು ಹಲವರನ್ನು ವಿಚಾರಿಸಿದಾಗ ಎಷ್ಟೋ ಜನರಿಗೆ ಬಾಣೇಶ್ವರ ಮಹಾದೇವನ ದೇವಾಲಯವು ಎಲ್ಲಿತ್ತು ಎಂಬುದರ ಬಗ್ಗೆ ಮಾಹಿತಿಯೇ ಇರಲಿಲ್ಲ. ದೇವಾಲಯದ ಆವರಣದಲ್ಲಿದ್ದ ರತ್ನರಾಜ್ಯ ಶಾಲೆಯನ್ನು ತಿಳಿದಿದ್ದರು, ಆದರೆ ಬಾಣೇಶ್ವರ ಮಹಾದೇವನ ದೇವಾಲಯದ ಕುರಿತು ಯಾವುದೇ ಮಾಹಿತಿ ಇರಲಿಲ್ಲ! ಅಲ್ಲಿಯ ಜನರನ್ನು ಈ ಕುರಿತು ವಿಚಾರಿಸಿದಾಗ ಅವರು ವಾಣೇಶ್ವರ, ಮಾತೇಶ್ವರ, ಚಿತ್ರೇಶ್ವರ, ಏಕಾದಶ ರುದ್ರ ಮತ್ತು ರತ್ನರಾಜ್ಯ ಮಹಾದೇವ ಎಂಬ ವಿವಿಧ ಹೆಸರುಗಳನ್ನು ಹೇಳಿದುದು ಬಾಣೇಶ್ವರ ಮಹಾದೇವನ ಹೆಸರಿನ ಕುರಿತಾಗಿ ಇದ್ದ ಗೊಂದಲವನ್ನು ಸೂಚಿಸುತ್ತಿತ್ತು. ಈ ಮೊದಲು ಬಾಣೇಶ್ವರ ಮಹಾದೇವನ ದೇವಾಲಯವು ಬಾಣೇಶ್ವರ ಗ್ರಾಮಪಂಚಾಯಿತಿ ಮತ್ತು ಭೀಮಸೇನ ಗೋಳ ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಇತ್ತು. ಈಗ ಅದನ್ನು ಸುಮಾರು ಮೂರು ಲಕ್ಷಕ್ಕೂ ಅಧಿಕ ಜನರಿರುವ ದೊಡ್ಡ ಪ್ರದೇಶವಾದ ಕಠ್ಮಂಡು ಮೆಟ್ರೋಪಾಲಿಟನ್ ನಗರದ ವಾರ್ಡ್ ನಂ. 10 ಮತ್ತು 31ರ ಪ್ರದೇಶದಲ್ಲಿ ವಿಭಾಗಿಸಲಾಗಿದೆ. ದೇವಾಲಯವು ಇರುವ ಪ್ರದೇಶದಲ್ಲಿ ವಾಸಿಸುವ ಜನರಿಗೆ ದೇವಾಲಯದ ಕುರಿತು ಅಗತ್ಯ ಮಾಹಿತಿ ಇಲ್ಲವೆಂಬ ವಿಷಯವು ನಿಜಕ್ಕೂ ಹೃದಯವಿದ್ರಾವಕವಾಗಿದೆ.

ಬಾಣೇಶ್ವರ ಪ್ರದೇಶದಲ್ಲಿಯೇ ಹುಟ್ಟಿ ಬೆಳೆದು ವಿದ್ಯಾವಂತರಾದ ಡಾ. ಜನಾರ್ದನ್ ಪ್ರಸಾದ್ ಲಮಿಛಾನೆ ಎಂಬುವವರು ಬಾಣೇಶ್ವರ ಮಹಾದೇವನ ದೇವಾಲಯ ಪ್ರದೇಶದ ಮಹತ್ವವನ್ನು ಅರಿತು ಬಾಣೇಶ್ವರ ಮಹಾದೇವ ದೇವಸ್ಥಾನಕ್ಕೆ ಒಂದು ಹೆಸರನ್ನು ನೀಡುವುದು ಅಗತ್ಯವೆಂದು ತಿಳಿದು, ತಾವೇ ಸ್ವತಃ ಮುಂದಾಗಿ ಸಮಾನ ಮನಸ್ಕರ ಸಮಿತಿಯೊಂದನ್ನು ರಚಿಸಿದರು. ಈ ಸಮಿತಿಯು ಈ ದೇವಾಲಯವನ್ನು ಬಾಣೇಶ್ವರ ಮಹಾದೇವನ ದೇವಾಲಯ ಎಂದು ಗುರುತಿಸಲು ಮತ್ತು ಪ್ರಚಾರ ಮಾಡಲು ತೊಡಗಿತು.

ಬಾಣೇಶ್ವರ ಪ್ರದೇಶದಲ್ಲಿ ಜನರು ವಾಸಿಸಲು ಪ್ರಾರಂಭಿಸಿ ಸುಮಾರು ಅರ್ಧ ಶತಮಾನ ಕಳೆದರೂ, ಮಹಾದೇವನು ಈ ಪ್ರದೇಶದ ಸ್ಥಳೀಯ ದೇವತೆಯಾಗಿ ಕಾಯುತ್ತಿದ್ದಾನೆ. ಭರತ್ ಜಂಗಮ್ ಅವರು ತಮ್ಮ ಜೀವನದ ಉತ್ತರಾರ್ಧದಲ್ಲಿದ್ದರೂ ಈ ಪ್ರದೇಶದಲ್ಲಿ ಇನ್ನೂ ಉತ್ತಮವಾದ ಕೆಲಸಗಳನ್ನು ಮಾಡಲು ಹಾಗೂ ಭಗವಾನ್ ಶಿವನ ಕೃಪೆಗೆ ಪಾತ್ರರಾಗಲು ಹೇರಳ ಅವಕಾಶಗಳಿವೆ ಎಂಬುದನ್ನು ಕಂಡುಕೊಂಡ ಅದೃಷ್ಟಶಾಲಿಗಳಾಗಿದ್ದಾರೆ.

### 8) ಕಾವ್ರೆಪಾಲಂಚೋಕ್ ಜಿಲ್ಲೆಯ ಬನೇಪಾ ಪ್ರದೇಶದ ಧನೇಶ್ವರ ಮಹಾದೇವ ದೇವಾಲಯದ ಅಭಿವೃದ್ಧಿ ಕಾರ್ಯಗಳು

ಕಾವ್ರೆಪಾಲಂಚೋಕ್ ಜಿಲ್ಲೆಯ ಬನೇಪಾ ಪ್ರದೇಶದಲ್ಲಿ ಧನೇಶ್ವರ ಮಹಾದೇವ ದೇವಾಲಯವಿದೆ. ಈ ಮಹಾದೇವನನ್ನು ಪ್ರಾಚೀನ ಪಶುಪತಿ ಎಂದು ಕೂಡಾ ಗುರುತಿಸಲಾಗುತ್ತದೆ. ಈ ದೇವಾಲಯದಲ್ಲಿ ನಿತ್ಯಪೂಜೆಯು ನಿರಂತರವಾಗಿ ನಡೆಯುತ್ತಿತ್ತು. ಪ್ರತಿ ಏಕಾದಶಿ, ಅಮಾವಾಸ್ಯೆ, ಆಷಾಢ ಮತ್ತು ಪೌರ್ಣಮಿಯ ದಿನಗಳಂದು ವಿಶೇಷ ಪೂಜೆಗಳು ಹಾಗೂ ಶ್ರಾವಣ ಮತ್ತು ಮಾಘಮಾಸಗಳಲ್ಲಿ ಜಾತ್ರೆಗಳನ್ನು ಆಯೋಜಿಸಲಾಗುತ್ತಿತ್ತು. ಅಲ್ಲದೆ, ಧಾನ್ಯಪೂರ್ಣಿಮೆ ಮತ್ತು ಪಂಚಮಿಯಂದು ವಾರ್ಷಿಕ ಜಾತ್ರೆಗಳನ್ನೂ ಸಹ ಹಮ್ಮಿಕೊಳ್ಳಲಾಗುತ್ತಿತ್ತು. ಅಕ್ಕಪಕ್ಕದ ಜಿಲ್ಲೆಗಳಾದ ಸಿಂಧುಪಾಲ್‌ಚೋಕ್, ರಮೇಛಾಪ್, ಓಖಾಲ್‌ಧುಂಗಾ, ಸಿಂಧೂಲಿ ಮತ್ತು ಮಕ್ವಾನ್‌ಪುರಗಳಿಂದ ಭಕ್ತಾದಿಗಳು ಬಂದು ಎಣ್ಣೆಯ ದೀಪಗಳನ್ನು ಹಚ್ಚಿ,

ಪ್ರಗತಿ ಮತ್ತು ಸುಭಿಕ್ಷತೆಗಳಿಗಾಗಿ ಬೇಡುತ್ತಿದ್ದರು. ಧನೇಶ್ವರ ಮಹಾದೇವನು ಸಮೃದ್ಧಿ ಮತ್ತು ಸುಭಿಕ್ಷತೆಗಳನ್ನು ನೀಡುವ ದೇವನಾಗಿ ಪ್ರಸಿದ್ಧನಾಗಿದ್ದ.

ಬ್ರಾಹ್ಮಣ, ಕ್ಷತ್ರಿಯ ಮತ್ತು ನೇವಾರ ಸಮುದಾಯಗಳೊಂದಿಗೆ, ತಮಂಗ್ ಲಾಮಾ ಸಮುದಾಯದವರೂ ಕೂಡಾ ಧನೇಶ್ವರ ಮಹಾದೇವನನ್ನು ಪೂಜಿಸುತ್ತಿದ್ದರು. ಬನೇಪಾ, ಶ್ರೀಖಂಡಪುರ, ಧೂಳಿಖೇಲ್ ಮತ್ತು ಪನೌತಿ ಪ್ರದೇಶಗಳ್ಲಿ ವಾಸಿಸುವ ನೇವಾರ ಸಮುದಾಯದ ಜನರು ಆ ಪ್ರದೇಶದ ಪಾಲಕರಾಗಿದ್ದರು. ಅಲ್ಲದೆ, ಶ್ರೀಖಂಡಪುರ ಮತ್ತು ಬನೇಪಾ ಪ್ರದೇಶಗಳ ಭಕ್ತರು ಈ ದೇವಾಲಯ ಮತ್ತು ಅದರ ಆವರಣದ ಅಭಿವೃದ್ಧಿಕಾರ್ಯಗಳಿಗೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಸ್ಥಳೀಯ ಅಲೆಮಾರಿ ಸಮುದಾಯದಿಂದ ಪೂಜಿಸಲ್ಪಡುವ ಈ ದೇವಾಲಯದ ಒಳಗಿರುವ ಪ್ರಧಾನ ಶಿವಲಿಂಗವು ಉದ್ಭವಲಿಂಗವೆಂದು ನಂಬಲಾಗಿದೆ. ಈ ಲಿಂಗದ ಮಧ್ಯಭಾಗದಲ್ಲಿ ಒಂದು ನೀರಿನ ಸೆಲೆಯಿದ್ದು, ಅದನ್ನು ಗಂಗಾನದಿಯ ಉಗಮಸ್ಥಾನವೆಂದು ನಂಬಲಾಗಿದೆ ಮತ್ತು ಈ ವೈಶಿಷ್ಟ್ಯವು ಇದನ್ನು ಇತರೆ ಜ್ಯೋತಿರ್ಲಿಂಗಗಳಿಂದ ಪ್ರತ್ಯೇಕಿಸುತ್ತದೆ. ಇದೇ ಇದರ ವಿಶೇಷತೆಯಾಗಿದೆ.

1955–56ರ ಸಮಯದಿಂದಲೂ ಈ ಪ್ರದೇಶಕ್ಕೆ ಹೋಗಿಬರುತ್ತಿದ್ದುದರಿಂದಾಗಿ ಭರತ್ ಜಂಗಮ್ ಅವರು ಈ ಪ್ರದೇಶದ ಅಭಿವೃದ್ಧಿಯಲ್ಲಿ ವೈಯಕ್ತಿಕವಾಗಿ ತೊಡಗಿಕೊಳ್ಳುವ ಪುಣ್ಯ ಪ್ರಾಪ್ತಿಯಾಯಿತು. ಮುಂದೆ ಅವರು ಈ ಪ್ರದೇಶದ ಪ್ರಗತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡುವ ಅವಕಾಶವನ್ನೂ ಪಡೆದರು. ಈ ಪ್ರದೇಶಕ್ಕೆ ಪದೇ ಪದೇ ಭೇಟಿ ನೀಡುವುದು ಅನಿವಾರ್ಯವಾಯಿತು. ಅವರು ಕೆಲವು ಕಾಲ ಈ ಪ್ರದೇಶದಲ್ಲಿ ಕಳೆಯಲು ಹಾಗೂ ಸಾಂದರ್ಭಿಕ ಸಲಹೆ ಸೂಚನೆಗಳನ್ನು ನೀಡಲು ಸಾಧ್ಯವಾಯಿತು.

ಈ ಕಥೆಯ 2003ನೇ ಇಸವಿಯಷ್ಟು ಹಿಂದಕ್ಕೆ ಹೋಗುತ್ತದೆ. ಒಂದು ದಿನ ಯುವ ಪ್ರತಿನಿಧಿಗಳ ತಂಡವೊಂದು ಈ ಪ್ರದೇಶಕ್ಕೆ ಭೇಟಿ ನೀಡಿತು. ತಮ್ಮ ಪೂರ್ವಜರು ಈ ಪ್ರದೇಶದಲ್ಲಿ ಧುಂಗೇಧಾರಾ(ಕಲ್ಲಿನ ಚಿಲುಮೆ)ವನ್ನು ಸ್ಥಾಪಿಸಿದ್ದು, ಅದಕ್ಕೆ ಬಹಳ ವರ್ಷಗಳಿಂದಲೂ ನೀರನ್ನು ಒದಗಿಸಲಾಗುತ್ತಿಲ್ಲ ಎಂದು ಅವರು ಭರತ್ ಜಂಗಮ್ ಅವರಿಗೆ ತಿಳಿಸಿದರು. ಅಲ್ಲಿ ನೀರನ್ನು ಸಂಗ್ರಹಿಸಿ ಆ ಚಿಲುಮೆಯ ಮೂಲಕ ನೀರು ಹರಿಸಬೇಕು ಎಂಬುದು ಅವರ ಸಲಹೆಯಾಗಿತ್ತು. ಭರತ್ ಜಂಗಮ್ ಅವರ ಪೂರ್ವಜರು, ಧಂಬರ್ಲಿಂಗ ದೇವರು, ಈ ನೀರಿನ ಚಿಲುಮೆಯನ್ನು ಕಟ್ಟಿದ್ದರು ಎಂಬುದು ಭರತ್ ಜಂಗಮ್ ಅವರಿಗೆ ತಿಳಿದಿತ್ತು. ಪ್ರತಿವರ್ಷ ವಿವಾಹ ಪಂಚಮಿಯಂದು ಅದನ್ನು ಸ್ವಚ್ಛಗೊಳಿಸಿ ರುದ್ರಿಪೂಜೆಯನ್ನು ಮಾಡುವ ಸಂಪ್ರದಾಯವಿತ್ತು. ಭಕ್ತಾಪುರದ ಜಂಗಮ ಮಠದಿಂದ ಭಕ್ತರ ಸಮೂಹವೊಂದು ಅಲ್ಲಿಗೆ ತೆರಳಿ ಪೂಜೆ ನೆರವೇರಿಸಿ, ಮೊಸರನ್ನವನ್ನು ನೈವೇದ್ಯ ಮಾಡಿ ಆ ಗ್ರಾಮದಲ್ಲಿರುವ ಪ್ರತಿಯೊಬ್ಬರಿಗೂ ಪ್ರಸಾದವನ್ನು ನೀಡುತ್ತಿದ್ದರು.

ಭರತ್ ಜಂಗಮ್ ಅವರು ತಮ್ಮ ಬಾಲ್ಯದಲ್ಲಿ ಈ ಪೂಜೆ, ಉತ್ಸವಗಳಲ್ಲಿ ಬಹಳ ಸಲ ಭಾಗವಹಿಸಿದ್ದರು. ಈಗ ಯುವ ಸ್ನೇಹಿತರ ತಂಡದ ಬೇಡಿಕೆಯಂತೆ ಮತ್ತೊಮ್ಮೆ ಆ ಪ್ರದೇಶಕ್ಕೆ ಭೇಟಿ ನೀಡಿದರು ಅಲ್ಲಿನ ಮುರಿದ ಕಲ್ಲುಗಳು, ಕಾಣೆಯಾಗಿದ್ದ ವಸ್ತುಗಳು ಮತ್ತು ಒಣಗಿದ ನೀರಿನ ಸೆಲೆಯನ್ನು ಕಂಡು ಅವರು ದುಃಖಿತರಾದರು. ಆ ಜಾಗದಲ್ಲಿ ನವೀಕರಣ ಕಾರ್ಯವನ್ನು ಕೈಗೊಳ್ಳಲು ತನ್ನ ಸಂಪೂರ್ಣ ಬೆಂಬಲವನ್ನು ನೀಡುವುದಾಗಿ ಅವರು ಆ ಯುವಕರಿಗೆ ಮಾತು ನೀಡಿದರು. ಸ್ಥಳೀಯ ಯುವಕರಿಂದ ದೇಣಿಗೆಗಳನ್ನು ಸಂಗ್ರಹಿಸಲಾಯಿತು. ಪರಿಣಾಮವಾಗಿ ನವೀಕರಣ ಕಾರ್ಯವು ಯಶಸ್ವಿಯಾಗಿ ಪೂರ್ಣಗೊಂಡು, ನೀರಿನ ಚಿಲುಮೆಯಲ್ಲಿ ಮತ್ತೆ ನೀರು ಹರಿಯಲು ಆರಂಭವಾಯಿತು. ಡಾ. ಸ್ವಾಮಿ ಪ್ರಪನ್ನಾಚಾರ್ಯರಿಂದ ನೀರಿನ ಚಿಲುಮೆಯನ್ನು ಉದ್ಘಾಟನೆ ಮಾಡಿಸಲಾಯಿತು. ಇಡೀ ದಿನ ನಡೆದ ಕಾರ್ಯಕ್ರಮಗಳಲ್ಲಿ ಸ್ಥಳೀಯ ನಿವಾಸಿಗಳು ಸಂಭ್ರಮದಿಂದ ಪಾಲ್ಗೊಂಡರು. ಇದರ ನೆನಪಿಗಾಗಿ ಸ್ಮಾರಕ ಶಿಲಾಫಲಕವೊಂದನ್ನು ಅಲ್ಲಿ ಸ್ಥಾಪಿಸಲಾಯಿತು.

ಧನೇಶ್ವರ ಮಹಾದೇವನ ಪ್ರದೇಶದ ಜೀರ್ಣೋದ್ಧಾರ ಕಾರ್ಯಗಳಲ್ಲಿ ಭರತ್ ಜಂಗಮ್ ಅವರು ಯಶಸ್ವಿಯಾಗಿ ಪಾಲ್ಗೊಂಡರು. ಯುವಕರು ಆಯೋಜಿಸಿದ ಕಾರ್ಯಕ್ರಮಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದರು. ಇದೇ ಪ್ರದೇಶದಲ್ಲಿ ಹೆಣ್ಣುಮಕ್ಕಳ ಗುಂಪೊಂದು ನಿರ್ಮಿಸಿದ ಶ್ರೀಕೃಷ್ಣನ ದೇವಸ್ಥಾನದ ಕಾರ್ಯಗಳಲ್ಲಿ ಮತ್ತು ಶ್ರೀಕೃಷ್ಣನ ಪ್ರತಿಷ್ಠಾಪನೆಯಲ್ಲಿ ಕೂಡಾ ಅವರು ತೊಡಗಿಕೊಂಡರು. ಹೀಗೆ ಅವರು ಆ ಪ್ರದೇಶದ ಸಣ್ಣ ಮತ್ತು ದೊಡ್ಡ ಕಾರ್ಯಗಳಲ್ಲಿ ಭಾಗಿಯಾಗಿದ್ದು, ಶ್ರೀಕೃಷ್ಣನ ದೇವಾಲಯದ ಶಿಲಾಫಲಕದಲ್ಲಿ ಕೂಡಾ ಅವರ ಹೆಸರು ದಾಖಲಾಗಿದೆ.

2019ನೇ ವರ್ಷದ ಕಾರ್ತಿಕ ಮಾಸದಲ್ಲಿ, ಈ ದೇವಾಲಯದ ಅರ್ಚಕರಾದ ಪ್ರಹ್ಲಾದ್ ಜಂಗಮ್ ಅವರು ಭರತ್ ಜಂಗಮ್ ಅವರಿಗೆ ಕರೆಮಾಡಿ, ದೇವಾಲಯದಲ್ಲಿ ಪೂಜಿಸಲಾಗುತ್ತಿರುವ ಮೂಲ ಶ್ರೀಕೋ ಲಿಂಗದ ತಲೆಯ ಭಾಗವು ಭಿನ್ನಗೊಂಡಿದೆ ಎಂದು ಮಾಹಿತಿ ನೀಡಿದರು. ಈ ಕುರಿತು ಮುಂದೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಚರ್ಚಿಸಲಾಯಿತು ಮತ್ತು ಹಲವಾರು ಫೋನ್ ಕರೆಗಳನ್ನು ಮಾಡಲಾಯಿತು. ಈ ಪ್ರಕರಣವು ಬಹಳ ದಿನಗಳಿಂದಲೂ ಚಾಲ್ತಿಯಲ್ಲಿದ್ದು, ಈ ಕುರಿತು ಜಿಲ್ಲಾ ಆಡಳಿತಕ್ಕೆ ಮತ್ತು ಪೊಲೀಸ್ ಸ್ಟೇಷನ್‌ಗಳಲ್ಲಿ ದೂರು ಕೂಡಾ ದಾಖಲಾಗಿದೆ. ಸ್ಥಳೀಯ ಮುಜರಾಯಿ ಕಛೇರಿಯೂ ಕೂಡ ಈ ಪ್ರಕರಣವನ್ನು ಬಗೆಹರಿಸಲು ಪ್ರಯತ್ನಿಸಿತ್ತು. ಈ ಪ್ರಕರಣವು ಸ್ಥಳೀಯ ಜನರಲ್ಲಿ ಎರಡು ಗುಂಪುಗಳಾಗಿ, ಒಂದು ಗುಂಪು ಈ ಪ್ರಕರಣವನ್ನು ಪುರಾತತ್ವ ಇಲಾಖೆಯ ವತಿಯಿಂದ ಬಗೆಹರಿಸಬೇಕು ಅಥವಾ ಯಾರು ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಹಾಳುಮಾಡಿದ್ದಾರೆಯೋ ಅವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವಾದಿಸಿದರೆ ಇನ್ನೊಂದು ಗುಂಪು ಅಗತ್ಯ ಪರಿಹಾರ ಮೊತ್ತವನ್ನು ಒದಗಿಸುವಂತೆ ಕೋರಿದ್ದು, ಈ ಎರಡೂ ಗುಂಪುಗಳ ಮಧ್ಯೆ ವಾದವಿವಾದಗಳು ನಡೆಯುವ ಹಂತಕ್ಕೆ ತಲುಪಿತ್ತು.

ಹೀಗೆ ಭಿನ್ನ ಭಿನ್ನ ಅಭಿಪ್ರಾಯಗಳು ಮೂಡಿದ ನಂತರ, ಈ ಕುರಿತು ಚರ್ಚಿಸಲು ಪೊಲೀಸ್ ಮತ್ತು ಇತರೆ ಸಂಬಂಧಿತ ಇಲಾಖೆಗಳಿಂದ ದೂರವಾಗಿ ಇನ್ನೊಂದು ಸ್ಥಳದಲ್ಲಿ ಒಂದು ಜಂಟಿ ಸಭೆಯನ್ನು ಆಯೋಜಿಸುವುದೆಂದು ತೀರ್ಮಾನಿಸಲಾಯಿತು. ಪ್ರತಿಯೊಬ್ಬರೂ ಭರತ್ ಜಂಗಮ್ ಅವರು ಈ ಸಭೆಗೆ ಹಾಜರಾಗಬೇಕೆಂದು ವಿನಂತಿಸಿದರು ಹಾಗೂ ಅವರು ಈ ಕುರಿತು ಇದುವರೆಗೂ ನಡೆದ ಎಲ್ಲಾ ಚರ್ಚೆಗಳನ್ನೂ ಫೋನ್ ಮೂಲಕ ಕೇಳಿ ಖಚಿತಪಡಿಸಿಕೊಂಡರು. ಈ ಸಂದರ್ಭದಲ್ಲಿ ತಾವೇನು ಮಾಡಬೇಕೆಂದು ಅವರಿಗೆ ನಿಶ್ಚಯವಾಗಿರಲಿಲ್ಲ.

ನಿಗದಿತ ಸಮಯಕ್ಕೆ, ಧನೇಶ್ವರ ಮಹಾದೇವ ದೇವಾಲಯದ ಆವರಣದಲ್ಲಿರುವ ಅರಳೀಮರದ ಕೆಳಗಿದ್ದ ಬಯಲು ಪ್ರದೇಶದಲ್ಲಿ ಸುಮಾರು ನೂರಕ್ಕೂ ಹೆಚ್ಚು ಜನರು ಸೇರಿದರು. ಅಲ್ಲಿ ಜಿಲ್ಲಾಡಳಿತದ ಪ್ರತಿನಿಧಿಗಳು, ಗುಥಿ ಸಂಸ್ಥಾನದ ಸ್ಥಳೀಯ ಅಧಿಕಾರಿಗಳು, ಬನೇಪಾ ಪೊಲೀಸ್ ಮುಖ್ಯಾಧಿಕಾರಿಗಳು, ಬನೇಪಾ ಮತ್ತು ಪನೌತಿ ಮುನಿಸಿಪಾಲಿಟಿಯ ಅಧ್ಯಕ್ಷರುಗಳು, ಧನೇಶ್ವರ ಮಹಾದೇವ ಅಭಿವೃದ್ಧಿ ನಿಧಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಗೂ ಪ್ರಧಾನ ಅರ್ಚಕರ ಕುಟುಂಬದ ಅಧಿಕಾರಿಗಳು ಹಾಜರಿದ್ದರು. ಸಭೆಯಲ್ಲಿ ಮೈಕ್ರೋಫೋನ್ ಅನ್ನು ಉಪಯೋಗಿಸಿದ್ದು ವಿಶೇಷವಾಗಿತ್ತು. ಆ ಸ್ಥಳಕ್ಕೆ ತಮ್ಮ ಪುತ್ರ ಜ್ಯೋತಿ ಜಂಗಮ್‌ರೊಂದಿಗೆ ಭರತ್ ಜಂಗಮ್ ಅವರು ತಲುಪಿದಾಗ, ಸಭೆಯು ಅದಾಗಲೇ ಆರಂಭವಾಗಿ ಹೋಗಿತ್ತು. ಆ ಸಂದರ್ಭದಲ್ಲಿ ಪರಸ್ಪರ ಆರೋಪ–ಪ್ರತ್ಯಾರೋಪಗಳನ್ನು ಮಾಡುತ್ತಾ ಸಭೆಯಲ್ಲಿ ಉದ್ರಿಕ್ತ ವಾತಾವರಣ ನಿರ್ಮಾಣವಾಗಿತ್ತು. ಈ ಪರಿಸ್ಥಿತಿಯನ್ನು ತಿಳಿಗೊಳಿಸಲು, ದೇವಾಲಯಕ್ಕೆ ಖುದ್ದಾಗಿ ಭೇಟಿ ನೀಡುವಂತೆ ಮತ್ತು ಭಿನ್ನವಾಗಿದೆಯೆನ್ನಲಾದ ಶಿವಲಿಂಗದ ಭಾಗವನ್ನು ಕಣ್ಣಾರೆ ನೋಡಿ ಪರೀಕ್ಷಿಸುವುದೆಂದು ತೀರ್ಮಾನಿಸಲಾಯಿತು. ಸದರಿ ಶಿವಲಿಂಗದ ಭಿನ್ನವಾಗಿರುವ ಭಾಗದ ಮೇಲೆ ಬಟ್ಟೆಯೊಂದನ್ನು ಮುಚ್ಚಲಾಗಿದ್ದು, ಅದನ್ನು ಮುಟ್ಟಿದರೆ ಏನಾಗುವುದೋ ಎಂಬ ಭಯವು ಎಲ್ಲರನ್ನೂ ತಡೆಯುತ್ತಿತ್ತು.

ಆಶ್ವಯುಜ ಮಾಸದಲ್ಲಿ ಈ ಲಿಂಗವು ಭಿನ್ನವಾಗಿರುವ ಸುದ್ದಿಯನ್ನು ಸಾರ್ವಜನಿಕರಿಗೆ ತಿಳಿಸಲಾಗಿತ್ತು. ಜನಜಂಗುಳಿಯಲ್ಲಿ ತೆಂಗಿನಕಾಯಿಯನ್ನು ಎಸೆದಿದ್ದರಿಂದಾಗಿ ಲಿಂಗವು ಭಿನ್ನವಾಗಿದೆ ಎಂದು ಅರ್ಚಕರು ವಿವರಿಸಿದರೂ ಕೂಡಾ ಅದನ್ನು ಪರೀಕ್ಷಿಸಿದಾಗ, ಲಿಂಗದ ಮೇಲ್ಭಾಗವು ಭಿನ್ನವಾಗಿರುವುದು ಕಂಡು ಬಂದಿತು. ಇದನ್ನು ಕೇಳಿ ಇಡೀ ಸಭಾಜನರೆಲ್ಲ ಕ್ಷೋಭೆಗೊಳಗಾದರು, ಮತ್ತು ಅರ್ಚಕರು ನಡುಗುತ್ತಾ "ಭಗವಂತ ಕೊಡುವ ಶಿಕ್ಷೆಯನ್ನು ಅನುಭವಿಸಲು ನಾನು ಸಿದ್ಧನಾಗಿದ್ದೇನೆ" ಎಂದು ಹೇಳಿಕೆ ನೀಡಿದರು. ಅವರ ಈ ಹೇಳಿಕೆಯು ಜನರನ್ನು ಇನ್ನಷ್ಟು ರೊಚ್ಚಿಗೆಬ್ಬಿಸಿತು. ತಮ್ಮ ನಿರ್ಣಯ ಕ್ಷಣದ ತೂಕವನ್ನು ಅರಿತ ನಂತರ, ಭರತ್ ಜಂಗಮ್ ಅವರು ಸಾಧ್ಯವಿರುವ ಒಂದು ಸೂಕ್ತ ಪರಿಹಾರವನ್ನು ಸೂಚಿಸಿದರು. ಮುಖಾಮುಖಿ ಚರ್ಚೆಗಳ ನಂತರವೂ ಒಂದು ಒಮ್ಮತಕ್ಕೆ ಬರಲು ಸಾಧ್ಯವಾಗಲಿಲ್ಲ.

ಪ್ರಸ್ತುತ ಸಂದರ್ಭದ ಕುರಿತು ಪುರಾತತ್ವ ಇಲಾಖೆ ಮತ್ತು ಸ್ಥಳೀಯ ಗುಥಿ ಸಂಸ್ಥಾನಕ್ಕೆ ಮಾಹಿತಿ ನೀಡಲು ಭರತ್ ಜಂಗಮ್ ಅವರು ನಿರ್ಧರಿಸಿದರು. ಸ್ಥಳೀಯ ಪೊಲೀಸರು, ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಮುನಿಸಿಪಾಲಿಟಿ ವಾರ್ಡ್ ಅಧ್ಯಕ್ಷರುಗಳ ಸಹಯೋಗದಲ್ಲಿ ಜಂಟಿಯಾಗಿ ಈ ನಿರ್ಧಾರವನ್ನು ಕೈಗೊಳ್ಳಲಾಗಿತ್ತು. ಪ್ರತಿಯೊಬ್ಬರೂ ನಿರ್ವಿವಾದವಾಗಿ ಈ ನಿರ್ಧಾರಕ್ಕೆ ಸಮ್ಮತಿಸಿದ್ದರು. ಈ ಸಂದರ್ಭದಲ್ಲಿ ಧನೇಶ್ವರ ಮಹಾದೇವ ದಿವ್ಯಕೃಪೆಯಿಂದ ಇದು ಸಾಧ್ಯವಾಯಿತು ಎಂದು ಭರತ್ ಜಂಗಮ್ ಅವರಿಗೆ ಅನಿಸಿತು. ಹೀಗಾಗಿ ಭಗವಂತನಿಗೆ ಪ್ರಾಯಶ್ಚಿತ್ತ ಪೂಜೆಯನ್ನು ಸಲ್ಲಿಸಲು ಅವರು ತಿಳಿಸಿದರು. ಈ ಕುರಿತು ನಡೆಸಲಾಗುವ ಶಾಸ್ತ್ರೋಕ್ತವಾದ ಭವ್ಯ ಉತ್ಸವಕ್ಕೆ ಬೇಕಾಗುವ ಅಗತ್ಯ ಖರ್ಚು–ವೆಚ್ಚಗಳು ಮತ್ತು ಬೇಕಾಗುವ ಮೊತ್ತದ

ಬಗ್ಗೆ ಸಭೆಯಲ್ಲಿ ಚರ್ಚಿಸಿದ ನಂತರ, ಭರತ್ ಜಂಗಮ್ ಅವರು ಈ ಕಾರ್ಯಕ್ಕಾಗಿ ಎರಡೂ ಮುನಿಸಿಪಾಲಿಟಿಗಳ ಆರ್ಥಿಕ ಬೆಂಬಲವನ್ನು ಕೋರಿದರು. ಅವರು ದಾನಿಗಳಿಂದಲೂ ದೇಣಿಗೆಗಳನ್ನು ಕೋರಿದರು ಹಾಗೂ ಧನೇಶ್ವರ ಮಹಾದೇವ ಅಭಿವೃದ್ಧಿ ನಿಧಿಯಲ್ಲಿದ್ದ ಮೊತ್ತವನ್ನು ಶಿವಲಿಂಗದ ಮುರಿದು ಹೋದ ಭಾಗದ ದುರಸ್ತಿಗಾಗಿ ಬಳಸುವಂತೆ ಸಲಹೆ ನೀಡಿದರು. ಇದಕ್ಕಾಗಿ ಜಂಗಮ ಫೌಂಡೇಶನ್ ವತಿಯಿಂದ ಒಂದು ಲಿಂಗದ ರೂಪದ ಪೀಠವನ್ನು ಬೆಳ್ಳಿಯಿಂದ ನಿರ್ಮಿಸಲು ಮತ್ತು ಅದನ್ನು ಹಾರವನ್ನು ಹೋಲುವ ಬೆಳ್ಳಿಯ ಕೆತ್ತನೆಗಳಿಂದ ಅಲಂಕರಿಸಿ ಪ್ರತಿಷ್ಠಾಪಿಸಲು ತೀರ್ಮಾನಿಸಲಾಯಿತು. ಈ ಪ್ರತಿಕೃತಿಯನ್ನು ಗರ್ಭಗುಡಿಯಲ್ಲಿ ಮೂಲದೇವರ ಮುಂದೆ ಪ್ರತಿಷ್ಠಾಪಿಸಿ, ಸದಾಕಾಲವೂ ಅಲ್ಲಿಯೇ ಇರುವಂತೆಯೂ ಹಾಗೂ ಈ ವಿಷಯದಲ್ಲಿ ಯಾವುದೇ ಕುಂದುಕೊರತೆಗಳು ಉದ್ಭವಿಸದಂತೆಯೂ ತೀರ್ಮಾನಿಸಲಾಯಿತು ಮತ್ತು ಈ ವಿಷಯವನ್ನು ಅಲ್ಲಿದ್ದ ಪ್ರತಿಯೊಬ್ಬರಿಗೂ ತಿಳಿಸಲಾಯಿತು.

ಎಲ್ಲರ ಸಮ್ಮತಿಯೊಂದಿಗೆ ಭಗವಂತನಿಗೆ ಪ್ರಾಯಶ್ಚಿತ್ತ ಪೂಜೆಯನ್ನು ಸಲ್ಲಿಸುವ ದಿನಾಂಕವನ್ನು ನಿಗದಿಗೊಳಿಸಲಾಯಿತು. ಅದೇ ಸಭೆಯಲ್ಲಿ, ಆ ದಿನವೇ ಭರತ್ ಜಂಗಮ್ ಅವರು ಧನೇಶ್ವರ ಮಹಾದೇವ ಅಭಿವೃದ್ಧಿ ನಿಧಿಯ ಮಹಾಪೋಷಕರಾಗಬೇಕೆಂದು ಎಲ್ಲರೂ ಒಕ್ಕೊರಲಿನಿಂದ ಒತ್ತಾಯಿಸಿದರು. ಭರತ್ ಜಂಗಮ್ ಅವರು ಇದನ್ನು ತಮ್ಮ ಆರಾಧ್ಯ ದೈವವಾದ ಶ್ರೀ ಧನೇಶ್ವರ ಮಹಾದೇವನ ಕೃಪೆಯೆಂದು ಭಾವಿಸಿದರು. 2019ರ ಕಾರ್ತಿಕ ಮಾಸದ 30ನೇ ದಿನ ಪ್ರಾಯಶ್ಚಿತ್ತ ಪೂಜೆಯನ್ನು ನಿಗದಿಗೊಳಿಸಲಾಯಿತು. ಈ ಸಂಬಂಧ ರುದ್ರಿ, ದೀಪ ಪ್ರಜ್ವಾಲನ, ಹವನ, ಮಂತ್ರ ಪಠಣ ಮತ್ತು ಚಂಡೀಪಾರಾಯಣ ಇತ್ಯಾದಿ ಧಾರ್ಮಿಕ ಚಟುವಟಿಕೆಗಳು ನಡೆಯತೊಡಗಿದವು. ಧನೇಶ್ವರ ಮಹಾದೇವ ಸಮಿತಿ, ವಾಗೇಶ್ವರ ಮಹಾದೇವ ಸಮಿತಿ, ಸರಸ್ವತಿ ಸ್ಥಾನ ವಾಗೇಶ್ವರಿ ಸಮಿತಿ, ಅನಂತಲಿಂಗೇಶ್ವರ ಮಹಾದೇವ ಸಮಿತಿ, ಬಾಲೇಶ್ವರ ಮಹಾದೇವ ಸಮಿತಿ, ಇಂದ್ರೇಶ್ವರ ಮಹಾದೇವ ಸಮಿತಿ, ಕೋಟೇಶ್ವರ ಮಹಾದೇವ ಸಮಿತಿ ಮತ್ತು ಬಾಣೇಶ್ವರ ಮಹಾದೇವ ಸಮಿತಿಗಳ ಎಲ್ಲಾ ಸದಸ್ಯರುಗಳು, ಸಂಬಂಧಪಟ್ಟ ಮುನಿಸಿಪಾಲಿಟಿಗಳ ಅಧಿಕಾರಿಗಳು ಎಲ್ಲರೂ ಈ ಪವಿತ್ರ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸ್ಥಳೀಯ ಜಿಲ್ಲೆಗಳ ರಾಜಕೀಯ ಮುಖಂಡರುಗಳು ಹಾಗೂ ಮುನಿಸಿಪಾಲಿಟಿಗಳ ಮೇಯರ್‌ಗಳೂ ಕೂಡಾ ಈ ಸಂದರ್ಭದಲ್ಲಿ ಹಾಜರಿದ್ದರು.

ಧನೇಶ್ವರ ಮಹಾದೇವ ಸ್ವರೂಪಿಯಾದ ಲಿಂಗವು ವಿಘಟನೆಯಾಗುವಿಕೆ ಮತ್ತು ದೇವಾಲಯದ ಅಭಿವೃದ್ಧಿ ಕಾರ್ಯದಲ್ಲಿ ಭರತ್ ಜಂಗಮ್ ಅವರ ಭಾಗವಹಿಸುವಿಕೆಯು ಒಂದು ಕಾಕತಾಳೀಯ ಘಟನೆಯೋ ಅಥವಾ ಭಗವಂತನ ಕೃಪೆಯೋ ಎಂದು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಇದರ ನಂತರ ಭರತ್ ಜಂಗಮ್ ಅವರು ತಮ್ಮ ಸಂಪೂರ್ಣ ಜೀವನವನ್ನು ದೇವಾಲಯದ ಅಭಿವೃದ್ಧಿಕಾರ್ಯಕ್ಕೆ ಮೀಸಲಿಟ್ಟರು. ಕಭ್ರೆ ಪಾಲಂಚೋಕ್ ಜಿಲ್ಲೆಯ ವಾರ್ಡ್ ನಂ. 11ರಲ್ಲಿರುವ ಮಂದನ್ ದಿಯುಪುರ್ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿರುವ ಉಗ್ರೇಶ್ವರ ಮಹಾದೇವ ದೇವಾಲಯದ ಬಗ್ಗೆಯೂ ತಿಳಿದುಕೊಳ್ಳಲು ಅವರು ಬಯಸಿದರು. ಈ ದೇವಾಲಯವನ್ನು ಕೆಲವು ವರ್ಷಗಳ ಹಿಂದೆ ಜೈಸಿತೋಕ್‌ನ ಫೇದಿ ಅವರಿಂದ ಸ್ಥಳೀಯ ನಿವಾಸಿಯಾದ ಚಿರಂಜೀವ್ ದಹಾಲ್ ಅವರ ನೇತೃತ್ವದಲ್ಲಿ ಪ್ರತಿಷ್ಠಾಪಿಸಲಾಗಿತ್ತು. ಈ ದೇವಾಲಯವನ್ನು 2013ರಲ್ಲಿ ಶಿವರಾತ್ರಿಯ ಸಂದರ್ಭದಲ್ಲಿ ಉದ್ಘಾಟಿಸಲಾಗಿತ್ತು ಮತ್ತು ಅಂದಿನಿಂದ ಅವರೇ ಅಲ್ಲಿ ನಿತ್ಯಪೂಜಾ ಕೈಂಕರ್ಯಗಳನ್ನು ಸಲ್ಲಿಸುತ್ತಿದ್ದಾರೆ.

2018ರಲ್ಲಿ ಭರತ್ ಜಂಗಮ್ ಅವರು ಮಾಂಗ್‌ಸಿರ್‌ನಲ್ಲಿರುವ ಈ ಪ್ರದೇಶಕ್ಕೆ ಭೇಟಿ ನೀಡಿದ್ದರು. ದೇವಾಲಯವು ತೆರೆದಿದ್ದರಿಂದ ಅವರು ಒಳಗೆ ಭೇಟಿ ನೀಡಿ, ದರ್ಶನವನ್ನು ಪಡೆದಿದ್ದರು ಹಾಗೂ ಆ ದೇವಾಲಯದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಕೃತಕ ಮರದ ಬಾಗಿಲುಗಳನ್ನು ಅಳವಡಿಸಲಾಗಿದೆ ಎಂಬುದನ್ನು ಅವರು ಗಮನಿಸಿದ್ದರು. ದೇವಾಲಯದಲ್ಲಿ ಗರ್ಭಗುಡಿಗೆ ಪ್ರದಕ್ಷಿಣೆ ಹಾಕುವ ಸಮಯದಲ್ಲಿ ನಂದಿಯನ್ನು ಪೂರ್ವದಿಕ್ಕಿಗೆ ಸ್ಥಾಪಿಸಲಾಗಿದೆ ಎಂಬುದನ್ನು ಅವರು ಗಮನಿಸಿದರು. ಸ್ಥಳೀಯ ಭಕ್ತಾದಿಗಳು ಈ ವ್ಯವಸ್ಥೆಯ ಕುರಿತು ಅಸಮಾಧಾನ ಹೊಂದಿದ್ದರು. ದೇವಸ್ಥಾನದ ಪೂಜಾರಿಯನ್ನು ಗರ್ಭಗುಡಿಯ ಬಾಗಿಲು ತೆರೆಯುವಂತೆ ವಿನಂತಿಸಿ, ಭರತ್ ಜಂಗಮ್ ಅವರು ನಾಲ್ಕು ಮುಖದ ಶಿವಲಿಂಗವನ್ನು ದರ್ಶಿಸಿದರು. ಕೆಲವು ವರ್ಷಗಳ ಹಿಂದೆ, 2011ರಲ್ಲಿ, ಸ್ಥಳೀಯ ಭಕ್ತಾದಿಗಳು ಭಾಗವತ ಶ್ಲೋಕಗಳ ಪಠನೆಯಿಂದ ಬಂದ ದೇಣಿಗೆ ಮೊತ್ತದಲ್ಲಿ ಈ ದೇವಾಲಯವನ್ನು ನಿರ್ಮಿಸಿದರು ಎಂದು ಅವರು ತಿಳಿದುಕೊಂಡರು. ಇಲ್ಲಿಯ ದೇವರಿಗೆ ಆ ಹೆಸರು ಹೇಗೆ ಬಂತು ಎಂಬುದರ ಬಗ್ಗೆ ಕುತೂಹಲಗೊಂಡು ಪ್ರಶ್ನಿಸಿದಾಗ, ಅಲ್ಲಿನ ಸ್ಥಳೀಯರೊಬ್ಬರು ಅವರಿಗೆ "ಮಹಾದೇವನ ಕುರಿತಾಗಿ ಭಕ್ತಿಯಿಂದ ಈ ಸ್ಥಳದಲ್ಲಿ ಒಂದು ತಿಂಗಳವರೆಗೆ ಉಪವಾಸ ಮಾಡಿ ಸಿದ್ಧಿ ಪಡೆಯಲಾಗಿತ್ತು" ಎಂಬ ಮಾಹಿತಿಯನ್ನು ತಿಳಿಸಿದರು. ಇದರ ಪರಿಣಾಮವಾಗಿಯೇ ಉಗ್ರೇಶ್ವರ ಮಹಾದೇವ ಎಂಬ ಹೆಸರಿನ ಲಿಂಗವನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿತ್ತು.

2018ರ ಮಾಘಮಾಸದಲ್ಲಿ ಅಲ್ಲಿನ ಸ್ಥಳೀಯ ವಾರ್ಡ್‌ನ ಅಧ್ಯಕ್ಷರಾದ ಮಹಾದೇವ ನ್ಯುಪಾಣೆಯವರು ಈ ನಂದಿಯ ಪ್ರತಿಮೆಯನ್ನು ದೇವಾಲಯದಲ್ಲಿ ಪಶ್ಚಿಮಕ್ಕೆ ಅಭಿಮುಖವಾಗಿ ಪೂರ್ವದಿಕ್ಕಿನಲ್ಲಿ ಪ್ರತಿಷ್ಠಾಪಿಸಲು ಪ್ರಯತ್ನಿಸಿ, ಯಶಸ್ವಿಯಾಗಿದ್ದರು. ಆ ದಿನ ರುದ್ರಾಭಿಷೇಕ, ಹವನ, ಮಂತ್ರಘೋಷ ಮತ್ತು ಪ್ರಾಯಶ್ಚಿತ್ತ ಪೂಜೆಗಳನ್ನೂ ಸಲ್ಲಿಸಲಾಗಿತ್ತು. ಈ ಧಾರ್ಮಿಕ ಯಜ್ಞದಲ್ಲಿ ಗ್ರಾಮದ 50–60 ಹೆಂಗಸರು ಭಾಗವಹಿಸಿದ್ದರು. ಸಾಮಾನ್ಯವಾಗಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಗಂಡಸರಿಗಿಂತ ಹೆಂಗಸರೇ ಹೆಚ್ಚಾಗಿ ಭಾಗವಹಿಸುತ್ತಿದ್ದುದು ರೂಢಿಗತವಾಗಿತ್ತು ಮತ್ತು ಇಲ್ಲಿಯೂ ಕೂಡಾ ಅದೇ ಆಗಿತ್ತು ಎಂಬುದನ್ನು ಭರತ್ ಜಂಗಮ್ ಅವರು ಗಮನಿಸಿದರು.

ಈ ದೇವಾಲಯವು ತ್ರಿವೇಣಿ ನದಿಯ ಬಳಿ ನೆಲೆಗೊಂಡಿರುವುದು ನಿಜಕ್ಕೂ ಅದ್ಭುತ ಸೌಂದರ್ಯದಿಂದ ಕೂಡಿತ್ತು. ದೇವಾಲಯದ ಗರ್ಭಗುಡಿಯಲ್ಲಿ ಸಣ್ಣದೊಂದು ಐದು ಮುಖದ ಪಂಚಮುಖಿ ಲಿಂಗವನ್ನು ಪಶುಪತಿನಾಥನ ಪ್ರತೀಕವಾಗಿ ಸ್ಥಾಪಿಸಲಾಗಿತ್ತು. ದೇವಸ್ಥಾನ ನಿರ್ಮಾಣವಾದ ಮೇಲೆ ನಿತ್ಯಪೂಜೆಯ ವಿಧಾನವನ್ನು ಇನ್ನೂ ನಿರ್ಧರಿಸಲಾಗಿರಲಿಲ್ಲ. ಭಕ್ತಾದಿಗಳು ಭಗವಂತನ ಇಚ್ಛೆಯಿರಬೇಕೆಂದು ಸುಮ್ಮನಾಗಿದ್ದರು, ಈ ಕುರಿತು ಅಗತ್ಯ ಸಮಯ ಬಂದಾಗ ಆ ಕಾರ್ಯ ಆಗುವುದೆಂದು ಅವರು ನಂಬಿದ್ದರು.

ಇನ್ನೂ ದೇವಾಲಯದ ಪ್ರಾಕಾರದ ಕಟ್ಟಡವನ್ನು ಪೂರ್ತಿಯಾಗಿ ಕಟ್ಟಲಾಗಿರಲಿಲ್ಲ. ಮೂಲ ದೇವಾಲಯದ ನಿವಾಸದ ಸ್ಥಳಾಂತದಿಂದಾಗಿ, ಅಗತ್ಯವಿರುವ ತ್ರಿಶೂಲಗಳನ್ನು ಮತ್ತು ಗಂಟೆಗಳನ್ನು ದೇವಾಲಯದ ಆವರಣದಲ್ಲಿ ಸ್ಥಾಪಿಸಲಾಗಿರಲಿಲ್ಲ. ಈ ತ್ರಿಶೂಲಗಳು ಮತ್ತು ಗಂಟೆಗಳನ್ನು ಅಳವಡಿಸಲು ಅಗತ್ಯ ವ್ಯವಸ್ಥೆಗಳಾದ ನಂತರ, 2019ರ ಶಿವರಾತ್ರಿಯ ದಿನದಂದು 27 ಅಡಿಗಳ ಎತ್ತರದ ತ್ರಿಶೂಲವನ್ನು ದೇವಸ್ಥಾನದ ಉತ್ತರ ಭಾಗದಲ್ಲಿ ಮತ್ತು ಗಂಟೆಗಳನ್ನು ಪೂರ್ವಭಾಗದಲ್ಲಿಯೂ ಅಳವಡಿಸಲಾಯಿತು. 27 ಅಡಿ ಎತ್ತರವು 27 ನಕ್ಷತ್ರಗಳನ್ನು ಹಾಗೂ ಇತರೆ ತ್ರಿಶೂಲಗಳು ಮತ್ತು ಗಂಟೆಗಳನ್ನು ದೇವಾಲಯದ ಒಡವೆಗಳನ್ನು ಪ್ರತಿನಿಧಿಸುತ್ತಿತ್ತು. ಪ್ರತಿಷ್ಠಾಪನೆಯ ದಿನದಂದು ಶಿಲಾನ್ಯಾಸವನ್ನೂ ಕೂಡ ಮಾಡಲಾಯಿತು.

ನೀಲಕಂಠೇಶ್ವರ ದೇವಾಲಯದ ಆವರಣದಲ್ಲಿ ಶಬ್ದಯಾತ್ರೆಯ ಅಂಗವಾಗಿ ಶಾರದಾ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದಕ್ಕಾಗಿ ಭರತ್ ಜಂಗಮ್ ಅವರು ಕೃತಜ್ಞರಾಗಿದ್ದರು. ಈ ಕುರಿತು ಮಾತನಾಡುವುದಾದರೆ, ಬನೇಪಾ ಮತ್ತು ಧೂಳಿಖೇಲ್ ಪ್ರದೇಶಗಳ ಮಧ್ಯೆ ಇರುವ ಬನೇಪಾ ಮುನಿಸಿಪಾಲಿಟಿಗೆ ಸೇರಿದ ವಾರ್ಡ್ ನಂ. 6ರಲ್ಲಿ ಅಕ್ಷರಧಾಮದ ಜೊತೆಜೊತೆಗೆ, ಅಂದಾಜು 7 ಎಕರೆಗಳ ಪ್ರದೇಶದಲ್ಲಿ, ಮೂಲ ರಸ್ತೆಯಿಂದ 100 ಅಡಿ ಎತ್ತರದ ಪ್ರದೇಶದಲ್ಲಿ ವ್ಯಾಪಿಸಿರುವ, ಸಮೃದ್ಧ ನೀರಿರುವ ಪ್ರದೇಶದಲ್ಲಿ ಸ್ಥಳೀಯ ಮುಖ್ಯ ದೇವರ ಸ್ವರೂಪದಲ್ಲಿ ನೀಲಕಂಠೇಶ್ವರ ದೇವನಿಗೆ ಒಂದು ದೇವಸ್ಥಾನವನ್ನು ನಿರ್ಮಿಸಲಾಗಿದೆ. ಗಣೇಶ, ಹನುಮಾನ್ ಮತ್ತು ಇತರೆ ದೇವತೆಗಳ ವಿಗ್ರಹಗಳನ್ನೂ ಇಲ್ಲಿ ಸ್ಥಾಪಿಸಲಾಗಿದೆ. ಈ ಮಹಾದೇವನ ದೇವಸ್ಥಾನದ ದಕ್ಷಿಣ ಭಾಗಕ್ಕೆ ದೇವಾಲಯಕ್ಕೆ ಸೇರಿದ ಪ್ರದೇಶದಲ್ಲಿ ದೇವಸ್ಥಾನಕ್ಕೆ ಸೇರಿದ ಒಂದು ಕಟ್ಟಡ ಹಾಗೂ ಶಬ್ದಯಾತ್ರಾ ಪಬ್ಲಿಕೇಷನ್‌ನ ಕಛೇರಿ ಕಟ್ಟಡಗಳು ಇವೆ. ಇದರ ದಕ್ಷಿಣ ಭಾಗಕ್ಕೆ ಸರಿಯಾಗಿ ದಾನಿಗಳಾದ ಕೃಷ್ಣ ಮಣಿ ಕುಯಿಂಕೇಲ್ ಅವರಿಂದ ದಾನವಾಗಿ ನೀಡಲ್ಪಟ್ಟ ಐದು ಕುಂಟೆಗಳ ಜಾಗವು ಶಬ್ದಯಾತ್ರಾ ಪಬ್ಲಿಕೇಷನ್ ಅವರ ಹೆಸರಿನಲ್ಲಿದೆ. ಈ ಕಟ್ಟಡದಲ್ಲಿಯೇ ಶಬ್ದಯಾತ್ರಾ ಪಬ್ಲಿಕೇಷನ್‌ನ ಕಛೇರಿ ಇದೆ.

ಭಾರತಿ, ಕೃಷ್ಣಲಾಲ್ ಅಧಿಕಾರಿ ಮತ್ತು ಮೇಳ್ವಾದೇವಿ ಗುರುಂಗ್‌ರವರುಗಳ ಅರ್ಧ ತಿಂಗಳ ಸಂಬಳಗಳನ್ನು ಒಟ್ಟಿಗೆ ಸೇರಿಸಲಾಯಿತು. ಶಬ್ದಯಾತ್ರಾ ಪಬ್ಲಿಕೇಷನ್‌ನ ವತಿಯಿಂದ ಸಂಸ್ಥಾಪಕರ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ಅಭಿಯಾನವನ್ನು ಆಯೋಜಿಸಲಾಯಿತು. ದಕ್ಷಿಣದಲ್ಲಿ ಅಸೆಂಬ್ಲಿ ಹಾಲ್ ಅನ್ನು ನಿರ್ಮಿಸಲು ಸಿದ್ಧತೆಗಳನ್ನು ಮಾಡಲಾಯಿತು. ಶಬ್ದಯಾತ್ರಾ ಪಬ್ಲಿಕೇಷನ್‌ನವರ ಸ್ವಂತ ಸ್ಥಳವು ಅದಾದ್ದರಿಂದ ಅಲ್ಲಿಯೇ ಅವರ ಎಲ್ಲಾ ಕಾರ್ಯಕ್ರಮಗಳನ್ನೂ ನಡೆಸಲು ಯೋಜಿಸಲಾಯಿತು. ಶಬ್ದಯಾತ್ರಾ ಪಬ್ಲಿಕೇಷನ್‌ನ ಅಧ್ಯಕ್ಷರು ಒಂದು ದಿನ ಭರತ್ ಜಂಗಮ್ ಅವರ ಮನೆಗೆ ಬಂದು "ಆ ಪ್ರದೇಶದಲ್ಲಿ ಒಂದು ಗ್ರಂಥಾಲಯವನ್ನು ಮತ್ತು ಮಾತೆ ಶಾರದೆಯ ವಿಗ್ರಹವನ್ನು ಪ್ರತಿಷ್ಠಾಪಿಸಲು ನಿರ್ಧರಿಸಲಾಗಿದೆ. ಅಣ್ಣಾ, ಇದಕ್ಕೆ ತಮ್ಮ ಸಹಕಾರ ಬೇಕು" ಎಂದು ಕೋರಿದರು. ತಕ್ಷಣವೇ ಭರತ್ ಜಂಗಮ್ ಅವರು ಒಪ್ಪಿಕೊಂಡರು ಮತ್ತು ಇವು ಅಕ್ಷರಧಾಮದ ಪ್ರದೇಶಕ್ಕೆ ಅತ್ಯಗತ್ಯವಾದ ಕಾರ್ಯಗಳಾಗಿದ್ದವು.

ದೇವಸ್ಥಾನಗಳಿಗೆ ನೀಡಲು, ಭರತ್ ಜಂಗಮ್ ಅವರು ಬಾಣೇಶ್ವರದಲ್ಲಿದ್ದ ತಮ್ಮ ಮನೆಯಲ್ಲಿ ಕೆಲವು ವಿಗ್ರಹಗಳನ್ನು ಇರಿಸಿದ್ದರು. ಅವುಗಳಲ್ಲಿ ಶಾರದಾ ದೇವಿಯ ದೊಡ್ಡ ಮತ್ತು ಚಿಕ್ಕ ವಿಗ್ರಹಗಳು ಇದ್ದವು. ಕವ್ರೆಯಲ್ಲಿರುವ ಶಾರದಾ ಬತಾಸೆ ಬೆಟ್ಟದಲ್ಲಿರುವ ದೇವಾಲಯದಲ್ಲಿ ದೊಡ್ಡ ಶಾರದಾ ವಿಗ್ರಹವನ್ನು ಪ್ರತಿಷ್ಠಾಪಿಸಿದ ನಂತರ, ಚಿಕ್ಕ 24 ಇಂಚುಗಳ ವಿಗ್ರಹವು

ಉಳಿದಿತ್ತು. ಈ ಚಿಕ್ಕ ವಿಗ್ರಹವನ್ನು ಶಬ್ದಯಾತ್ರಾ ಗ್ರಂಥಾಲಯಕ್ಕೆ ನೀಡಲು ನಿರ್ಧರಿಸಿದ ಮೇಲೆ, ಭರತ್ ಜಂಗಮ್ ಅವರು ತಮ್ಮ ಅಕ್ಕ ಸಾವಿತ್ರಿ ಜಂಗಮ್ ಅವರೊಂದಿಗೆ ಈ ಕುರಿತು ಚರ್ಚಿಸಿದರು. ಆಕೆಯು ತನ್ನ ಕಡೆಯಿಂದ ಒಂದಿಷ್ಟು ಪುಸ್ತಕಗಳು ಮತ್ತು ಮರದ ಶೆಲ್ಫುಗಳನ್ನು ಗ್ರಂಥಾಲಯಕ್ಕೆ ಒದಗಿಸಿದರು ಮತ್ತು ಎರಡು ಟೇಬಲ್ಲುಗಳ ನಿರ್ಮಾಣದ ಖರ್ಚನ್ನು ಕೊಡಲು ಸಹಮತಿಸಿದರು. 2018ರ ಮಾಘ ಮಾಸದ 27ನೇ ದಿನದಂದು ಶಬ್ದಯಾತ್ರಾ ಪಬ್ಲಿಕೇಷನ್‌ನವರು ಶಾರದಾ ಪ್ರತಿಮೆಯ ಪ್ರತಿಷ್ಠಾಪನೆ ಮತ್ತು ಗ್ರಂಥಾಲಯದ ಉದ್ಘಾಟನೆ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಿದರು. ಅದನ್ನು ಸಾವಿತ್ರಿಯವರ ಸಹಕಾರದಿಂದ ಯಶಸ್ವಿಯಾಗಿ ನಡೆಸಲಾಯಿತು. ಆ ದಿನ ಆ ಪ್ರದೇಶವನ್ನು ಅಕ್ಷರ ತೋಟವನ್ನಾಗಿ ಅಭಿವೃದ್ಧಿಪಡಿಸುವ ಕುರಿತು ಚರ್ಚಿಸಿ ಪ್ರಸ್ತಾವನೆ ಸಲ್ಲಿಸುವ ಕಾರ್ಯ ಹಾಗೂ ಸರಸ್ವತಿ ದೇವಿಯ ವಿಗ್ರಹವನ್ನು ಕಲ್ಲಿನ ಪೀಠದ ಮೇಲೆ ಪ್ರತಿಷ್ಠಾಪಿಸುವ ಕಾರ್ಯಗಳು ಅಲ್ಲಿ ನೆರೆದಿದ್ದ ಸಾಕಷ್ಟು ವಿದ್ವಾಂಸರ ಸಮ್ಮುಖದಲ್ಲಿ ಯಶಸ್ವಿಯಾಯಿತು. ಈ ಕುರಿತು ಗ್ರಂಥಾಲಯದ ಶಿಲಾಫಲಕದಲ್ಲಿ ದಾಖಲೆಗಳಿವೆ.

-----

# ಭ್ರಷ್ಟಾಚಾರ ವಿರೋಧಿ ಚಳವಳಿ

2043(1986)ರಲ್ಲಿ 'ಇಂಡಿಪೆಂಡೆಂಟ್ ಥಾಟ್ ಫೋರಂ' ಅನ್ನು ಸ್ಥಾಪಿಸುವ ಮೂಲಕ ಭ್ರಷ್ಟಾಚಾರದ ವಿರುದ್ಧ ಚಳವಳಿಯನ್ನು ಆರಂಭಿಸಲಾಯಿತು. ಒಂದು ದಶಕದ ಕಾಲ ಭ್ರಷ್ಟಾಚಾರ ವಿರೋಧಿ ಅಭಿಯಾನದಲ್ಲಿ ತೊಡಗಿಕೊಂಡ ನಂತರ, ಭ್ರಷ್ಟಾಚಾರವು ಮುಂದುವರಿದಂತೆಲ್ಲಾ ಈ ಅಭಿಯಾನವೂ ಮುಂದುವರಿಯುತ್ತಾ, ಮಾರ್ಚ್ 7, 2053(1996)ರಿಂದಲೂ ಸಕ್ರಿಯವಾಗಿ ಭ್ರಷ್ಟಾಚಾರ ವಿರೋಧಿ ಚಳವಳಿಯಲ್ಲಿ ಇಂದಿನವರೆಗೂ ಸಕ್ರಿಯವಾಗಿದೆ.

'ಇಂಡಿಪೆಂಡೆಂಟ್ ಥಾಟ್ ಫೋರಂ' ಸಂಸ್ಥೆಯನ್ನು ಭ್ರಷ್ಟಾಚಾರದ ವಿರೋಧಿ ಅಭಿಯಾನದ ನಿಖರವಾದ ಉದ್ದೇಶಕ್ಕಾಗಿಯೇ ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಉದ್ದೇಶಕ್ಕೆ ವಿರುದ್ಧವಾಗಿ ಚಟುವಟಿಕೆಗಳು ನಡೆದಾಗ, ವೈವಿಧ್ಯಮಯ ದೃಷ್ಟಿಕೋನಗಳಿಂದ ಘಟನೆಯನ್ನು ಪರಿಶೀಲಿಸುವಲ್ಲಿ ಹಲವಾರು ಸ್ವಯಂಸೇವಕರ ಬೆಂಬಲವನ್ನು ಪಡೆದು, ಪರಿಣಾಮಕಾರಿಯಾಗಿ ಕಾರ್ಯಾಚರಣೆಯನ್ನು ನಡೆಸಿ ಭ್ರಷ್ಟಾಚಾರ ವಿರೋಧಿ ಅಭಿಯಾನವನ್ನು ಯಶಸ್ವಿಗೊಳಿಸಲಾಗುವುದು.

ಮಾತ್ರವಲ್ಲ, ಭ್ರಷ್ಟಾಚಾರದ ವಿರುದ್ಧ ಅನೇಕ ಲೇಖನಗಳನ್ನು, ಅಂಕಣಗಳನ್ನು ಪತ್ರಿಕೆಗಳಲ್ಲಿ ಬರೆಯುವ ಮೂಲಕ, ಆಕಾಶವಾಣಿ, ಯುಟ್ಯೂಬ್ ಮತ್ತು ದೂರದರ್ಶನಗಳಲ್ಲಿ ಭ್ರಷ್ಟಾಚಾರಕ್ಕೆ ವಿರುದ್ಧವಾಗಿ ಸಂದರ್ಶನಗಳನ್ನು ನೀಡುವ ಮೂಲಕ, ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಹಾಕುವ ಮೂಲಕ, ಹಲವಾರು ಸಭೆ–ಸಮಾರಂಭಗಳಲ್ಲಿ ಭ್ರಷ್ಟಾಚಾರ ವಿರೋಧಿ ಉಪನ್ಯಾಸಗಳನ್ನು ನೀಡುವ ಮೂಲಕ, ಭ್ರಷ್ಟಾಚಾರ ವಿರೋಧಿ ಕಾರ್ಯಾಗಾರಗಳನ್ನು ಮತ್ತು ಸೆಮಿನಾರುಗಳನ್ನು ನಡೆಸುವ ಮೂಲಕ ಭರತ್ ಜಂಗಮ್ ಅವರು ಭಷ್ಟಾಚಾರ ವಿರೋಧಿ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಈ ಅಭಿಯಾನವನ್ನು ಉಚಿತವಾಗಿ ನಡೆಸಲಾಗುತ್ತಿದ್ದರೂ ಕೂಡ ಹಲವಾರು ಬಾರಿ ಕಾರ್ಯಕ್ರಮ ನಡೆಸುವ ಸ್ಥಳದ ಬಾಡಿಗೆ ವೆಚ್ಚ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗ ಹಣ ಅತ್ಯವಶ್ಯಕವಾಗಿದೆ. ಈ ಮೊತ್ತವನ್ನು ಭರತ್ ಜಂಗಮ್ ಅವರ ಸಹವರ್ತಿಗಳಿಂದ ದೇಣಿಗೆಗಳನ್ನು ಪಡೆದು ಹೊಂದಿಸುತ್ತಿದ್ದಾರೆ.

ಭ್ರಷ್ಟಾಚಾರ ವಿರೋಧಿ ಅಭಿಯಾನಕ್ಕೆ ವಿರೋಧಕ್ಕಿಂತಲೂ ಬೆಂಬಲವು ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಕೆಲವು ಸಮಾನ ಮನಸ್ಕರು ಇದಕ್ಕೆ ಬೆಂಬಲ ನೀಡಲು ಬಯಸಿದರೂ, ಅಗತ್ಯ ದಾಖಲೆಗಳನ್ನು ಲಗತ್ತಿಸುವುದನ್ನು ನಿರಾಕರಿಸುತ್ತಾರೆ. ಸಾಮಾಜಿಕ ಸ್ವಾಸ್ಥ್ಯದ ಅರಿವು ಹೊಂದಿರುವ ವ್ಯಕ್ತಿಗಳು ಗ್ರಹಿಸಿದ ಪ್ರಯೋಜನಗಳ ಕಾರಣದಿಂದಾಗಿ ಭ್ರಷ್ಟಾಚಾರ ವಿರೋಧಿ ಅಭಿಯಾನದಿಂದ ದೂರವಿದ್ದರೂ ಅವರು ಕಾರ್ಯಕ್ರಮದ ಪ್ರಗತಿಗೆ ಯಾವ ರೀತಿಯಿಂದಲೂ ಅಡ್ಡಿಯಾಗುವುದಿಲ್ಲ. ಆದಾಗ್ಯೂ ಅವರು ಸಂಪೂರ್ಣ ವಿರೋಧವನ್ನು ಎದುರಿಸಲು ಆಗುವುದಿಲ್ಲ.

ಈ ಅಭಿಯಾನವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಯಶಸ್ವಿಯಾಯಿತು. ಅಷ್ಟು ಅಲ್ಪಾವಧಿಯಲ್ಲಿ ಗಳಿಸಿದ ಯಶಸ್ಸು ಈ ಕುರಿತು ಈಗಾಗಲೇ ಲಕ್ಷಗಟ್ಟಲೆ ಖರ್ಚು ಮಾಡಿದ್ದ ಎಲ್ಲಾ ಇತರೆ ಸಂಘ–ಸಂಸ್ಥೆಗಳೂ ಆಶ್ಚರ್ಯಗೊಂಡರು. ಖಂಡಿತವಾಗಿಯೂ, ಭ್ರಷ್ಟಾಚಾರ ವಿರೋಧಿ ಅಭಿಯಾನದ ಚಟುವಟಿಕೆಗಳು ತಮ್ಮ ಸ್ವರೂಪವನ್ನು ಮುಂದುವರಿಯುತ್ತಿರುವ ಕಾಲಕ್ಕೆ ತಕ್ಕಂತೆ ಅಗತ್ಯವಾಗಿ ಬದಲಾಯಿಸಿಕೊಳ್ಳಲೇಬೇಕಿದೆ. ಒಂದು ಕಾಲದಲ್ಲಿ ಬೀದಿಗಳಲ್ಲಿ ಧ್ವನಿ ಎತ್ತರಿಸುವುದು ಮತ್ತು ರಸ್ತೆಗಳಲ್ಲಿ ಪ್ರತಿಭಟನೆ ಮಾಡುವ ಕಾರ್ಯಸ್ವರೂಪವನ್ನು ಅಳವಡಿಸಿಕೊಂಡಿದ್ದ ಈ ಅಭಿಯಾನವು ಇಂದು ವ್ಯಾಪಕ ಕಾನೂನು ಹೋರಾಟಗಳನ್ನು ನಡೆಸಲು ವಿಸ್ತಾರಗೊಂಡಿದೆ. ಇಂದು ಭ್ರಷ್ಟಾಚಾರ ವಿರೋಧಿ ವಿಷಯವನ್ನು ವೈಜ್ಞಾನಿಕವಾಗಿ ಶಿಸ್ತುಬದ್ಧವಾಗಿಯೂ ಸ್ಥಾಪಿಸುವ ಕೆಲಸವನ್ನು ಮಾಡಲಾಗುತ್ತಿದೆ. ಅದನ್ನು ಪಠ್ಯಕ್ರಮದಲ್ಲಿ ಅಳವಡಿಸುವ ಕುರಿತು ವಿಶ್ವವಿದ್ಯಾಲಯಗಳನ್ನು ಸಂಪರ್ಕಿಸಲು ಪ್ರಯತ್ನಿಸಲಾಗಿದೆ.

ಭ್ರಷ್ಟಾಚಾರಕ್ಕೆ ಒಂದು ವ್ಯಾಖ್ಯೆಯಿದೆ ಮತ್ತು ಅದು ಅಸ್ತಿತ್ವದಲ್ಲಿ ಇರುತ್ತದೆ. ಆದಾಗ್ಯೂ, ಬಹುಮುಖಗಳಿದ್ದಾಗ, ಬಹುರೂಪಗಳಿದ್ದಾಗ, ಈ ಪದಕ್ಕೆ ಒಂದು ನಿರ್ದಿಷ್ಟ ಸಂದರ್ಭದಲ್ಲಿ ನಿರ್ದಿಷ್ಟ ಅರ್ಥವನ್ನು ಅಥವಾ ನಿರ್ದಿಷ್ಟ ವ್ಯಾಖ್ಯೆಯನ್ನು ನೀಡುವುದು ಕಷ್ಟಕರವಾಗಿದೆ. 'ಭ್ರಷ್ಟಾಚಾರ' ಎಂಬ ಪದವು 'ಭ್ರಷ್ಟ' ಮತ್ತು 'ಅಭ್ಯಾಸ' ಎಂಬ ಎರಡು ಪದಗಳ ಸಂಯೋಜನೆಯಿಂದ ಹುಟ್ಟಿಕೊಂಡಿದೆ, ಹಾಗಾಗಿಯೇ ಇದರ ನಿರ್ದಿಷ್ಟ ವ್ಯಾಖ್ಯಾನವನ್ನು 'ಇದಮಿತ್ಥಂ' ಎಂದು ಹೇಳುವುದು ಸವಾಲಾಗಿದೆ. ಆದ್ದರಿಂದ, ಇಂದು ಈ ಭ್ರಷ್ಟಾಚಾರವನ್ನು ವೈಜ್ಞಾನಿಕ ರೀತಿಯಲ್ಲಿ ಮರುವ್ಯಾಖ್ಯಾನಿಸುವುದು ಅಗತ್ಯವಾಗಿದೆ. ಭ್ರಷ್ಟಾಚಾರ ವಿರೋಧಿ ವಿಜ್ಞಾನದ ಅಭಿವೃದ್ಧಿಯ ಆರಂಭದಲ್ಲಿಲೇ ಭ್ರಷ್ಟಾಚಾರದ ವ್ಯಾಖ್ಯಾನವು ಹುಟ್ಟಿಕೊಳ್ಳುತ್ತದೆ. ಪ್ರಸ್ತುತ

ಭ್ರಷ್ಟಾಚಾರ ವಿರೋಧಿ ಶಿಸ್ತನ್ನು ರೂಢಿಸಿಕೊಳ್ಳಬೇಕಿರುವ ಅನಿವಾರ್ಯ ಸಂದರ್ಭದಲ್ಲಿ, ನಾವು 'ಭ್ರಷ್ಟಾಚಾರ' ಎಂಬ ಪದವನ್ನು ಅದರ ಮೂಲತತ್ವಗಳ ಆಧಾರದ ಮೇಲೆ ವ್ಯಾಖ್ಯಾನಿಸಬಹುದು.

ಈ ಭ್ರಷ್ಟಾಚಾರದ ಕುರಿತು ಭರತ್ ಜಂಗಮ್ ಅವರ ಎರಡು ಪುಸ್ತಕಗಳು ಪ್ರಕಟಗೊಂಡಿವೆ. ವಿವಿಧ ಸಂದರ್ಭಗಳಲ್ಲಿ ಮತ್ತು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಭರತ್ ಜಂಗಮ್ ಅವರು ಸಾರ್ವಜನಿಕರಿಗೆ ತಿಳಿಸಿದ ಅವರ ಯೋಚನೆಗಳ ಕುರಿತಾದ ಒಟ್ಟು 65 ಲೇಖನಗಳನ್ನು ಒಟ್ಟುಗೂಡಿಸಿ, 'ಭ್ರಷ್ಟಾಚಾರ: ಬೌದ್ಧಿಕ ಚಳವಳಿ' (Corruption: Intellectual Movement) ಎಂಬ ಪುಸ್ತಕವು ಪ್ರಕಟವಾಗಿದೆ. ಅದರ ನಂತರ 'ಭರತ್ ಜಂಗಮ್: ಆಲೋಚನೆಗಳು ಮತ್ತು ದೃಷ್ಟಿಕೋನಗಳು' ಎಂಬ ಹೆಸರಿನ ಮತ್ತೊಂದು ಪುಸ್ತಕವು 2062 (2005) ರಲ್ಲಿ ಪ್ರಕಟವಾಗಿದ್ದು, ಅದೂ ಕೂಡಾ ಭ್ರಷ್ಟಾಚಾರವನ್ನೇ ತಮ್ಮ ಮೂಲವಸ್ತುವನ್ನಾಗಿಸಿ ಅದರ ಮೇಲೆ ಬೆಳಕು ಚೆಲ್ಲುತ್ತದೆ.

ಭ್ರಷ್ಟಾಚಾರವು ಅಭಿವೃದ್ಧಿ ಹೊಂದಿದ, ಅಭಿವೃದ್ಧಿಶೀಲ ಹಾಗೂ ಅಭಿವೃದ್ಧಿ ಹೊಂದಿಲ್ಲದ ರಾಷ್ಟ್ರಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಪ್ರಕಟವಾಗುತ್ತದೆ. ಇದನ್ನು ಅರಿಯಲು ನಾವು ಅಭಿವೃದ್ಧಿ ಹೊಂದಿಲ್ಲದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಒಟ್ಟಿಗೆ ನೋಡಿದರೆ ಅನುಕೂಲ. ಪ್ರಸಕ್ತ ಪರಿಸ್ಥಿತಿಯಲ್ಲಿ ಪ್ರಪಂಚದಲ್ಲಿನ ದೇಶಗಳನ್ನು ಎರಡು ಮುಖ್ಯ ಭಾಗವಾಗಿ ವಿಭಾಗಿಸಲಾಗಿದೆ: ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳು. ಸಾಮಾನ್ಯವಾಗಿ ಅಭಿವೃದ್ಧಿ ಹೊಂದಿರುವ ದೇಶಗಳಿಗಿಂತಲೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಭ್ರಷ್ಟಾಚಾರವು ಹೆಚ್ಚಾಗಿರುವುದನ್ನು ಗಮನಿಸಬಹುದು. ಭ್ರಷ್ಟಾಚಾರವು ಸಂಭವಿಸಿದಾಗ ಅದು ಆ ದೇಶದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ಮೇರೆಗಳನ್ನು ನಿರ್ಮಿಸುತ್ತದೆ. ರಾಜಕೀಯ ಸ್ಥಿರತೆಯುಳ್ಳ ಮತ್ತು ಅಭಿವೃದ್ಧಿಯ ಮೇಲೆ ಗಮನವಿಟ್ಟ ದೇಶಗಳಲ್ಲಿ ಸಹಜವಾಗಿಯೇ ಭ್ರಷ್ಟಾಚಾರವು ಅತ್ಯಂತ ಕಡಿಮೆಯಾಗುತ್ತದೆ. ಅಂತೆಯೇ, ರಾಜಕೀಯವಾಗಿ ಅಸ್ಥಿರತೆಯು ತಾಂಡವವಾಡುವ ದೇಶಗಳಲ್ಲಿ ಭ್ರಷ್ಟಾಚಾರದ ಪ್ರಮಾಣವೂ ಅನಿರ್ದಿಷ್ಟವಾಗಿದ್ದು, ತಂತಾನೇ ವ್ಯಾಪಕವಾಗಿ ಹರಡಿರುತ್ತದೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸಬೇಕಾದರೆ, ಮೊದಲು ರಾಜಕೀಯ ಸ್ಥಿರತೆಯನ್ನು ಕಾಯ್ದುಕೊಳ್ಳಲೇಬೇಕು ಮತ್ತು ಭ್ರಷ್ಟಾಚಾರದ ವಿರುದ್ಧ ಕಟ್ಟುನಿಟ್ಟಾದ ಕಠಿಣ ಕಾನೂನುಗಳನ್ನು ಜಾರಿಗೊಳಿಸಬೇಕು. ಯಾವುದೇ ದೇಶವು ಹಿಂದುಳಿಯುವುದನ್ನು ಮತ್ತು ಭ್ರಷ್ಟಾಚಾರಕ್ಕೆ ಈಡಾಗುವುದನ್ನು ತಡೆಯಲು ಎರಡು ಮಾನದಂಡಗಳು ಅಗತ್ಯವಾಗಿವೆ. ಯಾವಾಗಲೂ ರಾಜಕೀಯ ಅಸ್ಥಿರತೆ ಮತ್ತು ಭ್ರಷ್ಟಾಚಾರಗಳು ಒಂದಕ್ಕೊಂದು ಪೂರಕ ಎಂದು ಹೇಳಲಾಗುತ್ತದೆ. ಆದ್ದರಿಂದ, ಈ ಪರಿಸ್ಥಿತಿಯನ್ನು ನಿಯಂತ್ರಿಸಲು ಸ್ಥಳೀಯ ಸರ್ಕಾರಗಳ ವತಿಯಿಂದ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ, ಭ್ರಷ್ಟಾಚಾರವನ್ನು ನಿಯಂತ್ರಣಕ್ಕೆ ತರಲು ಅತ್ಯಂತ ಕಷ್ಟವಾಗುತ್ತದೆ.

'ಭ್ರಷ್ಟಾಚಾರ–ವಿರೋಧಿ ವಿಜ್ಞಾನ' ವಿಷಯವು ಭರತ್ ಜಂಗಮ್ ಅವರ 'ಆಂಟಿಕಾರ್ಪ್ಟಾಲಜಿ' ಎಂಬ ಶೀರ್ಷಿಕೆಯ ಪುಸ್ತಕಕ್ಕೆ ಆಕರ್ಷಕವಾಗಿದೆ ಮತ್ತು ತೀರಾ ಹತ್ತಿರದ ಸಂಬಂಧ ಹೊಂದಿದೆ. ಅವರು ವಿಜ್ಞಾನದ ಮಸೂರದ ಮೂಲಕ ಭ್ರಷ್ಟಾಚಾರ ವಿರೋಧಿ ಪ್ರಯತ್ನಗಳನ್ನು ಮುನ್ನಡೆಸುವಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದಾರೆ. ವೈಜ್ಞಾನಿಕ ಅಧ್ಯಯನ ಮತ್ತು ಶಿಕ್ಷಣಕ್ಕೆ ಭ್ರಷ್ಟಾಚಾರ–ವಿರೋಧಿ ವಿಷಯಗಳ ಏಕೀಕರಣವು ಆಳವಾದ ಪರಿಶೋಧನೆ ಮತ್ತು ಚರ್ಚೆಗೆ ಅನುವು ಮಾಡಿಕೊಡುತ್ತದೆ. ಭ್ರಷ್ಟಾಚಾರ ವಿರೋಧಿ ಸಮಸ್ಯೆಗಳು ಸೇರಿದಂತೆ ವಿವಿಧ ವಿಷಯಗಳನ್ನು ಅಧ್ಯಯನ ಮಾಡಲು ಮತ್ತು ವಿಶ್ಲೇಷಿಸಲು ವಿಜ್ಞಾನವು ರಚನಾತ್ಮಕ ಚೌಕಟ್ಟನ್ನು ಒದಗಿಸುತ್ತದೆ. ಆದ್ದರಿಂದ, ಭ್ರಷ್ಟಾಚಾರದ ವಿರೋಧಿ ಎಂಬ ವಿಷಯದ ಹೊಸಕ್ಷೇತ್ರವನ್ನೂ ಕೂಡಾ ತುಲನಾತ್ಮಕವಾಗಿ ವಿಜ್ಞಾನದ ಚೌಕಟ್ಟಿನಲ್ಲಿ ಪರಿಶೀಲಿಸಬಹುದು, ಮೌಲ್ಯಮಾಪನ ಮಾಡಬಹುದು ಮತ್ತು ಮೌಲ್ಯೀಕರಿಸಬಹುದು. ಇದು ಭ್ರಷ್ಟಾಚಾರ ವಿರೋಧಿ ವಿಜ್ಞಾನದ ಬೆಳವಣಿಗೆಗೆ ಕಾರಣವಾಯಿತು ಹಾಗೂ ಈ ವಿಷಯವನ್ನು ಮೊಟ್ಟಮೊದಲ ಬಾರಿಗೆ ನೇಪಾಳದಿಂದ ಇಡೀ ಜಗತ್ತಿಗೇ ಪರಿಚಯಿಸಲಾಯಿತು ಎಂಬ ಭರತ್ ಜಂಗಮ್ ಅವರು ಹೆಮ್ಮೆಯಿಂದ ಹೇಳುತ್ತಾರೆ.

'ಭ್ರಷ್ಟಾಚಾರ–ವಿರೋಧಿ ವಿಜ್ಞಾನ' ಪುಸ್ತಕವು 2073(2016)ರಲ್ಲಿ ಪ್ರಕಟವಾಯಿತು. ವಿಜ್ಞಾನವೆಂದರೆ ವ್ಯವಸ್ಥಿತವಾದ ಜ್ಞಾನವೆಂಬ ಅರ್ಥವಿದ್ದು, ಅದು ಜ್ಞಾನದ ಒಂದು ಪ್ರಮುಖ ಶಾಖೆಯಾಗಿದೆ. ಅದು ಒಂದು ವ್ಯವಸ್ಥಿತ ರೀತಿಯಲ್ಲಿ ನಿಖರವಾದ ಪರೀಕ್ಷೆ ಮತ್ತು ಪ್ರಾಯೋಗಿಕ ಅನ್ವಯಿಕೆಗಳನ್ನು ಒಳಗೊಂಡಿದೆ. ಭ್ರಷ್ಟಾಚಾರ ವಿರೋಧಿ ವಿಷಯವು ವಿಜ್ಞಾನದ ಚೌಕಟ್ಟಿನಲ್ಲಿ ಸುಲಭವಾಗಿ ಹೊಂದಿಕೊಳ್ಳುವುದರಿಂದ, ಅದರ ವಿವಿಧ ಅಂಶಗಳು ಮತ್ತು ತತ್ವಗಳನ್ನು ನಿಖರವಾಗಿ ವ್ಯಾಖ್ಯಾನಿಸಲಾಗಿದೆ

ಮತ್ತು ಸ್ಥಾಪಿಸಲಾಗಿದೆ. ಇದು ಹೊಸ ಸಿದ್ಧಾಂತಗಳ ರಚನೆಗೆ ಕಾರಣವಾಗುತ್ತದೆ. ಈಗ ಅದು ಮತ್ತಷ್ಟು ನಿರ್ದಿಷ್ಟವಾದ ಆಕಾರವನ್ನು ಪಡೆದುಕೊಂಡಿದೆ ಮತ್ತು ಮತ್ತಷ್ಟು ವಿಸ್ತರಿಸುತ್ತದೆ.

**'ಭ್ರಷ್ಟಾಚಾರ ವಿರೋಧಿ ವಿಜ್ಞಾನ'** ಎಂಬ ಪದವು ಸೂಕ್ತವಾಗಿ ಕಂಡುಬರುತ್ತಿದೆ ಮತ್ತು ಬೇರೆ ಇನ್ನೊಂದು ಹೆಸರನ್ನು ಆಯ್ಕೆ ಮಾಡಿದರೂ ಅದೂ ಕೂಡಾ ಭ್ರಷ್ಟಾಚಾರ ವಿರೋಧಿ ವಿಜ್ಞಾನ ಕ್ಷೇತ್ರವನ್ನೇ ಸ್ಥಾಪಿಸುತ್ತದೆ. ಭ್ರಷ್ಟಾಚಾರ ವಿರೋಧಿ ವಿಜ್ಞಾನವನ್ನು ಈಗಾಗಲೇ ಸ್ಥಾಪಿಸಲಾಗಿದೆ ಮತ್ತು ಈಗ ಪ್ರಸ್ತುತ ಅದನ್ನು ಅಧ್ಯಯನ ಮಾಡಲಾಗುತ್ತಿದೆ ಮತ್ತು ಬೋಧಿಸಲಾಗುತ್ತಿದೆ. ಆದಾಗ್ಯೂ, ಭರತ್ ಜಂಗಮ್ ಅವರು ಒಬ್ಬರೇ ಈ ವಿಜ್ಞಾನದ ಪರಿಪೂರ್ಣತೆಯನ್ನು ಖಚಿತಪಡಿಸಲಾಗುವುದಿಲ್ಲ. ಅದರ ಪರಿಪೂರ್ಣ ಸಾಮರ್ಥ್ಯವನ್ನು ಅದು ತಲುಪಬೇಕೆಂದರೆ ಈ ವಿಷಯದ ಕುರಿತು ಅನೇಕ ಬರಹಗಾರರು ಮತ್ತು ಚಿಂತಕರು ಸಕ್ರಿಯವಾಗಿ ಇದರಲ್ಲಿ ಭಾಗವಹಿಸಬೇಕಾಗಿದೆ. ಭರತ್ ಜಂಗಮ್ ಅವರು ಅದರ ಮೂಲ ನಿಯಮಗಳನ್ನು ಮತ್ತು ತತ್ವಗಳನ್ನು ಒಂದು ನಿರ್ದಿಷ್ಟ ರೂಪದಲ್ಲಿ ಕ್ರೂಡೀಕರಿಸಿ ಕೊಟ್ಟಿದ್ದಾರೆ. ಆರಂಭಿಕ ಪರಿಚಯಾತ್ಮಕ ವಿವರಣೆಯ ನಂತರದ ಪ್ರಗತಿಕಾರ್ಯಗಳು ಆರಂಭವಾಗಬೇಕಿವೆ. ಈ ವಿಷಯದ ಕುರಿತ ಬೋಧನೆ ಮತ್ತು ಕಲಿಯುವಿಕೆಗಳಲ್ಲಿ ಪ್ರಗತಿಯಾಗಬೇಕಿದೆ, ಸಂಶೋಧನೆಗಳನ್ನು ಕೈಗೊಳ್ಳಬೇಕಿದೆ, ಹೆಚ್ಚುವರಿ ವಿಷಯಗಳನ್ನು ಪರಿಶೋಧಿಸಬೇಕಿದೆ, ನಿಯಮಗಳ ಕುರಿತ ವಿವರಣೆಗಳನ್ನು ಪರಿಷ್ಕರಿಸಬೇಕಿದೆ ಹಾಗೂ ಸಂದರ್ಭೋಚಿತ ಮತ್ತು ಸ್ಥಳೀಯ ದೃಷ್ಟಿಕೋನಗಳನ್ನು ಸೇರಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಗತಿಯನ್ನು ನಿಧಾನ ಮಾಡುವಂತಿಲ್ಲ.

ಭರತ್ ಜಂಗಮ್ ಅವರು **'ಭ್ರಷ್ಟಾಚಾರ ವಿರೋಧಿ ವಿಜ್ಞಾನದ ಮೂಲಪುರುಷ'** ಎಂದು ಕರೆಯಲ್ಪಡುತ್ತಾರೆ. ಈ ಖುಷಿಯು ಜವಾಬ್ದಾರಿಯಿಲ್ಲದೆ ಬರುವುದಿಲ್ಲ ಎಂದು ಭರತ್ ಜಂಗಮ್ ಅವರು ಹೇಳುತ್ತಾರೆ. ತಮ್ಮ ಕರ್ತವ್ಯವನ್ನು ಸಾಧ್ಯವಾದ ಮಟ್ಟಿಗೂ ಪೂರೈಸಿರುವುದಾಗಿ ಅವರು ಅಭಿಪ್ರಾಯಪಡುತ್ತಾರೆ. ನಮ್ಮ ದೇಶದಿಂದ ಭ್ರಷ್ಟಾಚಾರವು ಸಂಪೂರ್ಣವಾಗಿ ತೊಲಗಬೇಕು, ಜನರು ತಮ್ಮ ವಿದ್ಯಾಭ್ಯಾಸ, ಆರೋಗ್ಯ ಮತ್ತು ನ್ಯಾಯಗಳನ್ನು ಭ್ರಷ್ಟಾಚಾರವಿಲ್ಲದೆ ನ್ಯಾಯವಾಗಿ ಪಡೆಯುವಂತಾಗಬೇಕು, ಆಗ ಮಾತ್ರ ತಮಗೆ ಸಮಾಧಾನ ಎಂದು ಅವರು ತಿಳಿಸುತ್ತಾರೆ.

ನೇಪಾಳದ ತ್ರಿಭುವನ ವಿಶ್ವವಿದ್ಯಾಲಯವು ಭ್ರಷ್ಟಾಚಾರ–ವಿರೋಧಿ ವಿಜ್ಞಾನ ವಿಷಯವನ್ನು ಬೋಧಿಸುವಲ್ಲಿ ಅಧಿಕೃತವಾಗಿ ತೊಡಗಿಕೊಂಡಿದೆ. ಅಲ್ಲಿ ಭ್ರಷ್ಟಾಚಾರ ವಿರೋಧಿ ವಿಜ್ಞಾನದ ವಿಷಯವನ್ನು ಉನ್ನತ ಶಿಕ್ಷಣದ ಹಂತದಲ್ಲಿ ಬೋಧಿಸಲು ಪ್ರತ್ಯೇಕ ಶಾಖೆಯೊಂದನ್ನು ತೆರೆಯಲಾಗಿದೆ. ಭ್ರಷ್ಟಾಚಾರ ವಿರೋಧಿ ವಿಜ್ಞಾನದ ಪಠ್ಯಕ್ರಮವನ್ನು ರೂಪಿಸುವ ಮೂಲಕ ತ್ರಿಭುವನ ವಿಶ್ವವಿದ್ಯಾಲಯವು ಇಂತಹ ವಿಷಯವನ್ನು ಬೋಧಿಸುತ್ತಿರುವ ಪ್ರಪಂಚದ ಮೊಟ್ಟಮೊದಲ ವಿಶ್ವವಿದ್ಯಾಲಯವಾಗಿದೆ. ಈ ವರ್ಷ ಸುಮಾರು 50 ವಿದ್ಯಾರ್ಥಿಗಳು ಈ ವಿಷಯವನ್ನು ಅಭ್ಯಸಿಸಲು ಸೇರ್ಪಡೆಯಾಗಿದ್ದಾರೆ. ಪ್ರಸ್ತುತ ಈ ಕ್ಷೇತ್ರವು ಜಾಗತಿಕವಾಗಿ ಕೌಶಲ್ಯಭರಿತ ಭ್ರಷ್ಟಾಚಾರ ವಿರೋಧಿ ತಂತ್ರಜ್ಞರನ್ನು ಸಿದ್ಧಪಡಿಸುವಲ್ಲಿ ವ್ಯಾಪಕವಾಗಿದೆ. ಈ ವಿಷಯವನ್ನು ಕಲಿತ ಉನ್ನತ ವಿದ್ವಾಂಸರು ಉತ್ತಮ ಸಂಸ್ಥೆಗಳನ್ನು ನಡೆಸುವ ಮೂಲಕ ಭ್ರಷ್ಟಾಚಾರವನ್ನು ತಡೆಗಟ್ಟುವಲ್ಲಿ ಅತ್ಯಂತ ಉಪಯುಕ್ತ ಕೊಡುಗೆಗಳನ್ನು ನೀಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸದರಿ ವಿಶ್ವವಿದ್ಯಾಲಯವು ಬಹುದೊಡ್ಡ ಕೊಡುಗೆಯನ್ನು ನೀಡುತ್ತಿದೆ ಎಂದು ಆಧುನಿಕ ತತ್ವಜ್ಞಾನಿ ಭರತ್ ಜಂಗಮ್ ಅವರು ನಂಬಿದ್ದಾರೆ. ಇದು ಇಪ್ಪತ್ತೊಂದನೇ ಶತಮಾನದಲ್ಲಿ ಪ್ರಪಂಚಕ್ಕೆ ನೇಪಾಳದ ಅತ್ಯಂತ ಗಣನೀಯ ಕೊಡುಗೆಯಾಗಿದೆ.

-----

# ನ್ಯಾಯ ಮತ್ತು ಕಾನೂನು

ಜನರು ರಾಜ್ಯ ಪದ್ಧತಿಯ ಮೂಲಕ ನೈಜ ನ್ಯಾಯವನ್ನು ಪಡೆಯಬೇಕಾಗಿರುತ್ತದೆ, ಆದರೆ ಅದನ್ನು ಅವರು ಪಡೆಯಲು ಸಾಧ್ಯವಾಗುವುದಿಲ್ಲ. ನೇಪಾಳದಲ್ಲಿನ ಪ್ರಸ್ತುತ ನ್ಯಾಯಾಂಗ ವ್ಯವಸ್ಥೆಯು ಅಭಿವೃದ್ಧಿ ಹೊಂದಿದ ದೇಶವಾದ ಯುನೈಟೆಡ್ ಕಿಂಗ್‌ಡಮ್‌ನಿಂದ ಆಮದು ಮಾಡಿಕೊಂಡ ನ್ಯಾಯ ಪದ್ಧತಿಯಾಗಿದೆ, ಇಲ್ಲಿ ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ಆದರೆ ನ್ಯಾಯದ ಕುರಿತು ನೋಡಿದಾಗ, ನಾವು ಇಲ್ಲಿ ತೋಳ ಅಥವಾ ನರಿಯ ನ್ಯಾಯವನ್ನು ಬಳಸುತ್ತಿದ್ದೇವೆ. ಈ ಪದ್ಧತಿಯಲ್ಲಿ ನ್ಯಾಯ ಹುಡುಕುವವರು ನ್ಯಾಯಾಂಗ ವ್ಯವಸ್ಥೆಯಿಂದ ನರಳುತ್ತಾರೆ. ಆದ್ದರಿಂದಲೇ, ಜನರು ಇಲ್ಲಿ ನ್ಯಾಯವನ್ನು ಪಡೆಯಲಾಗುವುದಿಲ್ಲ; ಬದಲಿಗೆ, ನ್ಯಾಯವನ್ನು ಪಡೆಯಲಿಕ್ಕಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ನರಳುತ್ತಾರೆ ಹಾಗೂ ಆರ್ಥಿಕವಾಗಿ ದಿವಾಳಿಯಾಗುತ್ತಾರೆ. ಇನ್ನೊಂದು ರೀತಿಯಲ್ಲಿ, ನ್ಯಾಯವನ್ನು ಹುಡುಕಲು ಹೊರಟವರು ಅನ್ಯಾಯ ಮತ್ತು ದಬ್ಬಾಳಿಕೆಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಜನರು ನೂರಕ್ಕೆ ನೂರರಷ್ಟು ವಿದ್ಯಾವಂತರಾಗಿರುತ್ತಾರೆ ಹಾಗೂ ಅವರು ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳ ಬಗೆಗೆ ಸಂಪೂರ್ಣ ತಿಳಿವಳಿಕೆಯನ್ನು ಹೊಂದಿರುತ್ತಾರೆ ಹಾಗೂ ಆರ್ಥಿಕವಾಗಿ ಅತ್ಯಂತ ಸದೃಢರಾಗಿರುತ್ತಾರೆ. ಆದರೆ ಇಲ್ಲಿ, ಬಹುತೇಕ ಜನರು ರಾಜ್ಯ ಸರ್ಕಾರದ ವತಿಯಿಂದ ಅವರಿಗೆ ನೀಡಲಾಗಿರುವ ಹಕ್ಕುಗಳ ಕುರಿತು ತಿಳಿವಳಿಕೆಯೇ ಇಲ್ಲದವರಾಗಿರುತ್ತಾರೆ. ಅಷ್ಟೇ ಅಲ್ಲ, ಆರ್ಥಿಕವಾಗಿಯೂ ಕೂಡಾ ಅವರು ತುಂಬಾ ಬಡವರಾಗಿರುತ್ತಾರೆ ಮತ್ತು ತೀರಾ ಮೂಲಭೂತ ಮಾನವ ಹಕ್ಕುಗಳಿಂದಲೂ ವಂಚಿಸಲ್ಪಟ್ಟಿರುವುದರ ಅರಿವೂ ಸಹಾ ಇಲ್ಲದ ಅಜ್ಞಾನಿಗಳಾಗಿದ್ದಾರೆ. ಇಂತಹ ಸಮಾಜದಲ್ಲಿ ಹಗಲು–ರಾತ್ರಿಗಳಷ್ಟು ವೈರುಧ್ಯ ವ್ಯತ್ಯಾಸವಿರುವ ಕಡೆಯಲ್ಲಿ, ಒಂದು ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತರಲು ಹೇಗೆ ಸಾಧ್ಯ? ಹಾಗಾಗಿಯೇ ಇಲ್ಲಿ ಪ್ರಸಕ್ತ ನ್ಯಾಯವ್ಯವಸ್ಥೆಯು ವಿಫಲಗೊಂಡಿದೆ.

ನೇಪಾಳದಲ್ಲಿನ ನ್ಯಾಯಾಲಯಗಳು ನ್ಯಾಯ ನೀಡುವಲ್ಲಿ ಹೊಂದಿರುವ ಅಸಮರ್ಥತೆಯ ಕುರಿತು ಭರತ್ ಜಂಗಮ್ ಅವರು ವಿಷಾದ ವ್ಯಕ್ತಪಡಿಸುತ್ತಾರೆ. ನೇಪಾಳದಲ್ಲಿ ನ್ಯಾಯವನ್ನು ನೀಡಬೇಕಾದ ಸರಿಯಾದ ರೀತಿಯಲ್ಲಿ ನೀಡುವುದು ಸಾಧ್ಯವಾಗುತ್ತಿಲ್ಲ. ನೇಪಾಳದಲ್ಲಿನ ಯಾವುದೇ ನ್ಯಾಯಾಲಯಕ್ಕೆ ಹಾಜರಾಗಲು ಹೋದರೆ, ಅದು ನ್ಯಾಯ ನೀಡುವ ಪವಿತ್ರ ಸ್ಥಳವಲ್ಲ ಎಂಬುದಕ್ಕೆ ಅಲ್ಲಿನ ಅವ್ಯವಸ್ಥೆಯು ಉತ್ತರ ನೀಡುತ್ತದೆ. ಅದರ ನಂತರ, ಭರತ್ ಜಂಗಮ್‌ರ ವ್ಯಾಪ್ತಿಯಲ್ಲಿರುವ ಪ್ರದೇಶದ ಕಡೆಗೆ ದೃಷ್ಟಿ ಹರಿಸಿ. ಅಲ್ಲಿ ನೀವು ಬಯಸಿದ ಅಂತಹ ದೃಶ್ಯವನ್ನು ನೋಡಬಹುದು. ನ್ಯಾಯವನ್ನು ಹುಡುಕುವ ವ್ಯಕ್ತಿಯು ಅದನ್ನು ಪಡೆಯುತ್ತಾನೋ ಇಲ್ಲವೋ ಎಂಬುದು ಅವಕಾಶದ ವಿಷಯವಾಗಿದೆ. ಆದರೆ ಸಮಯವು ತುಂಬಾ ನಿಧಾನವಾಗಿ ಸರಿಯುತ್ತದೆ. ಯಾವ ಮಟ್ಟಿಗೆಂದರೆ ಅಂತಿಮವಾಗಿ ಒಬ್ಬ ವ್ಯಕ್ತಿಯು ನ್ಯಾಯವನ್ನು ಪಡೆದರೂ ಅದು ಸಂತ್ರಸ್ತರಿಗೆ ಪರಿಹಾರವನ್ನು ನೀಡಲು ಸಾಧ್ಯವಾಗುವುದಿಲ್ಲ. ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ದಾಖಲಿಸಿದರೆ ಅದರ ಅಂತಿಮ ಇತ್ಯರ್ಥಕ್ಕೆ ಕನಿಷ್ಠ ಹತ್ತು ವರ್ಷಗಳ ಅವಧಿ ತೆಗೆದುಕೊಳ್ಳಬಹುದು. ಇಲ್ಲವಾದಲ್ಲಿ ಇನ್ನೊಂದು ರೀತಿಯೇ ಫಲಿತಾಂಶವನ್ನು ಕೇಳಬೇಕಾಗಬಹುದು. ಮತ್ತೆ, ಹಣವು ಎಷ್ಟು ಖರ್ಚಾಯಿತೆಂಬ ಯೋಚನೆಯಂತೂ ಬೇಡ. ಆತನ ಮನೆಮಠವನ್ನೆಲ್ಲ ಮಾರಿಕೊಂಡು, ಮನೆಯ ದಿನನಿತ್ಯದ ಖರ್ಚಿಗೂ ಒದ್ದಾಡುವಷ್ಟು ಹಣವು ಖರ್ಚಾಗಿಹೋಗುತ್ತದೆ. ಅಂತೆಯೇ, ಅವನು ಕೇವಲ ಆರ್ಥಿಕವಾಗಿ ದಿವಾಳಿಯಾಗುವುದು ಮಾತ್ರವಲ್ಲ, ಅವನ ಮರ್ಯಾದೆ, ಘನತೆ ಎಲ್ಲವೂ ಸಂಪೂರ್ಣವಾಗಿ ನಷ್ಟವಾಗಿಹೋಗುತ್ತದೆ. ಆದ್ದರಿಂದಲೇ, ಇತ್ತೀಚಿನ ದಿನಗಳಲ್ಲಿ ನೇಪಾಳದ ನ್ಯಾಯಾಲಯಗಳಲ್ಲಿ ನ್ಯಾಯಕ್ಕಾಗಿ ಪ್ರಕರಣವನ್ನು ದಾಖಲಿಸಲು ಹೇಳಲಾಗುವುದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಒಂದು ಕಾನೂನಿನ ಚೌಕಟ್ಟನ್ನು ನಿರ್ಮಿಸದೇ ಹೋದರೆ, ವಾದಿಯಾಗಲೀ ಅಥವಾ ಪ್ರತಿವಾದಿಯಾಗಲೀ ನ್ಯಾಯಪೀಠದಿಂದ ಹೊರಬರುವ ತೀರ್ಮಾನಕ್ಕೆ ಆಶ್ಚರ್ಯಪಡಬೇಕಾಗುತ್ತದೆ. ನೇಪಾಳದ ನ್ಯಾಯಾಲಯಗಳಲ್ಲಿ ನ್ಯಾಯ ಪದ್ಧತಿಯನ್ನು 150 ವರ್ಷಗಳಿಂದ ಸಾಂಪ್ರದಾಯಿಕ ಆಡಳಿತ ನಡೆಸಿದ ವಂಶದವರಾದ ಪ್ರಧಾನಮಂತ್ರಿ ಜಂಗ್ ಬಹದ್ದೂರ್ ರಾನಾ ಅವರ ನೇತೃತ್ವದಲ್ಲಿ ಬ್ರಿಟಿಷ್ ನ್ಯಾಯಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಹೀಗಿರುವಾಗ ಹೇಗೆ ನ್ಯಾಯವನ್ನು ಸಾಧಿಸಬಹುದು?

ಜನರಿಗೆ ತೃಪ್ತಿಕರವೆನಿಸುವ ರೀತಿಯಲ್ಲಿ ನ್ಯಾಯಪದ್ಧತಿಯನ್ನು ಸರ್ವರಿಗೂ ಸಮ್ಮತವಾಗುವಂತೆ ಸ್ಥಾಪಿಸಲು ಬೇಕಾಗುವ ಅಂಶಗಳನ್ನು ಭರತ್ ಜಂಗಮ್ ಅವರು ಬಹಳ ವಿಷದವಾಗಿ ವಿವರಿಸುತ್ತಾರೆ. ಈ ವಿಷಯ ಕುರಿತ ವಿವರಣೆಯು ಬಹಳ ದೊಡ್ಡದಾಗಿರುತ್ತದೆ. ಏಕೆಂದರೆ ಯಾವುದೇ ಒಂದು ದೇಶದ ನ್ಯಾಯ ವ್ಯವಸ್ಥೆಯನ್ನು ಸ್ಥಾಪಿಸಲು ಸಂಕಲ್ಪಿಸಿದರೆ ಅದರಿಂದಾಗುವ ಅನುಕೂಲಗಳ ಜೊತೆಜೊತೆಗೇ ಅದರ ನ್ಯೂನತೆಗಳನ್ನೂ ವಿವರಿಸುವ ಅಗತ್ಯವಿದೆ. ಆದಾಗ್ಯೂ, ಸಂಕ್ಷಿಪ್ತವಾಗಿ

ಸಾರಾಂಶರೂಪದಲ್ಲಿ ಹೇಳುವುದಾದರೆ, ಪ್ರಸ್ತುತ ನ್ಯಾಯಾಂಗ ವ್ಯವಸ್ಥೆಯನ್ನು ತಿರಸ್ಕರಿಸುವ ಬದಲು, ಅದರ ನ್ಯೂನತೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹೊಸ ಅಭ್ಯಾಸಗಳನ್ನು ಸಂಯೋಜಿಸುವುದು ಅವಶ್ಯಕ. ಪ್ರಸ್ತುತ ಚಾಲ್ತಿಯಲ್ಲಿರುವ ನ್ಯಾಯವ್ಯವಸ್ಥೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅನಗತ್ಯವೆನಿಸುವ ಅಭ್ಯಾಸಗಳನ್ನು ತೆಗೆದುಹಾಕುವ ಮೂಲಕ ನಾವು ಪ್ರಸಕ್ತ ನ್ಯಾಯ ವ್ಯವಸ್ಥೆಯನ್ನು ಹೊಸ ವ್ಯವಸ್ಥೆಗಳೊಂದಿಗೆ ವಿಲೀನಗೊಳಿಸಿ ಅತ್ಯಂತ ಪರಿಣಾಮಕಾರಿಯಾದ ನ್ಯಾಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬಹುದಾಗಿದೆ. ವಿವಿಧ ಹಂತಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸುವುದು ಹೆಚ್ಚಾಗಿದ್ದರೂ ಕೂಡಾ ಯಾವುದೇ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತಿಮ ತೀರ್ಮಾನವನ್ನು ಕೇವಲ ಎರಡು ಅಥವಾ ಮೂರು ಹಂತಗಳಲ್ಲಿ ಮಾಡಬೇಕಾಗಿರುತ್ತದೆ. ಮಾತ್ರವಲ್ಲದೆ, ನ್ಯಾಯಾಲಯದ ವ್ಯವಸ್ಥೆಯನ್ನು ಸ್ಥಾಪಿಸುವಾಗ ಸ್ಥಳೀಯ ಮತ್ತು ಕೌಟುಂಬಿಕ ಸಮಸ್ಯೆಗಳು, ವೈಯಕ್ತಿಕ ಮತ್ತು ಸಾಂಸ್ಥಿಕ ನಡೆವಳಿಕೆ, ಹಣಕಾಸಿನ ವಹಿವಾಟುಗಳು, ಸಾಮಾನ್ಯ ದಾವೆಗಳು, ಅಪರಾಧ ನ್ಯಾಯ, ಸಾರ್ವಜನಿಕ ಹಿತಾಸಕ್ತಿ, ಸಾಂವಿಧಾನಿಕ ಮತ್ತು ಕಾನೂನು ವಿಷಯಗಳು ಇತ್ಯಾದಿಗಳನ್ನು ಪರಿಗಣಿಸುವುದು ಅತ್ಯವಶ್ಯಕವಾಗಿದೆ. ಜಿಲ್ಲಾಮಟ್ಟದ ನ್ಯಾಯಾಧೀಶರು ಯಾವುದೇ ಪ್ರಕರಣಗಳನ್ನು ಪರಿಶೀಲಿಸಿ ಪರಿಣಾಮಕಾರಿಯಾಗಿ ತೀರ್ಪು ನೀಡಲು ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಪರಿಣಿತರಾಗಿರಬೇಕು. ಜಿಲ್ಲಾ ನ್ಯಾಯಾಲಯದಿಂದ ಸರ್ವೋಚ್ಚ ನ್ಯಾಯಾಲಯದವರೆಗೆ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತುಕೊಳ್ಳುವ ವ್ಯಕ್ತಿಯು ಪ್ರಕರಣವನ್ನು ಸಂಪೂರ್ಣವಾಗಿ ಅರಿಯುವ ಅಥವಾ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು ಹಾಗೂ ಪ್ರಕರಣವನ್ನು ಸೂಕ್ತವಾಗಿ ಇತ್ಯರ್ಥಪಡಿಸಿ, ಅರ್ಹರಿಗೆ ನ್ಯಾಯ ಒದಗಿಸುವ ಕ್ಷಮತೆಯನ್ನು ಹೊಂದಿರಬೇಕು. ಯಾರಾದರೂ ನ್ಯಾಯಾಧೀಶರು ತಿಳಿವಳಿಕೆಯುಳ್ಳವರಲ್ಲವೆಂದು ಕಂಡುಬಂದರೆ, ಅಂತಹವರನ್ನು ನ್ಯಾಯಾಧೀಶರ ಹುದ್ದೆಯಿಂದ ತಕ್ಷಣವೇ ಅನರ್ಹಗೊಳಿಸಬೇಕು ಮತ್ತು ನ್ಯಾಯಾಧೀಶರನ್ನು ಅವರ ಜ್ಞಾನ ಮತ್ತು ಅನುಭವದ ಆಧಾರದ ಮೇಲೆ ವರ್ಗೀಕರಿಸಬೇಕು. ಮೂಲಭೂತವಾಗಿ, ತೀರ್ಪು ನೀಡಲು ಜವಾಬ್ದಾರಿ ಹೊಂದಿರುವ ವ್ಯಕ್ತಿ, ಅದು ನ್ಯಾಯಾಧೀಶರಾಗಿರಲಿ ಅಥವಾ ಅವರಿಗೆ ಸಹಾಯ ಮಾಡುವ ವಕೀಲರಾಗಿರಲಿ, ನ್ಯಾಯವನ್ನು ನಿರ್ಣಯಿಸುವ ತಮ್ಮ ಕ್ಷೇತ್ರದಲ್ಲಿ ಸಂಪೂರ್ಣ ಜ್ಞಾನವನ್ನು ಹೊಂದಿರಬೇಕು. ಒಂದು ನಿರ್ದಿಷ್ಟ ಕಾಲಮಿತಿಯೊಳಗೆ ಪರಿಹರಿಸಬೇಕಾದ ಯಾವುದೇ ವಿವಾದಕ್ಕಾದರೂ ಕಡ್ಡಾಯವಾಗಿ ಕಾನೂನು ನಿಬಂಧನೆಗಳ ಅಗತ್ಯವಿರುತ್ತದೆ. ಹಾಗೆಯೇ, ನ್ಯಾಯನಿರ್ಣಯದಲ್ಲಿ ತೊಡಗಿಕೊಳ್ಳುವವರ ಸಂಭಾವನೆಯನ್ನು ನಿಯಂತ್ರಿಸುವ ವ್ಯವಸ್ಥೆಯು ಸಕ್ಷಮವಾಗಿ ಜಾರಿಯಲ್ಲಿರುಬೇಕು. ಸ್ಥಳೀಯರು ಮತ್ತು ತಜ್ಞ ನಾಗರಿಕರಿಗೆ ಸಂಬಂಧಿಸಿದ ಪ್ರತಿ ನ್ಯಾಯನಿರ್ಣಯದಲ್ಲಿಯೂ, ನ್ಯಾಯಪೀಠವು ಕಡ್ಡಾಯವಾಗಿ ಅವರ ಸಹಕಾರವನ್ನು ಕೋರಬೇಕು. ನ್ಯಾಯ ನೀಡಲು ಅಧಿಕಾರ ಹೊಂದಿರುವ ನ್ಯಾಯಾಂಗದ ಅಧಿಕಾರಿಯ ನಿರ್ಧಾರವನ್ನು ಉನ್ನತ ನ್ಯಾಯಾಲಯವು ರದ್ದುಗೊಳಿಸಿದರೆ, ಈ ನಿರ್ಧಾರವನ್ನು ದಾಖಲಿಸಲು ಮತ್ತು ಹೀಗೆ ದಾಖಲಾದ ನಿರ್ಧಾರದ ಕುರಿತು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ವ್ಯವಸ್ಥೆಯು ಜಾರಿಯಲ್ಲಿರಬೇಕು. ನ್ಯಾಯಾಂಗದಲ್ಲಿ ವಿಳಂಬ ಹಾಗೂ ಭ್ರಷ್ಟಾಚಾರಗಳಿಗೆ ಸಂಬಂಧಿಸಿದ ತನಿಖೆಯ ಅಧಿಕಾರವನ್ನು ನ್ಯಾಯಾಂಗದ ಹೊರಗಿನ ಇನ್ನೊಂದು ಸಾಂವಿಧಾನಿಕ ಆಯೋಗಕ್ಕೆ ನೀಡಬೇಕು. ಇವು ನ್ಯಾಯವ್ಯವಸ್ಥೆಗೆ ಸಂಬಂಧಿಸಿದಂತೆ ಸುಧಾರಣೆಯಾಗಬೇಕಾದ ಅಗತ್ಯ ಸುಧಾರಣೆಗಳಾಗಿವೆ ಎಂದು ಶ್ರೀ ಭರತ್ ಜಂಗಮ್ ಅವರು ಅಭಿಪ್ರಾಯಪಡುತ್ತಾರೆ.

ನ್ಯಾಯವನ್ನು ಒದಗಿಸುವ ಜವಾಬ್ದಾರಿಯಿಂದ ನಿಯೋಜಿತವಾದ ಪಕ್ಷವನ್ನೇ ಬಹಳಷ್ಟು ಬಾರಿ ತಪ್ಪಿಗೆ ಕಾರಣವೆಂದು ಪರಿಗಣಿಸಲಾಗುತ್ತದೆ. ಇದಕ್ಕೆ ಕಾರಣವೆಂದರೆ, ಬಹಳಷ್ಟು ಸಂದರ್ಭಗಳಲ್ಲಿ ನ್ಯಾಯನಿರ್ಣಯಕ್ಕೆ ನಿಯೋಜಿತರಾದ ನ್ಯಾಯಾಧೀಶರು ವಿಚಾರಣೆ ನಡೆಸಲಾದ ವಿಷಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಜ್ಞಾನವನ್ನು ಹೊಂದಿರುವುದಿಲ್ಲ. ಒಮ್ಮೆ ನ್ಯಾಯಾಧೀಶರಾಗಿ ನೇಮಕಗೊಂಡ ನಂತರ ಯಾವುದೇ ಹೆಚ್ಚಿನ ಅಧ್ಯಯನ ಅಥವಾ ಶ್ರದ್ಧೆಯ ಅಗತ್ಯವಿಲ್ಲವೆಂದು ಭಾವಿಸಿ ಅವರು 65 ವರ್ಷವನ್ನು ತುಂಬುವವರೆಗೂ ತಮ್ಮ ಉದ್ಯೋಗವನ್ನು ಉಳಿಸಿಕೊಳ್ಳಲು ಮಾತ್ರ ಆಸಕ್ತಿ ತೋರುತ್ತಾರೆ. ಮತ್ತೊಂದು ಕಡೆ ನ್ಯಾಯವನ್ನು ಜಾರಿಗೊಳಿಸುವ ರಾಜ್ಯಸರ್ಕಾರವನ್ನು ಪ್ರತಿನಿಧಿಸಿದರೆ, ಪ್ರತಿಪಕ್ಷವು ವಕೀಲಿ ವೃತ್ತಿಯನ್ನು ಪ್ರತಿನಿಧಿಸುತ್ತದೆ. ರಾಜ್ಯದ ಕಾನೂನುಗಳು ಸಮಗ್ರವಾಗಿಲ್ಲದಿರಬಹುದು. ಕೆಲವು ಕಾನೂನುಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಕಾನೂನುಗಳ ಹಳೆಯ ಅಥವಾ ಅನುವಾದಿತ ಆವೃತ್ತಿಗಳನ್ನು ಹೋಲುತ್ತವೆ. ಅಂತಹ ಕಾನೂನನ್ನು ಅನ್ವಯಿಸಿದಾಗ ಅದು ಒಂದು ಕಡೆ ಇನ್ನೊಂದಕ್ಕಿಂತ ಹೆಚ್ಚು ಪ್ರಯೋಜನಕಾರಿಯಂತೆ ಕಂಡರೂ, ಅದು ಸವಕಲಾದ ಅಥವಾ ತಪ್ಪಾಗಿ ಅರ್ಥೈಸಿಕೊಳ್ಳಲಾದ ಕಾನೂನು ತತ್ವಗಳನ್ನೇ ಶಾಶ್ವತವಾಗಿ ಉಳಿಸಿಕೊಳ್ಳಲು ಕಾರಣವಾಗುತ್ತದೆ. ರಾಜ್ಯವು ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲವಾದಲ್ಲಿ, ನ್ಯಾಯವ್ಯವಸ್ಥೆಯಲ್ಲಿನ ದೌರ್ಬಲ್ಯಕ್ಕೆ ಅದೇ ಜವಾಬ್ದಾರಿಯಾಗಿರುವಂತೆ ತೋರುತ್ತದೆ. ಹೀಗಾಗಿ ಇದು ಅಸಮಂಜಸವಾಗಿದೆ. ಹಾಗೆಯೇ ಕಾನೂನಿನ ಕುರಿತು ಸದಾ ಅಭ್ಯಾಸಪರರಾಗಿರುವ ಕಾನೂನು ವೃತ್ತಿಪರರು ರಾಜ್ಯದಲ್ಲಿ ಕಾನೂನನ್ನು ಸ್ಥಾಪಿಸುವಲ್ಲಿ ಅತ್ಯಗತ್ಯವಾಗಿದ್ದಾರೆ. ಇವರು ಕಾನೂನನ್ನು ಅರ್ಥೈಸುತ್ತಾರೆ, ಅಭ್ಯಾಸ

ಮಾಡುತ್ತಾರೆ ಹಾಗೂ ಅದನ್ನು ಸತ್ಯದ ಹಾದಿಗೆ ಮಾರ್ಗದರ್ಶನ ಮಾಡುತ್ತಾರೆ. ಆದಾಗ್ಯೂ, ಅವರು ಈ ಗುಣಗಳನ್ನು ಅಭಿವೃದ್ಧಿಪಡಿಸುವಲ್ಲಿ ತೊಂದರೆಗಳಿವೆ. ಕಾನೂನಿನೊಂದಿಗೆ ವ್ಯಾಪಾರ ಚಟುವಟಿಕೆಗಳನ್ನು ಏಕತ್ರಗೊಳಿಸುವುದನ್ನು ನಿಯಂತ್ರಿಸುವಲ್ಲಿ ಕಾನೂನಿನ ನಿಯಂತ್ರಣದ ಕೊರತೆಯಿದ್ದರೆ, ವ್ಯವಹಾರಗಳನ್ನು ಪರಿಶೀಲಿಸದೆ ಕಾರ್ಯನಿರ್ವಹಿಸುವಂತಾಗುತ್ತದೆ. ಇದು ನ್ಯಾಯದಿಂದ ವಿಮುಖವಾಗಲು ಕಾರಣವಾಗುತ್ತದೆ. ಆದ್ದರಿಂದ ನ್ಯಾಯವನ್ನು ಪಡೆಯಬಯಸಿದ ಎರಡೂ ಪಕ್ಷಗಳೂ ರಾಜಿ ಮಾಡಿಕೊಂಡಂತೆ ಕಂಡುಬಂದಾಗ ಅವರಿಬ್ಬರೂ ಸಮಾನ ತಪ್ಪಿತಸ್ಥರಾಗಿದ್ದಾರೆ.

2047(1990)ರಲ್ಲಿ ನೇಪಾಳದಲ್ಲಿ ಒಂದು ಸ್ವತಂತ್ರ, ನಿಷ್ಪಕ್ಷಪಾತ ಮತ್ತು ಸರ್ವಾಧಿಕಾರವುಳ್ಳ ನ್ಯಾಯವನ್ನು ಪ್ರಜೆಗಳಿಗೆ ನೀಡುವ ದೃಷ್ಟಿಯಿಂದ ಬಹುವಿಧ ಚಿಂತನೆಗಳ ನೆಲೆಗಟ್ಟುಳ್ಳ ಬಹುಪಕ್ಷೀಯ ಪ್ರಜಾಪ್ರಭುತ್ವದ ಸಂವಿಧಾನವನ್ನು ಜಾರಿಗೊಳಿಸಲಾಯಿತು. ಇಂತಹ ಸ್ವತಂತ್ರ ಮತ್ತು ಸರ್ವಾಧಿಕಾರಿ ನ್ಯಾಯವ್ಯವಸ್ಥೆಯು ಜನರಿಗೆ ನಿಜಕ್ಕೂ ಸರಿಯಾದ ನ್ಯಾಯವನ್ನು ಒದಗಿಸಬಲ್ಲದೇ? ಎಂಬ ಕುರಿತು ಭರತ್ ಜಂಗಮ್ ಅವರು ಈ ಮುಂದಿನಂತೆ ತಿಳಿಸುತ್ತಾರೆ. ಯಾವುದೇ ಒಂದು ಸ್ವತಂತ್ರವೂ ಮತ್ತು ಶಕ್ತಿಯುತವೂ ಆದ ನ್ಯಾಯಾಂಗವು ಯಾವುದೇ ಒತ್ತಡಗಳಿಲ್ಲದೆ ಸದಾ ನಿರಂಕುಶವಾಗಿರುತ್ತದೆ. 2047(1990)ರಲ್ಲಿ ನೇಪಾಳದ ರಾಜಧಾನಿಯಲ್ಲಿ ಅಳವಡಿಸಿಕೊಳ್ಳಲಾಗಿರುವ ಸಂವಿಧಾನವು ನ್ಯಾಯಾಂಗ ವ್ಯವಸ್ಥೆಯನ್ನು ಅದೆಷ್ಟರಮಟ್ಟಿಗೆ ಸ್ವತಂತ್ರವಾಗಿಸಿದೆ ಎಂದರೆ ಯಾರೊಬ್ಬರೂ ಅದರ ಮೇಲೆ ನಿಯಂತ್ರಣವನ್ನು ಸಾಧಿಸುವಂತಿಲ್ಲ. ಇದರೊಟ್ಟಿಗೆ, ನ್ಯಾಯಾಧೀಶರನ್ನು ನೇಮಕಗೊಳಿಸುವ ಕುರಿತು ನ್ಯಾಯಾಲಯಗಳು ತೆಗೆದುಕೊಳ್ಳುವ ತೀರ್ಮಾನಗಳನ್ನು ಕೂಡಾ ಯಾರೊಬ್ಬರೂ ಆಕ್ಷೇಪಿಸದಿರುವಷ್ಟರ ಮಟ್ಟಿಗೆ ಅಲ್ಲಿನ ಸಂವಿಧಾನವು ನ್ಯಾಯಾಂಗವನ್ನು ಸಶಕ್ತವನ್ನಾಗಿಸಿದೆ. ತತ್ಪರಿಣಾಮವಾಗಿ, ಕಾಲಾನಂತರದಲ್ಲಿ ಯಾರಾದರೂ ನ್ಯಾಯಾಂಗವನ್ನಾಗಲೀ, ನ್ಯಾಯವ್ಯವಸ್ಥೆಯನ್ನಾಗಲೀ ಟೀಕಿಸಿದಲ್ಲಿ ಅಥವಾ ಪ್ರಶ್ನಿಸಿದಲ್ಲಿ ನ್ಯಾಯಾಲಯವು ನ್ಯಾಯಾಂಗ ನಿಂದನೆಯ ಪ್ರಕರಣವನ್ನು ದಾಖಲಿಸುತ್ತದೆ ಹಾಗೂ ಇದರಿಂದಾಗಿ ನ್ಯಾಯಾಧೀಶರು ಅನಿಯಂತ್ರಿತ ಅಧಿಕಾರವನ್ನು ಹೊಂದುವ ಮೂಲಕ ಸಾಮಾನ್ಯರು ಮುಟ್ಟಲಾಗದ ನಿರಂಕುಶ ದೊರೆಗಳಂತಾಗಿ ಹೋದರು. ಹೀಗೆ ನ್ಯಾಯಾಂಗ ವ್ಯವಸ್ಥೆಗೆ ನೀಡಲಾದ ಸ್ವಾತಂತ್ರ್ಯ ಮತ್ತು ಶಕ್ತಿಗಳು ಅವುಗಳ ದುರುಪಯೋಗಕ್ಕೆ ಕಾರಣವಾದವು. ಯಾವುದೇ ನ್ಯಾಯಾಧೀಶರು ಭ್ರಷ್ಟಾಚಾರದಲ್ಲಿ ತೊಡಗಿದ್ದರೆ, ಅವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವ ಅಧಿಕಾರವನ್ನು ನ್ಯಾಯಾಂಗವು ಹೊಂದಿದ್ದರೂ ಕೂಡಾ, ಇದುವರೆಗೂ ಅಂತಹ ಯಾವುದೇ ನ್ಯಾಯಾಧೀಶರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಂತೆಯೇ, ಸಂವಿಧಾನ 87(7)ರಲ್ಲಿ ನ್ಯಾಯಾಧೀಶರನ್ನು ಅವರ ದುರ್ವರ್ತನೆಗಾಗಿ ಅಥವಾ ಅವರು ತಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಲು ವಿಫಲಾದರೆಂಬ ಕಾರಣಕ್ಕಾಗಿ ದೋಷಿಯನ್ನಾಗಿಸುವ ಅಧಿಕಾರವನ್ನು ಸಂಸತ್ತಿಗೆ ನೀಡಿದೆ. ಆದರೆ ಸಂವಿಧಾನವು ಜಾರಿಗೆ ಬಂದು ಇಷ್ಟು ವರ್ಷಗಳು ಕಳೆದರೂ ಇಂತಹ ಕಾರ್ಯಾಚರಣೆಗಾಗಿ ಅಲ್ಲಿ ಯಾವುದೇ ಕಾನೂನನ್ನು ರೂಪಿಸಲಾಗಿರುವುದಿಲ್ಲ. ಹೀಗಾಗಿ ಸಂವಿಧಾನದ 87(7)ನೇ ವಿಧಿಯು ಸಂಪೂರ್ಣವಾಗಿ ನಿಷ್ಕ್ರಿಯವಾಯಿತು. ಇದರಿಂದ ಯಾವುದಕ್ಕೂ ಹೊಣೆಗಾರಿಕೆಯಾಗದಂತೆ ಅಥವಾ ಯಾರೊಬ್ಬರ ಹಿಡಿತಕ್ಕೂ ಸಿಗದಂತೆ ನ್ಯಾಯಾಂಗವು ಸಂಪೂರ್ಣ ಸರ್ವತಂತ್ರ ಸ್ವತಂತ್ರವಾಗಿದೆ ಎಂದು ಅರ್ಥವಲ್ಲ, ಬದಲಿಗೆ ನ್ಯಾಯಾಂಗವು ಅತ್ಯಂತ ಶಕ್ತಿಶಾಲಿಯಾಗಿರುವುದರಿಂದ ಅಲ್ಲಿ ಕೆಲಸ ಮಾಡುವ ಎಲ್ಲರೂ ವಿವಿಧ ರೀತಿಗಳಲ್ಲಿ ಶಕ್ತಿಶಾಲಿಗಳಾದರು ಎಂದಷ್ಟೇ ಅರ್ಥ. ಇದರಿಂದ ಹೇಳಿಕೊಳ್ಳುವಂತಹ ಬದಲಾವಣೆ ಸಾಧ್ಯವಾಗುವುದಿಲ್ಲ. ಹೀಗಾಗಿ, ಕಾನೂನು ಪ್ರಾಧಿಕಾರದ ಸೌಲಭ್ಯವನ್ನು ಸಾರ್ವಜನಿಕರು ಅನುಭವಿಸಲು ಸಾಧ್ಯವಾಗುವುದಿಲ್ಲ. ನ್ಯಾಯಾಂಗದ ಮೇಲೆ ರಾಜಕೀಯವು ತನ್ನ ಪ್ರಭಾವ ಬೀರುತ್ತದೆ ಎಂದು ಭರತ್ ಜಂಗಮ್ ಅವರು ಅಭಿಪ್ರಾಯಪಡುತ್ತಾರೆ.

ವಕೀಲರಿಗೆ ನೇಪಾಳದ ಸಂವಿಧಾನದಲ್ಲಿ ನೀಡಲಾಗಿರುವ ಅಧಿಕಾರದ ಕುರಿತು ಹೇಳುತ್ತಾ, ಯಾವುದೇ ಒಂದು ಸಂಘಟಿತ ರಾಜ್ಯದ ಕಾನೂನುಗಳನ್ನು ಎತ್ತಿಹಿಡಿಯಲು ಮತ್ತು ಜಾರಿಗೊಳಿಸಲು, ಆ ರಾಜ್ಯದ ಪ್ರಜೆಗಳಿಗೆ/ಸಾರ್ವಜನಿಕರಿಗೆ ನ್ಯಾಯವನ್ನು ಖಚಿತವಾಗಿ ದೊರಕಿಸಿಕೊಡುವ ನಿಟ್ಟಿನಲ್ಲಿ ಅತ್ಯಂತ ಮಹತ್ತರವಾದ ಜವಾಬ್ದಾರಿಯನ್ನು ಹೊಂದಿರುವ ವಕೀಲರ ಪಾತ್ರವು ರಾಜ್ಯದ ವ್ಯವಸ್ಥೆಯಲ್ಲಿ ಅತ್ಯಂತ ನಿರ್ಣಾಯಕವಾದುದಾಗಿದೆ ಎನ್ನುತ್ತಾರೆ. ನೇಪಾಳದಲ್ಲಿ 2047(1990)ರಲ್ಲಿ ಜಾರಿಗೊಳಿಸಲಾದ ಸಂವಿಧಾನದ ಪರಿಚ್ಛೇದ 16 ರಲ್ಲಿ ವಕೀಲರಿಗೆ ಅವಕಾಶವನ್ನು ಒದಗಿಸಿದ್ದು, ಅದರ ನಿಯಮ 110ರಲ್ಲಿ ವಕೀಲರ ಕರ್ತವ್ಯಗಳು ಮತ್ತು ಅಧಿಕಾರ ವ್ಯಾಪ್ತಿಗಳ ಕುರಿತು ವಿವರಿಸಲಾಗಿದೆ. ವಕೀಲರು ಸಂವಿಧಾನ ಮತ್ತು ಕಾನೂನು ಮನೋಭಾವಕ್ಕೆ ಬದ್ಧರಾಗಿ ರಾಜ್ಯ ಮತ್ತು ರಾಜ್ಯದ ಪ್ರಜೆಗಳಿಗೆ ನ್ಯಾಯ ಒದಗಿಸುವ ಕುರಿತಾದ ಕಾರ್ಯಾಚರಣೆಯನ್ನು ನಡೆಸುವ ಅಧಿಕಾರವನ್ನು ಪಡೆದಿರುತ್ತಾರೆ. ಆಡಳಿತದ ಪ್ರತಿಯೊಂದು ವಲಯವೂ ತನ್ನ ಪರಿಣಾಮಕಾರಿ ಕಾರ್ಯನಿರ್ವಹಣೆಯ ಕುರಿತು ನೇರ ಪರಿಣಾಮದ ವೀಕ್ಷಣೆ ಮತ್ತು ಸಾಧ್ಯತೆಗಳನ್ನು ಅನುಭವಿಸಬಹುದು, ಆದರೆ ವಕೀಲರ ನಡವಳಿಕೆ ಮತ್ತು ತೊಡಗಿಕೊಳ್ಳುವಿಕೆಗಳಿಂದ ನ್ಯಾಯಾಂಗವನ್ನು ಪ್ರಭಾವಶಾಲಿಯನ್ನಾಗಿ ಮಾಡುವುದಕ್ಕೆ ಸಂಬಂಧಿಸಿದಂತೆ

ಯಾವುದೇ ಪ್ರಭಾವವನ್ನೂ ಗಮನಿಸಲಾಗಿಲ್ಲ. ಇಷ್ಟೇ ಮಾತ್ರವಲ್ಲದೆ, ಸರ್ಕಾರವನ್ನು ದುರ್ಬಲಗೊಳಿಸಲು ಅಥವಾ ಸರ್ಕಾರದ ದೌರ್ಬಲ್ಯಗಳನ್ನು ಮುಚ್ಚಿಹಾಕಿಕೊಳ್ಳುವ ನಿಟ್ಟಿನಲ್ಲಿ, ರಾಜ್ಯವು ಕಾನೂನಿನಡಿಯಲ್ಲಿ ಶಿಕ್ಷೆಗೊಳಪಟ್ಟ ವ್ಯಕ್ತಿಗಳನ್ನು ಭಯೋತ್ಪಾದಕರೆಂದು ಘೋಷಿಸುವ ಮೂಲಕ ಕ್ಷಮಾದಾನವನ್ನು ಶಿಫಾರಸು ಮಾಡಿತು. ಇದರಿಂದ ಅವರಿಗೆ ಬೇಕಾದಂತೆ ಪ್ರಕರಣಗಳನ್ನು ಮುಂದುವರಿಸುವಂತಹ ಅಥವಾ ಹಿಂಪಡೆಯುವಂತಹ ಕಾನೂನು ರಾಜ್ಯದ ಆಡಳಿತವನ್ನು ಅಪಹಾಸ್ಯ ಮಾಡುತ್ತದೆ ಹಾಗೂ ಪಕ್ಷಪಾತದ ನಡವಳಿಕೆಯನ್ನು ಬೆಂಬಲಿಸುತ್ತದೆ. ಅಷ್ಟೇ ಅಲ್ಲ, ಪ್ರಸ್ತುತ ಸಂದರ್ಭದವರೆಗೂ ಸರ್ಕಾರದ ಕಡೆಯಿಂದ ಭ್ರಷ್ಟರೆಂದು ಆರೋಪಿಸಲ್ಪಟ್ಟ ವ್ಯಕ್ತಿಗಳ ಪರವಾಗಿ ಚರ್ಚೆಗಳು ಮತ್ತು ಬೆಂಬಲಗಳು ಇವೆ. ಅಂದರೆ, ಸರ್ಕಾರದ ಪರವಾಗಿ ವಕಾಲತ್ತು ವಹಿಸುವ ವ್ಯಕ್ತಿಗಳು ಅಪರಾಧಿಗಳೆಂದು ಆರೋಪಿಸಲ್ಪಟ್ಟ ವ್ಯಕ್ತಿಗಳ ಪರವಾಗಿ ವಕಾಲತ್ತು ವಹಿಸುವುದರಿಂದ ಹಿಡಿದು ಅವರನ್ನೇ ಬೆಂಬಲಿಸಿ ನಿಲ್ಲುವಲ್ಲಿ ಅವರು ತಮ್ಮ ನೈತಿಕ ಮೌಲ್ಯಗಳನ್ನೂ ಸಹ ರಾಜಿ ಮಾಡಿಕೊಳ್ಳಲು ಹಿಂಜರಿಯುವುದಿಲ್ಲ!! ಆದ್ದರಿಂದ ನ್ಯಾಯಾಂಗದ ವಕೀಲರ ಮಟ್ಟವನ್ನು ತಲುಪಿದ ವ್ಯಕ್ತಿಗಳು ತಮ್ಮ ನೀತಿಗಳಿಂದ ಯಾವ ಕಾರಣಕ್ಕೂ ವಿಮುಖವಾಗಬಾರದು, ಏಕೆಂದರೆ ಅವರ ವಿಚಲನೆಯು ಅವರ ಕೈಕೆಳಗಿನ ಹಂತದಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಅವನತಿಗೆ ಕಾರಣವಾಗಬಹುದಾಗಿದೆ. ಈಗಂತೂ ಇಂತಹ ವಕೀಲರ ವರ್ತನೆಗಳು ಖಂಡಿತಾ ತೃಪ್ತಿಕರವಾಗಿಲ್ಲ. ಈ ಹಿನ್ನೆಲೆಯಲ್ಲಿ ನ್ಯಾಯಾಂಗವನ್ನು ಎಂದಿಗಿಂತಲೂ ಹೆಚ್ಚು ಸುಧಾರಿಸುವುದು ಅಗತ್ಯವೆಂದು ತೋರುತ್ತದೆ. ಪ್ರಸಕ್ತ ಸಾಂವಿಧಾನಿಕ ವ್ಯವಸ್ಥೆಯಲ್ಲಿ ವಕೀಲರು ತುಂಬಾ ಪ್ರಾಮಾಣಿಕರಾಗಿಯೂ, ಸಮಗ್ರ ದೃಷ್ಟಿಕೋನವುಳ್ಳವರೂ ಮತ್ತು ನಿರ್ಮಲರಾಗಿಯೂ ಇರಬೇಕಾದುದು ಅವಶ್ಯವಾಗಿದೆ. ಆದರೆ ಇಂದು ಅವರು ರಾಜಕೀಯ ಪಕ್ಷಗಳ ಕಾರ್ಯಕರ್ತರಂತೆ ಕಂಡುಬರುತ್ತಾರೆ ಮತ್ತು ಅವರ ಕಛೇರಿಯು ರಾಜಕೀಯ ವ್ಯಕ್ತಿಗಳಿಂದ ಪ್ರಭಾವಿತವಾಗಿದೆ.

-----

## ಸಂವಿಧಾನ

2072 (2015) ರಲ್ಲಿ ನೇಪಾಳದಲ್ಲಿ ಅಳವಡಿಸಿಕೊಳ್ಳಲಾದ ನೂತನ ಸಂವಿಧಾನದ ಬಗೆಗೂ ಭರತ್ ಜಂಗಮ್ ಅವರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತಾರೆ. ಪ್ರಸ್ತುತ ಸಂವಿಧಾನವು ಒದಗಿಸಿರುವ ಹಕ್ಕುಗಳು ಒಟ್ಟಾರೆ ದೇಶದ ಮತ್ತು ಪ್ರಜೆಗಳ ಸಮಗ್ರ ಕಲ್ಯಾಣಕ್ಕೆ ಆದ್ಯತೆ ನೀಡುತ್ತವೆ ಎಂದು ಅವರಿಗೆ ವಿಶ್ವಾಸವಿಲ್ಲ. ಪ್ರಸ್ತುತ ವ್ಯವಸ್ಥೆಯು ಜನರ ಆಶಯಗಳೊಂದಿಗೆ ಹೊಂದಿಕೆಯಾಗುವುದರ ಬದಲಾಗಿ, ವಿದೇಶಿ ಶಕ್ತಿಗಳ ಹಿತಾಸಕ್ತಿಗಳನ್ನು ಪೂರೈಸಲು ಬಲವಂತವಾಗಿ ಹೇರಿದಂತೆ ತೋರುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ರಾಜಕೀಯ ವ್ಯಕ್ತಿಗಳು ಮತ್ತು ಕಾನೂನು ವಿದ್ಯಾರ್ಥಿಗಳು ಸಂವಿಧಾನದ ಮೂಲ ಉದ್ದೇಶಗಳನ್ನು ಸಂಪೂರ್ಣವಾಗಿ ಗ್ರಹಿಸಿ, ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡಿಲ್ಲವೆಂದೇ ಅವರು ಹೇಳುತ್ತಾರೆ. ಸಂವಿಧಾನ ತಜ್ಞರು ಅವುಗಳನ್ನು ಸಮರ್ಪಕವಾಗಿ ಅರ್ಥೈಸಿಕೊಂಡಿದ್ದಾರೆ. ಆದಾಗ್ಯೂ, ಅನುಕೂಲಕರ ಸಂದರ್ಭಗಳಲ್ಲಿ ಅವರು ಅದನ್ನು ಎಲ್ಲರಿಗೂ ಅರ್ಥವಾಗುವಂತೆ ಹೇಳುತ್ತಾರೆ ಮತ್ತು ಪ್ರತಿಕೂಲಕರ ಪರಿಸ್ಥಿತಿಗಳಲ್ಲಿ ಅದನ್ನು ತಪ್ಪಾಗಿ ಅರ್ಥೈಸುತ್ತಾರೆ. ಹೀಗೆ ಸಾರ್ವಜನಿಕರನ್ನು ಗೊಂದಲಕ್ಕೆ ಒಳಪಡಿಸುತ್ತಾರೆ ಎಂದು ಭರತ್ ಜಂಗಮ್ ಅವರು ವಿವರಿಸುತ್ತಾರೆ. ತಮ್ಮ ಮಾತುಗಳಿಗೆ ಅವರು 2059(2002)ರ ಆಷಾಢ 18ರಂದು ನಡೆದ ಒಂದು ಘಟನೆಯನ್ನು ಉದಾಹರಣೆಯಾಗಿ ನೀಡುತ್ತಾರೆ.

ಅಂದಿನ ಪ್ರಧಾನಿ ಶೇರ್ ಬಹಾದೂರ್ ದ್ಯೂಬಾ ಅವರು ಅಧಿಕಾರದಲ್ಲಿರುವ ರಾಜನಿಗೆ/ಸರ್ಕಾರಕ್ಕೆ ಸಲಹೆ ನೀಡಲು ಸಂವಿಧಾನದ ಪರಿಚ್ಛೇದ 127ರಲ್ಲಿ ತಿಳಿಸಲಾಗಿರುವ ನಿಯಮಗಳಡಿ ಅವಕಾಶ ಮಾಡಿಕೊಳ್ಳುವುದನ್ನು ಶಿಫಾರಸು ಮಾಡಿದ್ದರು. ಈ ನಿಯಮಗಳಡಿ ಸಚಿವರುಗಳ ಹೊಸ ಸಮಿತಿಯೊಂದನ್ನು ರಚಿಸಲಾಯಿತು. ನಂತರ ಶೇರ್ ಬಹಾದೂರ್ ದ್ಯೂಬಾ ಅವರು ಅದೇ ನಿಯಮಗಳನ್ನು ವಿರೋಧಿಸಿದರು ಮತ್ತು ಬೀದಿ ಪ್ರತಿಭಟನೆಯಲ್ಲಿ ತೊಡಗಿಕೊಂಡರು. ತೀವ್ರ ವಿರೋಧಿ ಚಟುವಟಿಕೆಗಳನ್ನು ನಡೆಸಲಾಯಿತು. ಶೇರ್ ಬಹಾದೂರ್ ದ್ಯೂಬಾ ಅವರು 2061(2004) ಜೇಷ್ಠ 20 ರಂದು ಆವರ್ತನ ಪದ್ಧತಿಯಲ್ಲಿ ಮತ್ತೊಮ್ಮೆ ಪ್ರಧಾನಿಯಾಗುವಷ್ಟರಲ್ಲಿ ಇದೇ ಸಂವಿಧಾನದ ಪರಿಚ್ಛೇದ 127ರ ನಿಯಮಗಳಡಿ ಒದಗಿಸಲಾದ ಅವಕಾಶಗಳಿಂದಾಗಿ ಲೋಕೇಂದ್ರ ಬಹಾದುರ್ ಚಂದ್ ಮತ್ತು ಸೂರ್ಯ ಬಹಾದುರ್ ಥಪಾ ಅವರುಗಳು ಪ್ರಧಾನಮಂತ್ರಿಗಳಾಗಿದ್ದರು. ಪ್ರಸ್ತುತ ಈ ನಿಯಮವು ಶ್ರೀಮತಿ ಗಿರಿಜಾ ಪ್ರಸಾದ್ ಕೊಯಿರಾಲಾ ಅವರಿಗೆ ಅನ್ವಯವಾಗಿದೆ. ಇದರಂತೆಯೇ, ಸಂವಿಧಾನದ 35ನೇ ಪರಿಚ್ಛೇದದಲ್ಲಿ ವಿಧಿಸಲಾಗಿರುವ ಕಾರ್ಯನಿರ್ವಹಣಾ ಅಧಿಕಾರದ ನಿಯಮಗಳನ್ನೂ ಕೂಡಾ ತಪ್ಪಾಗಿ ಅರ್ಥೈಸಿಕೊಂಡು ಒಟ್ಟಾರೆಯಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಇದು ರಾಜಕೀಯ ಕುತಂತ್ರದ ವಿಷಯವಾಗಿದೆ. ಇಂದಿಗೂ ಕೂಡಾ ಸಂವಿಧಾನದ ವಿವಿಧ ನಿಯಮಗಳನ್ನು ಸ್ವಾರ್ಥಸಾಧನೆಗಳಾಗಿ ವಿವಿಧ ರೀತಿಗಳಲ್ಲಿ ಅರ್ಥೈಸಲಾಗುತ್ತಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಕೇವಲ ರಾಜಕೀಯ ವ್ಯಕ್ತಿಗಳು ಮಾತ್ರವಲ್ಲ, ಬುದ್ಧಿಜೀವಿಗಳೂ ಕೂಡಾ ಸಂವಿಧಾನದ ನಿಯಮಗಳನ್ನು ಕಾಲಕ್ಕೆ ತಕ್ಕಂತೆ ತಮ್ಮ ಅನುಕೂಲಗಳಿಗಾಗಿ ತಿರುಚಿ ಅರ್ಥೈಸುತ್ತಿದ್ದಾರೆ.

ಭರತ್ ಜಂಗಮ್ ಅವರು ಸಾಂವಿಧಾನಿಕ ಮತ್ತು ಕಾನೂನಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಕೆಲವು ಅಸುರಕ್ಷಿತ ಸಂದರ್ಭಗಳನ್ನು ಎದುರಿಸಬೇಕಾಯಿತು. ಅವುಗಳೆಲ್ಲವೂ ವಿವಾದಕ್ಕಾಗಿಯೇ ಉದ್ಭವವಾದವು. ಪಕ್ಷದೊಳಗಿನ ಅವರ ನ್ಯಾಯಪರ ಚಟುವಟಿಕೆಗಳನ್ನು ಸರಿಯಾಗಿ ವಿಮರ್ಶಿಸಲಾಗಿಲ್ಲ. ಆದರೂ ಅವರು ಕಾನೂನಾತ್ಮಕ ರೀತಿಯಲ್ಲಿ ದೇಶ, ಆಡಳಿತ ಮತ್ತು ಸಾರ್ವಜನಿಕರ ಕಲ್ಯಾಣಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಸಾಮಾನ್ಯವಾಗಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ತಮ್ಮ ಪಕ್ಷದ ಮತ್ತು ವೈಯಕ್ತಿಕ ಹಿತಾಸಕ್ತಿಗಳಲ್ಲಿ ತೋರುವಷ್ಟು ಉತ್ಸಾಹವನ್ನು ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ತೋರಿಸುವುದಿಲ್ಲ. ಹಾಗೆಯೇ, ಸಂಸದೀಯ ಪಿಂಚಣಿ ಮತ್ತು ಚುನಾವಣಾ ಅಭಿವೃದ್ಧಿ ನಿಧಿಯಂತಹ ಕಾರಣಗಳಿಂದಾಗಿ ಅವರು ಎತ್ತಿರುವ ಹಲವು ಕಾನೂನು ಸಮಸ್ಯೆಗಳು ಪಕ್ಷದ ಎಲ್ಲಾ ನಾಯಕರು ಮತ್ತು ಕಾರ್ಯಕರ್ತರನ್ನು ಅಸಮಾಧಾನಗೊಳಿಸಿವೆ. ಅವರು ಕೈಗೊಂಡ ಎಲ್ಲ ಕೆಲಸಗಳೂ ದೇಶದ ಸುಧಾರಣೆಗಾಗಿ, ಆಡಳಿತ ಸುಧಾರಣೆಗಾಗಿ ಮತ್ತು ಜನೋಪಯೋಗದ ಹೊಸ ತಾತ್ವಿಕ ದೃಷ್ಟಿಕೋನಗಳಿಂದ ಕೂಡಿದವು. "ಈ

ಕ್ರಿಯೆಗಾಗಿ ಯಾರೊಬ್ಬರ ಮುಕ್ತವಾದ ಟೀಕೆ ಅಥವಾ ಪ್ರಶಂಸೆಯನ್ನು ಸ್ವೀಕರಿಸಲು ನಾನು ಸಿದ್ಧನಾಗಿದ್ದೇನೆ" ಎಂದು ಭರತ್ ಜಂಗಮ್ ಅವರು ಹೇಳುತ್ತಾರೆ.

ಅವರು ಅನೇಕ ಉನ್ನತ ಅಧಿಕಾರಿಗಳ ವಿರುದ್ಧ ಅವರು ಹೊಂದಿರುವ ದುಪ್ಪಟ್ಟು ಐಷಾರಾಮಿ ಸೌಲಭ್ಯಗಳನ್ನು ಪ್ರಶ್ನಿಸಿ ಪ್ರಕರಣಗಳನ್ನು ದಾಖಲಿಸಿದ್ದರು. ಆ ಸಮಯದಲ್ಲಿ, ನ್ಯಾಯಾಧೀಶರುಗಳು ಕೂಡಾ ಅತ್ಯಂತ ಐಷಾರಾಮಿ ಸೌಲಭ್ಯಗಳನ್ನು ಹೊಂದಿದ್ದರು. ಅವರು ತಾವು ಪಡೆದ ಈ ದುಪ್ಪಟ್ಟು ಐಷಾರಾಮಿ ಸೌಲಭ್ಯಗಳಿಂದ ವಿನಾಯಿತಿಯನ್ನು ಹುಡುಕುತ್ತಿದ್ದರು!! ಆದ್ದರಿಂದ ಈ ದುಪ್ಪಟ್ಟು ಸೌಲಭ್ಯಗಳನ್ನು ನಿಲ್ಲಿಸಲು ಒಂದು ನಿರ್ಧಾರವನ್ನು ಮಾಡಲಾಯಿತು. ಕಾನೂನಾತ್ಮಕವಾಗಿ ಭರತ್ ಜಂಗಮ್ ಅವರು ಈ ವಿಷಯದ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದರು ಹಾಗೂ ಇದರಿಂದ ರಾಜ್ಯ ಖಜಾನೆಗೆ ಲಕ್ಷಗಟ್ಟಲೆ ಮೊತ್ತ ವಾರ್ಷಿಕ ಉಳಿತಾಯವಾಯಿತು ಮತ್ತು ದುಪ್ಪಟ್ಟು ಐಷಾರಾಮಿ ಸೌಲಭ್ಯಗಳನ್ನು ರದ್ದುಗೊಳಿಸಲಾಯಿತು. ಆದಾಗ್ಯೂ, ಇನ್ನೂ ಕೆಲವು ಉನ್ನತ ಅಧಿಕಾರಿಗಳು ನಾಚಿಕೆಯಿಲ್ಲದೆ ದುಪ್ಪಟ್ಟು ವೇತನ ಮತ್ತು ಸೌಲಭ್ಯಗಳನ್ನು ಪಡೆಯುತ್ತಲೇ ಇದ್ದಾರೆ. ಇದು ನಿಜವಾಗಲೂ ರಾಜ್ಯಕ್ಕೆ ಮಾಡುವ ಅನ್ಯಾಯವಾಗಿದೆ.

ಭರತ್ ಜಂಗಮ್ ಅವರ ಪ್ರಕಾರ ಸಾಂವಿಧಾನಿಕ ಸಭೆಯು ಸಂವಿಧಾನವನ್ನು ಘೋಷಿಸದಿದ್ದರೂ ರಿಟ್ ಅರ್ಜಿಯನ್ನು ದಾಖಲಿಸಲಾಗುವುದು ಎನ್ನುತ್ತಾರೆ. ಅವರು ರಿಟ್ ಅರ್ಜಿಯನ್ನು ಸಲ್ಲಿಸದೇ ಇದ್ದಲ್ಲಿ ಸಾಂವಿಧಾನಿಕ ಸಭೆಯು ಸಂವಿಧಾನವನ್ನು ಘೋಷಿಸದೇ ಇರಬಹುದು. ಅದು ಕ್ಯಾಬಿನೆಟ್ ವಿಸರ್ಜನೆಗೆ ದಾರಿ ಮಾಡಿಕೊಟ್ಟು, ಮರುಚುನಾವಣೆಗಳನ್ನು ನಡೆಸುವ ಮೂಲಕ ದೇಶದ ಆರ್ಥಿಕ ನಷ್ಟಕ್ಕೆ ದಾರಿಯಾಗುತ್ತದೆ. ನೇಪಾಳದಲ್ಲ ಪ್ರಸ್ತುತ ಸಂವಿಧಾನವನ್ನು ಹೊಂದಲು ಭರತ್ ಜಂಗಮ್ ಅವರ ರಿಟ್ ಅರ್ಜಿಯೇ ಕಾರಣ ಎಂದರೆ ತಪ್ಪಲ್ಲ. ಇಲ್ಲದಿದ್ದಲ್ಲಿ ಅನಿರ್ದಿಷ್ಟ ಕಾಲದವರೆಗೆ ದೇಶವು ರಾಜಕೀಯ ಪಕ್ಷಗಳ ಅಡಿಯಾಳಾಗಿ ಇರಬೇಕಾಗುತ್ತಿತ್ತು.

-----

## ರಾಜಕೀಯ

2030(1973)ರಲ್ಲಿ ನೇಪಾಳದಲ್ಲಿ ರಾಜಕೀಯ ಪ್ರಕ್ಷುಬ್ಧತೆಯನ್ನು ಹುಟ್ಟುಹಾಕಲು ಭರತ್ ಜಂಗಮರು ಸಾಹಿತ್ಯದಲ್ಲಿ ತೊಡಗಿಸಿಕೊಂಡು ಪಂಚಾಯತ್ ನಿಯಮಗಳ ವಿರುದ್ಧ ಹೋರಾಡಿದರು. ಈ ಕುರಿತು ಅವರು ಮುಂದಿನಂತೆ ಅಭಿಪ್ರಾಯಿಸುತ್ತಾರೆ. ಅವರು ನಿರ್ದಿಷ್ಟವಾಗಿ ಪಂಚಾಯತ್ ನಿಯಮಗಳನ್ನು ಮಾತ್ರವೇ ಉದ್ದೇಶವಾಗಿಟ್ಟುಕೊಂಡು ಹೋರಾಟ ನಡೆಸಲಿಲ್ಲ. ಆ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ರಾಜಕೀಯ ಪದ್ಧತಿಗಳು/ವಾತಾವರಣವು ಅವರಿಗೆ ತಮ್ಮ ಲೇಖನಿಯನ್ನು ಕೈಗೆತ್ತಿಕೊಳ್ಳಲು ಪ್ರೇರಣೆಯಾದವು. ಅವರು ತಮ್ಮ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದರು. ಬರವಣಿಗೆಯ ಮಾಧ್ಯಮದ ಮೂಲಕ ಅವರು ವಿರೋಧದ ತಂತ್ರಗಾರಿಕೆಯನ್ನು ರೂಪಿಸಿದರು ಮತ್ತು ಅವರ ಲೇಖನಿಯನ್ನೇ ಪ್ರಬಲ ಅಸ್ತ್ರವನ್ನಾಗಿ ಬಳಸಿದರು. ಲೇಖನಿಕ್ರಾಂತಿಯ ಹೋರಾಟದ ಮಾರ್ಗದಲ್ಲಿ ಅವರು ಭ್ರಷ್ಟಾಚಾರ ಮತ್ತು ಅಕ್ರಮಗಳ ವಿರುದ್ಧ ಮುನ್ನಡೆಯಲು ಸಾಹಿತ್ಯಿಕ ವಿಧಾನಗಳನ್ನು ಉಪಯೋಗಿಸಿಕೊಂಡರು. ಬಂದೂಕಿನ ಬ್ಯಾರಲ್ನಿಂದ ಹಾರಿದ ಗುಂಡು ದೇಹವನ್ನು ಘಾಸಿಗೊಳಿಸಿದರೆ, ವ್ಯಕ್ತಿಯು ಅಂಗವಿಕಲನಾಗುತ್ತಾನೆ. ಆದರೆ, ಪೆನ್ನಿನ ಮುಳ್ಳಿನಿಂದ ಹೊರಬಿದ್ದ ಹರಿತವಾದ ಪದವು ಮನುಷ್ಯರ ಆಲೋಚನೆಗಳು, ಮಾತು ಮತ್ತು ಕ್ರಿಯೆಗಳನ್ನು ಪರಿವರ್ತಿಸುತ್ತದೆ, ತನ್ಮೂಲಕ ಬದಲಾವಣೆಗೆ ದಾರಿ ಮಾಡಿಕೊಡುತ್ತದೆ. ಆದ್ದರಿಂದಲೇ ಒಂದು ಸಣ್ಣ ಲೇಖನಿಯು ಯಾವುದೇ ಶಕ್ತಿಶಾಲಿ ಆಯುಧಕ್ಕಿಂತಲೂ ಪ್ರಬಲವಾಗಿದೆ ಎಂದು ಹೇಳಲಾಗುತ್ತದೆ. ಭರತ್ ಜಂಗಮ್ ಅವರು ಇದನ್ನು ಚೆನ್ನಾಗಿ ಅರಿತಿದ್ದರು ಮತ್ತು ಅದನ್ನು ಸದುಪಯೋಗಪಡಿಸಿಕೊಂಡರು.

ಪ್ರಖ್ಯಾತ ರಾಜಕಾರಣಿಯಾದ ಶ್ರೀ ವಿಶ್ವೇಶ್ವರ ಪ್ರಸಾದ್ ಕೋಯ್ರಾಲರವರು ಭರತ್ ಜಂಗಮರ ಲೇಖನಿಯ ವೇಗ ಮತ್ತು ಶಕ್ತಿಯನ್ನು ಪ್ರಶಂಸಿಸುತ್ತಾ "ನಿಮ್ಮ ಕ್ಷೇತ್ರದಲ್ಲಿ ನೀವು ನಿಂತಿರುವ ಸ್ಥಳದಿಂದಲೇ ನಾನು ನಿಮ್ಮ ಸಹಾಯ ಮತ್ತು ಬೆಂಬಲವನ್ನು ಗಳಿಸಿದೆ" ಎಂದು ದಿನಾಂಕ: ಕಾರ್ತಿಕ 12, 2039(1982)ರಲ್ಲಿ ಭರತ್ ಜಂಗಮರಿಗೆ ಬರೆದ ಪತ್ರದಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಯಾರೋ ಒಬ್ಬರ ಬರಹ, ಯಾರದೋ ಮಾತುಗಳು, ನಡೆ–ನುಡಿಗಳಿಂದ ರಾಜಕೀಯ ಕ್ಷೇತ್ರದಲ್ಲಿ ಉಳಿದಿರುವ ಸಾಹಿತ್ಯ ಕೃತಿಗಳನ್ನು ವಿಮರ್ಶೆ ಮಾಡುತ್ತಾ ಭರತ್ ಜಂಗಮರು ತಮ್ಮ ಸಾಹಿತ್ಯ ಸೃಷ್ಟಿಯ ಮೌಲ್ಯವನ್ನು ನಿರ್ಣಯಿಸಿದರು. ಕೆಲವು ಮಾಜಿಮಂತ್ರಿಗಳು ಮತ್ತು ಸರ್ಕಾರಿ ಅಧಿಕಾರಿಗಳು ವಿವಿಧ ವೇದಿಕೆಗಳು ಮತ್ತು ಸಭೆಗಳಲ್ಲಿ ಇವರ ವಿಷಯದ ಕುರಿತು ಹಲವಾರು ರಚನಾತ್ಮಕ ಚರ್ಚೆಗಳಲ್ಲಿ ತೊಡಗಿದ್ದರು. ಸಮಾಜದ ವಿವಿಧ ವಲಯಗಳಲ್ಲಿ ನಡೆಯುವ ಇಂತಹ ಚರ್ಚೆಗಳ ವ್ಯಾಪ್ತಿಯು ದೇಶದ ಜವಾಬ್ದಾರಿಯುತ ವ್ಯಕ್ತಿಗಳ ಮೇಲೆ ಪರಿಣಾಮ ಬೀರುತ್ತದೆ.

ನೇಪಾಳದಲ್ಲಿ ಬಹುಪಕ್ಷಗಳ ಪ್ರಜಾಪ್ರಭುತ್ವವನ್ನು ಮರು ಸ್ಥಾಪಿಸಿದ ನಂತರ ನೇಪಾಳಿ ಕಾಂಗ್ರೆಸ್ ಪಕ್ಷವನ್ನು ಪ್ರಮುಖ ರಾಜಕೀಯ ಶಕ್ತಿಯನ್ನಾಗಿ ಮಾಡುವ ಗುರಿಯೊಂದಿಗೆ, ಗಣೇಶ್ ಮಾನ್ ಸಿಂಗ್ ರವರು ಸಮಾಜದ ವಿವಿಧ ಪ್ರಭಾವಿ ವ್ಯಕ್ತಿಗಳಿಗೆ ಪಕ್ಷದ ಸದಸ್ಯತ್ವವನ್ನು ನೀಡಲು ನಿರ್ಧರಿಸಿದರು. ಈ ನಿರ್ಧಾರದ ಅಡಿಯಲ್ಲಿ ಪರಶುರಾಮ್ ಚೌಧರಿ ಮತ್ತು ಅವರ ಬೆಂಬಲಿತ ವ್ಯಕ್ತಿಗಳು, ಕುವೆರ್ ಶರ್ಮಾ ಮತ್ತು ಅವರ ಬೆಂಬಲಿತ ವ್ಯಕ್ತಿಗಳು, ಹಾಗೆಯೇ 'ಸ್ವತಂತ್ರ ಚಿಂತನಾ ವೇದಿಕೆ'ಯೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳಿಗೆ ಸದಸ್ಯತ್ವವನ್ನು ನೀಡಲಾಯಿತು. ಈ ಹಿನ್ನೆಲೆಯಲ್ಲಿ 2047(1990)ರ ವೈಶಾಖ 26ನೇ ದಿನಾಂಕದಂದು ಭರತ್ ಜಂಗಮ್ ಅವರು ಪಡೆದ ಸದಸ್ಯತ್ವವು ಐತಿಹಾಸಿಕವಾಯಿತು. ಅವರು ಆ ಸದಸ್ಯತ್ವದ ಸ್ವೀಕೃತಿಯನ್ನು ಗಣೇಶ್ ಮಾನ್ ಸಿಂಗ್ ರವರ ಮ್ಯೂಸಿಯಂಗೆ ವರ್ಗಾಯಿಸಿದ್ದಾರೆ. ಸಂಪೂರ್ಣವಾಗಿ ಮುಕ್ತ ರಾಜಕೀಯ ವಾತಾವರಣ ಇರುವವರೆಗೆ, ಒಬ್ಬರು ತಮ್ಮ ಆಲೋಚನೆಗಳು ಮತ್ತು ದೃಷ್ಟಿಕೋನಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ಒಬ್ಬ ಬರಹಗಾರನಿಗೆ ಬದುಕಲು ಸ್ವಾತಂತ್ರ್ಯತದ ಅಗತ್ಯವಿದೆ. ಸಂಪೂರ್ಣ ಪ್ರಮಾಣದ ಪ್ರಜಾಪ್ರಭುತ್ವದಲ್ಲಿ ಮಾತ್ರ ಸಂಪೂರ್ಣ ಪ್ರಜಾಸತ್ತಾತ್ಮಕ ರಾಜಕೀಯ ವಾತಾವರಣವನ್ನು ಹೊಂದಲು ಸಾಧ್ಯವಿದೆ. ಹಾಗೂ ಈ ವಿಷಯದಲ್ಲಿ ಭರತ್ ಜಂಗಮ್ ಅವರು ಇದೇ ನಂಬಿಕೆಯೊಂದಿಗೆ ಆ ಸಮಯದಲ್ಲಿ ನೇಪಾಳಿ ಕಾಂಗ್ರೆಸ್ ಗೆ ಹತ್ತಿರವಾಗಿದ್ದರು.

ಭರತ್ ಜಂಗಮ್ ಅವರು ನೇಪಾಳಿ ಕಾಂಗ್ರೆಸ್ ಗೆ ಸೇರಿದ ನಂತರ, ಪಕ್ಷದ ಆಂತರಿಕ ಸ್ವಜನ ಪಕ್ಷಪಾತ ಮತ್ತು ಅವ್ಯವಸ್ಥೆಯ ಸಾಂಸ್ಥಿಕ ರಚನೆಯಿಂದ ಅತೃಪ್ತರಾದರು. ಇದೇ ಅತೃಪ್ತಿಯಿಂದಾಗಿ ಅವರು 'ಜನರಲ್ ನಾಲೆಡ್ಜ್ ಆಫ್ ನೇಪಾಳಿ ಕಾಂಗ್ರೆಸ್' ಎಂಬ ಪುಸ್ತಕವನ್ನು ಬರೆದರು. ರಾಜಕೀಯ ಪಕ್ಷಗಳು ಯಾರಿಗೆ ಮತ್ತು ಏಕೆ ಸಹಕರಿಸುತ್ತವೆ ಎಂಬುದರ ಕುರಿತು ನಿಖರವಾದ ಜ್ಞಾನದ ಕೊರತೆಯಿಂದಾಗಿ, ಗುಂಪುಗಾರಿಕೆಯ ತಂತ್ರಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ ಎಂದು ಅವರು ಅಭಿಪ್ರಾಯಿಸುತ್ತಾರೆ. ಈ ಪುಸ್ತಕವನ್ನು ಬರೆದ ನಂತರ ಅವರು ಪಕ್ಷದ ಕಾರ್ಯಕರ್ತರಿಗೆ ಹೇಗೆ ಪಕ್ಷವನ್ನು ಸೇರಬೇಕು ಮತ್ತು

ಜನರಿಗೆ ಹೇಗೆ ಉತ್ತರದಾಯಿಗಳಾಗಿರಬೇಕು ಎಂಬುದರ ಕುರಿತು ಶಿಕ್ಷಣ ನೀಡಲು ವಿವಿಧ ಜಿಲ್ಲೆಗಳಿಗೆ ಪ್ರವಾಸ ಮಾಡಿದ್ದಾರೆ. ಅವರು ವೈಯಕ್ತಿಕವಾಗಿ ಅನೇಕ ವ್ಯಕ್ತಿಗಳನ್ನು ಪಕ್ಷಕ್ಕೆ ಸೇರಲು ಅನುಕೂಲ ಮಾಡಿಕೊಟ್ಟಿದ್ದಾರೆ. ಆದರೆ, ಫಲಿತಾಂಶವು ಮಾತ್ರ ನಿರಾಶಾದಾಯಕವಾಗಿತ್ತು. ಏಕೆಂದರೆ ಪಕ್ಷದೊಳಗಿನ ಹೆಚ್ಚಿನ ಸಕ್ರಿಯ ನಾಯಕರು ಮತ್ತು ಕಾರ್ಯಕರ್ತರೆಲ್ಲರೂ ಸ್ವಾರ್ಥಿಗಳು ಮತ್ತು ಅವಕಾಶವಾದಿಗಳಾಗಿದ್ದರು. ಪಕ್ಷದ ಕಾರ್ಯಾಚರಣೆಗೆ ಹಣದ ಆವಶ್ಯಕತೆ ಇತ್ತು, ಆದರೆ ಪಕ್ಷಕ್ಕೆ ಸೇರುವ ವ್ಯಕ್ತಿಗಳು ಪಕ್ಷದ ಕಾರ್ಯಗಳಲ್ಲಿ ಒಳಗೊಳ್ಳುವಿಕೆಗಿಂತ ಹೆಚ್ಚಾಗಿ ಅಧಿಕಾರ ಮತ್ತು ಹಣವನ್ನು ಬಯಸುತ್ತಿದ್ದರು. ಅಂತಹ ಪ್ರವೃತ್ತಿಗಳನ್ನು ಗಮನಿಸಿದ ಭರತ್ ಜಂಗಮ್ ಅವರು ಭ್ರಮನಿರಸನಗೊಂಡರು ಮತ್ತು ಅದರ ಬಗ್ಗೆ ಪ್ರತಿಕ್ರಿಯಿಸಲು ನಿರ್ಧರಿಸಿದರು.

ಗಿರಿಜಾ ಪ್ರಸಾದ್ ಕೊಯಿರಾಲಾ ಅವರಂತಹ ಪಕ್ಷದ ಹಿರಿಯ ನಾಯಕರ ಭ್ರಷ್ಟ ಚಟುವಟಿಕೆಗಳನ್ನು ಅವರು ಸಾರ್ವಜನಿಕವಾಗಿ ಟೀಕಿಸಿದ್ದರು. ಆದರೂ ಕೆಲವರು ಭರತ್ ಜಂಗಮ್ ಅವರು ಅರಮನೆಗೆ ಆಪ್ತರಾಗಿದ್ದಾರೆಂದು ಆರೋಪಿಸಿದರು. ಗಿರಿಜಾ ಪ್ರಸಾದ್ ಕೊಯಿರಾಲಾ ಅವರ ಭ್ರಷ್ಟಾಚಾರವನ್ನು ಟೀಕಿಸಿದಾಗಲೂ ಕೆಲವು ಬುದ್ಧಿಜೀವಿಗಳು ತಮಗೆ ಪ್ರಜಾಪ್ರಭುತ್ವ ವಿರೋಧಿ ಎಂಬ ಹಣೆಪಟ್ಟಿಯನ್ನು ಹಚ್ಚದಿರುವುದರ ಕುರಿತು ಅವರು ಆಶ್ಚರ್ಯಚಕಿತರಾಗುತ್ತಾರೆ. ಆದಾಗ್ಯೂ, ಅಂತಹ ಆರೋಪಗಳನ್ನು ಎದುರಿಸುವುದು ಅವರಿಗೇನೂ ಅಸಹಜವಾಗಿರಲಿಲ್ಲ. ಇದರಿಂದ ಸ್ಪಷ್ಟವಾಗುವ ವಿಷಯವೇನೆಂದರೆ, ಪ್ರಸಕ್ತ ಚಟುವಟಿಕೆಗಳನ್ನು ಹಿಂದಿನ ಚಟುವಟಿಕೆಗಳಿಗೆ ಹೋಲಿಸಿ ವಿಚಾರಣೆ ಮಾಡಿದರೆ ಅರಮನೆಯ ಹೊರತಾಗಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳೇ ಹೆಚ್ಚಿನ ಅಪಾಯವನ್ನುಂಟುಮಾಡುತ್ತಾರೆ. ಅರಮನೆಯ ಸಾಂಗತ್ಯದ ಬಗ್ಗೆ ನಿಜವಾದ ಕಾಳಜಿ ಇದ್ದವರು ಅದನ್ನು ಹೊರಗಿನಿಂದ ಗಮನಿಸಬೇಕು ಮತ್ತು ರಾಜಪ್ರಭುತ್ವದ ಮೇಲಿನ ನಂಬಿಕೆಯನ್ನಾಧರಿಸಿ ಮಂತ್ರಿ ಅಥವಾ ಪ್ರಧಾನಮಂತ್ರಿಯಾಗಿರುವ ರಾಜಕೀಯ ನಾಯಕರ ಚಟುವಟಿಕೆಗಳನ್ನು ಪರಿಶೀಲಿಸಬೇಕು. ವಾಸ್ತವವೆಂದರೆ, ಇಂದಿನ ನೇಪಾಳದ ರಾಜಕೀಯದಲ್ಲಿ ನಿಜವಾದ ನಾಯಕರು ಯಾರೂ ಇಲ್ಲವೆಂಬುದು ದೇಶದ ದುರದೃಷ್ಟವಾಗಿದೆ ಎಂದು ಭರತ್ ಜಂಗಮ್ ಅವರು ಹೇಳುತ್ತಾರೆ.

ನೇಪಾಳದಂತಹ ದೇಶಗಳಲ್ಲಿ ನಿಜವಾದ, ಪ್ರಾಮಾಣಿಕ ಮತ್ತು ರಾಷ್ಟ್ರೀಯತಾವಾದಿ ವ್ಯಕ್ತಿಗಳು ಮಾತ್ರ ನಾಯಕತ್ವದ ಸ್ಥಾನಗಳನ್ನು ತಲುಪುವ ರಾಜಕೀಯ ವ್ಯವಸ್ಥೆಯೊಂದನ್ನು ಜಾರಿಗೆ ತಂದರೂ, ಅದು ಇನ್ನಷ್ಟು ವಿಫಲಗೊಳ್ಳುತ್ತದೆ ಎಂದು ಭರತ್ ಜಂಗಮ್ ಅವರು ಅಭಿಪ್ರಾಯಿಸುತ್ತಾರೆ. ಅವರ ಪ್ರಕಾರ ಅಭಿವೃದ್ಧಿಯಾಗದ ಮತ್ತು ಅಭಿವೃದ್ಧಿಯಾಗುತ್ತಿರುವ ದೇಶಗಳಲ್ಲಿ ರಾಜಕೀಯ ವ್ಯವಸ್ಥೆಗಳು ಸಾಮಾನ್ಯವಾಗಿ ಮೂರ್ಖ ಮತ್ತು ಅವಕಾಶವಾದಿ ಜನರಿಂದ ಸವಾಲುಗಳನ್ನು ಎದುರಿಸುತ್ತವೆ. ಉದಾಹರಣೆಗೆ ಭಾರತ ದೇಶದ ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಇರುವ ರಾಜಕೀಯ ಅಸ್ಥಿರತೆಯನ್ನು ಗಮನಿಸಬಹುದು. ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲದಿದ್ದರೆ, ದೇಶ ಮತ್ತು ಅದರ ಜನರು ಪ್ರಗತಿಯನ್ನು ಸಾಧಿಸಲಾಗದು. ಸರ್ಕಾರದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ – ಈ ಮೂರೂ ಶಾಖೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು. ಸಂಸದೀಯ ಚುನಾವಣೆಗಳು ಸಂಪೂರ್ಣವಾಗಿ ಪಾರದರ್ಶಕವೂ, ನ್ಯಾಯಯುತವೂ ಆಗಿರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ರಾಜಕೀಯ ಪಕ್ಷಗಳು ಜಿಲ್ಲೆ, ಪುರಸಭೆ ಮತ್ತು ಜಿಲ್ಲಾ ಪ್ರದೇಶಗಳನ್ನೂ ಒಳಗೊಂಡಂತೆ ಎಲ್ಲಾ ಹಂತದ ಚುನಾವಣೆಗಳಲ್ಲೂ ದೇಶದ ಪ್ರತಿಯೊಬ್ಬ ಪ್ರಜೆಯೂ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಏಕೆಂದರೆ ಅಭಿವೃದ್ಧಿಯು ಮುಖ್ಯವಾಗಿ ಈ ಪ್ರದೇಶಗಳಲ್ಲೇ ಆಗುತ್ತದೆ. ರಾಜಕೀಯ ವಿವಾದಗಳು ಪ್ರಗತಿಗೆ ಅಡ್ಡಿಯಾಗಬಹುದು.

'ರಾತೋ ಘಂ' ಕಾದಂಬರಿಯಲ್ಲಿ ಭರತ್ ಜಂಗಮರು ರಾಜಕೀಯವನ್ನು ಚಿತ್ರಿಸಿದ್ದಾರೆ. ಕಮ್ಯೂನಿಸ್ಟ್ ರಾಜಕೀಯವು ಯಾವಾಗಲೂ ಎಲ್ಲೆಡೆಯೂ ಯಶಸ್ವಿಯಾಗುವುದು ಖಾತರಿಯಿಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ. ಇದು ಅನಿರ್ದಿಷ್ಟವಾಗಿ ಉಳಿಯುವ ವ್ಯವಸ್ಥೆಯಲ್ಲ. ಕೊನೆಯಲ್ಲಿ ಎಲ್ಲರೂ ಪ್ರಜಾಪ್ರಭುತ್ವ ವ್ಯವಸ್ಥೆಯ ಕಾರ್ಯಸಾಧ್ಯತೆಯನ್ನೇ ನಂಬುತ್ತಾರೆ. ರಷ್ಯಾ ಮತ್ತು ಚೀನಾ ದೇಶಗಳ ಕಮ್ಯೂನಿಸ್ಟ್ ರಾಜಕೀಯದಲ್ಲಿ ಜನರ ಶಿಸ್ತು ಮತ್ತು ಅಭಿವೃದ್ಧಿಯನ್ನು ಜಗತ್ತು ನೋಡಿದೆ. ಆದರೆ ಅದೇ ದೇಶಗಳಲ್ಲಿ ಒಂದು ನಿರ್ದಿಷ್ಟ ಅವಧಿಯ ನಂತರ ಪ್ರಜಾಪ್ರಭುತ್ವದ ಜಾರಿಗಾಗಿ ಹೇಗೆ ಹೋರಾಡಿದ್ದಾರೆ ಅಥವಾ ಹೋರಾಟವನ್ನು ಪ್ರಾರಂಭಿಸಿದ್ದಾರೆ ಎನ್ನುವುದನ್ನು ಜನರು ಅನುಭವಿಸಿದ್ದರೆ.

ನೇಪಾಳದಲ್ಲಿನ ರಾಜಕೀಯ ಅಸ್ಥಿರತೆಯ ಕುರಿತು ಈ ರಾಜಕೀಯ ಬಿಕ್ಕಟ್ಟಿನ ಪರಿಹಾರವು ನೇಪಾಳವನ್ನು ಬಾಧಿಸಿರುವ ಅನಕ್ಷರತೆ ಮತ್ತು ಬಡತನದ ಪರಿಣಾಮಗಳಿಂದ ನಡೆಸಲ್ಪಡುವ, ವಿದೇಶೀ ಭೂಮಿಯಲ್ಲಿನ ರಾಜಕೀಯ ಸಿದ್ಧಾಂತಗಳ ಮೂಲಭೂತ ತತ್ವಗಳಿಂದ ರೂಪುಗೊಂಡ ರಾಜಕೀಯ ವ್ಯಕ್ತಿಗಳ(ನಟರ) ನಡುವಿನ ಒಮ್ಮತ ಮತ್ತು ಸಹಯೋಗದಲ್ಲಿದೆ ಎಂದು ಭರತ್ ಜಂಗಮ್ ಅವರು ತಿಳಿಸುತ್ತಾರೆ. ಆಡಳಿತ ವ್ಯವಸ್ಥೆಯಲ್ಲಿ ಬಂಡಾಯಗಾರರನ್ನು

ತೊಡಗಿಸಿಕೊಳ್ಳುವುದೂ ಕೂಡಾ ಪ್ರಸಕ್ತ ರಾಜಕೀಯ ಬಿಕ್ಕಟ್ಟನ್ನು ನಿವಾರಿಸಲು ಸಮರ್ಥವಾಗಿ ದಾರಿ ಮಾಡಿಕೊಡಬಹುದು. ಎಲ್ಲಾ ರಾಜಕೀಯ ಪಕ್ಷಗಳು ರಾಷ್ಟ್ರೀಯ ತತ್ವಗಳ ಆಧಾರದ ಮೇಲೆ ಪ್ರಾಮಾಣಿಕತೆಯಿಂದ ಒಮ್ಮತವಾಗುವವರೆಗೆ, ದೇಶದ ಸಮಸ್ಯೆಗಳು ಬಗೆಹರಿಯಲಾರವು ಎಂದು ಅವರು ಅಭಿಪ್ರಾಯಿಸುತ್ತಾರೆ.

-----

# ಆರ್ಥಿಕತೆ ಮತ್ತು ಬ್ಯಾಂಕುಗಳು

ಭರತ್ ಜಂಗಮ್ ಅವರ ಪ್ರಯತ್ನಗಳು ಅವರ ರಾಜ್ಯದ ಖಜಾನೆಯಲ್ಲಿ ನೂರಾರು ಮಿಲಿಯನ್ ವಾರ್ಷಿಕ ಉಳಿತಾಯಕ್ಕೆ ಕಾರಣವಾಗಿವೆ. ಅವರ ಪ್ರಕಾರ ಸಂಸತ್ತಿನ ಪಿಂಚಣಿ ಮತ್ತು ಚುನಾವಣಾ ಪ್ರದೇಶಾಭಿವೃದ್ಧಿ ನಿಧಿಯನ್ನು ಮಾತ್ರ ಮೊಟಕುಗೊಳಿಸಿದರೂ, ರಾಜ್ಯದ ಖಜಾನೆಯಲ್ಲಿ ವಾರ್ಷಿಕವಾಗಿ ರೂ. 300 ಮಿಲಿಯನ್‌ಗಿಂತಲೂ ಅಧಿಕ ಹಣ ಉಳಿತಾಯವಾಗುತ್ತದೆ. ಇಂತಹ ಅನೇಕ ಸೋರಿಕೆಗಳು ಇವೆ. ಆದಾಗ್ಯೂ ಇಲ್ಲಿ ಸಂಪೂರ್ಣ ವಿವರಣೆಯನ್ನು ನೀಡಲಾಗುವುದಿಲ್ಲ. ಮೂಲಭೂತವಾಗಿ ನೋಡಿದರೆ, ರಾಜಕೀಯ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ದೇಶದ ಆಸ್ತಿ ಮತ್ತು ಖಜಾನೆ ಹಣವನ್ನು ಲೂಟಿ ಹೊಡೆದು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಈ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲೇಬೇಕಾದ್ದು ಅತ್ಯವಶ್ಯಕ.

ದೇಶದಲ್ಲಿ ಆರ್ಥಿಕ ಸುಧಾರಣೆಗಳನ್ನು ತರಲು ಖಾಸಗೀಕರಣ ಮತ್ತು ಆರ್ಥಿಕ ವಿಮೋಚನೆ ನೀತಿಗಳನ್ನು ಜಾರಿಗೆ ತರುವ ಕುರಿತು ಭರತ್ ಜಂಗಮ್ ಅವರ ದೃಷ್ಟಿಕೋನವೇ ವಿಭಿನ್ನವಾಗಿದೆ. ಯಾವುದೇ ನೀತಿಯೂ ಮೂಲದಲ್ಲಿ ಸರಿಯಾಗಿರುವುದಿಲ್ಲ. ಆದರೆ ಅದರ ಅನುಷ್ಠಾನದ ರೀತಿಯು ಅದರ ಯಶಸ್ಸು ಅಥವಾ ವೈಫಲ್ಯಗಳನ್ನು ನಿರ್ಧರಿಸುತ್ತದೆ. ಖಾಸಗೀಕರಣ ಮತ್ತು ಆರ್ಥಿಕ ಉದಾರೀಕರಣ ನೀತಿಗಳನ್ನು ಜಾರಿಗೊಳಿಸುವ ಮೂಲಕ, ರಾಜಕೀಯ ನಾಯಕರು ರಾಷ್ಟ್ರೀಯ ಸ್ವತ್ತುಗಳನ್ನು ದುರ್ಬಲಗೊಳಿಸುವ ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳುವ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಉದಾಹರಣೆಗೆ ರಾಜ್ಯದಿಂದ ನಿರ್ವಹಿಸಲ್ಪಡುವ ಕಾರ್ಖಾನೆಗಳು, ಕಂಪೆನಿಗಳು ಮತ್ತು ಸಂಸ್ಥೆಗಳನ್ನು ತೀರಾ ಕಡಿಮೆ ಬೆಲೆಯಲ್ಲಿ ಖಾಸಗಿ ವಲಯಕ್ಕೆ ವರ್ಗಾಯಿಸಲಾಗಿದೆ. ಇದು ಕಮಿಷನ್‌ಗಳನ್ನು ಪಡೆಯುವ ರಾಜಕೀಯ ಪಕ್ಷದ ನಾಯಕರಿಗೆ ಲಾಭದಾಯಕವಾಗಿದೆ. ಹಾಗೆಯೇ, ಕೃಷಿ ಯಂತ್ರೋಪಕರಣಗಳ ಕಾರ್ಖಾನೆಗಳು, ಟೀ ಕಾರ್ಪೊರೇಷನ್‌ಗಳು, ಸೆಣಬು ಗಿರಣಿಗಳು ಮತ್ತು ಇತರ ಅನೇಕ ಕಂಪನಿಗಳನ್ನು ಲಾಭದ ಉದ್ದೇಶದಿಂದ ವ್ಯಾಪಾರಿಗಳಿಗೆ ಮಾರಾಟ ಮಾಡಲಾಗಿದೆ. ಆದರೆ ಈ ನೀತಿಯು ರಾಜಕೀಯ ಮುಖಂಡರು ಮತ್ತು ಕಾರ್ಯಕರ್ತರಿಗೆ ಮಾತ್ರ ಲಾಭವನ್ನುಂಟುಮಾಡಿದ್ದು, ದೇಶಕ್ಕೆ, ಜನರಿಗೆ ಅಥವಾ ರಾಜ್ಯದ ಖಜಾನೆಗೆ ತೀವ್ರ ನಷ್ಟವನ್ನುಂಟುಮಾಡಿದೆ ಎಂದು ಅವರು ಸ್ಪಷ್ಟವಾಗಿ ವಿವರಿಸುತ್ತಾರೆ.

ಆರ್ಥಿಕ ಉದಾರೀಕರಣದ ಅಡಿಯಲ್ಲಿ ದೇಶದಲ್ಲಿನ ವಿದೇಶಿ ಹೂಡಿಕೆಯ ಕುರಿತು ನೋಡುವುದಾದರೆ, ಕಂಪನಿಗಳನ್ನು ಸ್ಥಾಪಿಸಲು ಉದಾರೀಕರಣದ ನೀತಿಯನ್ನು ಅಳವಡಿಸಿಕೊಂಡಿದ್ದರ ಪರಿಣಾಮವಾಗಿ ದೇಶದ ಸಾಮಾನ್ಯ ಪ್ರಜೆಗಳನ್ನು ಶೋಷಿಸುವ ಮತ್ತು ಕೇವಲ ಹಣಗಳಿಕೆಯೊಂದನ್ನೇ ಪ್ರಧಾನವಾಗಿಸಿಕೊಂಡ ಅಕ್ರಮ ಮದ್ಯ, ಸಾರಾಯಿ ಮತ್ತು ಬಿಯರ್ ಕಾರ್ಖಾನೆಗಳು ಮತ್ತು ಕ್ಯಾಸಿನೋಗಳಂತಹ ದುಷ್ಕೃತ್ಯಗಳನ್ನು ಪ್ರೇರೇಪಿಸುವ ಕೈಗಾರಿಕೆಗಳು ಮತ್ತು ವ್ಯವಹಾರಗಳು ಆರಂಭಗೊಂಡವು. ನೇಪಾಳವು ದೇಶಕ್ಕೆ ಅದರ ಅಭಿವೃದ್ಧಿ ಮತ್ತು ಆರ್ಥಿಕ ಸುಧಾರಣೆಗೆ ಕೊಡುಗೆ ನೀಡುವ ಯಾವುದೇ ಘನ ಕಂಪನಿಯನ್ನು ಹೊಂದಿಲ್ಲ.

ನೇಪಾಳದ ಉದ್ಯಮ ವಲಯದಲ್ಲಿ 'ಗ್ರೂಪ್ ಆಫ್ ಇಂಡಸ್ಟ್ರೀಸ್' ಸಾಕಷ್ಟು ಅಭಿವೃದ್ಧಿಗೊಂಡಿದೆ. ಬ್ಯಾಂಕುಗಳನ್ನು ಸ್ವಾಧೀನಪಡಿಸಿಕೊಳ್ಳುವ ಗುರಿಯನ್ನು ಹೊಂದಿರುವ ನೀತಿಗಳೊಂದಿಗೆ ಕೈಗಾರಿಕೆಗಳ ಗುಂಪು ಹೊರಹೊಮ್ಮಿದೆ. ಚೌಧರಿ, ಖೇತಾನ್, ಅಮಾತ್ಯ ಮತ್ತು ಜ್ಯೋತಿಗಳಂತಹ ಸಮೂಹ ಸಂಸ್ಥೆಗಳೊಂದಿಗೆ ದುಗರ್ ಮತ್ತು ಗೋಲ್ಚಾ ಸಂಸ್ಥೆಗಳಂತಹ ಕಂಪನಿಗಳು ಕೂಡಾ ಗಮನಾರ್ಹ ಸಾಧನೆಗಳನ್ನು ಮಾಡಿವೆ. ಭಾರತಮೂಲದ ಮಾರ್ವಾಡಿ ಕಂಪನಿಗಳು ಲಾಭ ಗಳಿಸುವ ವ್ಯವಹಾರಗಳಲ್ಲಿ ತೊಡಗಿಕೊಂಡಿವೆ. ಬ್ಯಾಂಕ್‌ಗಳು ನೀಡುವ ಸಾಲಕ್ಕಾಗಿ ದೊಡ್ಡ ದೊಡ್ಡ ಹೊಟೇಲ್‌ಗಳನ್ನು ತೆರೆಯಲಾಗಿದೆ. ವ್ಯಾಪಾರೋದ್ಯಮಿಗಳು ತುಂಬಾ ಪ್ರಭಾವಶಾಲಿಗಳಾಗಿದ್ದು, ಅವರು ಯಾವುದೇ ಉದ್ಯಮದ ಕಾರ್ಯಾಚರಣೆಗಳನ್ನು ಕೌಶಲ್ಯದಿಂದ ನಿರ್ವಹಿಸಬಹುದು, ವ್ಯಾಪಾರ ವೈಫಲ್ಯಗಳನ್ನು ಉಂಟುಮಾಡಬಹುದು ಮತ್ತು ಬ್ಯಾಂಕುಗಳನ್ನು ಬಿಕ್ಕಟ್ಟಿಗೆ ಸಿಲುಕಿಸಬಹುದು. ಆದ್ದರಿಂದ, ಈ ಪ್ರಮುಖ ಕೈಗಾರಿಕೋದ್ಯಮಿಗಳು ನೇಪಾಳದ ಆರ್ಥಿಕತೆಯನ್ನು ಮೀರಿಸುತ್ತಿದ್ದಾರೆ.

ಒಂದು ಕಂಪನಿಯು ಇನ್ನೊಂದು ಕಂಪನಿಯನ್ನು ತೆರೆದ ನಂತರ ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಳ್ಳುವ ಪದ್ಧತಿಯನ್ನು ಬ್ಯಾಂಕುಗಳನ್ನು ಸ್ವಾಧೀನಪಡಿಸಿಕೊಳ್ಳುವ ನೀತಿ ಎನ್ನಲಾಗುವುದು. ಮೊದಲು ಒಂದು ಕಂಪನಿಯು ಪಾವತಿಸಿದ ಬಡ್ಡಿಯನ್ನು, ನಂತರದ ಕಂಪನಿಯು ಬ್ಯಾಂಕಿನಿಂದ ಪಡೆದ ಸಾಲವನ್ನು ಮರುಪಾವತಿಸಲು ಬಳಸುತ್ತದೆ. ಇಂತಹ ನೀತಿಯನ್ನು ಗಮನಿಸಲಾಗಿದ್ದು, ಕೈಗಾರಿಕೆಗಳ ಸಮೂಹವು ಅದನ್ನು ಅಳವಡಿಸಿಕೊಳ್ಳುತ್ತಿರುವುದು ಕಂಡುಬಂದಿದೆ. ನೇಪಾಳ ಬ್ಯಾಂಕ್ ಲಿಮಿಟೆಡ್ ಮತ್ತು ರಾಷ್ಟ್ರೀಯ ವಾಣಿಜ್ಯ ಬ್ಯಾಂಕ್‌ಗಳಂತಹ ಕಂಪನಿಗಳಲ್ಲಿ ಕೇವಲ 50 ಬಿಲಿಯನ್ ರೂಪಾಯಿಗಳಷ್ಟನ್ನು

ಮಾತ್ರ ಹೂಡಿಕೆ ಮಾಡಲಾಗಿದೆ. 2057(2000)ರಲ್ಲಿ ನೇಪಾಳ ರಾಷ್ಟ್ರೀಯ ಬ್ಯಾಂಕ್ ಕೆ.ಪಿ. ಆಯಿಲ್ ಕಂಪನಿಯ ಎರಡು ಬ್ಯಾಂಕುಗಳಿಂದ ಉಂಟಾದ ನಷ್ಟದ ಬಗ್ಗೆ ವರದಿಯನ್ನು ಸಂಗ್ರಹಿಸಲು ಆರಂಭಿಸಿತು. ಈ ಬ್ಯಾಂಕುಗಳು ಒಟ್ಟು 13 ಬಿಲಿಯನ್ ರೂಪಾಯಿಗಳ ವಸೂಲಾಗದ ಸಾಲದಲ್ಲಿವೆ ಎಂದು ವರದಿ ಮಂಡಿಸಿತ್ತು. ಸಾಲದ ಸುಳಿಗೆ ಸಿಕ್ಕಿರುವ ಈ ಕಂಪನಿಗಳ ಮಾಲೀಕರು ನೇಪಾಳದ ಪ್ರಸಿದ್ಧ ಕೈಗಾರಿಕೋದ್ಯಮಿಗಳಾಗಿದ್ದರು!!! ಹಾಗಾದರೆ, ಈ ಬ್ಯಾಂಕುಗಳನ್ನು ಸ್ವಾಧೀನಪಡಿಸಿಕೊಳ್ಳುವ ಈ ನೀತಿ ಏನು? ನೇಪಾಳಿಗಳ ಜೀವನವನ್ನು ಉನ್ನತೀಕರಿಸಲು ಸ್ಥಾಪಿಸಲಾದ ಈ ಬ್ಯಾಂಕುಗಳು ಹಾಡಹಗಲಿನಲ್ಲೇ ಲೂಟಿಯಾಗುತ್ತಿವೆ.

ನೇಪಾಳದಲ್ಲಿ ಇತ್ತೀಚೆಗೆ ಖಾಸಗಿ ವಲಯದಲ್ಲಿ ಬ್ಯಾಂಕುಗಳನ್ನು ತೆರೆಯುವ ಪ್ರವೃತ್ತಿಯು ಹೆಚ್ಚಾಗುತ್ತಿದೆ. ಅಲ್ಲಿ ಸರ್ಕಾರಿ ಬ್ಯಾಂಕುಗಳನ್ನು ಖಾಸಗಿ ಬ್ಯಾಂಕುಗಳು ಬದಲಾಯಿಸುತ್ತಿವೆ. ನಿಯಮಾವಳಿಗಳ ಜಾರಿಯ ಕೊರತೆಯಿಂದಾಗಿ ಬ್ಯಾಂಕ್ ಮಾಫಿಯಾಗಳು ಹುಟ್ಟಿಕೊಂಡಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಕುಸಿಯುತ್ತಿರುವಾಗಲೇ ಖಾಸಗಿ ವಲಯದ ಬ್ಯಾಂಕುಗಳು ಅಭಿವೃದ್ಧಿ ಹೊಂದುತ್ತಿವೆ. ಹೀಗೆ ಆಭಿವೃದ್ಧಿ ಹೊಂದುತ್ತಿರುವ ಈ ಬ್ಯಾಂಕುಗಳು ಸಾರ್ವಜನಿಕ ಉಳಿತಾಯದಿಂದ ಸಂಗ್ರಹಿಸಿದ ಮೊತ್ತಗಳನ್ನು ಮರುಪಾವತಿಯಾಗದ ಸಾಲಗಳಲ್ಲಿ ಹೂಡಿಕೆ ಮಾಡಿದ ನಂತರ ಬ್ಯಾಂಕುಗಳನ್ನು ದಿವಾಳಿ ಎಂದು ಘೋಷಿಸುವಂತಹ ಯೋಜನೆಗಳನ್ನು ಪ್ರಾರಂಭಿಸಿವೆ. ಇನ್ನೊಂದೆಡೆ ಕಾರ್ಖಾನೆಗಳು, ವ್ಯವಹಾರಗಳು ಮತ್ತು ಉದ್ಯಮಗಳಂತಹ ಕೈಗಾರಿಕೆಗಳಲ್ಲಿ ಬೆಳವಣಿಗೆ ಇದ್ದರೆ ಮಾತ್ರವೇ ದೇಶದ ಆರ್ಥಿಕತೆಯು ಸುಧಾರಣೆಯಾಗಬಹುದು. ಬ್ಯಾಂಕುಗಳ ತೆರೆಯುವಿಕೆ ಮತ್ತು ಅಂತಹ ಬ್ಯಾಂಕುಗಳಲ್ಲಿ ದ್ರವ್ಯದ ಹೆಚ್ಚಳವು ಆರ್ಥಿಕ ವ್ಯತ್ಯಾಸದ ಹೆಚ್ಚಳವನ್ನು ಸೂಚಿಸುತ್ತವೆ.

ದೇಶದ ಆರ್ಥಿಕತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಸಶಕ್ತಗೊಳಿಸಬೇಕಾದ ನೀತಿಗಳ ಕುರಿತು ವಿವರಿಸುತಾ ಭರತ್ ಜಂಗಮ್ ಅವರು ಪ್ರಸ್ತುತ ದೇಶದ ಆರ್ಥಿಕತೆಯು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿದೆ ಎನ್ನುತ್ತಾರೆ. ಮುಂದುವರಿದು, ದೇಶದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೆಲವು ಸಮುದಾಯಗಳು ಮತ್ತು ವ್ಯಕ್ತಿಗಳಿಗೆ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿವೆ, ಆದರೆ ಹೆಚ್ಚಿನ ಸಮುದಾಯಗಳು ಆರ್ಥಿಕ ಕೊರತೆಯಿಂದಾಗಿ ಹೋರಾಡುತ್ತಿವೆ. ಈ ಆರ್ಥಿಕ ಬಿಕ್ಕಟ್ಟನ್ನು ತಕ್ಷಣವೇ ನಿಯಂತ್ರಿಸದಿದ್ದರೆ, ದೇಶದ ಎಲ್ಲಾ ವಲಯಗಳು ಮತ್ತು ಪ್ರದೇಶಗಳು ಹಾನಿಗೊಳಗಾಗುತ್ತವೆ. ಇಂದಿನ ಯುಗದಲ್ಲಿ ಆರ್ಥಿಕ ಕ್ಷೇತ್ರವನ್ನು ಯಾವುದೇ ದೇಶದ ಪ್ರಗತಿ ಮತ್ತು ಅವನತಿಯ ಬೆನ್ನೆಲುಬು ಎಂದು ಪರಿಗಣಿಸಲಾಗಿದೆ. ಈ ವಲಯದಲ್ಲಿ ಸುಧಾರಣೆ ಆಗುವವರೆಗೆ ಬೇರೆ ಯಾವುದೇ ಕ್ಷೇತ್ರದಲ್ಲಿ ಸ್ಥಿರವಾದ ಪ್ರಗತಿ ಸಾಧಿಸುವುದು ಸಾಧ್ಯವಿಲ್ಲ. ಆದ್ದರಿಂದ, ದೇಶದ ಆರ್ಥಿಕತೆಯನ್ನು ಸುಧಾರಿಸಲು, ಮೊದಲು ಕಠಿಣ ಕಾನೂನು ನಿಬಂಧನೆಗಳ ಮೂಲಕ ಭ್ರಷ್ಟಾಚಾರ ಮುಕ್ತವಾದ ಸಮಾಜವನ್ನು ನಿರ್ಮಿಸುವುದು ಅತ್ಯಗತ್ಯ. ಇದರೊಂದಿಗೆ ದೇಶದಲ್ಲಿನ ಕೈಗಾರಿಕೆಗಳನ್ನು ಸಂಪೂರ್ಣವಾಗಿ ಸರ್ಕಾರದ ನಿಯಂತ್ರಣದಲ್ಲಿ ನಿರ್ವಹಿಸುವುದು ಹಾಗೂ ಇತರ ಕೈಗಾರಿಕೆಗಳು, ವ್ಯವಹಾರಗಳು ಮತ್ತು ವಿದೇಶಿ ವ್ಯಾಪಾರಗಳು ಆರ್ಥಿಕ ಉದಾರೀಕರಣದ ನೀತಿಯಡಿ ಸಂಪೂರ್ಣ ಸ್ಪರ್ಧಾತ್ಮಕ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಅತ್ಯವಶ್ಯಕ. ಬ್ಯಾಂಕುಗಳು, ಅಭಿವೃದ್ಧಿ ಬ್ಯಾಂಕುಗಳು, ಪ್ರಾದೇಶಿಕ ಬ್ಯಾಂಕುಗಳು, ಹಣಕಾಸು ಕಂಪನಿಗಳು, ಸಹಕಾರಿ ಸಂಸ್ಥೆಗಳು ಮತ್ತು ಇತರೆ ಹಣಕಾಸು ಕಂಪನಿಗಳನ್ನು ತಾರತಮ್ಯದ ಉದ್ದೇಶದಿಂದ ತೆರೆಯಬಾರದು. ಆದರೆ ಉತ್ಪಾದಕ ಕೈಗಾರಿಕೆಗಳನ್ನು ಉತ್ತೇಜಿಸುವ ಮತ್ತು ವಿದೇಶಿ ಅಥವಾ ದೇಶೀಯ ವ್ಯಾಪಾರವನ್ನು ಹೆಚ್ಚಿಸುವ ಕಂಪನಿಗಳನ್ನು ತೆರೆಯಲು ನಿಯಮಗಳನ್ನು ಅಭಿವೃದ್ಧಿಪಡಿಸಬೇಕು. ಹೀಗಾದಾಗ ಮಾತ್ರ ದೇಶದ ಮತ್ತು ಜನರ ಆರ್ಥಿಕ ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಗಳು ಕಂಡುಬರುತ್ತವೆ ಎಂದು ಅವರು ಅಭಿಪ್ರಾಯಪಡುತ್ತಾರೆ.

-----

## ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ

ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದಲ್ಲಿ ಭರತ್ ಜಂಗಮ್ ಅವರಿಗಿರುವ ಆಸಕ್ತಿಯು ಅವರೊಂದಿಗಿನ ಒಡನಾಟದಲ್ಲಿ ಕಂಡುಬರುತ್ತದೆ. ಈ ಕ್ಷೇತ್ರದಲ್ಲಿ ಪ್ರಕಟಗೊಂಡಿರುವ ಅವರ ಬರಹಗಳು ಮತ್ತು ಲೇಖನಗಳಿಂದ ಅವರು ಈಗಾಗಲೇ ಈ ಕ್ಷೇತ್ರದ ಅಮೂಲ್ಯ ಒಳನೋಟಗಳನ್ನು ಪಡೆದುಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಐತಿಹಾಸಿಕ ಪುರಾವೆಗಳನ್ನು ಅರ್ಥಮಾಡಿಕೊಳ್ಳಲು ಅತ್ಯಗತ್ಯವಾದ ಲಿಚ್ಛವಿ ಯುಗಕ್ಕೂ ಹಿಂದಿನ ಅವಧಿಯ ಮೇಲೆ ಅವರ ಗಮನವು ಕೇಂದ್ರೀಕೃತವಾದಂತೆ ತೋರುತ್ತದೆ. ಈ ಕುರಿತು ಅವರು ಹೀಗೆ ವಿವರಿಸುತ್ತಾರೆ. ಭಕ್ತಾಪುರ ಜಿಲ್ಲೆಯಲ್ಲಿರುವ ಚಂಗುನಾರಾಯಣದಲ್ಲಿ ಕಂಡುಬರುವ ಶಾಸನಗಳು ಒಂದು ಗಮನಾರ್ಹವಾದ ಆವಿಷ್ಕಾರವಾಗಿದೆ. ಇವುಗಳನ್ನು ಐತಿಹಾಸಿಕ ಪುರಾವೆಯಾಗಿ ಗುರುತಿಸಲ್ಪಟ್ಟ ಮೊಟ್ಟಮೊದಲ ಶಾಸನಗಳೆಂದು ನಂಬಲಾಗಿದೆ. ಈ ಶಾಸನಗಳಲ್ಲಿ ಕೆಲವು ಕವಿಗಳು ಕಾವ್ಯಾತ್ಮಕ ವಿವರಣೆಯನ್ನು ನೀಡಿರುವ ಲಿಚ್ಛವಿ ರಾಜವಂಶದ ದೊರೆ ಮನದೇವನನ್ನು ಉಲ್ಲೇಖಿಸುತ್ತವೆ. ಇದನ್ನು ಅನುಸರಿಸಿ, ಲಿಚ್ಛವಿ ಕಾಲದ ರಾಜರು ಬಿಟ್ಟುಹೋದ ಕಠ್ಮಂಡು ಕಣಿವೆಯ ಒಳಗೆ ಮತ್ತು ಹೊರಗೆ ವಿವಿಧ ರೀತಿಯ ವಿವಿಧ ಶಾಸನಗಳು ಕಂಡುಬಂದಿವೆ. ಈ ಶಾಸನಗಳನ್ನು ಅಧ್ಯಯನ ಮಾಡುವುದರಿಂದ ಲಿಚ್ಛವಿ ಯುಗದ ಜೀವನದ ಅನೇಕ ಅಂಶಗಳನ್ನು ಬಹಿರಂಗಪಡಿಸುತ್ತಿದ್ದು, ಅವುಗಳನ್ನು ಇನ್ನೂ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲಾಗುತ್ತಿಲ್ಲ ಎಂಬುದು ಆ ಅವಧಿಯ ಸಂಶೋಧನೆಯ ಮಹತ್ವವನ್ನು ಒತ್ತಿ ಹೇಳುತ್ತದೆ.

ನೇಪಾಳದ ಇತಿಹಾಸದ ಕುರಿತು ಭರತ್ ಜಂಗಮ್ ಅವರ ಸಂಶೋಧನೆಯ ಹರಹು ವಿಸ್ತಾರವಾದದ್ದು. ನೇಪಾಳದ ಇತಿಹಾಸದಲ್ಲಿ ಗೋಪಾಲ ಮತ್ತು ಕಿರಾತ ರಾಜವಂಶಗಳ ಆಡಳಿತಗಳ ಉಲ್ಲೇಖಗಳು ಅಸ್ತಿತ್ವದಲ್ಲಿವೆ, ಆದರೆ ಅವರ ಆಳ್ವಿಕೆಯ ಸಂಪೂರ್ಣ ವಿವರಣೆ ಮತ್ತು ಸಂಶೋಧನೆಯ ಕೊರತೆಯಿದೆ. ಲಿಖಿತ ದಾಖಲೆಗಳು ಲಭ್ಯವಿದ್ದರೂ ಸಮಗ್ರ ತಿಳಿವಳಿಕೆಯು ಅಸ್ಪಷ್ಟವಾಗಿಯೇ ಇದೆ. ಚಂಗುನಾರಾಯಣದಲ್ಲಿ ಮನದೇವನ ಆಳ್ವಿಕೆಯ ದಾಖಲೆಗಳನ್ನೂ ಒಳಗೊಂಡಂತೆ ಲಿಚ್ಛವಿ ಯುಗದ ಆರಂಭಿಕ ಶಾಸನಗಳು ಮತ್ತು ಪುರಾವೆಗಳ ಕುರಿತಾದ ಸಂಶೋಧನೆಗಳು ಆರಂಭವಾಗಿದ್ದರೂ, ಲಿಚ್ಛವಿ ಯುಗದ ಬಗ್ಗೆ ಇನ್ನೂ ಸಾಕಷ್ಟು ವಿವರಗಳು ಕಾಣೆಯಾಗಿವೆ. ಶಿವದೇವ–ಅಂಶುವರ್ಮರ ಕಾಲದ ದಾಖಲೆಗಳು ಭವ್ಯವಾದ ಕೈಲಾಶಕುತ್ ಭವನದಂತಹ ವಿವಿಧ ಅಂಶಗಳ ಒಳನೋಟಗಳನ್ನು ಒದಗಿಸುತ್ತವೆಯಾದರೂ, ಅಂಶುವರ್ಮನ ಮೂಲ ಅಧಿಕಾರೋಹಣ ಮತ್ತು ನಂತರದ ಆಡಳಿತಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರವಿಲ್ಲ. ಆದ್ದರಿಂದ ಲಿಚ್ಛವಿ–ಯುಗದ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದಲ್ಲಿ ಅನ್ವೇಷಿಸಲು ಮತ್ತು ಸಂಶೋಧನೆ ಮಾಡಲು ಇನ್ನೂ ಸಾಕಷ್ಟು ವಿಷಯಗಳು ಉಳಿದಿವೆ ಎಂದು ಭರತ್ ಜಂಗಮ್ ಅವರು ಅಭಿಪ್ರಾಯಪಡುತ್ತಾರೆ.

ಪುರಾತತ್ವ ಇಲಾಖೆಯ ಪ್ರಕಟಣೆಗಳಲ್ಲಿ ಲಿಚ್ಛವಿಯುಗದ ರಾಜ ಅಂಶುವರ್ಮನ ಪ್ರಾಚೀನ ನಗರವನ್ನು 'ಹಂಸಗೃಹ ದ್ರಂಗ್' ಎಂದು ಕರೆಯಲಾಗುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ಆದಾಗ್ಯೂ ಈ ಸಂಗತಿಯು ಇತಿಹಾಸಕಾರರಿಂದ ಹೆಚ್ಚಿನ ಪ್ರತಿಕ್ರಿಯೆಯನ್ನು ಪಡೆದಿಲ್ಲ. ಇನ್ನೊಂದೆಡೆ ದೇಶೀಯ ಮತ್ತು ವಿದೇಶೀಯ ಇತಿಹಾಸಕಾರರು ಭಕ್ತಾಪುರದಲ್ಲಿನ ಚಂಗುನಾರಾಯಣನ ಪ್ರಾಚೀನ ಹೆಸರು 'ಡೋಲಾಶಿಖರ ಸ್ವಾಮಿ' ಎಂದು ಸೂಚಿಸಿದ್ದಾರೆ. ಆದಾಗ್ಯೂ, ಭರತ್ ಜಂಗಮ್ ಅವರ ಬರಹಗಳಲ್ಲಿ ಈ ಸತ್ಯವನ್ನು ಒಪ್ಪಿಕೊಳ್ಳಲಾಗಿಲ್ಲ. ನೇಪಾಳದ ಪುರಾತನ ಇತಿಹಾಸದಲ್ಲಿ 'ಡೋಲಾಶಿಖರ ಸ್ವಾಮಿ'ಯು ನಿಜವಾಗಿಯೂ ಮತ್ತೊಂದು ದೇವರಾಗಿದ್ದರೆ, ಇದು ನೇಪಾಳದ ಕುರಿತಾದ ಇತಿಹಾಸದ ತಿಳಿವಳಿಕೆಯಲ್ಲಿ ಗಮನಾರ್ಹವಾದ ತೀವ್ರ ಬದಲಾವಣೆಯನ್ನು ಸೂಚಿಸಬಹುದು. ತಮ್ಮ ಪುಸ್ತಕ 'ನೇಪಾಳದ ಇತಿಹಾಸದಲ್ಲಿ ಗೊಂದಲಗಳು ಮತ್ತು ನಿರಾಕರಣೆಗಳು' ಎಂಬ ಪುಸ್ತಕದಲ್ಲಿ ಭರತ್ ಜಂಗಮ್ ಅವರು ಈ ಸಮಸ್ಯೆಯನ್ನು ತಿಳಿಸಿದ್ದಾರೆ.

ಇಂದಿನವರೆಗೂ ಯಾವುದೇ ಇತಿಹಾಸಕಾರರಾಗಲೀ ಅಥವಾ ಸಂಶೋಧಕರಾಗಲೀ 'ಹಂಸಗೃಹ ದ್ರಂಗ್' ರಾಜಾ ಅಂಶುವರ್ಮನ ರಾಜಧಾನಿಯಾಗಿರಲಿಲ್ಲ ಮತ್ತು ಅಲ್ಲಿ ಕೈಲಾಶಕುತ್ ಪರ್ವತ ಇರಲಿಲ್ಲ ಎಂದು ನಿರಾಕರಿಸಲಾಗಿಲ್ಲ. ಮಹಾಸಾಮಂತನ ರಾಜಧಾನಿಯು ಇಂದಿನ ಹಂದಿಗಾವ್ ಪ್ರದೇಶದಲ್ಲಿತ್ತು, ಇದನ್ನೇ 'ಹಂಸಗೃಹ ದ್ರಂಗ್' ಎಂದು ಉಲ್ಲೇಖಿಸಲಾಗುತ್ತದೆ ಮತ್ತು ವಿಶ್ವಪ್ರಸಿದ್ಧ ಕೈಲಾಶಕುತ್ ಭವನವೂ ಇಲ್ಲಿಯೇ ನೆಲೆಗೊಂಡಿದೆ. ಈ ಸಮರ್ಥನೆಗಳನ್ನು 2057(2000)ರಲ್ಲಿ 'ರೋಲಂಬಾ' ಮತ್ತು 'ಪ್ರಾಚೀನ್' ಎಂಬ ಸಂಶೋಧನಾ ಆಧಾರಿತ ನಿಯತಕಾಲಿಕೆಗಳಲ್ಲಿ ಪ್ರಕಟಿಸಲಾಗಿದೆ. ಈ ಕುರಿತು ಭರತ್ ಜಂಗಮ್ ಅವರು "ನಾನು ಅಧಿಕೃತ ಇತಿಹಾಸಕಾರ ಅಥವಾ ಸಂಶೋಧಕನಲ್ಲ. ನಾನು ಕೇವಲ ಇತಿಹಾಸ ವಿದ್ಯಾರ್ಥಿ. ವಿದ್ಯಾರ್ಥಿಯಾಗಿ ಸಂಶೋಧನೆಯ ಮೂಲಕ ಬಯಲಾದ ಸತ್ಯಗಳ ಮೇಲೆ ಬೆಳಕು ಚೆಲ್ಲಬೇಕಾದದ್ದು ನನ್ನ

ಕರ್ತವ್ಯ" ಎನ್ನುತ್ತಾರೆ. ಲಿಚ್ಛವಿಯುಗದ ಇತಿಹಾಸದ ವ್ಯವಸ್ಥಿತ ಸಂಶೋಧನೆ ಮತ್ತು ಪರಿಶೀಲನೆಯು ಚಂದ್ರ ಶಂಶೇರ್ ಅವರ ಕಾಲದಲ್ಲಿ ಆರಂಭವಾಯಿತು. ಆದಾಗ್ಯೂ ಈ ಪ್ರದೇಶದ ಹೆಚ್ಚಿನ ಭಾಗವು ಆರಂಭದಿಂದಲೂ ಜಂಗಿಲತ್ ಭೀಮಸೇನ್ ಶಂಶೇರ್‌ನ ನಿಯಂತ್ರಣದಲ್ಲಿದೆ ಮತ್ತು ಕಷ್ಟಕರವಾದ ಭೂಪ್ರದೇಶದ ಕಾರಣದಿಂದಾಗಿ, ಸಂಶೋಧಕರು ಆ ಪ್ರದೇಶದೊಳಗೆ ಉತ್ಖನನ ಮಾಡಲು ಸಾಧ್ಯವಾಗಲಿಲ್ಲ. ಸತ್ಯ ಶಂಶೇರ್ ಮತ್ತು ಮನ್ ಶಂಶೇರ್ ಅವರುಗಳ ಒಡೆತನದ ಪ್ರದೇಶದಲ್ಲಿ ಸರಿಯಾಗಿ ಹುಡುಕಿದರೆ, ವಿಶ್ವಪ್ರಸಿದ್ಧ ಕೈಲಾಶಕುತ್ ಭವನದ ಅವಶೇಷಗಳು ಇನ್ನೂ ಅಲ್ಲಿ ಕಂಡುಬರಬಹುದು ಎಂದು ಒಬ್ಬ ಇತಿಹಾಸದ ವಿದ್ಯಾರ್ಥಿಯಾಗಿ ಭರತ್ ಜಂಗಮ್ ಅವರು ಊಹಿಸುತ್ತಾರೆ. ಆದ್ದರಿಂದ ನಿರ್ದಿಷ್ಟ ಪ್ರದೇಶದಲ್ಲಿ ನಿಖರವಾಗಿ ಉತ್ಖನನ ನಡೆಸುವ ಅಗತ್ಯವಿದೆ. ಇದಲ್ಲದೆ ಚಂಗುನಾರಾಯಣದ ಬಗ್ಗೆ ಸಾಕಷ್ಟು ಪುರಾವೆಗಳಿವೆ. ದೇಶೀಯ ಮತ್ತು ವಿದೇಶೀ ಇತಿಹಾಸಕಾರರು ಚಂಗುನಾರಾಯಣನನ್ನು 'ಡೋಲಶಿಖರ ಸ್ವಾಮಿ' ಎಂದು ಕರೆಯುತ್ತಾರೆ. ವಾಸ್ತವದಲ್ಲಿ ಚಂಗುನಾರಾಯಣನು ವೈಷ್ಣವ ದೇವತೆಯಾದ ವಿಷ್ಣುವಿಗೆ ಸಮರ್ಪಿತವಾಗಿದ್ದು, ಡೋಲಶಿಖರ ಸ್ವಾಮಿಯು ಶಿವನೊಂದಿಗೆ ಸಂಬಂಧಿತವಾಗಿದ್ದಾನೆ. ಅನಂತಲಿಂಗೇಶ್ವರನನ್ನು 'ಲೋಕಪಾಲ ಸ್ವಾಮಿ' ಎಂದು ಉಲ್ಲೇಖಿಸಿರುವಲ್ಲಿಯೂ ಈ ವ್ಯತ್ಯಾಸ ಸ್ಪಷ್ಟವಾಗಿದೆ. ಹಾಗೆಯೇ ವಿಷ್ಣುದೇವನ ಚಾಂಗುವನ್ನು ಉಲ್ಲೇಖಿಸುವ ಶಾಸನವು ಬೇರೆ ಕಡೆ ಡೋಲಶಿಖರನನ್ನು ಸೂಚಿಸುತ್ತದೆ. ಅಂಶುವರ್ಮನ ಅರಣ್ಯಕೋಟೆಯ ಮತ್ತೊಂದು ಶಾಸನವು ಡೋಲಶಿಖರನನ್ನು ಬೇರೆಡೆಗೆ ಸ್ಥಳಾಂತರಿಸುತ್ತದೆ. ಹೀಗೆ, ಸಿಕ್ಕಿರುವ ಮತ್ತು ಲಭ್ಯವಿರುವ ಪುರಾವೆಗಳ ಆಧಾರದ ಮೇಲೆ, ಚಂಗುನಾರಾಯಣನನ್ನು 'ಡೋಲಶಿಖರ ಸ್ವಾಮಿ' ಎಂದು ಕರೆಯಲಾಗಿಲ್ಲ ಎಂದು ಕಂಡುಬರುತ್ತದೆ. ಕಿತಾನಿಯೊಂದಿಗಿನ ಸಂಬಂಧವು ಯಾವಾಗ ಆರಂಭವಾಯಿತೆಂದು ನಿರ್ದಿಷ್ಟವಾಗಿ ತಿಳಿದಿಲ್ಲ. ನೋಡಿ, ಸಂಶೋಧನೆಗೆ ಇಳಿದಾಗ ಎಂತೆಂಥ ಫಲಿತಾಂಶಗಳು ಹೊರಬರುತ್ತವೆ!! ಆದಾಗ್ಯೂ, ಒಂದು ವಿಷಯ ಖಚಿತವಾಗಿದೆ; ಏನೆಂದರೆ ಈ ಸಂಶೋಧನೆಯು ಲಿಚ್ಛವಿಯುಗದ ಇತಿಹಾಸದ ಸಂಶೋಧನೆಯ ಅಪೂರ್ಣ ಸ್ವರೂಪವನ್ನು ಬೆಳಕಿಗೆ ತಂದಿದೆ ಮತ್ತು ಇದು ಹೆಚ್ಚಿನ ಅನ್ವೇಷಣೆಗೆ ಮಾರ್ಗಗಳನ್ನು ಮುಕ್ತವಾಗಿಸಿದೆ. 'ನೇಪಾಳದ ಇತಿಹಾಸದಲ್ಲಿ ಗೊಂದಲಗಳು ಮತ್ತು ನಿರಾಕರಣೆಗಳು' ಪುಸ್ತಕದಲ್ಲಿ ಉಲ್ಲೇಖಿಸಿರುವಂತೆ ಭರತ್ ಜಂಗಮ್ ಅವರು ಈ ಸಂಶೋಧನೆಗಳ ಆಧಾರದ ಮೇಲೆ ತಮ್ಮ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ.

ಲಿಚ್ಛವಿ–ಯುಗದ ಇತಿಹಾಸವು ನಿಜವಾಗಿಯೂ ವಿವಾದಾಸ್ಪದವಾಗಿದೆ. 14–15 ಶತಮಾನಗಳಷ್ಟು ಹಳೆಯದಾದ ಇತಿಹಾಸವನ್ನು ಅರ್ಥೈಸುವುದು ಮತ್ತು ವಿವರಿಸುವುದು ಅಷ್ಟು ಸರಳವಲ್ಲ. ಇತಿಹಾಸ ಮತ್ತು ಪುರಾತತ್ವ ಮತ್ತು ಸಂಶೋಧನೆ– ತೀವ್ರ ವಿಷಯಗಳು. ಯಾರೂ ಸುಲಭವಾಗಿ ತೀರ್ಮಾನಗಳನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ನಿರ್ಧಾರಗಳನ್ನು ತ್ವರಿತವಾಗಿ ತೆಗೆದುಕೊಳ್ಳಲಾಗುವುದಿಲ್ಲ. ಅದಕ್ಕಾಗಿಯೇ ಈ ತೆರನಾದ ಸಂಶೋಧನೆಯು ಸಮಯ ತೆಗೆದುಕೊಳ್ಳುತ್ತದೆ ಮತ್ತು ತೀರ್ಮಾನಗಳನ್ನು ಕ್ರಮೇಣವಾಗಿ ತೆಗೆದುಕೊಳ್ಳಲಾಗುತ್ತದೆ.

ನಾಗರಿಕತೆ, ಸಂಸ್ಕೃತಿ ಮತ್ತು ನೈಸರ್ಗಿಕ ಸಮೃದ್ಧಿಯನ್ನು ಹೊಂದಿರುವ ನೇಪಾಳ ದೇಶದಲ್ಲಿ ಜನಿಸಿದ ಪ್ರತಿಯೊಬ್ಬ ನಾಗರಿಕನು ಉಚಿತ ಶಿಕ್ಷಣ, ಉಚಿತ ಆರೋಗ್ಯ ಮತ್ತು ನ್ಯಾಯದ ವ್ಯವಸ್ಥೆಗೆ ಪ್ರವೇಶವನ್ನು ಹೊಂದಿರಬೇಕು. ಇದಲ್ಲದೆ, ಅವರು ಗೌರವಯುತವಾದ ಜೀವನವನ್ನು ನಡೆಸುವ ಮಟ್ಟವನ್ನು ತಲುಪಬೇಕು. ಇಂಥ ಸುಂದರವಾದ, ಶಾಂತಿಯುತ ಮತ್ತು ಅಭಿವೃದ್ಧಿ ಹೊಂದಿದ ನೇಪಾಳವು ಭರತ್ ಜಂಗಮರ ಹೃದಯದಲ್ಲಿ ಆಳವಾಗಿ ಬೇರೂರಿದೆ.

ಸಮೃದ್ಧ ನೇಪಾಳವನ್ನು ನಿರ್ಮಿಸುವ ನಿಟ್ಟಿನಲ್ಲಿ ತ್ರಿಭುವನ ವಿಶ್ವವಿದ್ಯಾನಿಲಯದ ಭ್ರಷ್ಟಾಚಾರ–ವಿರೋಧಿ ವಿಜ್ಞಾನದ ನಿಯಮಿತ ಅಧ್ಯಯನ ಮತ್ತು ಬೋಧನೆಯನ್ನು ಪ್ರಾರಂಭಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈಗ ಇದನ್ನು ಇತರ ವಿಶ್ವವಿದ್ಯಾಲಯಗಳಿಗೂ ವಿಸ್ತರಿಸುವ ಪ್ರಯತ್ನಗಳು ನಡೆಯುತ್ತಿವೆ. ಭ್ರಷ್ಟಾಚಾರದ ಪಿಡುಗನ್ನು ಎದುರಿಸುತ್ತಿರುವ ನೇಪಾಳ ಇತರ ಹಿಂದುಳಿದ ದೇಶಗಳು ಭ್ರಷ್ಟಾಚಾರದಿಂದ ಗಂಭೀರ ಕಾಯಿಲೆಯಂತೆ ಬಾಧಿಸಲ್ಪಟ್ಟಾಗ, ಅದರ ಪರಿಹಾರವನ್ನು ಕಂಡುಹಿಡಿಯುವವರೆಗೆ, ಆ ದೇಶಗಳ ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ. ಆದ್ದರಿಂದ, ಈ ರೋಗದ ವಿರುದ್ಧ ಪರಿಣಾಮಕಾರಿ ಸಮುದಾಯವನ್ನು ಅಭಿವೃದ್ಧಿಪಡಿಸುವುದು ಅನಿವಾರ್ಯವಾಗಿದೆ. ಜಗತ್ತಿನಾದ್ಯಂತ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಭ್ರಷ್ಟಾಚಾರ ವಿರೋಧಿ ಶಿಕ್ಷಣದ ಪ್ರಾರಂಭದೊಂದಿಗೆ, ಈ ರೋಗದ ವಿರುದ್ಧ ಪ್ರಬಲವಾದ ಶಕ್ತಿಯು ರೂಪುಗೊಳ್ಳಬಹುದು ಎಂಬ ನಂಬಿಕೆ ಬೆಳೆಯುತ್ತಿದೆ.

* * * * *